## ಸುದರ್ಶನ ದೇಸಾಯಿ

# ಶೀ[illegible] ಬ[illegible]ಲಿ



894·814 308 3
DES N96
ಗ್ರಂಥ ಸ್ವಾಮ್ಯ ವಿಭಾಗ

# ಶೀತಲ ಕೋಳಿ

(ಕಾದಂಬರಿ)

ಸುದರ್ಶನ ದೇಸಾಯಿ

**ಭಾಗ್ಯಲಕ್ಷ್ಮೀ ಪ್ರಕಾಶನ**
87, 3ನೇ ಕ್ರಾಸ್, 4ನೇ ಬ್ಲಾಕ್
ಬನಶಂಕರಿ 3ನೇ ಸ್ಟೇಜ್, 3ನೇ ಫೇಸ್
ಬೆಂಗಳೂರು–560 085

META ENTERED

SHEETALA KOLI- a social novel by Sri Sudarshana Desai ; Published by Bhagyalakshmi Prakashana, 87, 3rd Cross, 4th Block, Banashankari IIIrd Stage, IIIrd Phase, Bangalore-560 085. Phone : 6695322

Pages : 208
804664R

First Edition : 1996

894.814 308 3
DES N96

Art : P. S. Kumar

© Smt. Sujatha Sudarshana Desai

Price : Rs. 45-00

Printed at :
Prathibha Printers :
No. 411, 8th Main Road,
Hanumanthanagar
Banglaore-560 019 Phone ; 6692113

# ನಾಲ್ಕು ಮಾತುಗಳು

ಆತ್ಮೀಯ ಓದುಗರೆ,

ಸಂಜೆವಾಣಿಯ "ಚಂದನ" ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂದ "ಶೀತಲಕೋಳಿ" ಕಾದಂಬರಿ ಈಗ ಪುಸ್ತಕ ರೂಪದಲ್ಲಿ ನಿಮ್ಮ ಮುಂದಿದೆ. "ಚಂದನ"ದ ಸಂಪಾದಕರಿಗೂ ಹಾಗೂ ಸಿಬ್ಬಂದಿ ವರ್ಗದವರಿಗೂ ನಾನು ಋಣಿಯಾಗಿರುವೆ.

ನನ್ನ ಮೇಲಿನ ಅಭಿಮಾನ ಪ್ರೀತಿಯಿಂದಾಗಿ ನನ್ನಿಂದ ಈ ಕಾದಂಬರಿ ಬರೆಯಿಸಿ ಪ್ರಕಟಿಸಿದ ಶ್ರೀ ಆರ್ಮುಗಂ ಅವರಿಗೆ ನಾನು ಆಭಾರಿ. ಹುಬ್ಬಳ್ಳಿ ಸಂಜೆವಾಣಿ ಕಾರ್ಯಾಲಯದ ಶ್ರೀ ದಯಾನಂದ ಪಾಟೀಲ್, ಶ್ರೀ ಎಂ. ಬಿ. ಪಾಟೀಲ ಹಾಗೂ ಶ್ರೀ ವಿಶ್ವನಾಥ ಪಾಟೀಲ ಅವರಿಗೆ ಕೃತಜ್ಞತೆಗಳು.

ಆತ್ಮೀಯ ಮಿತ್ರ ಶ್ರೀ ಬಿ. ಕೆ. ನಂಜುಂಡಪ್ಪ, ಶ್ರೀ ಪ. ಸ. ಕುಮಾರ್ ಮತ್ತು ಶ್ರೀ ರಾಮಕೃಷ್ಣಯ್ಯ ಹಾಗೂ ಅವರ ಸಿಬ್ಬಂದಿ ವರ್ಗದವರಿಗೂ ನನ್ನ ಅನಂತ ವಂದನೆಗಳು.

"ಹಳದಿ ಚೀಳು"
ಸುದರ್ಶನ ದೇಸಾಯಿ ಕಾಲೋನಿ
ಸಾರಸ್ವತಪುರ
ಧಾರವಾಡ–580 002

ತಮ್ಮ ಆತ್ಮೀಯ
ಸುದರ್ಶನ ದೇಸಾಯಿ

ಬೆಂಗಳೂರು

# ಶೀತಲ ಕೋಳಿ

# 1

ಇನ್‌ಸ್ಪೆಕ್ಟರ್ ಅವಿನಾಶ್....

ಆರು ಫೂಟು ಎರಡಿಂಚು ಎತ್ತರದ ಬಲಿಷ್ಠ ದೇಹ....ದುಂಡು ಮುಖದಲ್ಲಿ ದಪ್ಪವಾಗಿರುವ ಮೀಸೆಯಿಂದಾಗಿ ಮೂಡಿ ಬಂದ ಒಂದು ಬಗೆಯ ರುದ್ರ ಭಾವ. ಕೆಂಪು ಕಣ್ಣುಗಳು....ಗಡಸು ಕಂಠ ಸ್ವಲ್ಪ ದಪ್ಪವೆನಿಸಿದರೂ ಆಕರ್ಷಕವಾಗಿ ಕಾಣುವ ಮೂಗು....ಬಿಗಿದುಕೊಂಡ ಸೀಳು ತುಟಿಗಳು.

ಸಾದುಗಂಪು ಬಣ್ಣದ ಹುರಿಕಟ್ಟಾದ ಶರೀರ.

ಹದಿಹರೆಯದ ತರುಣಿಯರು ದೂರ.. ಮದುವೆಯಾಗಿ ಎರಡು ಮಕ್ಕಳನ್ನು ಪಡೆದ ಗೃಹಿಣಿಯರ ಮನದಲ್ಲೂ ಕಿಚ್ಚು ಎಬ್ಬಿಸುವಂಥ ಮದನಾಂಗ....ಧರ್ಮವಂತರಿಗೆ ಧರ್ಮರಾಯ....ಸತ್ಯವಂತರಿಗೆ ಸತ್ಯಸಂದ. ಹರಿಶ್ಚಂದ್ರ... ಮಿತ್ರರಿಗೆ ಮಿತ್ರ, ಶತ್ರುಗಳಿಗೆ ಶತ್ರು. ಅನ್ಯಾಯ ಅಧರ್ಮಗಳಿಗೆ ಸಿಡಿದೇಳುವವ. ನ್ಯಾಯ ನೀತಿ ಧರ್ಮಗಳಿದ್ದಲ್ಲಿ ಮಿತ್ರನಾಗುವವ.... ಕುಖ್ಯಾತ ಅಪರಾಧಿಗಳಿಗೆ ಸಿಂಹಸ್ವಪ್ನ. ಇಂಥ ಇನ್‌ಸ್ಪೆಕ್ಟರ್ ಅವಿನಾಶ್‌ಗೆ ಇಲಾಖೆಯಿಂದ ದೊರೆತ ಬಿರುದು....

ಅಲೆಮಾರಿ ಇನ್‌ಸ್ಪೆಕ್ಟರ್....

ಅದಕ್ಕೆ ಕಾರಣ ಇಲ್ಲದಿರಲಿಲ್ಲ.

ಇನ್‌ಸ್ಪೆಕ್ಟರ್ ಅವಿನಾಶ್ ಒಂದು ಠಾಣೆಯಲ್ಲಿರುವುದು ಅತೀ ಹೆಚ್ಚೆಂದರೆ ನಾಲ್ಕು ತಿಂಗಳು ಮಾತ್ರ....ಅಷ್ಟರಲ್ಲೇ ಆತನಿಗೆ ಬೇರೆ ಊರಿಗೆ ವರ್ಗವಾಗುತ್ತಿತ್ತು. ಆ ಊರಿಗೆ ಬಂದು ಹೊಂದಿಕೊಂಡು ಉಫ್ ಎಂದು ಸಮಾಧಾನದ ಉಸಿರು ಬಿಡುತ್ತಿದ್ದಂತೆ ಮತ್ತೊಂದೆಡೆ ಎತ್ತಂಗಡಿ. ಬಿಡುಗಡೆ ಹೊಂದಿ ಅಲ್ಲಿ ಹಾಜರಾಗುವುದು. ಎರಡು ತಿಂಗಳು ಕಳೆಯುತ್ತಿದ್ದಂತೆ ಆತ ತನ್ನ ವರ್ಗದ

ದಾರಿ ಕಾಯತೊಡಗುತ್ತಿದ್ದ. ಯಾವುದೇ ಗಳಿಗೆಯಲ್ಲೂ ಆರ್ಡರ್ ಕೈಸೇರ ಬಹುದಿತ್ತು.

ಈ ರೀತಿ ತನ್ನ ಹದಿನಾರು ವರ್ಷಗಳ ಸೇವಾ ಅವಧಿಯಲ್ಲಾತ ನಲ್ಲವತ್ತು ಠಾಣೆಗಳಲ್ಲಿ ಸೇವೆ ಸಲ್ಲಿಸಿ ನಿನ್ನೆ ತಾನೇ ನಲವತ್ತೊಂದನೇ ಠಾಣೆಗೆ ಹಾಜರಾಗಿದ್ದ. ಎಸ್. ಪಿ. ತಾರಾನಾಥರನ್ನು ಕಂಡು ವಂದನೆ ಸಲ್ಲಿಸಿ ನಿಂತುಕೊಂಡ.

ಎಸ್. ಪಿ. ತಾರಾನಾಥರು ನಲವತ್ತೈದು ನಲವತ್ತಾರು ವರ್ಷಗಳ ಅತ್ಯಂತ ಕರ್ತವ್ಯನಿಷ್ಠ ಅಧಿಕಾರಿಗಳು. ಶಿಸ್ತಿಗಾಗಿ ಅವರು ಇಲಾಖೆಯಲ್ಲೇ ಪ್ರಸಿದ್ಧರು. ಒಂದು ಬಾರಿ ಅವಿನಾಶನೆಡೆ ನೋಡಿ ತಲೆಯಲ್ಲಾಡಿಸಿ ಪ್ರತಿವಂದನೆ ಸಲ್ಲಿಸುತ್ತ ಮುಗುಳು ನಗೆ ಬೀರಿದರು. ಅವರ ಆ ನಗೆಯ ಅರ್ಥ ಅವಿನಾಶನಿ ಗಾಗಲಿಲ್ಲ. ಅವರೆಡೆ ವಿಚಿತ್ರವಾಗಿ ನೋಡಿದ. ಮರುಕ್ಷಣ ತನ್ನ ಮುಖಕ್ಕೆ ಏನೋ ಅಂಟಿರಬೇಕು ಎಂದು ಊಹಿಸಿ ಜೇಬಿನಿಂದ ವಸ್ತ್ರ ತೆಗೆದು ಚೆನ್ನಾಗಿ ಮುಖ ತಿಕ್ಕಿ ತಿಕ್ಕಿ ಒರಸಿಕೊಂಡ. ಮುಖ ಮತ್ತಷ್ಟು ಕೆಂಪಗಾಯಿತು.... ವಸ್ತ್ರ ಪುನಃ ಜೇಬಿಗೆ ಸೇರಿಸಿ ಎಸ್. ಪಿ. ಸಾಹೇಬರತ್ತ ದೃಷ್ಟಿಸಿದ.

ಅವರ ಮುಖದ ಮೇಲಿನ ನಗೆ ಮಾಸಿರಲಿಲ್ಲ.

ಇನ್ನೂ ಗಾಢವಾಗಿತ್ತು.

ತಟಕ್‌ನೆ ಅವಿನಾಶನ ಮನದಲ್ಲಿ ಸಂಶಯವೊಂದು ಮೊಳಕೆಯೊಡೆಯಿತು. ಸಾಹೇಬರಿಗೇನಾದರೂ....ಸ್ವಲ್ಪ....ಬುದ್ಧಿ....ಥೆ....ಥೆ....ಇರಲಾರದು. ಒಂದು ಬಾರಿ ಜೋರಾಗಿ ತಲೆ ಕೊಡವಿದ.

"ಏಕೆ ? ಏನಾಯಿತು ?" ಮುಖ ಗಂಟಿಕ್ಕಿದ ತಾರಾನಾಥ್ ಪ್ರಶ್ನಿಸಿದರು.

"ಏನಿಲ್ಲ....ಏನಿಲ್ಲ ಸರ್"

"ಮತ್ತೆ....ತಲೆ ಕೊಡವಿದೆಯಲ್ಲ"

"ಹಾಗೇ....ಹಾಗೇ ಸುಮ್ಮನೇ...."

"ನಿಜ ಹೇಳು....ತಲೆಯಲ್ಲಿ ಹೇನುಗೀನು....ಏನಾದರೂ...."

"ನೋ... ನೋ ಸರ್.....ಅದೇನೂ ಇಲ್ಲ"

"ಹಾಂ....ಸರಿ....ನನಗೆ ಹೇನು ಅಂದ್ರೆ ಆಗದು....ಆ ವಿಷಯಕ್ಕೆ ಸ್ಟ್ರಿಕ್ಟು"

"ನನಗೆ ಗೊತ್ತು ಸರ್...."

"ಏನು ?....ಏನು ಗೊತ್ತಿದೆ...."

"ನಿಮಗೆ ಹೇನು ಅಂದ್ರೆ ಆಗದು....ನಿಮ್ಮ ತಲೆಯಲ್ಲಿ ಒಂದೂ ಹೇನು ಇಲ್ಲ"

"ಕರೆಕ್ಟ್... ಏಕೆ ಗೊತ್ತಾ ?"

"ಗೊತ್ತು ಸರ್"

"ಹೌದಾ ?"

"ಹೌದು ಸರ್"

"ಗುಡ್....ವ್ಹೆರಿಗುಡ್ ಏಕೆ ಹೇಳು" ತಾರಾನಾಥರು ಮುಖ ಊರಗಲ ಮಾಡಿ ಕೇಳಿದರು.

"ಸರ್...."

"ಹಾಂ....ಹೇಳು"

"ಸರ್.. ತಾವು ಎಂದೂ ತಮ್ಮ ಹೆಂಡತಿ ಜೊತೆಗೆ ಮಲಗುವುದಿಲ್ಲ...."

"ವಾಟ್ ?"....ತಾರಾನಾಥ್ ಬೆಚ್ಚಿ ಬಿದ್ದು ಕೇಳಿದರು.

"ಎಸ್ ಸರ್ ಅದೇ ನಿಮ್ಮ ಗುಟ್ಟು ಸರ್....ನಿಮ್ಮ ಪತ್ನಿ ತಲೆಯಲ್ಲಿರುವ ಹೇನು ತಮ್ಮ ತಲೆಗೆ ವಾಸಕ್ಕೆ ಬರಲು ಸಾಧ್ಯವೇ ಇಲ್ಲ"

"ಶಟಪ್....ಐಸೇ ಶಟಪ್...." ತಾರಾನಾಥರು ಎಷ್ಟು ಜೋರಾಗಿ ಅರಚಿದರೆಂದರೆ ಬಾಗಿಲ ಹೊರಗಿದ್ದ ಸೆಂಟ್ರಿ ಸಹ ಅದನ್ನು ಕೇಳಿ ಒಳಗೆ ಏನೋ ಅನಾಹುತ ಜರುಗಿದೆ ಎಂದು ಭಾವಿಸಿ ಬಾಗಿಲು ತೆರೆದು ಒಳಗೆ ನುಗ್ಗಿ ಬಂದ. ಪೆಚ್ಚು ಪೆಚ್ಚಾಗಿ ಇಬ್ಬರೂ ಸಾಹೇಬರೆಡೆ ನೋಡಿ ಹಾಗೇ ಮರಳಿದ....

ತಮ್ಮಿಂದಾದ ಅನಾಹುತದ ಕಲ್ಪನೆ ಸಾಹೇಬರಿಗಾಗಿತ್ತು.

"ಸರಿ....ನೀವಿನ್ನು ಹೊರಡಿ"

"ಸರ್....ಸರ್"

"ಒಂದೂ ಮಾತಾಡಬೇಡಿ....ಹೋಗಿ....ಹೋಗಿ"

"ಸರ್ ಸರ್...."

"ಒಂದೂ ಮಾತು ಬೇಡ"

"ಸರ್ ನಾನಿನ್ನೂ ಹಾಜರೇ ಆಗಿಲ್ಲ ನನ್ನ ರಿಪೋರ್ಟ್...."

ಅವರ ಮುಂದಿಟ್ಟು ಹಿಂದೆ ಸರಿದ.

ಅದಕ್ಕೊಂದು ರುಜು ಹಾಕಿ ಅವನ ಕೈಗೆ ಮರಳಿಸಿದರು,

"ಥ್ಯಾಂಕ್ಸ್ ಸರ್"

"ಹೂಂ....ಹೊರಡಿ"

ಅವಿನಾಶ ಬೇಕಂತಲೇ ಮತ್ತೊಮ್ಮೆ ತಲೆ ಕೊಡವಿದ ಜೋರಾಗಿ. ತಾರಾನಾಥ್ ಕಣ್ಣರಳಿಸಿ ನೋಡುತ್ತಿದ್ದಂತೆ ಜಬರ್ದಸ್ತಾಗಿ ಸೆಲ್ಯೂಟ್ ನೀಡಿ ಹೊರ ಬಂದ....

ಹೀಗೆ ಒಂದು ದಿನ ಕಳೆದು ಎರಡನೇ ದಿನ ಕಾಲಿಟ್ಟಿತು. ಅವಿನಾಶ ಫೈಲು ನೋಡುತ್ತ ಕುಳಿತಿದ್ದ....ಸಮಯ ಬೆಳಗಿನ ಹತ್ತು ಹತ್ತೂವರೆ.... ಟೆಲಿಫೋನ್ ಗಂಟೆ ಬಾರಿಸಿತು. ಅವಿನಾಶ ರಿಸೀವರ್ ಎತ್ತಿ ಹಿಡಿದ.

"ಗುಡ್ ಮಾರ್ನಿಂಗ್ ಸರ್....ಇನ್‌ಸ್ಪೆಕ್ಟರ್ ಅವಿನಾಶ್"

"ಅವಿನಾಶ್...." ಎಸ್. ಪಿ. ತಾರಾನಾಥರ ಕಂಠ ಪ್ರತಿಧ್ವನಿಸಿತು.

"ಗುಡ್ ಮಾರ್ನಿಂಗ್ ಸರ್"

ಸಟಕ್‌ನೆ ಕುರ್ಚಿಯಿಂದ ಜಿಗಿದು ಎದ್ದು ನಿಂತ ಅವಿನಾಶ....ಮರುಕ್ಷಣ ಸಾಹೇಬರು ಎದುರಿಗಿಲ್ಲವೆಂದು ನೆನಪಾಗಿ ತನ್ನಷ್ಟಕ್ಕೆ ತಾನೇ ನಗುತ್ತ ಕುಳಿತು ಕೊಂಡ.

"ಕೂಡಲೇ ಹೊರಟು ಬನ್ನಿ"

"ಎಸ್ ಸರ್...."

ಮುಂದೆ ಮಾತನಾಡಲಿಲ್ಲ. ಮಾತನಾಡುವುದೂ ಇರಲಿಲ್ಲ. ಸಾಹೇಬರು ರಿಸೀವರ್ ಕೆಳಗಿಟ್ಟಿದ್ದರು....ಸರಸರನೆ ಫೈಲುಗಳ ಮೇಲೆ ಕಣ್ಣಾಡಿಸಿ ಸಹಿ ಮಾಡಿ ಮೇಲೆದ್ದ. ಡೈರಿಯಲ್ಲಿ ಎಸ್. ಪಿ. ಸಾಹೇಬರನ್ನು ಕಾಣಲು ಹೋಗು ತ್ತಿರುವ ವಿಷಯ ಬರೆದು ಸಮಯ ಹಾಕಿ ಹೊರಬಂದ. ಮುಂದಿನ ಕ್ಷಣ ಅವನ ಮೋಟಾರ್ ಬೈಕ್ ಎಸ್. ಪಿ. ಸಾಹೇಬರ ಆಫೀಸಿನತ್ತ ಓಡ ತೊಡಗಿತು.

ನಿನ್ನೆ ತಾನೇ ಕೆಲಸದ ಮೇಲೆ ರಿಪೋರ್ಟ್ ಮಾಡಿಕೊಂಡ ಅವಿನಾಶನಿಗೆ ಒಂದೇ ಒಂದು ದಿನ ಒತ್ತಾಯದ ವಿಶ್ರಾಂತಿ ದೊರೆತಿತ್ತು. ಇಂದು ಎಸ್. ಪಿ. ಸಾಹೇಬರಿಂದ ಕರೆ....ಅವರಿಂದ ಅರ್ಜಂಟ್ ಕರೆ ಎಂದರೆ ಯಾವುದೋ ಮಹತ್ವದ ಕೆಲಸ ತನಗಾಗಿ ಕಾದಿದೆ ಎಂದು ಊಹಿಸಿದ ಆತ ಪುಲಕಿತನಾದ.... ನೂರು ನೂರಿಪ್ಪತ್ತು ಕಿಲೋಮೀಟರ್ ವೇಗದಲ್ಲಿ ಗಾಡಿ ಓಡಿಸಿ ಎಷ್ಟು

ಸಾಧ್ಯವೋ ಅಷ್ಟು ಬೇಗ ಸಾಹೇಬರ ಮುಂದಿರಬೇಕು ಎಂಬ ಆಶೆ. ಆಶೆ ಇದ್ದದ್ದೇನೋ ನಿಜ ಅದರಂತೆ ನಡೆಯಲಾಗುತ್ತಿರಲಿಲ್ಲ. ತಾನೊಬ್ಬ ಹಿರಿಯ ಪೊಲೀಸ್ ಅಧಿಕಾರಿಯಾಗಿ ನಗರ ವಲಯದಲ್ಲಿ ನೂರು ನೂರಿಪ್ಪತ್ತು ವೇಗದಲ್ಲಿ ಗಾಡಿ ಓಡಿಸಿದರೆ ಅದೊಂದು ಗಂಭೀರ ಸ್ವರೂಪದ ಅಪರಾಧವಾಗುತ್ತದೆ ಎಂಬ ಕಲ್ಪನೆಯಿದ್ದುದರಿಂದ ಮೂವತ್ತರೊಳಗೆ ಆತ ಗಾಡಿ ಓಡಿಸತೊಡಗಿದ. ಅವನ ವೇಗ ಮೀರಿ ಹಿಂದಿನಿಂದ ಧಾವಿಸಿ ಬಂದ ನೂರಾರು ವಾಹನಗಳು ಅವನ ಗಾಡಿ ಹಿಂದೆ ಹಾಕಿ ಕರ್ಕಶವಾಗಿ ಕೂಗುತ್ತ ದಾಟಿ ಹೋಗುವಾಗ ಅವನ್ನೆಲ್ಲ ಹಿಡಿದು ಸೀಜ್ ಮಾಡಿ ಠಾಣೆಗೆ ಎಳೆದು ತರಬೇಕೆಂದು ಬಂದ ವಿಚಾರವನ್ನು ಬಲವಂತ ದಿಂದ ಹತ್ತಿಕ್ಕಿಕೊಂಡ.

ಅವಸರವೇ ಅಪಘಾತಕ್ಕೆ ಮೂಲ ಕಾರಣ ಎಂದು ಆತ ಅರಿತಿದ್ದ....

ಆದರೆ ಉಳಿದವರು ?....

ಅವರೆಲ್ಲ ಅರಿತಿದ್ದರೆ ದಿನನಿತ್ಯ ಇಷ್ಟೇಕೆ ಅಪಘಾತಗಳಾಗುತ್ತಿದ್ದವು ?.... ಇಷ್ಟೇಕೆ ಜನರು ಪ್ರಾಣ ಕಳೆದುಕೊಳ್ಳುತ್ತಿದ್ದರು ?....

ಎಂಟು ಕಿಲೋಮೀಟರ್ ದೂರದ ಆಫೀಸು ತಲುಪಲು ಇಪ್ಪತ್ತನಾಲ್ಕು ನಿಮಿಷಗಳು ಬೇಕಾದವು. ಮಧ್ಯೆ ನಾಲ್ಕಾರು ಸರ್ಕಲ್‌ಗಳು, ಅಡೆತಡೆಗಳು 'ಥಥ್' ಎಷ್ಟು ಸಮಯದ ಅಪವ್ಯಯ ?... ಅದಕ್ಕಾಗಿಯೇ ನಮ್ಮ ದೇಶ ಇಷ್ಟು ಹಿಂದುಳಿದಿದ್ದು ಎಂದುಕೊಳ್ಳುತ್ತ ಆಫೀಸ್ ಪಕ್ಕದಲ್ಲಿ ಬೈಕ್ ನಿಲ್ಲಿಸಿ ಹೆಲ್ಮೆಟ್ ತೆಗೆದು ಗಾಡಿ ಮೇಲಿಟ್ಟ. ಚಿಕ್ಕ ಬಾಚಣಿಕೆ, ಹಿಪ್ ಪಾಕೆಟಿನಿಂದ ಕೈಗೆ ಬಂದಿತು. ಬೈಕ್‌ಗಿದ್ದ ಕನ್ನಡಿಯಲ್ಲಿ ನೋಡಿಕೊಂಡು ಕಪ್ಪಗಿನ ತನ್ನ ಕೂದಲುಗಳನ್ನು ಒಪ್ಪವಾಗಿ ಬಾಚಿಕೊಂಡ. ದಪ್ಪಗಿನ ಮೀಸೆ ಮೈಲೂ ಸಹ ಒಂದು ಬಾರಿ ಬಾಚಣಿಕೆ ಆಡಿಸಿ... ಪ್ಯಾಂಟು ಶರ್ಟ್ ಸರಿಪಡಿಸಿಕೊಂಡು ಮಹಾದ್ವಾರದ ಕಡೆ ನಡೆದ.

ಸೆಂಟ್ರಿಗಳಿಂದ ಆದರದ ಸ್ವಾಗತ, ಸೆಲ್ಯೂಟ್ ಸ್ವೀಕರಿಸುತ್ತ ಮಹಡಿ ಮೇಲಿದ್ದ ಸಾಹೇಬರ ಕೋಣೆಯತ್ತ ಹೆಜ್ಜೆ ಹಾಕಿದ. ಲವಲವಿಕೆಯಿಂದ ಮೆಟ್ಟಲು ಏರಿ ಸಾಹೇಬರ ಕೋಣೆಯತ್ತ ಬಂದ. ಅದೇ ಒಳಗಿನಿಂದ ಹೊರ ಬಂದ ವ್ಯಕ್ತಿ ಅವನಿಗೆ ಢೀ ಕೊಡುತ್ತಿತ್ತು. ಅವನ ಭುಜ ಹಿಡಿದು ನಿಲ್ಲಿಸಿದ. ಮುಖ ಮೇಲೆತ್ತಿದ ಆತ ತಬ್ಬಿಬ್ಬಾದ ಸೀನಿಯರ್ ಆಫೀಸರ್. "ಸಾರಿ, ಸಾರಿ

ಸರ್" ಆತ ಬಡಬಡಿಸಿದ. ಮೆಲುವಾಗಿ ಅವನ ಭುಜ ಅದುಮಿ "ಪರವಾಗಿಲ್ಲ" ಎಂದೆನ್ನುತ್ತ ಸೆಂಟ್ರಿ ಕಡೆ ನೋಡಿದ. "ಸಾಹೇಬರು ತಮ್ಮ ದಾರಿ ಕಾಯುತ್ತಿದ್ದಾರೆ ಸರ್" ಎಂದ ಆತ. ಗಂಭೀರ ಮುಖಭಾವದೊಂದಿಗೆ ಒಳಗೆ ಕಾಲಿಟ್ಟ ಅವಿನಾಶ್.

ಕರಿಮರದಲ್ಲಿ ಮಾಡಿದ ವಿಶಾಲವಾದ ಮೇಜು ಹಿಂದೆ ಕುಳಿತಿದ್ದ ಎಸ್. ಪಿ. ತಾರಾನಾಥರು ತಮ್ಮೆದುರಿನ ಕುರ್ಚಿ ಕಡೆ ಕೈ ಮಾಡಿ ತೋರಿಸಿದರು. ಅತ್ತ ಸರಿಯುತ್ತ ಸಾಹೇಬರ ಕಡೆ ದಿಟ್ಟಿಸಿದ. ಅವರು ಮೆಲುವಾಗಿ ನಗುತ್ತಿದ್ದರು.

ಹಿಂದಿನ ದಿನದ ಘಟನೆ ನೆನಪಾಗಿ ಅನಾಯಾಸವಾಗಿ ಆತನೂ ನಕ್ಕ....

"ಎಷ್ಟು ದಿವಸ ?" ಸಾಹೇಬರಿಂದ ತಟಕ್‌ನೆ ಬಂತು ಪ್ರಶ್ನೆ.

"ಆಂ ? ಏನೆಂದಿರಿ ಸರ್"

"ಏಕೆ ಕಿವಿ ಕೇಳೋದಿಲ್ವೇ ...ಕೊಕಣಿಯೇ ?"

"ನೋ....ನೋ.... ಸರ್"

"ನನಗೆ ಕೊಕಣಿ ಎಂದರೆ ಆಗದು ಏಕೆ ಗೊತ್ತಾ ?"

ಪ್ರಶ್ನೆ ಕೇಳಿದ ತಕ್ಷಣವೇ ತಬ್ಬಿಬ್ಬಾದರು ಸಾಹೇಬರು. ಹಿಂದಿನ ದಿನ ಆತ ನೀಡಿದ ಉತ್ತರ ನೆನಪಾಯಿತು.

"ಆಂ. ಏನಿಲ್ಲ....ನೀನಿಲ್ಲಿ ಎಷ್ಟು ದಿವಸ ಎಂದೆ ?"

"ನನಗೆ ಅರ್ಥವಾಗಲಿಲ್ಲ ಸರ್"

"ನಿನ್ನ ತಲೆ....ಇಲ್ಲಿ ಎಷ್ಟು ದಿವಸ ಅಂದೆ"

ಅವಿನಾಶ ಕಪಿಯಂತೆ ತಲೆ ಕರೆದುಕೊಂಡು ಸರಕ್‌ನೆ ಕೈ ಹಿಂದಕ್ಕೆಳೆದುಕೊಂಡ. ಹಿಂದಿನ ದಿನ ಸಾಹೇಬರು ಕೇಳಿದ್ದು ನೆನಪಾಯಿತು.

"ಇನ್ನೂ ಅರ್ಥವಾಗಲಿಲ್ಲವೆ ?....ಸರಿ ಹೋಯಿತು ಬಿಡು. ಒಂದು ಮಾತು ನನಗೆ ಇನ್ನೂ ಅರ್ಥವಾಗುತ್ತಿಲ್ಲ."

"ಯಾವುದು ಸರ್ ?"

"ಯಾವ ಬೇವಕೂಫ್ ನನ್ಮಗ ನಿನಗೆ ಶಿಫಾರಸ್ಸು ಮಾಡಿದ್ದು ಅಂತ ?"

ಹಿ....ಹಿ....ಹಿ"

ಅವಿನಾಶ ಹದಿನಾರರ ಹರೆಯದ ಹೆಣ್ಣಿನಂತೆ ನಾಚಿ ಉತ್ತರಿಸಿದ.

"ಸರ್, ತಾವೇ ಅಲ್ವೇ ?"

"ಆಂ ?....ಅಯ್ಯೋ ರಾಮ ರಾಮಾ ನಾನೇ ಅಲ್ವೇ...."

ನೊಂದುಕೊಂಡು ನುಡಿದ ತಾರಾನಾಥ್ ಮತ್ತೆ ಪ್ರಶ್ನಿಸಿದರು.

"ಒಂದು ಠಾಣೆಯಲ್ಲಿ ನಾಲ್ಕು ತಿಂಗಳು ನಿನ್ನ ಹಾಜರಿ, ಆದರೆ ಇಲ್ಲಿ.... ಈ ಠಾಣೆಯಲ್ಲಿ ನೀನು ಎಷ್ಟು ದಿವಸ ಎಂದು ಕೇಳಿದೆ....ಈಗಲಾದರೂ...."

"ಹಾಂ....ಹಾಂ....ಅರ್ಥವಾಯಿತು ಸರ್"

"ಹಾಗಾದರೆ ಹೇಳು ಎಷ್ಟು ದಿವಸ ?"

"ಖಿಸಕ್" ಎಂದು ನಕ್ಕ ಅವಿನಾಶ್ ಉತ್ತರಿಸಿದ.

"ನೀವು ಬಯಸಿದಷ್ಟು ಸರ್"

"ಅಂದ್ರೆ ಏನರ್ಥ ?"

"ಸರ್....ನನ್ನನ್ನು ಇಲ್ಲಿಗೆ ಕರೆಯಿಸಿಕೊಂಡವರು ನೀವೇ. ನೀವು ಎಷ್ಟು ದಿವಸ ಇಟ್ಟುಕೊಳ್ಳುತ್ತೀರೋ ಅಷ್ಟು ದಿವಸ ಅಂದೆ"

"ಹೂಂ .. ಎಕ್ಸಲೆಂಟ್ ಆನ್ಸರ್...." ಪ್ರಶಂಶಿಸುತ್ತ ಸಾಹೇಬರು ಗುಂಡಿ ಒತ್ತಿದರು. ಹೊರಗಿದ್ದ ಸೆಂಟ್ರಿ ಕಾಫಿ ಟ್ರೇದೊಂದಿಗೆ ಒಳಬಂದ. ಇಬ್ಬರೆದುರು ಕಾಫಿ ಬಟ್ಟಲಿರಿಸಿದರು.

"ಯಾರನ್ನೂ ಒಳಗೆ ಬಿಡಬೇಡ, ನೋ ಫೋನ್ ಕಾಲ್" ಎಂದರು ತಾರಾನಾಥ್. ಆತ ತಲೆಯಾಡಿಸಿ ಹೊರನಡೆದ. ಎರಡು ನಿಮಿಷಗಳಲ್ಲಿ ಇಬ್ಬರೂ ಖಾಲಿ ಬಟ್ಟಲು ಕೆಳಗಿಟ್ಟರು. ಈಗ ತಾರಾನಾಥ್ ಗಂಭೀರವಾಗಿದ್ದರು.

"ಅವಿನಾಶ್....ನಾನೀಗ ತುಂಬಾ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿದ್ದೇನೆ"

"ಅದೇನು ವಿಷಯ ಸರ್, ದಯವಿಟ್ಟು ಹೇಳಿ"

ಅವಿನಾಶನ ಮಾತಿನಿಂದ ಅವರಿಗೆ ತುಸು ಸಮಾಧಾನವಾದಂತೆನಿಸಿತು. ತಾರಾನಾಥರು ಮುಂದುವರೆಸಿದರು.

# 2

....ಒಂದು ವಾರದ ಹಿಂದೆ ನಮ್ಮಲ್ಲಿಗೆ ದೊಡ್ಡ ಪ್ರಮಾಣದಲ್ಲಿ ಬ್ರೌನ್ ಶುಗರ್ ಬರುವುದಿತ್ತು. ಆ ಸಮಾಚಾರ ನಮಗೆ ತಲುಪುತ್ತಲೂ ನಾವು ಬಿಗಿಯಾದ ಬಂದೋಬಸ್ತಿನ ವ್ಯವಸ್ಥೆ ಮಾಡಿದೆವು. ಅದರಿಂದಾಗಿ ಅಪರಾಧಿ ಆ ಬ್ರೌನ್‌ಶುಗರ್ ನಮ್ಮಲ್ಲಿಗೆ ತರದೇ ನಮಗೆ "ಚಕ್ಮಾ" ಕೊಟ್ಟು ಪರಾರಿಯಾದ.

"ಮಾಲು ಎಷ್ಟಿತ್ತು ಸರ್"

"ಕಡಿಮೆ ಕಡಿಮೆ ಎಂದರೂ ಹತ್ತು ಕೋಟಿ ರೂಪಾಯಿಯಾಗಬಹುದು"

"ಓಹ್ ಗಾಡ್"

"ಆತನೀಗ ನಮ್ಮ ನೆರೆಯಲ್ಲಿದ್ದಾನೆ ಎಂಬ ಗುಪ್ತ ಸಮಾಚಾರ ಬಂದಿದೆ. ನಾನು ಅದಕ್ಕಾಗಿ ನಿನ್ನನ್ನು ಸ್ಪೆಶಲ್ ಆರ್ಡರ್ ಮೇಲೆ ಕರೆಸಿಕೊಂಡಿರುವೆ"

"ನನಗೆ ಗೊತ್ತು ಸರ್" ನನಗಾಗಿ ನೀವು ದೊಡ್ಡದಾದ ಕಂದಕ ತೋಡಿ ಇಟ್ಟಿರುತ್ತೀರಿ ಎಂದು....ಹೇಳಿ ಸರ್....ಮುಂದೇನು ?"

"ಎಲ್ಲಾ ಈ ಫೈಲಿನಲ್ಲಿದೆ....ಸ್ಟಡಿ ಮಾಡು"

ಅವಿನಾಶ ಎದ್ದು ನಿಂತು ತನ್ನೆಡೆ ಸರಿಸಿದ ಫೈಲು ತಿರುವತೊಡಗಿದ. ಮೊದಲ ಪುಟ ತಿರುವುತ್ತಲೂ ಕಂಡು ಬಂದ ಫೋಟೋ. ಆತ ಬೆಚ್ಚಿದ. ಕ್ಷಯರೋಗಿಯನ್ನು ಹೋಲುವಂಥ ವ್ಯಕ್ತಿಯ ಚಿತ್ರ .. ಕೆಳಗೆ ಕಣ್ಣಾಡಿಸಿದ.

ಹೆಸರು ಕಾಮ್ತ್ರಿಂಗ.

ವಯಸ್ಸು ಐವತ್ತು

ಪೌರತ್ವ ಟಿಬೇಟೀಯನಾದರೂ ಭಾರತೀಯನಲ್ಲ... ಗಡಿ ಭದ್ರತಾ ಪಡೆಯವರ ಕಣ್ತಪ್ಪಿಸಿ ಒಳಗೆ ನುಗ್ಗಿ ಬಂದವ.

ಆರೋಪ: ಪರದೇಶದ ಪೌರ. ಶತೃರಾಷ್ಟ್ರದ ಏಜಂಟ್. ಇಲ್ಲಿ ಮೂರು ಕೊಲೆ ಎಂಟು ರೇಪ್, ಎರಡು ದರೋಡೆ ಮಾಡಿದ ಆರೋಪ ಗಳಿವೆ.... ಕಳ್ಳಸಾಗಾಣಿಕೆದಾರ.... ಮಾದಕ ವಸ್ತುಗಳ ವ್ಯಾಪಾರಿ.... ಇತ್ಯಾದಿ....

ವಿಶೇಷ: ಇವನ ಬಳಿ ನಾಲ್ಕು ದೇಶಗಳ ಜಾಲ್ತಿ ಪಾಸ್‌ಪೋರ್ಟ್ ಇವೆ,

ಹೆಣ್ಣು ಈತನ ನಿರ್ಬಲತೆ. ಕ್ಯಾಬರೆ ಡ್ಯಾನ್ಸ್‌ನಲ್ಲಿ ಆಸಕ್ತಿ. ಸದಾಕಾಲ ನಗ್ನ ಹುಡುಗಿಯರ ಜೊತೆ ಸಂಗ....

ಓದುತ್ತಾ ಓದುತ್ತಾ ಅವಿನಾಶ ಮೇಜಿನ ತುದಿ ಕೈಯಾಡಿಸುತ್ತಿದ್ದ. ಅವನಿಗರಿವಿಲ್ಲದಂತೆ ಮೇಜಿನ ಅಡಿ ಕೈ ತೂರಿಸಿ ಬೆರಳಾಡಿಸಿದ ... ವಿದ್ಯುತ್ ತಂತಿ ಸ್ಪರ್ಶಿಸಿದಂತಾಯಿತು....

ಕೈಗೆ ತಗುಲಿದ ಚಿಕ್ಕ ಗಾತ್ರದ ಬಿರಡೆ....

ಅವಿನಾಶನ ಮೈ "ಜುಂ" ಎಂದಿತು.

ಅದಿನಾಶನ ವರ್ತನೆಗೆ ಎಸ್. ಪಿ. ತಾರಾನಾಥ್ ಜಾಗೃತರಾದರು.

ಅವರೆಡೆ ನೋಡಿದ ಅವಿನಾಶ್ ಸಂಜ್ಞೆಯಿಂದಲೇ ಅವರಿಗೆ ಸುಮ್ಮನಿರುವಂತೆ ತಿಳಿಸಿ ಬೇಕೆಂತಲೇ ಪರಪರ ಸಪ್ಪಳವಾಗುವಂತೆ ಫೈಲಿನ ಹಾಳೆ ತಿರುವಿದ. ಅದರೊಂದಿಗೆ ಅವನ ಬಲಗೈ ಬೆರಳುಗಳು, ಆ ಗುಂಡಗಿನ ಚಿಕ್ಕ ಬಿರಡೆಯನ್ನು ಸ್ಪರ್ಶಿಸಿ, ನೇವರಿಸಿ, ಕೊನೆಗೆ, ಕಿತ್ತಲು ಯತ್ನಿಸುತ್ತಿದ್ದವು. ಒಂದರ್ಧ ನಿಮಿಷದಲ್ಲಿ ಬಿರದೆ ಕಿತ್ತಿ ಕೈಗೆ ಬಂದಿತು. ತುಸು ಹೊತ್ತು ಅದನ್ನು ದಿಟ್ಟಿಸಿದ ಅವಿನಾಶ್ ತುಟಿಗಳ ಮೇಲೆ ಕುಟಿಲ ನಗೆಸೂಸಿತು. ಬಿರಡೆಯನ್ನು ಬಾಯಿ ಹತ್ತಿರ ತಂದ. ಬೆರಳಿನಿಂದ ಎರಡು ಮೂರು ಬಾರಿ ಕಟ್, ಕಟ್‌ಕಟ್ ಎಂದು ಬಾರಿಸಿ ಬಾಯಿಯಿಂದ ಜೋರಾಗಿ "ಭೋ" ಎಂದು ಕೂಗಿದ. ಅದೇ ಕ್ಷಣ ಹೊರಗಡೆಯಿಂದ ಯಾರೋ 'ಅಯ್ಯೋ-ಸತ್ತೆ' ಎಂದು ಕೂಗಿಕೊಂಡರು. ಬಿರಡೆಯನ್ನು ಜೇಬಿಗಿಳಿಸುತ್ತ ಅವಿನಾಶ ಹೊರಗೋಡಿದ.

ಬಾಗಿಲು ತೆರೆದು ಧ್ವನಿಬಂದ ಪಕ್ಕದ ರೂಮಿನತ್ತ ಜಿಗಿದ.

ರೂಮಿನ ಬಾಗಿಲು ಒಳಗಿನಿಂದ ಭದ್ರಗೊಳಿಸಲ್ಪಟ್ಟಿತ್ತು. ಮುಚ್ಚಿದ ಬಾಗಿಲ ಮೇಲೆ ಹೆಗಲಿನಿಂದ ನಾಲ್ಕಾರು ಬಾರಿ ಢೀಕೊಟ್ಟ. ಅಷ್ಟರಲ್ಲಿ ಎಸ್. ಪಿ. ಸಾಹೇಬರೂ ಹೊರಗೆ ಬಂದರು. ನಡೆದ ವಿಷಯ ಅವರಿಗೆ ಅರ್ಥವಾಗಿತ್ತು. ದೂರನಿಂತು ನಿರೀಕ್ಷಿಸುತ್ತಿದ್ದ ತಮ್ಮ ಸಿಬ್ಬಂದಿಗೆ ಕಣ್ಸನ್ನೆ ಮಾಡಿದರು. ಅಷ್ಟೇ ಸಾಕಾಯಿತು. ಮೂರು ನಾಲ್ಕು ಜನ ಮುಂದೆ ಬಂದರು. ಅವರೆಲ್ಲರ ಒಂದೊಂದು ಹೊಡೆತಕ್ಕೆ ಬಾಗಿಲು ಚಕ್ ಚಕ್ ಎಂದು ಸದ್ದು ಮಾಡುತ್ತಾ ಮುರಿದು ಬಿತ್ತು.... ಅವಿನಾಶ ಒಳಗೆ ನುಗ್ಗಿದ. ಖಾಲಿ ಕೊಠಡಿ, ತೆರೆದ ಕಿಟಕಿ ಸ್ವಾಗತಿಸಿತು. ಹಕ್ಕಿ ಹಾರಿಹೋಗಿದೆ ಎಂದು ಸ್ಪಷ್ಟ

ವಾಯಿತು. ಅದೇ ಕ್ಷಣ ಹೊರಗಡೆ 'ಕಿರ್....ಕರ್' ಸಪ್ಪಳ "ಓಹ್ ಗಾಡ್.... ಜೀಪ್ ಸ್ಟಾರ್ಟ್ ಆಗುತ್ತಿದೆ."

ಎದುರಿಗಿದ್ದವರನ್ನು ತಳ್ಳಿಕೊಂಡು ಹೊರಗೋಡಿ ಬಂದ ಅವಿನಾಶ. ಹೋಲಸ್ಟರದಲ್ಲಿಯ ಸರ್ವಿಸ್ ರಿವಾಲ್ವರ್ ಅವನ ಕೈಗೆ ಬಂದಿತು. ಎರಡೆರಡು ಮೆಟ್ಟಿಲು ಗೆನೆಯುತ್ತ ಕೆಳಗಿಳಿದು ಬಂದ. ಆತನೆಷ್ಟು ವೇಗವಾಗಿ ಬಂದರೂ ಜೀಪು ಹಿಡಿಯಲಾಗಲಿಲ್ಲ.... ಅವನಿಂದ ಐದು ಹತ್ತು ಅಡಿಯಲ್ಲಿ ಅದು ಹಾಯ್ದು ಹೋಯಿತು.

"ಸ್ಟಾಪ್.... ಸ್ಟಾಪ್.... ಫಸ್ಟ್ ವಾರ್ನಿಂಗ್" ಅವಿನಾಶ ಅರಚಿದ

ಜೀಪು ಓಡತೊಡಗಿತು ಗೇಟಿನತ್ತ.

"ಸ್ಟಾಪ್...." ಎರಡನೇ ವಾರ್ನಿಂಗ್

ಜೀಪು ನಿಲ್ಲಲಿಲ್ಲ. ಒಂದು ಬಾರಿ ಆಕಾಶದೆಡೆ ರಿವಾಲ್ವರ್ ಮುಖಮಾಡಿ ಗುಂಡು ಹಾರಿಸಿ ಅರಚಿದ. "ಲಾಸ್ಟ್ ವಾರ್ನಿಂಗ್...."

ಜೀಪು ಗೇಟು ತಲುಪಿತು.

ಅವಿನಾಶನ ರಿವಾಲ್ವರ್ ಗರ್ಜಿಸಿತು.

'ಢಂ' ಎಂಬ ಸಪ್ಪಳದೊಂದಿಗೆ ಪುಟ್ ಫರ್‍ರ್‍ ಸದ್ದು. ಜೀಪಿನ ಹಿಂದಿನ ಗಾಲಿಗೆ ಗುಂಡು ತಗಲಿ ಟೈರ್ ಒಡೆದಿತ್ತು. ಆದರೂ ಜೀಪು ನಿಲ್ಲದೇ ಗೇಟಿನಿಂದ ಮರೆಯಾಯಿತು.... ಅವಿನಾಶ ಹಿಂದೆ ಮುಂದೆ ನೋಡಲಿಲ್ಲ. ತನ್ನ ಬೈಕ್ ಸ್ಟಾರ್ಟ್ ಮಾಡಿ ಅದನ್ನು ಹಿಂಬಾಲಿಸಿದ. ಬಾಣದಂತೆ ನುಗ್ಗಿದ ಬೈಕ್ ಗೇಟ್‌ದಾಟಿ ಚಿಕ್ಕ ದಾರಿಯಲ್ಲಿ ಓಡಿ ಹೈವೇಗೆ ಬಂದಿತು.... ಜೀಪಿನ ಸುಳಿವಿಲ್ಲ.

ಅವಿನಾಶ್ ಬೈಕ್ ವೇಗ ಹೆಚ್ಚಿಸಿದ. ಹೈವೇ ಮೇಲೆ ಬೈಕ್ ಗಾಳಿಯೊಂದಿಗೆ ಮಾತನಾಡಿತು. ಎಲ್ಲಾ ವ್ಯರ್ಥ. ಎಷ್ಟು ವೇಗವಾಗಿ ಚಲಿಸಿದರೂ ಜೀಪು ಕಂಡು ಬರಲಿಲ್ಲ. ಹಾಗಾದರೆ ಹೋಯಿತೆಲ್ಲಿ? ವಿಶಾಲವಾಗಿ ಹಬ್ಬಿದ ಮರದಡಿ ಬೈಕ್ ನಿಲ್ಲಿಸಿ ಅವಿನಾಶ ಯೋಚನಾಮಗ್ನನಾದ.

ಹಕ್ಕಿ ಹಾರಿಹೋಗಿದೆ ಎಂಬ ಕಲ್ಪನೆ ಬರುತ್ತಲೂ ಜೀಪ್ ಸ್ಟಾರ್ಟ್ ಆದ ಸದ್ದು ಕೇಳಿ ಆತ ಹೋಲಸ್ಟರದಿಂದ ರಿವಾಲ್ವರ್ ಹಿಡಿದು ಕೆಳಗೆ ಓಡಿ ಬಂದ....ಗೇರ್ ಬದಲಿಸಿದ, ಜೀಪು ವೇಗ ಹೆಚ್ಚಿಸಿದ ಸದ್ದು ಕೇಳಿತು,

ಅವನೆದುರೇ ಕೆಲವೇ ಅಡಿಗಳಲ್ಲಿ ಜೀಪು ಹಾಯ್ದು ಹೋದಾಗ ಆತ ಕೂಗಿ ವಾರ್ನಿಂಗ್ ನೀಡಿದ್ದ.

ಸ್ಟಾಪ್.... ನಿಲ್ಲು ...

ಜೀಪು ನಿಲ್ಲಲಿಲ್ಲ.

ಎರಡನೇ ಬಾರಿ ಎಚ್ಚರಿಸಿದ.

ಸ್ಟಾಪ್ ಗುಂಡು ಹಾರಿಸಬೇಕಾಗುತ್ತದೆ.

ಎಚ್ಚರಿಕೆ ವ್ಯರ್ಥವಾಗಿತ್ತು.

ಜೀಪು ಗೇಟ್ ಪ್ರವೇಶಿಸಿತ್ತು.

ಮೂರನೇ ಕೊನೆಯ ಎಚ್ಚರಿಕೆಯೊಂದಿಗೆ ಕೈಯಲ್ಲಿಯ ರಿವಾಲ್ವರ್ ಗರ್ಜಿಸಿತ್ತು. ಬಲಬದಿಗೆ ಹೊರಳಲಿದ್ದ ಜೀಪಿನ ಹಿಂದಿನ ಗಾಲಿಗೆ ಗುಂಡು ತಗಲಿ ಅದು 'ಟಬ್' ಎಂಬ ಸಪ್ಪಳದೊಂದಿಗೆ ಒಡೆಯುತ್ತಿದ್ದಂತೆ ಜೀಪು ಓಲಾಡತೊಡಗಿತ್ತು. ಅದರ ಹಿಂದೆಯೇ ಅವಿನಾಶ್ ಬೈಕ್ ಮೇಲಿಂದ ಹಿಂಬಾಲಿಸಿದ್ದ.

ಜೀಪು ಮದಿರೆ ಸೇವಿಸಿದಂತೆ ಅತ್ತಿತ್ತ ಹೊಯ್ದಾಡುತ್ತ ಕಣ್ಮರೆಯಾಗಿತ್ತು. ಆದರ ಬೆಂಬತ್ತಿ ತುಂಬಾ ದೂರ ಬಂದರೂ ಅದರ ಸುಳಿವಿಲ್ಲ.

ಒಮ್ಮಿಂದೊಮ್ಮೆಲೆ ಅವಿನಾಶ್ ಬೆಚ್ಚಿಬಿದ್ದ.

ಥೂ ಎಂಥ ಪ್ರಮಾದವಾಯಿತಲ್ಲ ಎಂದು ಹಳಹಳಿಸಿದ.

ಟೈರ್ ಒಡೆದ ಜೀಪು ಇಷ್ಟುದೂರ ಬರಲು ಸಾಧ್ಯವೇ ಇಲ್ಲ. ಅದು ಮಧ್ಯದಲ್ಲಿ ಎಲ್ಲೋ ಕಾಲುದಾರಿಯಲ್ಲಿ ತಿರುವಿಕೊಂಡಿರಬೇಕು.

ತಪ್ಪಿನ ಅರಿವಾಗುತ್ತಲೂ ಬೈಕ್ ಹೊರಳಿಸಿದ. ಬಂದ ದಾರಿಯಲ್ಲೇ ನಿಧಾನವಾಗಿ ಮರಳತೊಡಗಿದ. ಅವನ ಎರಡೂ ಕಣ್ಣುಗಳು ಜಾಗ್ರತೆಯಿಂದ ರಸ್ತೆಯ ಎಡಬಲ ಪರೀಕ್ಷಿಸುತ್ತಿದ್ದವು.... ಅವನ ಪರಿಶ್ರಮ ವ್ಯರ್ಥವಾಗಲಿಲ್ಲ. ಕಾಲುದಾರಿಯೊಂದು ಗೋಚರಿಸಿತು. ಬೈಕ್ ನಿಲ್ಲಿಸಿ ದಿಟ್ಟಿಸಿದ ... ಮಣ್ಣಿನ ದಾರಿಯಲ್ಲಿ ಟಾಯರ್ ಗುರುತುಗಳು. ಓಹೋ.... ಜೀಪು ಇಲ್ಲಿಂದ ಸಾಗಿದೆ ಎಂದು ತರ್ಕಿಸಿ ದೂರಕ್ಕೂ ನಿರೀಕ್ಷಿಸಿದ. ಫರ್ಲಾಂಗ್ ಅಂತರದಲ್ಲಿ ಹತ್ತಾರು ಗಿಡಗಳು.... ಮುಳ್ಳು ಕಂಟಿಗಳು ಗೋಚರಿಸಿದವು. ಸಂಶಯ ದೃಢವಾಯಿತು. ಬೈಕ್ ಅದೇ ದಾರಿಯಲ್ಲಿ ಮುಂದುವರೆಸಿದ,

ಮರಗಳ ಅಡಿಯಲ್ಲಿ ಹಾಯಾಗಿ ವಿರಮಿಸಿದ ಜೀಪು ಕಣ್ಣಿಗೆ ಬಿದ್ದಿತು. ಬೈಕ್‌ನಿಂದಿಳಿದು ರಿವಾಲ್ವರ್ ಗುರಿಯೊಂದಿಗೆ ಜೀಪು ಸಮೀಪಿಸಿದ. ಖಾಲಿ ಜೀಪು ಅವನನ್ನು ನೋಡಿ ನಕ್ಕಿತು.... ಅಪರಾಧಿ ಚಾಣಾಕ್ಷ ಮತ್ತೆ ಅವನಿಗೆ ಕೈಕೊಟ್ಟಿದ್ದ.... ಜೀಪಿನ ಪಕ್ಕದಲ್ಲಿದ್ದ ಟಾಯರ್ ಗುರುತು ಪರೀಕ್ಷಿಸಿದ. ಅವು ಮತ್ತೊಂದು ವಾಹನದವು. ಬಹುಶಃ ಮಾರುತಿ ಕಾರಿನದು ಇರಬೇಕು. ನಿರಾಶೆಯಿಂದ ಹಾಗೇ ಆಫೀಸಿನತ್ತ ಹಿಂತಿರುಗಿದ. ಸಾಲಾಗಿ ಹಬ್ಬಿದ ಮರಗಳ ಮಧ್ಯೆ ಇರುವ ಸೀಳುದಾರಿಯಲ್ಲಿ ಬೈಕ್ ನಡೆಸಲು ಮುದ ಎನಿಸಿದರೂ ಅದನ್ನು ಆಸ್ವಾದಿಸಲು ಮನಸ್ಸು ಹದವಾಗಿರಲಿಲ್ಲ.

ಆಫೀಸಿನೆದುರು ಸಂತೆಯೇ ನೆರೆದಿತ್ತು.

ಸ್ವತಃ ಎಸ್. ಪಿ. ತಾರಾನಾಥ್ ಅವರೇ ಕೆಳಗಿಳಿದು ಬಂದಿದ್ದರಿಂದ ಅವರ ಎಲ್ಲ ಸಿಬ್ಬಂದಿ ಸೆಂಟ್ರಿ ಒಟ್ಟಾರೆ ಸೇರಿ ಕೋಲಾಹಲ ಮೂಡಿಸಿತ್ತು.

ಎಲ್ಲರೂ ಎಸ್. ಪಿ. ಸಾಹೇಬರ ಸುತ್ತ ನೆರೆದು ಕೆಲವೇ ನಿಮಿಷಗಳ ಹಿಂದೆ ನಡೆದ ಘಟನೆ ಬಗ್ಗೆ ಚರ್ಚಿಸುತ್ತಿದ್ದರು. ಅವಿನಾಶನ ಬೈಕ್ ಕಾಣಸುತ್ತಲೇ ಅವರೆಲ್ಲ ತಟಕ್ಕನೆ ಮೌನ ತಾಳಿ ಉತ್ಸುಕತೆಯಿಂದ ಅವನತ್ತಲೇ ದಿಟ್ಟಿಸಿದರು.

"ಸರ್.... ಆತ ಮಹಾಚಾಣಾಕ್ಷ.... ತಮ್ಮ ಆಫೀಸಿನ ಹಿಂಭಾಗದಲ್ಲಿರುವ ಮರಗಳ ಗುಂಪಿನಲ್ಲಿ ಮಾರುತಿ ಅಡಗಿಸಿಟ್ಟಿದ್ದ ಜೀಪು ಅಲ್ಲೇ ಬಿಟ್ಟು ಪರಾರಿಯಾಗಿದ್ದಾನೆ"

"ಹೂಂ".... ಗಂಭೀರವಾಗಿ ಉದ್ಗರಿಸಿದ ತಾರಾನಾಥ್ ಮಹಡಿಯತ್ತ ನಡೆದರು.

ಅವಿನಾಶ ಅವರನ್ನು ಹಿಂಬಾಲಿಸಿದ.... ತಮ್ಮ ಕೊಠಡಿ ಪ್ರವೇಶಿಸಿದ ಅವರು ಅವನಿಗೆ ಕುಳಿತುಕೊಳ್ಳಲು ಸೂಚಿಸಿ ತಾವು "ಪೈಪ್" ಹೊತ್ತಿಸಿದರು. ಎರಡು ಮೂರು ಬಾರಿ ಜಗ್ಗಿ ಭುಸುಭುಸನೆ ಹೊಗೆ ಕಾರಿ, ಪೈಪ್ ಬಾಯಿಯಿಂದ ತೆಗೆದು ಮೇಜಿನ ಮೇಲಿಟ್ಟರು. ಅವರು ಬಹಳ ಗಂಭೀರರಾಗಿದ್ದರು.

ನೀನು ಹೇಳಿದ್ದು ಕೇಳಿದರೆ ಅಪರಾಧಿಗಳು ನನ್ನ ಮೂಗಿನ ಕೆಳಗೇ ಬಲೆ ಬೀಸಿದ್ದಾರೆಂದು ವ್ಯಕ್ತವಾಗುತ್ತದೆ. ಇದರ ಕಲ್ಪನೆಯೇ ನನಗಿರಲಿಲ್ಲ. ಅವಿನಾಶ್ ನಮ್ಮ ಸೀಕ್ರೆಟ್ ವಿಷಯಗಳೆಲ್ಲ ಬಯಲಿಗೆ ಬಂದವು"

"ನನಗೆ ತಿಳಿದಂತೆ ಅಂಥ ಅನಾಹುತವೇನೂ ಆಗಿಲ್ಲ ಸರ್"

ತಾರಾನಾಥ್ ತಲೆಎತ್ತಿ ಅವನೆಡೆ ನೋಡಿದರು. ಆತ ವಿವರಿಸಿದ.

"ಸರ್.... ನನಗೆ ಗೊತ್ತಿದ್ದಂತೆ ಇಂದು ನಾವೇನು ಅಂಥ ರಹಸ್ಯದ ಮಾತುಗಳನ್ನಾಡಿಲ್ಲ.

ಅಲ್ಲದೇ.... ಬಿರಡೆಯಾಕಾರದ "ಮೈಕ್ ಮಾತ್ರೆ" ನಿನ್ನೆ ಇರಲಿಲ್ಲ.

ಹೌದೇ" ಅಚ್ಚರಿ ವ್ಯಕ್ತಪಡಿಸಿದರು ತಾರಾನಾಥ್.

"ಹೌದು ಸರ್ ನಿನ್ನೆ ನಾನು ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಲು ಬಂದಾಗ ಇಲ್ಲೇ ಮೇಜಿನ ಬದಿ ನಿಂತಿದ್ದೆ. ಇಂದಿನಂತೆ ನಿನ್ನೆಯೂ ನನ್ನ ಕೈಯಾಡಿತ್ತು ಏನೂ ತಗಲಿರಲಿಲ್ಲ. ಇಂದು ಮಾತ್ರ ತಗಲಿತು.... ನನಗನಿಸುವ ಮಟ್ಟಿಗೆ ಈ "ಮೈಕ್‌ಮಾತ್ರೆ" ನನಗಾಗಿ ನಾನು ಬರುವ ಮೊದಲು ಅಂಟಿಸಲಾಗಿತ್ತು.

"ಎಸ್. ಪಿ. ಸಾಹೇಬರು ತಟಕ್ಕನೆ ನುಡಿದರು.

"ಹಾಗಾದರೆ.... ಅದನ್ನು ಪಾಂಡುರಂಗ ಅಂಟಿಸಿರಬೇಕು"

"ಪಾಂಡುರಂಗ ? ಯಾವ ಪಾಂಡುರಂಗ ?"

"ನಮ್ಮ ಆಫೀಸಿನ ಕರ್ಮಚಾರಿ. ನಾಲ್ಕು ವರ್ಷಗಳಿಂದ ಇದೇ ಆಫೀಸಿನಲ್ಲಿ ಮೆಸೆಂಜರ್ ಎಂದು ಕೆಲಸ ಮಾಡುತ್ತಿದ್ದಾನೆ"

"ಹಾಂ, ಹಾಂ.... ಒಂದು ನಿಮಿಷ ಸಾರ್....ನಾನು ಬರುವುದಕ್ಕೆ ಮೊದಲು ಆತ ತಮ್ಮ ರೂಮಿನಿಂದ ಹೊರಬಂದ. ನಾನಾತನಿಗೆ ಡಿಕ್ಕಿ ಕೊಡುತ್ತಿದ್ದೆ. ಸ್ವಲ್ಪದರಲ್ಲಿ ತಪ್ಪಿತು. ಅವನೇ ತಾನೇ."

"ಎಸ್.... ಅವನೇ.... ಒಂದೆರಡು ಫೈಲು ತಂದು ನನ್ನ ಮುಂದಿರಿಸಿದ್ದ...."

ನಾನು ಸಹಿ ಮಾಡುತ್ತಿರುವಾಗ ಆತ ನೀನು ನಿಂತಂತೆ ಮೇಜಿನ ಬದಿಯಲ್ಲಿ ಸುಮಾರು ಹೊತ್ತು ನಿಂತಿದ್ದ. ಆವಾಗಲೇ ಮಾತ್ರೆ ಅಂಟಿಸಿರಬೇಕು.

"ತಮ್ಮ ತರ್ಕ ಪೂರ್ಣಸತ್ಯ ಸರ್. ಪಾಂಡುರಂಗನೇ ಆ ವಿದ್ರೋಹಿ ಅಪರಾಧಿಗಳೊಂದಿಗೆ ಶಾಮೀಲಾಗಿದ್ದಾನೆ. ನಾವಿನ್ನು ತುಂಬಾ ಜಾಗೃತರಾಗಿರಬೇಕು ಸರ್ ಇನ್ನೊಂದು ವಿಷಯ"

"ಏನದು ?"

"ಸರ್ ಈ ಬಿರಡೆ ಮಾತ್ರ ಸಾಮಾನ್ಯವಾದುದಲ್ಲ. ಇದು ನಮ್ಮ ವಿದೇಶೀ ಮಿತ್ರರು ವಿಶೇಷ ಪರಿಶ್ರಮದಿಂದ ತಯಾರಿಸಿದ್ದಾರೆ. ಇದಕ್ಕೆ ವಿದ್ಯುತ್ ಶೆಲ್ಲು, ವಾಯರ್ ತಂತಿ, ಯಾವುದೂ ಬೇಕಾಗಿಲ್ಲ ಯಾವುದೇ ಪದಾರ್ಥಕ್ಕೆ ಒತ್ತಿದರೆ ಸಾಕು ಅಂಟಿಕೊಳ್ಳುತ್ತದೆ. ಅಲ್ಲಿಂದ ಮೂವತ್ತು ಅಡಿ ಅಂತರದ ಎಲ್ಲಾ ಪ್ರಕಾರದ ಧ್ವನಿಗಳನ್ನು ಇದು ಗ್ರಹಗ್ರಹಿಸಿ ಹೊರಗೆ ಕಳಿಸುತ್ತದೆ.

"ಅವಿನಾಶ್. ಇದರ ಬಗ್ಗೆ ನಿನಗೆ.

"ಎಸ್ ಸರ್. ನನಗೆ ಸಂಪೂರ್ಣ ವಿಶ್ವಾಸವಿದೆ. ಎಂಟು ತಿಂಗಳುಗಳ ಹಿಂದೆ ನಮ್ಮ ಮಿತ್ರರಂತೆ ನಟಿಸುವ ಶತೃರಾಷ್ಟ್ರದ ವಿಜ್ಞಾನಿಗಳು ಶೋಧಿಸಿದ ಉಪಕರಣವಿದು. ನಾವು ತಿಳಿದಷ್ಟು ಸರಳವಾದ ಕೇಸಲ್ಲ ಸರ್ ಇದು. ಶತೃ ರಾಷ್ಟ್ರದವರ ಸಂಚಿನ ವಾಸನೆ ನನಗೆ ಬರುತ್ತಿರುವುದರಿಂದ ಇದು ಅಂತರ ರಾಷ್ಟ್ರೀಯ ಮಟ್ಟದ ಸಂಚು ಎನ್ನಿಸುತ್ತದೆ. ಮಾದಕ ಪದಾರ್ಥಗಳನ್ನು ನಮ್ಮ ದೇಶಕ್ಕೆ ಸಾಗಿಸಿ ನಮ್ಮ ಯುವ ಜನಾಂಗವನ್ನು ನಾಶ ಮಾಡುವ ಪೂರ್ವ ನಿಯೋಜಿತ ಬಲೆ ಇದು."

"ಹಾಗಾದರೆ ಇದರ ಹಿಂದೆ ಕಾಮ್ಹಿಂಗ ಇರಬೇಕು"

"ಕರೆಕ್ಟ್ ಸರ್. ಕಾಮ್ಹಿಂಗ ಟಿಬೇಟಿಯನಂತೆ ಕಂಡರೂ ಟಿಬೇಟಿಯನಲ್ಲ ಭಾರತದ ಪ್ರಜೆಯಂತೂ, ಖಂಡಿತ ಅಲ್ಲ. ಕಳ್ಳಮಾರ್ಗದಿಂದ ಗಡಿಭದ್ರತಾ ಪಡೆಯವರ ಕಣ್ತಪ್ಪಿಸಿ ನಮ್ಮ ದೇಶದೊಳಗೆ ನುಗ್ಗಿ ಬಂದ ಏಜೆಂಟ್ ಆತ. ಸಧ್ಯ ಆತ ಕೊಹಿಮಾದಲ್ಲಿದ್ದಾನೆಂಬ ವದಂತಿಯಿದೆ. ಅವನ ಒಡೆತನಕ್ಕೆ ಸೇರಿದ "ಗ್ರೀನ್‌ಬೆಲ್" ಕ್ಲಬ್ಬಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾನೆ.

"ಇದು ನಿನಗೆ ಹೇಗೆ ಗೊತ್ತು ?"

"ಸರ್... ತಾವು ನನ್ನ ಪೋಸ್ಟಿಂಗ್ ಇಲ್ಲಿ ಮಾಡಿಸಿದ್ದೀರಿ ಎಂದು ತಿಳಿದಾಗ ಅದರ ಕಾರಣ ಹುಡುಕಿದೆ.... ನನಗಾಗಿ ಕೇಸು ದಾರಿ ಕಾಯುತ್ತಿದೆ ಎಂಬ ಉತ್ಸಾಹವೂ ಇದ್ದುದರಿಂದ ಇದನ್ನು ಕಂಡು ಹಿಡಿಯಲು ಕಷ್ಟವಾಗಲಿಲ್ಲ."

"ಅವಿನಾಶ್....ನಿನ್ನ ಬಗ್ಗೆ ನನಗೆ ಹೆಮ್ಮೆಯೆನಿಸುತ್ತದೆ."

"ಥ್ಯಾಂಕ್ಯು ಸರ್"

"ಮುಂದೆ....ಅಂದ್ರೆ....ನೀನೇನಾದರೂ ಯೋಚಿಸಿದ್ದೀಯಾ ?"

"ಎಸ್ ಸರ್... ನನ್ನದೊಂದು ಪ್ಲಾನ್ ಇದೆ"

ಅವಿನಾಶ ವಿವರಿಸತೊಡಗಿದ.

ಎಸ್. ಪಿ. ತಾರಾನಾಥ ಆಸಕ್ತಿಯಿಂದ ಆಲಿಸತೊಡಗಿದರು ...ಹತ್ತು ಹದಿನೈದು ನಿಮಿಷಗಳ ಕಾಲ ಅವನ ಮಾತು ಆಲಿಸಿದ ನಂತರ ಅವರು ಒಮ್ಮಿಂದೊಮ್ಮೆಲೇ ಯೋಚನಾಮಗ್ನರಾದರು....

"ಏಕೆ ಸರ್ ? ಏನಾಯಿತು ?"

"ಏನಿಲ್ಲ....ಸರ್ವ ದೃಷ್ಟಿಯಿಂದಲು ನಿನ್ನ ಯೋಜನೆ ಉತ್ತಮವಾಗಿದೆ. ಆದರೂ ಅಪಾಯದ ಬಗ್ಗೆ ಯೋಚನೆ ಅಷ್ಟೇ"

"ಸರ್....ಈ ಇಲಾಖೆಗೆ ಸೇರುವ ಮುನ್ನ ಇಂಥ ಅಪಾಯಗಳ ಬಗ್ಗೆ ಕಲ್ಪನೆ ಇರಲಿಲ್ಲವೇ ಸರ್ ?"

"ಇತ್ತು"

"ಮತ್ತು ಸೇರಿಕೊಂಡಿರಲ್ಲ ಏಕೆ ?"

ತಾರಾನಾಥ್ ನಿರುತ್ತರರಾದರು. ಅವಿನಾಶ ಮುಗುಳ್ನಕ್ಕ.

"ಸರ್... ನಮ್ಮ ದೇಶದ ಪೊಲೀಸ್ ಇಲಾಖೆ ಪ್ರಪಂಚದಲ್ಲೇ ಶ್ರೇಷ್ಠ ವೆಂದು ನಾನು ವಾದಿಸುವುದಿಲ್ಲ. ನಮ್ಮಲ್ಲಿ ಹತ್ತಾರು ಕೊರತೆಗಳಿವೆ. ಮೊದಲನೆಯದಾಗಿ ನಮಗೆ ಸ್ವಾತಂತ್ರ್ಯವಿಲ್ಲ. ಆತ್ಮಸಾಕ್ಷಿಯಾಗಿ ಕೆಲಸ ಮಾಡುವಂತಿಲ್ಲ. ಯಾವಾಗಲೂ ರಾಜಕಾರಣಿಗಳು ತಮ್ಮ ವಜ್ರಮುಷ್ಠಿಯಲ್ಲಿ ನಮ್ಮನ್ನು ಬಂಧಿಸಿರುತ್ತಾರೆ. ಅವರು ಕುಣಿಸಿದಂತೆ ಕುಣಿಯಬೇಕು. ಎರಡನೆಯದಾಗಿ ನಮ್ಮ ಇಲಾಖೆಗೆ ಆಧುನಿಕ ಪದ್ಧತಿಯ ಸಲಕರಣೆಗಳು ಉಪಲಬ್ಧವಿಲ್ಲ. ನಮಗಿಂತ ನಮ್ಮ ದೇಶದ ಕಳ್ಳಸಾಗಾಣಿಕೆದಾರರ ಬಳಿ ಹೆಚ್ಚು ಪ್ರಭಾವಶಾಲಿ ಶಸ್ತ್ರಾಸ್ತ್ರಗಳಿವೆ. ಹೀಗಾಗಿ ಯಾವಾಗಲೂ ಅವರೇ ವಿಜಯ ದಿಂದ ಮೆರೆಯುತ್ತಾರೆ .. ಜನ, ಸರಕಾರ, ಸಮಾಜ ನಮ್ಮನ್ನು ದೂಷಿಸುತ್ತಾರೆ. ಮೂರನೆಯದಾಗಿ ನಮ್ಮಲ್ಲೇ ಅನೇಕರು ದೇಶದ್ರೋಹಿಗಳಿದ್ದಾರೆ. ಸಮಾಜ ದ್ರೋಹಿಗಳಾಗಿದ್ದಾರೆ....ದುಡ್ಡಿನಾಸೆಗೆ ತಮ್ಮನ್ನು ತಮ್ಮ ಆತ್ಮವನ್ನು ಕೊನೆಗೆ ತಮ್ಮ ದೇಶವನ್ನು ಮಾರುತ್ತಾರೆ....ಸರ್ ಇಂಥವರ ಮಧ್ಯೆ ಇದ್ದ ಕೆಲವೇ ಕೆಲವು ತಮ್ಮಂಥ ನನ್ನಂಥ, ಪ್ರಾಮಾಣಿಕ ಅಧಿಕಾರಿಗಳು ಪ್ರಾಣದ ಹಂಗು

ದೊರೆದು ಇಲಾಖೆಯ ಪ್ರತಿಷ್ಠೆಗಾಗಿ ಸಮಾಜದ ಏಳ್ಗೆಗಾಗಿ ದೇಶದ ಉನ್ನತಿಗಾಗಿ ತಮ್ಮನ್ನು ತಾವೇ ಅರ್ಪಿಸಿಕೊಳ್ಳುತ್ತಾರೆ. ಇಂಥ ಬೆರಳೆಣಿಕೆಯ ಅಧಿಕಾರಿಗಳಿಂದಾಗಿ ನಾವಿಂದು ಪ್ರಪಂಚದಲ್ಲಿ ಶ್ರೇಷ್ಠರಾಗಿ ಉಳಿದಿದ್ದೇವೆ ಸರ್... ಅಪಾಯದ ಬಗ್ಗೆ ಕಲ್ಪನೆಯಿದ್ದರೂ ಅಪಾಯದ ಮುಂದೆ ಎದೆಯೊಡ್ಡಿ ನಿಲ್ಲುತ್ತೇವೆ....ಸರ್....ಈಗ ಹೇಳಿ....ನಾನು ತೆಗೆದುಕೊಂಡ ನಿರ್ಣಯ ಸರಿಯಲ್ಲವೇ ?"

ತಾರಾನಾಥ್ ಎದ್ದು ನಿಂತರು.

ಅವರ ಕಣ್ಣುಗಳು ಒದ್ದೆಯಾಗಿದ್ದವು.

ಗಲ್ಲದಿಂದ ಇಳಿದ ಎರಡು ಮೂರು ಹನಿ ಗದ್ದದವರೆಗೆ ಬಂದಿದ್ದವು. ನಿಧಾನವಾಗಿ ಅವನೆಡೆ ಬಂದ ಅವರು ಒಂದು ಕ್ಷಣ ಅವನ ಮುಂದೆ ನಿಂತು ದಿಟ್ಟಿಸಿದರು. ನಂತರ ಒಮ್ಮೆಲೆ ಬಿಗಿಯಾಗಿ ಅವನನ್ನು ತಮ್ಮ ಎದೆಗೆ ಒತ್ತಿಕೊಂಡು ಬೆನ್ನು ಚಪ್ಪರಿಸಿದರು.

ಅವರ ಹೃದಯ ಭಾರವಾಗಿತ್ತು.

ಗಂಟಲು ಒಣಗಿತ್ತು. ಮೆಲುವಾಗಿ ಕೆಮ್ಮಿ ಸರಿ ಮಾಡಿಕೊಂಡರು.

"ಗುಡ್‌ಲಕ್ ಮೈಸನ್" ಎಂದಷ್ಟೆ ಅವರು ನುಡಿದರು.

ಅವಿನಾಶ್ ಸೆಲ್ಯೂಟ್ ನೀಡಿ ಹೊರಗೆ ಬಂದ ...

ಆಗಲೇ ಅವನ ಬಗ್ಗೆ ಅವನ ಖ್ಯಾತಿಯ ಬಗ್ಗೆ ಅರಿತಿದ್ದ ಸಿಬ್ಬಂದಿ ಅವನತ್ತ ಮೆಚ್ಚುಗೆಯ ದೃಷ್ಟಿಯಿಂದ ನೋಡಿತು. ಅವಿನಾಶನ ಬೈಕ್ ಅವನ ದಾರಿ ಕಾಯುತ್ತಿತ್ತು. ಆದರೂ ಆತ ಬೇಕೆಂತಲೇ ಕೇಳಿದ.

"ನನ್ನನ್ನು ಬಿಡಲು ಯಾರು ಬರುತ್ತೀರಿ ?"

"ನಾನು ನಾನು ನಾನು ಸರ್" ಹತ್ತಾರು ಜನ ಮುಂದೆ ಬಂದರು.

"ಯೋಚಿಸಿ....ನನ್ನ ತಲೆಮೇಲೆ ಮೃತ್ಯು ಹಾರಾಡುತ್ತಿದೆ. ನನ್ನನ್ನು ಕಳಿಸಲು ಬಂದ ನೀವೂ ಸಹ ಅದಕ್ಕೆ ಬಲಿಯಾಗಬಹುದು...."

ಒಂದು ಕ್ಷಣ ಮೌನ....

ಮರುಕ್ಷಣ ಎಲ್ಲರೂ ಒಂದೇ ಧ್ವನಿಯಲ್ಲಿ ಕೂಗಿದರು.

"ನಾವೆಲ್ಲ ಸಿದ್ಧ....ನಾವೆಲ್ಲ ಸಿದ್ಧ"

ಅವಿನಾಶನಿಗೆ ಆನಂದವಾಯಿತು ಎಲ್ಲರೆಡೆ ನೋಡಿ "ಥ್ಯಾಂಕ್ಸ್ ನೀವೆಲ್ಲ ನನ್ನ ಮೇಲಿಟ್ಟ ಪ್ರೀತಿ ವಿಶ್ವಾಸಕ್ಕೆ "

ಮೊಟಾರ್‌ಬೈಕ್ ಪಾರ್ಕ್ ಮಾಡಿದಲ್ಲಿಗೆ ಬಂದ.

ಮುಂದಿನ ಕ್ಷಣ ಗಾಳಿಯೊಂದಿಗೆ ಅವನ ಬೈಕ್ ಮಾತಾಡತೊಡಗಿತು. ಅವಿನಾಶ ಗೇಟಿನಿಂದ ಮರೆಯಾಗುತ್ತಲೇ ... ಗೇಟಿನ ಬಳಿಯಿದ್ದ ಚಿಕ್ಕ ಕೋಣೆಯಿಂದ ಹೊರಬಂದ ವ್ಯಕ್ತಿಯೊಂದು ವಾಯರ್‌ಲೆಸ್ ಫೋನ್ ಆನ್ ಮಾಡಿತು ಆ ಕಡೆಯಿಂದ ಉತ್ತರ ಬರುತ್ತಿದ್ದಂತೆ ನುಡಿದ ... "ನಾನು ರಜಾಕ್ ತನಗೆ ಪ್ಲಾನ್ ಪೂರ್ತಿ ಅರ್ಥವಾಗಿಲ್ಲ. ಇದೀಗ ಇನ್‌ಸ್ಪೆಕ್ಟರ್ ಅವಿನಾಶ್ ಬೈಕ್‌ಮೇಲೆ ಹೊರಗೆ ಹೋದ ಹಾಂ.... ಏನು ?.... ಸರ್.... ಲಾವಣ್ಯಳನ್ನು ಹುಡುಕಬೇಕೆ ? ಸರಿ ... ಸರ್...."

# 3

ಲಾವಣ್ಯ.

ಹದಿನೆಂಟು ಇಪ್ಪತ್ತು ವರ್ಷಗಳ ಅನುಪಮ ಸುಂದರಿ.

ಬಿ.ಎ. ಮೊದಲನೆಯ ವರ್ಷದಲ್ಲಿ ಓದುತ್ತಿದ್ದ ಆಕೆಯ ತಂದೆ ದುಬಾಯಿಯಲ್ಲಿ ಕೆಲಸ ಮಾಡುತ್ತಿದ್ದರು. ತಾಯಿಗೆ ಪಟ್ಟಣದ ಜೀವನ ಹಿಡಿಸಲಿಲ್ಲ. ಹೀಗಾಗಿ ಹಳ್ಳಿಯಲ್ಲಿದ್ದ ತನ್ನ ತಾಯಿಯ ಮನೆ ಸೇರಿದ್ದಳು. ಲಾವಣ್ಯ ಅನಿವಾರ್ಯವಾಗಿ ಶಿಕ್ಷಣಕೋಸ್ಕರ ಶಹರ ಸೇರಬೇಕಾಯಿತು. ಹಳ್ಳಿಯಲ್ಲಿ ಏಳನೆಯ ವರ್ಗ ಪಾಸಾಗುತ್ತಲು ಶಹರಕ್ಕೆ ಬಂದ ಆಕೆ ವಸತಿಶಾಲೆಯಲ್ಲಿ ಶಿಕ್ಷಣ ಮುಂದುವರೆಸಿದಳು. ಹಣಕ್ಕಂತೂ ಕೊರತೆಯಿರಲಿಲ್ಲ. ತಂದೆ ತಿಂಗಳಿಗೆ ಅವಳಿಗೆಂದೇ ಆಗ ಎರಡು ಸಾವಿರ ರೂಪಾಯಿ ಕಳಿಸುತ್ತಿದ್ದರು. ಅದರಲ್ಲಿ ಬಹಳವೆಂದರೆ ಏಳೆಂಟುನೂರು ರೂಪಾಯಿ ಖರ್ಚಾಗಿ ಸಾವಿರಕ್ಕೂ ಹೆಚ್ಚು ಹಣ ಬ್ಯಾಂಕಿನಲ್ಲಿ ಜಮೆಯಾಗತೊಡಗಿತು. ಎಸ್.ಎಸ್.ಎಲ್.ಸಿ. ಪಾಸಾಗಿ ಕಾಲೇಜು ಮೆಟ್ಟಲು ಹತ್ತಿದ ಮೇಲೆ ಅವಳ ಭತ್ಯೆ ಎರಡು ಸಾವಿರಗಳಿಂದ

ಒಮ್ಮೆಲೆ ಐದು ಸಾವಿರಕ್ಕೇರಿತು. ಒಬ್ಬಳೇ ಮಗಳು. ಕಾಲೇಜು ಬೇರೆ ಕಲಿಯುತ್ತಿದ್ದಾಳೆಂದು ತಂದೆ ಪ್ರೀತಿಯಿಂದ ಕಳಿಸುತ್ತಿದ್ದರು. ಆರಂಭದಲ್ಲಿ ಅವಳಿಗೆ ಹಣ ಹೇಗೆ ಖರ್ಚು ಮಾಡಬೇಕೆಂದು ತಿಳಿದಿರಲಿಲ್ಲ. ಹೀಗಾಗಿ ಮೂರು ಮೂರೂವರೆ ಸಾವಿರ ಪ್ರತಿ ತಿಂಗಳು ಅವಳ ಹೆಸರಿನಲ್ಲಿದ್ದ ಅಕೌಂಟ್ ನಲ್ಲಿ ಕೊಳೆಯ ತೊಡಗಿತು. ರಜೆ ಬಂದಾಗ ತಾಯಿಯ ಒತ್ತಾಯಕ್ಕೆ ಹಳ್ಳಿಗೆ ಹೋದವಳು ಎರಡೇ ದಿನಕ್ಕೆ ಓಡಿ ಬರುತ್ತಿದ್ದಳು. ಹಾಸ್ಟೆಲಿನಲ್ಲಿಯ ಕೋಣೆ ಖಾಲಿ ಮಾಡಿ ಎಲ್ಲರೂ ತಮ್ಮ ತಮ್ಮ ಊರಿಗೆ ಹೋಗಿದ್ದರೆ ಈಕೆ ಮಾತ್ರ ಒಂಟಿಯಾಗಿ ಕೋಣೆಯಲ್ಲಿ ಕಳೆಯುತ್ತಿದ್ದಳು. ಬೇಸರವಾದರೆ ತನ್ನ ಗೆಳತಿ ಯರ ಮನೆಗೆ ಹೋಗಿ ಅಲ್ಲೇ ಹರಟೆ ಹೊಡೆದು ಒಂದೊಂದು ಬಾರಿ ಒಂದೆರಡು ದಿವಸ ಅಲ್ಲಿಯೇ ಇದ್ದು ರೂಮಿಗೆ ಬರುತ್ತಿದ್ದಳು.

ಇಂಥ ಸಂದರ್ಭದಲ್ಲೇ ಅವಳಿಗೆ ಪಲ್ಲವಿಯ ಪರಿಚಯವಾದದ್ದು. ಪಲ್ಲವಿ ಅವಳ ಜೊತೆಯೇ ಕಲಿಯುತ್ತಿದ್ದ ಸಾಮಾನ್ಯ ವರ್ಗಕ್ಕೆ ಸೇರಿದ ಗೆಳತಿ. ಅವಳ ತಂದೆ ಮಂಡಿಯೊಂದರಲ್ಲಿ ಗುಮಾಸ್ತರು. ಅಲ್ಪ ಸಂಬಳದಲ್ಲಿ ಹೇಗೋ ಜೀವನ ಸಾಗಿಸುತ್ತಿದ್ದರು. ಹಳ್ಳಿಯಿಂದ ಸ್ವಲ್ಪ ಧವಸಧಾನ್ಯ ಅಂತ ಬರುತ್ತಿತ್ತು. ಸ್ವಂತ ಮನೆಯಿದ್ದುದರಿಂದ ಇದ್ದದ್ದರಲ್ಲೇ ಚೆಂದವಾಗಿ ಅವರ ತಾಯಿ ಸಂಸಾರ ಸಾಗಿಸುತ್ತಿದ್ದರು.

ಅನೂಪ, ಪಲ್ಲವಿಯ ಅಣ್ಣ. ಎಸ್.ಎಸ್.ಎಲ್.ಸಿ ಯಲ್ಲಿ ಮೂರು ಸಾರಿ ಫೇಲಾಗಿ, ತಂಗಿ ಪಾಸಾದದ್ದು ಕಂಡು ವಿದ್ಯೆ ಸಾಕೆಂದು ಶರಣು ಹೊಡೆದಿದ್ದ. ಅಲ್ಲಿಂದ ಅವನ ನಿರುದ್ಯೋಗ ಜೀವನ ಆರಂಭವಾಗಿತ್ತು. ನೌಕರಿಗಾಗಿ ಅತ್ತಿತ್ತ ಅಲೆದಾಡಿದ್ದ. ಪದವೀಧರರಾದವರೇ ಹತ್ತೆಂಟು ವರ್ಷ ಗಳಿಂದ ನೌಕರಿ ಸಿಗದೇ ಗೋಳಾಡುತ್ತಿರುವಾಗ ಎಸ್.ಎಸ್.ಎಲ್.ಸಿ ಫೇಲಾದ ಇವನಿಗೆಲ್ಲಿ ನೌಕರಿ ಸಿಗಬೇಕು. ಇದರಿಂದಾಗಿ ಅನೂಪ ಅಸಮಾಧಾನದಲ್ಲಿ ಬೆಂದು ಹೇಗಾದರೂ ಏನಾದರೂ ಮಾಡಿ ಹಣ ಸಂಪಾದಿಸಬೇಕು ಎಂದು ಮುಂದಾದ. ಅವನ ಸ್ನೇಹಿತ ಇಮ್ರಾನ್ ಅವನ ಸಹಾಯಕ್ಕೆ ಬಂದ. ಇಮ್ರಾನ್ ಖ್ಯಾತ ಉದ್ದಿಮೆದಾರರ ಮಗ. ಅವನ ತಂದೆ ಊದುಬತ್ತಿ ವ್ಯಾಪಾರಿಗಳು. ಮಗನ ಶಿಫಾರಸ್ಸಿನ ಮೇಲೆ ಅನೂಪನಿಗೆ ತಮ್ಮ ಫ್ಯಾಕ್ಟರಿ ಯಲ್ಲಿ ಕೆಲಸ ನೀಡಿದರು. ತಿಂಗಳಿಗೆ ಐದುನೂರು ರೂಪಾಯಿ ಸಂಬಳ. ಅಷ್ಟು

ಸಂಬಳ ಯಾವುದಕ್ಕೂ ಸಾಲದು ಎಂದು ತಿಳಿದಿದ್ದರೂ ಅಷ್ಟಾದರೂ ದೊರೆಯು ತ್ತಲ್ಲ ಎಂದು ಅನೂಪ ಒಪ್ಪಿಕೊಂಡ. ತನ್ನ ಕೊರಗನ್ನು ಇಮ್ರಾನನ ಮುಂದೆ ತೋಡಿಕೊಂಡ. ಅದಕ್ಕೂ ಉಪಾಯ ಸೂಚಿಸಿದವ ಇಮ್ರಾನನೇ.

ಫ್ಯಾಕ್ಟರಿಯಿಂದ ಬಂದ ಮೇಲೆ ಸಾಯಂಕಾಲ ಐದು ಗಂಟೆಯಿಂದ ರಾತ್ರಿ ಎರಡು ಗಂಟೆಯವರೆಗೆ ಪೇಟೆಯಲ್ಲಿ ವ್ಯಾಪಾರ ಮಾಡಲು ಸೂಚಿಸಿದ. ತಾನೇ ಮುಂದಾಗಿ ನಿಂತು ಗಾಂಧೀಚೌಕದ ಬಳಿ ಒಂದು ಅಂಗಡಿಯನ್ನು ಹಿಡಿದು ಕೊಟ್ಟ. ಅಂಗಡಿ ತುಂಬಾ ಚಿಕ್ಕದು. ನಾಲ್ಕು ಫೂಟು ಅಗಲ ಆರು ಫೂಟು ಉದ್ದ. ಅಲ್ಲಿ ಆರಂಭವಾಯಿತು ಅನೂಪನ ಪಾನ್ ಬೀಡಾ ಶಾಪ್.... ಅದರೊಂದಿಗೆ ಒಂದಂಕಿ ಲಾಟರಿ ದಿನಕಳೆದಂತೆ ಒಂದಂಕಿ ಲಾಟರಿ ವ್ಯಾಪಾರ ಬೆಳೆಯತೊಡಗಿತು. ತಿಂಗಳಿಗೆ ಸಾವಿರ ಎರಡು ಸಾವಿರ ಲಾಭವಾಗತೊಡಗಿ ದಂತೆ ಅನೂಪ ಫ್ಯಾಕ್ಟರಿ ಕೆಲಸ ಬಿಟ್ಟು ಪೂರ್ತಿಯಾಗಿ ಇದೇ ಕೆಲಸಕ್ಕೆ ನಿಂತು ಬಿಟ್ಟ....ನೋಡ ನೋಡುತ್ತಿದ್ದಂತೆ ಅವನ ಆಚಾರ ವಿಚಾರ ನಡೆನುಡಿ ಎಲ್ಲಾ ಬದಲಾದವು. ದಿನನಿತ್ಯ ಸಾವಿರಾರು ರೂಪಾಯಿ ಓಡಾಡುತ್ತಿದ್ದರೆ ಕೇಳ ಬೇಕೇನು ? ಮೈಮೇಲೆ ಉತ್ತಮ ಬಟ್ಟೆ ಕಾಲಲ್ಲಿ ಬೆಲೆಬಾಳುವ ಬೂಟುಗಳು ಅದರ ಮೇಲೆ ಓಡಾಡಲು "ಹೀರೋ ಬೈಕ್"... ಇಮ್ರಾನ್ ಅವನ ಅಚ್ಚು ಮೆಚ್ಚಿನ ಮಿತ್ರ. ಅವನ ಉಪಕಾರ ಸದಾ ಸ್ಮರಿಸುತ್ತ ಒಂದು ದೃಷ್ಟಿಯಿಂದ ಅವನ ಚಂಚಾ ಆಗಿ ಬಿಟ್ಟ....ಇಮ್ರಾನ್ ಅವನ ಪಾಲಿಗೆ ಗಾಡ್‌ಫಾದರ್.

ಈ ಮಾತು ಸುಳ್ಳು ಆಗಿರಲಿಲ್ಲ.

ಒಂದಂಕಿ ಲಾಟರಿ ಮಟ್ಕಾ ಮುಂತಾದವುಗಳ ಮೇಲೆ ಆಗೊಮ್ಮೆ ಈಗೊಮ್ಮೆ ಪೊಲೀಸರು ದಾಳಿ ಮಾಡಿದಾಗ ಒಂದೆರಡು ದಿವಸ ಅನೂಪ ಬಂದಿಖಾನೆ ವಾಸ ಅನುಭವಿಸುತ್ತಿದ್ದ. ಆಗ ಅವನನ್ನು ಬಿಡಿಸಿ ಹೊರಗೆ ತರುವವನೇ ಇಮ್ರಾನ್. ಅವನ ಸಹವಾಸದಿಂದಾಗಿ ಸೆರೆಮನೆ ರುಚಿ ಕಂಡರೂ ಒಂದು ದೃಷ್ಟಿಯಿಂದ ಅದು ಲಾಭಕರವೇ ಆಯಿತು. ಈ ಕಾರಣದಿಂದಾಗಿ ಅನೇಕ ಪೊಲೀಸ್ ಅಧಿಕಾರಿಗಳ ಪರಿಚಯವೂ ಅನೂಪನಿಗಾಯಿತು. ಅವರ ಕೃಪಾ ಛತ್ರದಲ್ಲಿ ಬೇಕಾದ್ದನ್ನು ಮಾಡಿ ದಕ್ಕಿಸಿಕೊಳ್ಳಬಹುದು ಎಂಬ ಧೈರ್ಯ ಮೂಡಿತು. ಇಮ್ರಾನ್ ಸಹ ಇದನ್ನು ಗ್ರಹಿಸಿ ಮತ್ತೊಂದು 'ಕಾಲಾದಂಧೆ' ಪರಿಚಯ ಮಾಡಿಕೊಟ್ಟ ಅನೂಪನಿಗೆ....

ಒಮ್ಮೆಲೆ ಐದು ಸಾವಿರಕ್ಕೇರಿತು. ಒಬ್ಬಳೇ ಮಗಳು. ಕಾಲೇಜು ಬೇರೆ ಕಲಿಯುತ್ತಿದ್ದಾಳೆಂದು ತಂದೆ ಪ್ರೀತಿಯಿಂದ ಕಳಿಸುತ್ತಿದ್ದರು. ಆರಂಭದಲ್ಲಿ ಅವಳಿಗೆ ಹಣ ಹೇಗೆ ಖರ್ಚು ಮಾಡಬೇಕೆಂದು ತಿಳಿದಿರಲಿಲ್ಲ. ಹೀಗಾಗಿ ಮೂರು ಮೂರೂವರೆ ಸಾವಿರ ಪ್ರತಿ ತಿಂಗಳು ಅವಳ ಹೆಸರಿನಲ್ಲಿದ್ದ ಅಕೌಂಟ್ ನಲ್ಲಿ ಕೊಳೆಯ ತೊಡಗಿತು. ರಜೆ ಬಂದಾಗ ತಾಯಿಯ ಒತ್ತಾಯಕ್ಕೆ ಹಳ್ಳಿಗೆ ಹೋದವಳು ಎರಡೇ ದಿನಕ್ಕೆ ಓಡಿ ಬರುತ್ತಿದ್ದಳು. ಹಾಸ್ಟೆಲಿನಲ್ಲಿಯ ಕೋಣೆ ಖಾಲಿ ಮಾಡಿ ಎಲ್ಲರೂ ತಮ್ಮ ತಮ್ಮ ಊರಿಗೆ ಹೋಗಿದ್ದರೆ ಈಕೆ ಮಾತ್ರ ಒಂಟಿಯಾಗಿ ಕೋಣೆಯಲ್ಲಿ ಕಳೆಯುತ್ತಿದ್ದಳು. ಬೇಸರವಾದರೆ ತನ್ನ ಗೆಳತಿ ಯರ ಮನೆಗೆ ಹೋಗಿ ಅಲ್ಲೇ ಹರಟೆ ಹೊಡೆದು ಒಂದೊಂದು ಬಾರಿ ಒಂದೆರಡು ದಿವಸ ಅಲ್ಲಿಯೇ ಇದ್ದು ರೂಮಿಗೆ ಬರುತ್ತಿದ್ದಳು.

ಇಂಥ ಸಂದರ್ಭದಲ್ಲೇ ಅವಳಿಗೆ ಪಲ್ಲವಿಯ ಪರಿಚಯವಾದದ್ದು. ಪಲ್ಲವಿ ಅವಳ ಜೊತೆಯೇ ಕಲಿಯುತ್ತಿದ್ದ ಸಾಮಾನ್ಯ ವರ್ಗಕ್ಕೆ ಸೇರಿದ ಗೆಳತಿ. ಅವಳ ತಂದೆ ಮಂಡಿಯೊಂದರಲ್ಲಿ ಗುಮಾಸ್ತರು. ಅಲ್ಪ ಸಂಬಳದಲ್ಲಿ ಹೇಗೋ ಜೀವನ ಸಾಗಿಸುತ್ತಿದ್ದರು. ಹಳ್ಳಿಯಿಂದ ಸ್ವಲ್ಪ ಧವಸಧಾನ್ಯ ಅಂತ ಬರುತ್ತಿತ್ತು. ಸ್ವಂತ ಮನೆಯಿದ್ದುದರಿಂದ ಇದ್ದದ್ದರಲ್ಲೇ ಚೆಂದವಾಗಿ ಅವರ ತಾಯಿ ಸಂಸಾರ ಸಾಗಿಸುತ್ತಿದ್ದರು.

ಅನೂಪ, ಪಲ್ಲವಿಯ ಅಣ್ಣ. ಎಸ್.ಎಸ್.ಎಲ್.ಸಿ.ಯಲ್ಲಿ ಮೂರು ಸಾರಿ ಫೇಲಾಗಿ, ತಂಗಿ ಪಾಸಾದದ್ದು ಕಂಡು ವಿದ್ಯೆ ಸಾಕೆಂದು ಶರಣು ಹೊಡೆದಿದ್ದ. ಅಲ್ಲಿಂದ ಅವನ ನಿರುದ್ಯೋಗ ಜೀವನ ಆರಂಭವಾಗಿತ್ತು. ನೌಕರಿಗಾಗಿ ಅತ್ತಿತ್ತ ಅಲೆದಾಡಿದ್ದ. ಪದವೀಧರರಾದವರೇ ಹತ್ತೆಂಟು ವರ್ಷ ಗಳಿಂದ ನೌಕರಿ ಸಿಗದೇ ಗೋಳಾಡುತ್ತಿರುವಾಗ ಎಸ್.ಎಸ್.ಎಲ್.ಸಿ ಫೇಲಾದ ಇವನಿಗೆಲ್ಲಿ ನೌಕರಿ ಸಿಗಬೇಕು. ಇದರಿಂದಾಗಿ ಅನೂಪ ಅಸಮಾಧಾನದಲ್ಲಿ ಬೆಂದು ಹೇಗಾದರೂ ಏನಾದರೂ ಮಾಡಿ ಹಣ ಸಂಪಾದಿಸಬೇಕು ಎಂದು ಮುಂದಾದ. ಅವನ ಸ್ನೇಹಿತ ಇಮ್ರಾನ್ ಅವನ ಸಹಾಯಕ್ಕೆ ಬಂದ. ಇಮ್ರಾನ್ ಖ್ಯಾತ ಉದ್ದಿಮೆದಾರರ ಮಗ. ಅವನ ತಂದೆ ಊದುಬತ್ತಿ ವ್ಯಾಪಾರಿಗಳು. ಮಗನ ಶಿಫಾರಸ್ಸಿನ ಮೇಲೆ ಅನೂಪನಿಗೆ ತಮ್ಮ ಫ್ಯಾಕ್ಟರಿ ಯಲ್ಲಿ ಕೆಲಸ ನೀಡಿದರು. ತಿಂಗಳಿಗೆ ಐದುನೂರು ರೂಪಾಯಿ ಸಂಬಳ. ಅಷ್ಟು

ಸಂಬಳ ಯಾವುದಕ್ಕೂ ಸಾಲದು ಎಂದು ತಿಳಿದಿದ್ದರೂ ಅಷ್ಟಾದರೂ ದೊರೆಯುತ್ತಲ್ಲ ಎಂದು ಅನೂಪ ಒಪ್ಪಿಕೊಂಡ. ತನ್ನ ಕೊರಗನ್ನು ಇಮ್ರಾನನ ಮುಂದೆ ತೋಡಿಕೊಂಡ. ಅದಕ್ಕೂ ಉಪಾಯ ಸೂಚಿಸಿದವ ಇಮ್ರಾನನೇ.

ಫ್ಯಾಕ್ಟರಿಯಿಂದ ಬಂದ ಮೇಲೆ ಸಾಯಂಕಾಲ ಐದು ಗಂಟೆಯಿಂದ ರಾತ್ರಿ ಎರಡು ಗಂಟೆಯವರೆಗೆ ಪೇಟೆಯಲ್ಲಿ ವ್ಯಾಪಾರ ಮಾಡಲು ಸೂಚಿಸಿದ. ತಾನೇ ಮುಂದಾಗಿ ನಿಂತು ಗಾಂಧೀಚೌಕದ ಬಳಿ ಒಂದು ಅಂಗಡಿಯನ್ನು ಹಿಡಿದು ಕೊಟ್ಟ. ಅಂಗಡಿ ತುಂಬಾ ಚಿಕ್ಕದು. ನಾಲ್ಕು ಫೂಟು ಅಗಲ ಆರು ಫೂಟು ಉದ್ದ. ಅಲ್ಲಿ ಆರಂಭವಾಯಿತು ಅನೂಪನ ಪಾನ್ ಬೀಡಾ ಶಾಪ್.... ಅದರೊಂದಿಗೆ ಒಂದಂಕಿ ಲಾಟರಿ ದಿನಕಳೆದಂತೆ ಒಂದಂಕಿ ಲಾಟರಿ ವ್ಯಾಪಾರ ಬೆಳೆಯತೊಡಗಿತು. ತಿಂಗಳಿಗೆ ಸಾವಿರ ಎರಡು ಸಾವಿರ ಲಾಭವಾಗತೊಡಗಿದಂತೆ ಅನೂಪ ಫ್ಯಾಕ್ಟರಿ ಕೆಲಸ ಬಿಟ್ಟು ಪೂರ್ತಿಯಾಗಿ ಇದೇ ಕೆಲಸಕ್ಕೆ ನಿಂತು ಬಿಟ್ಟ....ನೋಡ ನೋಡುತ್ತಿದ್ದಂತೆ ಅವನ ಆಚಾರ ವಿಚಾರ ನಡೆನುಡಿ ಎಲ್ಲಾ ಬದಲಾದವು. ದಿನನಿತ್ಯ ಸಾವಿರಾರು ರೂಪಾಯಿ ಓಡಾಡುತ್ತಿದ್ದರೆ ಕೇಳಬೇಕೇನು ? ಮೈಮೇಲೆ ಉತ್ತಮ ಬಟ್ಟೆ ಕಾಲಲ್ಲಿ ಬೆಲೆಬಾಳುವ ಬೂಟುಗಳು ಅದರ ಮೇಲೆ ಓಡಾಡಲು "ಹೀರೋ ಬೈಕ್"... ಇಮ್ರಾನ್ ಅವನ ಅಚ್ಚುಮೆಚ್ಚಿನ ಮಿತ್ರ. ಅವನ ಉಪಕಾರ ಸದಾ ಸ್ಮರಿಸುತ್ತ ಒಂದು ದೃಷ್ಟಿಯಿಂದ ಅವನ ಚಂಚಾ ಆಗಿ ಬಿಟ್ಟ....ಇಮ್ರಾನ್ ಅವನ ಪಾಲಿಗೆ ಗಾಡ್‌ಫಾದರ್.

ಈ ಮಾತು ಸುಳ್ಳು ಆಗಿರಲಿಲ್ಲ.

ಒಂದಂಕಿ ಲಾಟರಿ ಮಟ್ಕಾ ಮುಂತಾದವುಗಳ ಮೇಲೆ ಆಗೊಮ್ಮೆ ಈಗೊಮ್ಮೆ ಪೊಲೀಸರು ದಾಳಿ ಮಾಡಿದಾಗ ಒಂದೆರಡು ದಿವಸ ಅನೂಪ ಬಂದಿಖಾನೆ ವಾಸ ಅನುಭವಿಸುತ್ತಿದ್ದ. ಆಗ ಅವನನ್ನು ಬಿಡಿಸಿ ಹೊರಗೆ ತರುವವನೇ ಇಮ್ರಾನ್. ಅವನ ಸಹವಾಸದಿಂದಾಗಿ ಸೆರೆಮನೆ ರುಚಿ ಕಂಡರೂ ಒಂದು ದೃಷ್ಟಿಯಿಂದ ಅದು ಲಾಭಕರವೇ ಆಯಿತು. ಈ ಕಾರಣದಿಂದಾಗಿ ಅನೇಕ ಪೊಲೀಸ್ ಅಧಿಕಾರಿಗಳ ಪರಿಚಯವೂ ಅನೂಪನಿಗಾಯಿತು. ಅವರ ಕೃಪಾ ಛತ್ರದಲ್ಲಿ ಬೇಕಾದ್ದನ್ನು ಮಾಡಿ ದಕ್ಕಿಸಿಕೊಳ್ಳಬಹುದು ಎಂಬ ಧೈರ್ಯ ಮೂಡಿತು. ಇಮ್ರಾನ್ ಸಹ ಇದನ್ನು ಗ್ರಹಿಸಿ ಮತ್ತೊಂದು 'ಕಾಲಾವಂಧೆ' ಪರಿಚಯ ಮಾಡಿಕೊಟ್ಟ ಅನೂಪನಿಗೆ....

ಅದೇ....ಸಿಲ್ವರ್ ಬ್ರ್ಯಾಂಡ್ ಪಾನ್....

ಮಾದಕ ಪ್ರಿಯರಿಗಾಗಿ ಮಾದಕ ವಸ್ತುಗಳ ವ್ಯಸನಿಗಳಿಗಾಗಿ ಸಿದ್ಧವಾಗುವ ಬೀಡಾ ಸಿಲ್ವರ್ ಬ್ರ್ಯಾಂಡ್ ಪಾನ್. ಒಂದು ಪಾನಿಗೆ ಇಪ್ಪತ್ತೈದು ರೂಪಾಯಿ, ಅತ್ಯಂತ ಪರಿಚಯವಿದ್ದ ನಂಬಿಕಸ್ತ ಗಿರಾಕಿಗಳಿಗೆ ಮಾತ್ರ ಈ ಸ್ಪೆಶಲ್ ಸೇವೆ ದೊರಕುತ್ತಿತ್ತು....ಒಂದು ಬಾರಿ ಆ ಪಾನಿನ ಸವಿ ಉಂಡವರು ಪದೇ ಪದೇ ಅದನ್ನು ಸವಿಯಲು ಹಾತೊರೆಯುತ್ತಿದ್ದರು. ಅಂಥ ವಿಶೇಷ ಆ ಪಾನಿನಲ್ಲಿ ಏನಿದೆ ಎಂದು ಮೊದಮೊದಲು ಅನೂಪನಿಗೆ ತಿಳಿದಿರಲಿಲ್ಲ. ಮುಂದೆ ಒಂದು ಅನಿವಾರ್ಯ ಪ್ರಸಂಗ ಬಂದಾಗ ಇಮ್ರಾನ್ ಅದರ ರಹಸ್ಯ ತಾನಾಗಿಯೇ ತಿಳಿಸಿದ. ಪ್ರತಿಯೊಂದು ಪಾನಿನಲ್ಲಿಯೂ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಬ್ರೌನ್ ಶುಗರ್ ಬೆರೆಸಲಾಗುತ್ತಿತ್ತು. ಇದರಿಂದಾಗಿ ಅದರ ರುಚಿ ಹುಚ್ಚು ಹಿಡಿಸುತ್ತಿತ್ತು. ವಿಶೇಷವಾಗಿ ಕಾಲೇಜ್ ಹುಡುಗರಂತೂ ಸಿಲ್ವರ್ ಬ್ರ್ಯಾಂಡ್ ಪಾನಿಗಾಗಿ ಹಾತೊರೆಯುತ್ತಿದ್ದರು. ಅದು ಸಿಗದಿದ್ದರೆ ನೀರಿನಿಂದ ತೆಗೆದೊಗೆದ ಮೀನಿನಂತೆ ಚಡಪಡಿಸುತ್ತಿದ್ದರು....

ದಿನನಿತ್ಯ ಐದಾರು ನೂರು ಪಾನಗಳು ಮಾರಾಟವಾಗತೊಡಗಿದವು. ಹಣದ ಮಹಾಪೂರವೇ ಆರಂಭವಾಯಿತು, ಒಂದೊಂದು ಬಾರಿ ಬೇಕೆಂತಲೇ ಅನೂಪ ಸ್ಟಾಕ್ ಇಲ್ಲ ಎಂದು ಹೇಳುತ್ತಿದ್ದ .. ನಾಲ್ಕಾರು ಬಾರಿ ಓಡಾಡಿ ಹುಚ್ಚು ಹಿಡಿದಂತಾದ ಹುಡುಗರು ಐವತ್ತು ಐವತ್ತು....ರೂಪಾಯಿ ಕೊಟ್ಟು ಪಾನ್ ಪಡೆಯುತ್ತಿದ್ದರು. ದಿನ ಕಳೆದಂತೆ ಪಾನಿನ ರುಚಿ ಹುಡುಗಿಯರಿಗೂ ತಗಲಿದ್ದರಿಂದ ಹುಡುಗರ ಜೊತೆ ಬೈಕ್ ಮೇಲೆ ಹುಡುಗಿಯರೂ ಬರಲಾರಂಭಿಸಿದರು. ಅನೂಪನಿಗೆ ಶುಕ್ರದೆಶೆ ಆರಂಭವಾಯಿತು. ಈ ಕಾಲಾದಂಧೆ ನಡೆಸುತ್ತಿದ್ದರೂ ಪೊಲೀಸರ ಭಯವಂತೂ ಅವನಿಗೆ ಇರಲೇ ಇಲ್ಲ. ಪ್ರತಿ ತಿಂಗಳು ನಿರ್ದಿಷ್ಟಪಡಿಸಿದ ಒಂದು ಮೊತ್ತ ಅವರಿಗೆ ಕಳಿಸಿಕೊಡುತ್ತಿದ್ದ. ಆಗೊಮ್ಮೆ ಈಗೊಮ್ಮೆ ಅವರಿಗೆ ಪಾರ್ಟಿ ಕೊಡುತ್ತಿದ್ದ....ಅವನ ಆತಿಥ್ಯ ಸ್ವೀಕರಿಸಿದ ಅವರು ಸದಾ ಕಣ್ಮುಚ್ಚಿಕೊಂಡಿರುತ್ತಿದ್ದರು....ಅವನ ನೆರಳಾಗಿ ಅವನನ್ನು ಕಾಯತೊಡಗಿದರು. ಕಾಯುವವರೇ ಕೊಲ್ಲುವವರನ್ನು ರಕ್ಷಿಸಲಾರಂಭಿಸಿದರೆಂದರೆ ಆಗಬಾರದ್ದೆಲ್ಲ ಆಗತೊಡಗಿದವು. ಇಮ್ರಾನ್ ನೆರವಿನಿಂದ ಅನೂಪ ನಗರದ ಚಿಕ್ಕ ಸ್ಮಗ್ಲರ್, ಗೂಂಡಾ, ಕಾಲಾವ್ಯಾಪಾರಿ ಮುಂತಾದ

ಎಲ್ಲಾ ಬಿರುದು ಬಾವಲಿಗಳನ್ನು ಪಡೆದುಕೊಂಡ. ಮೋಜಿಗೊಮ್ಮೆ ಪೊಲೀಸರು ರೈಡ್ ಮಾಡಿದಾಗ ನಾಲ್ಕಾರು ನೂರು ರೂಪಾಯಿಗಳ ಮಾಲು ದೊರೆಯುತ್ತಿತ್ತು. ಯಾವುದೋ ಒಂದು ಬಕರಾ ಐದಾರು ಸಾವಿರ ರೂಪಾಯಿ ಗಳಿಗೆ ಜೈಲು ಸೇರಲು ಸಿದ್ಧವಾಗುತ್ತಿತ್ತು. ನಾಲ್ಕು ದಿನ ಒಳಗಿದ್ದು ರಾಜಾ ರೋಷವಾಗಿ ಬಂದೀಖಾನೆಯಲ್ಲೇ ಸಕಲ ವೈಭವಗಳ ಆತಿಥ್ಯ ಪಡೆಯುತ್ತಿದ್ದ ಅನೂಪ ನಿರ್ದೋಷಿಯಾಗಿ ಹೊರಗೆ ಬರುತ್ತಿದ್ದ....

ಇದರಿಂದಾಗಿ ಅನೂಪ ಸೊಸೈಟಿಯಲ್ಲಿ 'ಕ್ರಿಮಿನಲ್' ಎಂದು ಹೆಸರು ಪಡೆದರೂ 'ಗಣ್ಯರಲ್ಲಿ' ಒಬ್ಬನಾದ. ಆತ ಮಾಡುತ್ತಿದ್ದ ದಂಧೆ ಕಾಲಾ ಆದರೂ ಅವನ ಬಳಿ ಇರುವ ಹಣ 'ಕಾಲಾ' ಅಲ್ಲವಲ್ಲ. ಮುಕ್ತ ಹಸ್ತದಿಂದ ದಾನ ಧರ್ಮ ಮಾಡತೊಡಗಿದ. ಕಾಣಿಕೆ ನೀಡತೊಡಗಿದ. ಆತ ನೀಡುವ ಉದಾರ ಹಸ್ತದ ದಾನ ಪಡೆಯಲು ಅನೇಕ ಸಂಘ ಸಂಸ್ಥೆಗಳು ಮುಂದಾದವು. ಆತನನ್ನು ಕರೆದು ಹೊಗಳಿ ಸನ್ಮಾನಿಸತೊಡಗಿದವು....ಅಪರಾಧಿಯೆನಿಸಿಕೊಂಡಿದ್ದ ಅನೂಪ ಈ ಹೊಸ ಮುಖವಾಡದೊಂದಿಗೆ ಮೆರೆಯುತೊಡಗಿದ. ರಕ್ಷಕರ ಆಪ್ತ ವರ್ಗಕ್ಕೆ ಆತ ಸೇರಿಕೊಂಡ. ಹೊಸದಾಗಿ ಬಂದ ಪೊಲೀಸ್ ಅಧಿಕಾರಿ ಅನೂಪನ ಭೇಟಿ ಯಾಗಲು ಹಾತೊರೆಯತೊಡಗಿದ....

ಹಣದ ಸಂಗ್ರಹ ಹೆಚ್ಚಾಗುತ್ತಿದ್ದು ಅನೂಪ ತನ್ನ ಕಾರ್ಯಕ್ಷೇತ್ರ ವಿಸ್ತರಿಸುವುದರೊಂದಿಗೆ ಬದಲಾವಣೆಯನ್ನು ಮಾಡಿಕೊಂಡ....ಪೇಪರಿನ ವ್ಯಾಪಾರ ಆರಂಭಿಸಿದ. ಶಾಲಾ ಕಾಲೇಜುಗಳಿಗೆ ಬೇಕಾಗುವ ನೋಟು ಪುಸ್ತಕ ತಯಾರಿಸುವ ಫ್ಯಾಕ್ಟರಿ ಆರಂಭಿಸಿದ. ಕಡಿಮೆ ದರದಲ್ಲಿ ವಿದ್ಯಾರ್ಥಿಗಳಿಗೆ ನೋಟು ಪುಸ್ತಕ ನೀಡಿ ಅವರ ಪ್ರೀತಿಗೆ ಪಾತ್ರನಾದ. ಹೆಚ್ಚಿನ ಮನ್ನಣೆ ಸಮಾಜ ಅವನಿಗೆ ನೀಡತೊಡಗಿತು....ಈ ವಿದ್ಯಾ ಪ್ರಸಾರದ ಯೋಜನೆಯ ಹಿಂದೆ ಚಿನ್ನದ ಕಳ್ಳಸಾಗಾಣಿಕೆ .. ಅಫೀಮು, ಗಾಂಜಾ ಮುಂತಾದವುಗಳ ಸರಬರಾಜು ನಡೆಯುತ್ತಿರುವುದು ಕೆಲ ಜನರಿಗೆ ಮಾತ್ರ ತಿಳಿದಿತ್ತು. ಅನೂಪ ನಿಂದ ಕಾಣಿಕೆ ಪಡೆಯುತ್ತಿದ್ದ ಅವರೆಲ್ಲ ಗಾಂಧೀಜಿಯವರ ತೀನ್ ಬಂದರ್ ಹೇಳುವ ನೀತಿಯಂತೆ ಕಣ್ಣು ಕಿವಿ ಬಾಯಿಗಳನ್ನು ಮುಚ್ಚಿಕೊಂಡು ತಮ್ಮ ಪಾಡಿಗೆ ತಾವು ತೆಪ್ಪಗಿದ್ದರು.

ಅನೂಪನ ಈ ಶರವೇಗದ ಬೆಳವಣಿಗೆ ಇಮ್ರಾನನಿಗೆ ಇರಸು ಮುರಸು ತಂದಿಟ್ಟಿತು. ತನ್ನ 'ಬಚ್ಚಾ' ತನಗೇ 'ಬಾಸ್' ಆಗುತ್ತಿರುವುದು ಕಣ್ಣಿಗೆ ಕೇಸರವೆನಿಸಿದರೂ 'ಕುರಿಕೊಬ್ಬಿದಷ್ಟು ಕಟುಕನಿಗೆ ಲಾಭ' ಎಂಬ ನೀತಿಯಲ್ಲಿ ನಂಬಿಕೆಯಿಟ್ಟ ಆತ ಅನೂಪನನ್ನು ಪ್ರೋತ್ಸಾಹಿಸತೊಡಗಿದ. ಕಾಲೇಜು ಹುಡುಗರ ಜೊತೆ 'ಸ್ಪೆಷಲ್ ಸಿಲ್ವರ್ ಪಾನ್' ತಿನ್ನಲು ಓಡೋಡಿ ಬರುತ್ತಿರುವ ಸುಂದರ ಕನ್ಯೆಯರತ್ತ ಅವನ ದೃಷ್ಟಿ ಹೊರಳಿತು. ಕನ್ಯೆಯರ ತಂದೆ ಬ್ಯಾಂಕಿನಲ್ಲಿಟ್ಟ ಹಣ ಎಷ್ಟು ? ಅವರ ಉದ್ಯೋಗವೇನು ? ಮುಂತಾದವುಗಳನ್ನು ಲೆಕ್ಕ ಹಾಕಿದ ಅವನ ರಾಕ್ಷಸ ಮೆದುಳು ಬ್ಲಾಕ್‌ಮೇಲ್ ತಂತ್ರ ರೂಪಿಸಿತು. ರೂಪಸಿಯರಾದ ಧನಾಢ್ಯ ಶ್ರೀಮಂತರ ಪುತ್ರಿಯರನ್ನು 'ಬ್ರೌನ್ ಶುಗರ್' ರುಚಿಯೊಂದಿಗೆ ತನ್ನ ಬುಟ್ಟಿಗೆ ಹಾಕಿಕೊಂಡ ಇಮ್ರಾನ್ ನಂತರ ತಂದೆ ತಾಯಿಂದಿರನ್ನು ಕರಯಿಸಿ ಅವರ ಮುಂದೆ ಅವರ ಹೆಣ್ಣು ಮಕ್ಕಳ ಕ್ಯಾಸೆಟ್ ಪ್ರದರ್ಶಿಸುತ್ತಿದ್ದ. ಸಮಾಜದಲ್ಲಿದ್ದ ತಮ್ಮ ಘನತೆ ಗೌರವ ಎಲ್ಲಿ ಹಾಳಾಗುತ್ತದೋ ಎಂದು ಹೆದರಿದ ಅವರು ಆತ ಕೇಳಿದಷ್ಟು ಹಣ ಕೊಟ್ಟು ಕ್ಯಾಸೆಟ್ ಪಡೆಯುತ್ತಿದ್ದರು. ಆಮೇಲೆ ಇಮ್ರಾನ್ ಸೂಚಿಸಿದ ಅವನ ಮಿತ್ರ ಹೊಸದಾಗಿ ತೆರೆದಿದ್ದ ನವೀನತೆಯ ಹಾಸ್ಪಿಟಲ್‌ಗೆ ಮಕ್ಕಳನ್ನು ಸೇರಿಸುತ್ತಿದ್ದರು. ಅವನ ಮಿತ್ರ ಡಾಕ್ಟರ್ ಜಗ್ಗೇಶ ಚೆನ್ನಾಗಿ ದುಡ್ಡು ಸುಲಿಯುತ್ತಿದ್ದ. ಈ ಮೂರು ಹಂತ ದಾಟುವುದರಲ್ಲಿ ಶ್ರೀಮಂತರೆನಿಸಿಕೊಂಡು ಮೆರೆಯುತ್ತಿದ್ದ ಸಮಾಜದ ಸಭ್ಯ ಗೃಹಸ್ಥರೆನಿಸಿಕೊಂಡ ಕಪ್ಪುಹಣದ ಬಲದಿಂದ ಮೆರೆಯುತ್ತಿದ್ದ ಅವರು ಅರ್ಧ ಬಡವರಾಗುತ್ತಿದ್ದರು.

ಇದು ಅನೂಪನ ತ್ರಿವಿಧಲಾಭದ ಯೋಜನೆ.

ಒಂದು ಬ್ರೌನ್ ಶುಗರ್ ವ್ಯಾಪಾರ....

ಕನ್ನೆಯರ ತಂದೆ ತಾಯಿಂದಿರಿಂದ ಹಣದ ಲೂಟಿ.... ಬ್ಲಾಕ್ ಮೈಲ್ ಜಗ್ಗೇಶ ಆಸ್ಪತ್ರೆಯಲ್ಲಿ ಪಾಲುದಾರನಾಗಿ ಒಳ್ಳೆ ಕಮೀಶನ್.... ಈ ಭಯಾನಕ ಯೋಜನೆಯಿಂದಾಗಿ ಇಮ್ರಾನ್ ತೆರೆಯ ಹಿಂದೆ ಇದ್ದುಕೊಂಡೇ ಹಣದ ಹೊಳೆಯಲ್ಲಿ ಈಜಲಾರಂಭಿಸಿದ.... ಅವನಿಗಂತೂ ಅಪಾಯವಿರಲಿಲ್ಲ. ಈ ಅಪಾಯಕಾರಿ ಕೆಲಸ ಮಾಡುವ ಜನರೇ ಬೇರೆ. ಅವರ ಹಿಂದೆ ಇದ್ದು ಸೂತ್ರ ಹಿಡಿದವ ಮಾತ್ರ ಇಮ್ರಾನ್,

ಅವನ ಸೂತ್ರದಲ್ಲಿ ಬಂಧಿತರಾದ ಬೊಂಬೆಗಳಲ್ಲಿ ಅನೂಪ್ ಒಬ್ಬ....

ಅನೂಪನ ಬಳಿ ಬರುತ್ತಿದ್ದ ಲಲನಾಮಣಿಗಳಲ್ಲಿ 'ಲಾವಣ್ಯ' ಅನೇಕರ ಆಪ್ತ ಸಂಗಾತಿಯಾಗಿದ್ದಾಳೆ ಎಂಬುದು ಇಮ್ರಾನ್‌ಗೆ ತಿಳಿದು ಬಂದಿತು. ಹತ್ತಾರು ಲಕ್ಷ ರೂಪಾಯಿ ಅವಳ ಹೆಸರಿನಲ್ಲಿ ಹಣ ಕೊಳೆಯುತ್ತಿದೆ. ತಂದೆ ದುಬಾಯಿಯಲ್ಲಿದ್ದು ಬೇಕಾದಷ್ಟು ಗಳಿಸಿದ್ದಾರೆ ಎಂಬುದೂ ತಿಳಿದಾಗ ಅವಳನ್ನು ತನ್ನ ಬಲೆಯಲ್ಲಿ ಹಾಕಿಕೊಳ್ಳಲು ಇಮ್ರಾನ್ ಮುಂದಾದ. ಅವನಿಗೆ ಎದುರಾದ ಮುಖ್ಯ ತೊಡಕೆಂದರೆ ಲಾವಣ್ಯ ಮಾದಕ ಪದಾರ್ಥಗಳತ್ತ ಕಣ್ಣೆತ್ತಿ ಸಹ ನೋಡದಿರುವುದು. ಅದಕ್ಕಾಗಿ ಇಮ್ರಾನ್ ಸಂಚೊಂದನ್ನು ಸಿದ್ಧಪಡಿಸಿದ ಅನೂಪನ ಸಹೋದರಿ ಪಲ್ಲವಿ.... ಪಲ್ಲವಿಯ ಗೆಳತಿ ಲಾವಣ್ಯ. ಪಲ್ಲವಿಯ ಮೂಲಕ ಲಾವಣ್ಯಳ ಮೇಲೆ ಬಲೆ ಬೀಸಲು ಸಿದ್ಧನಾದ.

ಎರಡು ಮೂರು ತಿಂಗಳಲ್ಲಿ ಅವನ ತಂತ್ರ ಫಲಿಸಿತು. ಲಾವಣ್ಯ ಪೂರ್ತಿಯಾಗಿ 'ಬ್ರೌನ್ ಶುಗರ್'ನ ವ್ಯಸನಿಯಾದಳು. ಅವಳ ಜೊತೆ ಪಲ್ಲವಿ ಸಹ. ಇಮ್ರಾನ್ ಎಷ್ಟು ಜಾಗ್ರತೆಯಿಂದ ಈ ಕಾರ್ಯ ಸಾಧಿಸಿದ್ದನೆಂದರೆ ಈ ಸಂಚಿನ ವಾಸನೆ ಲೇಶ ಮಾತ್ರವೂ ಅನೂಪನಿಗೆ ತಗಲಿರಲಿಲ್ಲ. ತನ್ನ ತಂಗಿಯೇ ಈ ವ್ಯಸನಕ್ಕೆ ಬಲಿಯಾಗಿದ್ದಾಳೆ ಎಂದು ತಿಳಿದರೆ ಅನೂಪ ಉಗ್ರರೂಪ ಧಾರಣೆ ಮಾಡುತ್ತಾನೆಂದು ಇಮ್ರಾನನಿಗೆ ತಿಳಿದಿತ್ತು. ಅದೂ ಅಲ್ಲದೆ ಇಂದಿಲ್ಲ ನಾಳೆ ಆತ ತಿರುಗಿ ಬಿದ್ದರೆ ಅವನ ತಂಗಿಯನ್ನು ಗಾಳದಂತೆ ಉಪಯೋಗಿಸಲು ಇಮ್ರಾನ್ ಸಿದ್ಧನಾಗಿದ್ದ....

ಇಮ್ರಾನ್‌ನ ರಾಕ್ಷಸೀ ಯೋಜನೆಯ ಭಯಾನಕ ಸಂಚಿನಿಂದಾಗಿ ಉತ್ತಮ ಕುಲದಲ್ಲಿ ಜನಿಸಿ ಶಿಕ್ಷಣಕ್ಕೆಂದು ಬಂದ ಆದರ್ಶ ಸಂಸ್ಕಾರ ಪಡೆದ ಲಾವಣ್ಯ ವ್ಯಸನಿಯಾಗಿ ಅವನ ಮುಂದೆ ಮೂಗು ತಿಕ್ಕುವ ಗತಿಗೆ ಬಂದು ನಿಂತಳು. ದಿನಕ್ಕೆ ಮೂರು ಬಾರಿ ಅವಳಿಗೆ 'ಸ್ಮಾಕ್' ಅವಶ್ಯಕತೆ ಬೀಳು ತ್ತಿತ್ತು. ಅದು ದೊರೆಯದಿದ್ದರೆ ಆಕೆ ಹುಚ್ಚಿಯಾಗುತ್ತಿದ್ದಳು. ಅದನ್ನು ಪಡೆಯಲು ಎಷ್ಟು ಬೇಕೋ ಅಷ್ಟು ಹಣ ಚೆಲ್ಲಲು ಸಂಗ್ರಹಿತವಾಗಿತ್ತು. ಮೇಲಾಗಿ ತಂದೆಯಂತೂ ಬೇಡಿದಷ್ಟು ಹಣ ಕಳಿಸಲು ತುದಿಗಾಲ ಮೇಲೆ ಸಿದ್ಧರಾಗಿದ್ದರು.

ಇದರ ಲಾಭವಾದದ್ದು ಇಮ್ರಾನ್‌ಗೆ.

ಲಾವಣ್ಯಳಂಥ ಮೂರು ನಾಲ್ಕು ಹುಡುಗಿಯರನ್ನು ಬಲೆಯಲ್ಲಿ ಕೆಡವಿಕೊಂಡ ಆತ ಸಿಟಿಯಿಂದ ತುಸು ದೂರದಲ್ಲಿ ಸ್ವಲ್ಪ ನಿರ್ಜನವೆನಿಸುವ ಪ್ರದೇಶದಲ್ಲೊಂದು ಸುಂದರ ಬಂಗಲೆ ಬಾಡಿಗೆ ಮೇಲೆ ಪಡೆದಿದ್ದ. ಅವರನ್ನು ಆ ಬಂಗಲೆಯಲ್ಲಿ ಕೊಳಿ ಹಾಕುತ್ತಿದ್ದ. ಅವರಿಗೆ 'ಸ್ಮಾಕ್'ದ ಕೊರತೆಯಾಗುತ್ತಲೂ ಆ ಬಂಗಲೆಗೆ ಧಾವಿಸುತ್ತಿದ್ದರು. ಇಮ್ರಾನನ ಬೆರಳಿಗೆ ತಕ್ಕಂತೆ ನರ್ತಿಸುತ್ತಿದ್ದರು. ಅವರನ್ನು ಸಾಕಷ್ಟು ಸತಾಯಿಸಿ, ಕ್ಯಾಸೆಟ್ ಮಾಡಿಕೊಂಡು ಅವರಿಗೆ 'ಡೋಜ್' ಕೊಡುತ್ತಿದ್ದ ಅದು ದೊರೆಯುತ್ತಲೂ ಜೀವ ಬಂದಂತಾಗಿ ಅವರು ಸಮಾಧಾನದ ಉಸಿರು ಬಿಟ್ಟು ಅಲ್ಲೇ ಉರುಳುತ್ತಿದ್ದರು.

ಅವರಿಗೆ ತಂದೆ ತಾಯಿ ಬಂಧು ಬಳಗ, ಯಾರ ನೆನಪೂ ಇರುತ್ತಿರಲಿಲ್ಲ. ತಾವೆಲ್ಲಿದ್ದೇವ ? ಯಾವ ಸ್ಥಿತಿಯಲ್ಲಿದ್ದೇವೆ ಎಂದು ಯೋಚಿಸುವ ಶಕ್ತಿಯು ಇರಲಿಲ್ಲ. ಕೇವಲ ಬೊಂಬೆಗಳು.... ಜೀವಂತ ಬೊಂಬೆಗಳಾಗಿ ಜೀವಿಸುತ್ತಿದ್ದರು ಅಷ್ಟೇ. ಅವರು ಹೇಗೆ ಇರಲಿ.... ಎಂತಹದೇ ಜೀವನ ಜೀವಿಸುತ್ತಿರಲಿ ಅದರ ಗೊಡವೆ ಇಮ್ರಾನ್‌ಗೆ ಇರಲಿಲ್ಲ.

ಅವನಿಗೆ ಬೇಕಾದದ್ದು ಹಣ.... ಅಧಿಕಾರ....

ಅದರೊಂದಿಗೆ....

ಭಾರತದ ನವಜನಾಂಗವನ್ನು.... ಯುವ ಶಕ್ತಿಯನ್ನು ಮಾದಕ ಪದಾರ್ಥಗಳ ವ್ಯಸನಿಯನ್ನಾಗಿಸುವುದು.... ದುರ್ಬಲಗೊಳಿಸುವುದು.... ದೇಶವನ್ನು ಪುನಃ ದಾಸ್ಯತ್ವದತ್ತ ಒಯ್ಯುವುದು. ಈ ಮಹಾಕಾರ್ಯ ಸಾಧಿಸಲು ಅನೇಕ ಶತ್ರು ರಾಷ್ಟ್ರಗಳು ಅವನಿಗೆ ಬೆಂಗಾವಲಾಗಿ ನಿಂತಿದ್ದವು.... ಪ್ರಬಲ ರಾಷ್ಟ್ರವಾಗಿ ರೂಪುಗೊಳ್ಳುತ್ತಿರುವ ಭಾರತ ದೇಶವನ್ನು ನಾಶ ಮಾಡುವುದೇ ಅವರೆಲ್ಲರ ಗುರಿ.

ಇಂಥ ದುಷ್ಟ ಬುದ್ಧಿಯ ಒಡೆಯ ಇಮ್ರಾನ್‌ಗೆ ಇಂದು.... ಹಾಂ.... ಇಂದು ಲಾವಣ್ಯಳ ಅವಶ್ಯಕತೆ ಬಿದ್ದಿತ್ತು....

# 4

ಇಮ್ರಾನ್....

ಇಮ್ರಾನ್ ರಾಕ್ಷಸೀ ಪ್ರವೃತ್ತಿಯವನಾದರೂ, ಅವನ ತಂದೆ ಅಲ್ತಾಫ ಹುಸೇನ ಸಾಹೇಬರು ಸಾಕ್ಷಾತ್ ದೇವತಾ ಸ್ವರೂಪಿಯಾಗಿದ್ದರು. ಸತ್ಯಧರ್ಮ ಕಾಯಕಗಳಲ್ಲಿ ನಿಷ್ಠೆಯಿಟ್ಟು ದುಡಿಯುವ ಓರ್ವ ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಅವರು ಹುಟ್ಟಿದ್ದು ಸದ್ಯ ಪಾಕಿಸ್ತಾನದಲ್ಲಿರುವ ಸಿಂಧ್ ಪ್ರಾಂತ್ಯದಲ್ಲಿ. ಓಡಾಡಿದ್ದು ಪಂಚನದಿಗಳ ಸಂಗಮವಾದ ಪಂಜಾಬಿನಲ್ಲಿ. ಓದಿದ್ದು ಶಿಕ್ಷಣ ಪಡೆದಿದ್ದು ಲಾಹೋರಿನಲ್ಲಿ. ಕಾಯಕ ಹುಡುಕಿಕೊಂಡು ಬಂದಿದ್ದು ದಿಲ್ಲಿಯಲ್ಲಿ. ಇಪ್ಪತ್ತು ಇಪ್ಪತ್ತೊಂದು ವರ್ಷದ ತರುಣ ಅಲ್ತಾಫ ಹುಸೇನನಲ್ಲಿ ದೇಶಭಕ್ತಿ ಜಾಗೃತವಾಗಿತ್ತು. ಬ್ರಿಟೀಷರ ಅತ್ಯಾಚಾರ ಕಣ್ಣಾರೆ ಕಂಡು ಅವರ ರಕ್ತ ಕುದಿಯುತ್ತಿತ್ತು. ಹೈಸ್ಕೂಲ್ ಎರಡನೇ ವರ್ಷ ಪಾಸಾದ ಅವರಿಗೆ ಇಂಗ್ಲೀಷಿನ ಜ್ಞಾನವಿತ್ತು. ಚೆನ್ನಾಗಿ ಓದುತ್ತಿದ್ದರು. ಬರೆಯುತ್ತಿದ್ದರು. ಅಷ್ಟೇ ಅಲ್ಲ ಮಾತು ಕೂಡ ಆಡುತ್ತಿದ್ದರು. ಪಂಜಾಬೀ, ಉರ್ದು, ಹಿಂದೀ ಹಾಗೂ ಇಂಗ್ಲೀಷ್ ನಾಲ್ಕು ಭಾಷೆಗಳು ಚೆನ್ನಾಗಿ ತಿಳಿದಿದ್ದವು. ಅಂದು ಬ್ರಿಟಿಷ್ ಅಧಿಕಾರಿಗಳಿಗೆ ಬೇಕಾದವರೂ ಇಂಥವರೇ....ಹೀಗಾಗಿ ಇವರ ಮೇಲೆ ಸುಲಭವಾಗಿ ಕಣ್ಣುಬಿದ್ದಿತು....

ಮಿಯಾ ಶೇಖಸಾಹೇಬ ದೂರದಿಂದ ಅಲ್ತಾಫ ಹುಸೇನರಿಗೆ ಸಂಬಂಧಿಯಾಗಬೇಕು... ಶೇಖಸಾಹೇಬ ದಿಲ್ಲಿಯಲ್ಲಿದ್ದುಕೊಂಡು ಆಂಗ್ಲೇಜ ಸಾಹೇಬರ "ಖಿದಮತ್"ನಲ್ಲಿದ್ದ....ಚೆನ್ನಾಗಿ ಸಂಪಾದನೆ ಕೂಡ ಅವರಿಗಿತ್ತು... ಅವರ ಕೆಲಸಾನೂ ಸಹ ಅಷ್ಟೇ ಸರಳವಾಗಿತ್ತು. ಅಲ್ಲಿದ್ದ ಬ್ರಿಟಿಷ್ ಬಾಲಕಿಯರ ಶಾಲೆಯ ಉಸ್ತುವಾರಿ .. ಹಾಸ್ಟೆಲ್ ಬಗ್ಗೆ ಮೇಲ್ವಿಚಾರಣೆ. ದುಡ್ಡಿಗೇನೂ ಕಡಿಮೆಯಿರಲಿಲ್ಲ .. ಶೇಖ ಸಾಹೇಬರು ಆದರಲ್ಲಿ ಸಾಕಷ್ಟು ಸಂಪಾದನೆ ಮಾಡಿಕೊಂಡರು. ಅವರಿಗೆ ವಯಸ್ಸಾಗಿದ್ದುದರಿಂದ ಸಹಾಯಕ್ಕೆ ಯಾರಾದರೂ ಬೇಕಾಗಿತ್ತು. ಅದೇ ಸಮಯದಲ್ಲಿ ಅಲ್ತಾಫ್ ಹುಸೇನ ಅವರನ್ನು ಹುಡುಕಿಕೊಂಡು ಬಂದದ್ದು ಹುಡುಕುತ್ತಿದ್ದ ಬಳ್ಳಿ ಕಾಲಿಗೆ ತೊಡಕಿದಂತಾಯಿತು.... ಅಷ್ಟು ಸಹಾಯಕ್ಕೆ ಇಟ್ಟುಕೊಂಡರು. ಮೊದಮೊದಲು ಅಲ್ತಾಫ ಸಂಕೋಚ

ದಿಂದ ಮುದ್ದೆಯಾಗುತ್ತಿದ್ದ. ಆಂಗ್ರೇಜ ಹುಡುಗಿಯರ ಅರ್ಧನಗ್ನಾವಸ್ಥೆಯ ಓಡಾಟ. ಮುಕ್ತವಾಗಿ ಒಬ್ಬರಿಗೊಬ್ಬರು ಅಪ್ಪಿಕೊಂಡು ಮುದ್ದಿಸುವುದು ಮುಂತಾದವು ಅಸಹ್ಯವೆನಿಸುತ್ತಿದ್ದವು. ಒಮ್ಮೊಮ್ಮೆ ಅವಶ್ಯಕತೆಯ ಮೇರೆಗೆ ಹಾಸ್ಟೆಲಿಗೆ ಹೋದಾಗ ನೂರಾರು ಕೆಂಪು ಹುಡುಗಿಯರ ಮಧ್ಯೆ ಸಿಕ್ಕು ಫಜೀತಿಪಡುತ್ತಿದ್ದ.

ಅಲ್ತಾಫ್ ನೋಡಲು ತುಂಬಾ ಸುಂದರ....ಆರೋಗ್ಯವೂ ಚೆನ್ನಾಗಿತ್ತು. ಹೀಗಾಗಿ ಹುಡುಗಿಯರು ಬಹುಬೇಗ ಅವನಲ್ಲಿ ಆಸಕ್ತರಾಗುತ್ತಿದ್ದರು. ಊರಲ್ಲಿದ್ದಾಗಲೂ ಅಷ್ಟೇ....ಹಳ್ಳಿಯಲ್ಲಿಯ ಹುಡುಗಿಯರು ಕದ್ದು ಕದ್ದು ಅವನನ್ನು ನೋಡುತ್ತಿದ್ದರು. ಬೇಕಂತಲೇ ಏನಾದರೂ ನೆವಮಾಡಿಕೊಂಡು ಅವನನ್ನು ಕೆಲಸಕ್ಕೆ ಕರೆಯುತ್ತಿದ್ದರು. ಸುಂದರವಾಗಿ ಅಲಂಕರಿಸಿಕೊಂಡು ಅವನ ಹಿಂದೆ ಮುಂದೆ ಓಡಾಡುತ್ತಿದ್ದರು. ಒಂದೊಂದು ಬಾರಿ ಅವನಿಗಿಂತ ದೊಡ್ಡವರೂ, ತಮ್ಮ ಮನೆಗೆ ಕರೆದು ಅವನಿಗೆ ತಿಂಡಿ ತಿನಿಸು ಕೊಟ್ಟು ಮೈಕೈ ಮುಟ್ಟಿ ಅಪ್ಪಿ ಮುದ್ದಾಡಿ ಸಂತೋಷಿಸುತ್ತಿದ್ದರು. ಅಲ್ತಾಫನಿಗೆ ಮುಜುಗರವಾಗುತ್ತಿತು. ಭಯದಿಂದ ಅವರ ಕಣ್ತಪ್ಪಿಸಿ ಅಲ್ಲಿಂದ ಪಾರಾಗುತ್ತಿದ್ದ.

ಅಲ್ಲಿ ತಪ್ಪಿಸಿಕೊಂಡ ಆತ ಇಲ್ಲಿ ಮತ್ತೆ ಸಿಕ್ಕಿ ಹಾಕಿಕೊಂಡ. ಅಲ್ಲಿ ಹಳ್ಳಿಯಲ್ಲಿದ್ದವರು ಒಂದು ಬಗೆಯಿಂದ ಸಂಸ್ಕಾರವಂತರು. ಅಲ್ತಾಫನ ಜೊತೆ ಏನೇ ಮಾಡಿದರೂ ಅವರಿಗೆ ಕೆಡಕುಂಟಾಗುತ್ತಿತ್ತು. ಹಿರಿಯರಿಗೆ ಸಮಾಜಕ್ಕೆ ಅಂಜುತ್ತಿದ್ದರು....ಆದರೆ ಇಲ್ಲಿ ? ಇಲ್ಲಿ ಹೆದರಿಕೆ ಅಂಜಿಕೆ ಲವಲೇಶವೂ ಇರಲಿಲ್ಲ. ಸಂಸ್ಕಾರವಂತೂ ಇಲ್ಲವೇ ಇಲ್ಲ....ಅಲ್ತಾಫನಂತ ಸುಂದರ ಹುಡುಗ ಅದೂ ಇಂಗ್ಲೀಷ್ ಚೆನ್ನಾಗಿ ಬಲ್ಲವ ತಮ್ಮ ಸೇವೆಗೆ ಸಿದ್ಧನಾದಾಗ ಅವರೆಲ್ಲ ಕಪಿಗಳಂತಾದರು.

ಅಲ್ತಾಫ್‌ಹುಸೇನ ತಮ್ಮ ಚಾಕರಿಗಿದ್ದಾನೆಂಬ ವಿಷಯ ಆಂಗ್ಲೇಜ್ ಹುಡುಗಿಯರಿಗೆ ತಿಳಿದಾಗ ಅವರಿಗಾದ ಖುಷಿ ಅಷ್ಟಿಷ್ಟಲ್ಲ ...ಕಾಶ್ಮೀರೀ ಸೇಬಿನ ಬಣ್ಣದ ಚೆಲುವ ಕಟ್ಟುಮಸ್ತಾದ ಸುಂದರ ತರುಣ....ಎಲ್ಲರ ಕಣ್ಣೂ ಅವನ ಮೇಲೆ, ಅವನನ್ನು ಪಡೆಯಲು ಮುದ್ದಿಸಲು, ಸುಖ ಪಡಲು ನಾಮುಂದು

ತಾಮುಂದು ಎಂದು ಮುಗಿಬಿದ್ದರು. ಪಾಪ! ಅಲ್ತಾಫ್ ? ಇದೆಲ್ಲಾಗೊತ್ತಿರದ ಮುಗ್ಧ ಯುವಕ ಅವರ ಕೈಗೆ ಸಿಕ್ಕು ನುಗ್ಗು ನುಗ್ಗಾದ....ಪಾರಾಗಲು ಯತ್ನಿಸಿ ಸೋತು ಹೋದ. ನಿರಾಶೆಯಲ್ಲಿ ಬೆಂದ ಒಂದಿಬ್ಬರು ಹುಡುಗಿಯರ 'ದೂರು' ಅವನಿಗೆ ಶಾಪವಾಯಿತು. ಹಾಸ್ಟೆಲ್ ಹುಡುಗಿಯರ ಎದುರೇ ಹತ್ತು ಕೊಂಡೆ ಏಟು ತಿಂದು ಹೊರದೂಡಲ್ಪಟ್ಟ. ಅವಮಾನ....ದುಃಖದಿಂದ ಬೆಂದ ಅವನಿಗೆ ಸಹಾಯ ಹಸ್ತ ನೀಡಿದವ ಬೇರೆ ಯಾರೂ ಅಲ್ಲ ದೇಶ ಸೇವಕರು. ಸ್ವಾತಂತ್ರ್ಯ ಯೋಧರು. ಅವರಿಂದ ದೀಕ್ಷೆ ಪಡೆದ ಅಲ್ತಾಫ್ ತನ್ನ ಇಪತ್ತೆರಡರ ಹರಯದಲ್ಲಿಯೇ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದ. ಮಹಾತ್ಮಾ ಗಾಂಧೀಜಿಯವರ ಪ್ರತಿಯೊಂದು ಮಾತು ಅವನಿಗೆ ವೇದವಾಕ್ಯ ವಾದವು. ತಂದೆ ತಾಯಿ ಮನೆ ಮಠ ಎಲ್ಲಾ ಬಿಟ್ಟು ಮರೆತು ಹೊರ ಬಂದ....ಹತ್ತು ಹನ್ನೆರಡು ವರ್ಷಗಳ ಹೋರಾಟದ ಫಲವಾಗಿ ಸ್ವಾತಂತ್ರ್ಯ ದೊರೆತಾಗ ಭಾರತದ ಮಣ್ಣನ್ನು ಹಣೆಗಚ್ಚಿಕೊಂಡು ಕೈಯೊಡ್ಡಿ ದೇವರಲ್ಲಿ ವಂದಿಸಿದ. ಅವನ ಉಪಕಾರಕ್ಕೆ ಕೃತಜ್ಞತೆ ಸಲ್ಲಿಸಿದ. ಅವನ ಕೊರಗು ಒಂದೇ.

ಒಂದೇ ದೇಶವಾಗಿದ್ದ ಭಾರತ ಒಡೆದು ಹೋಳಾಯಿತು.

ಅಣ್ಣ ತಮ್ಮಂದಿರಂತಿದ್ದ ಹಿಂದು-ಮುಸ್ಲಿಮರು ವೈರಿಗಳಾದರು. ಯಾರಿಗೆ ಎಲ್ಲಿ ವಾಸ ಮಾಡಲು ಇಷ್ಟವಿದೆಯೋ ಅಲ್ಲಿಗೆ ಹೊರಟು ಹೋದರು. ಅಲ್ತಾಫನಿಗೆ ಭಾರತ ಬಿಟ್ಟುಹೋಗಲು ಮನಸ್ಸಾಗಲಿಲ್ಲ. ಇಲ್ಲಿಯೇ ನೆಲೆಸಿದ. ಭಾರತ ಸರಕಾರ ಅವನಂತೆ ಭಾರತಕ್ಕೆ ವಲಸೆ ಬಂದ ನಿರಾಶ್ರಿತರಿಗೆ ಆಶ್ರಯ ನೀಡಿತು. ಅವರೆಲ್ಲ ಪವಿತ್ರ ಭಾರತ ದೇಶದ ಅಪ್ಪಟ ಪೌರರಾಗಿ ಇಲ್ಲೇ ವಾಸವಾದರು. ಅಲ್ತಾಫ ತನ್ನ ಸೇವೆಗಾಗಿ ತನ್ನನ್ನು ತನ್ನ ಆತ್ಮವನ್ನು ಮಾರಿಕೊಳ್ಳಲಿಲ್ಲ. ಸರಕಾರದಿಂದ ಏನೂ ಪಡೆಯಲಿಲ್ಲ. ತಾನಾಗಿ ದೊರೆತ ಸ್ವಲ್ಪ ಭೂಮಿಯನ್ನೇ ಕರ್ಮಭೂಮಿಯನ್ನಾಗಿಸಿಕೊಂಡು ರೈತ ಜೀವಿಯಾಗಿ ಜೀವನ ಸಾಗಿಸಿದ. ಮುಂದೆರಡು ವರ್ಷಗಳಲ್ಲಿ ಮದುವೆಯಾಯಿತು. ಮದುವೆಯಾದ ಎರಡೇ ವರ್ಷಕ್ಕೆ ಅವನ ಪತ್ನಿ ಮಮತಾಜಬಾನು ಅವನ ಮಡಿಲಿಗೆ ಸುಂದರ ಗಂಡು ಮಗುವನ್ನು ಹಾಕಿದಳು. ಅವನೇ ಇಮ್ರಾನ್, ಮುಂದೆ ಅವರಿಗೆ ಮಕ್ಕಳಾಗಲಿಲ್ಲ.

ಅಲ್ತಾಫ್ ಮತ್ತು ಮಮ್ತಾಜ ಬೇಗಂ "ಅಲ್ಲಾ"ನ ಕರುಣೆಯಿಂದ ಎಲ್ಲಾ ಸುಖ ಸಂಪತ್ತು ಪಡೆದರು. ಇಂದು ಅಲ್ತಾಫ್ ಹುಸೇನ ಸಾಹೇಬರಿಗೆ ತಮ್ಮ ಎದೆಯುದ್ದ ಬೆಳೆದು ನಿಂತ ಮಗ ಇಮ್ರಾನ್ ಇದ್ದಾನೆ. ಒಂದು ಊದುಬತ್ತಿ ಫ್ಯಾಕ್ಟರಿಯಿದೆ. ಹಳ್ಳಿಯಲ್ಲಿ ಸ್ವಲ್ಪ ಜಮೀನಿದೆ. ಬೇರೆ ಏನು ಬೇಕು ? ತಮ್ಮ ಮಗ ಇಮ್ರಾನ್‌ನ ಸುಖ ಸಂತೋಷಕ್ಕೆ ಅವರು ಜೀವ ಹಿಂಡಿದ್ದಾರೆ.

ಪಾಪ! ಅವರಿಗೆ ಗೊತ್ತಿಲ್ಲ.

ತಮ್ಮ ಮಗ ಇಮ್ರಾನ್‌ನ ಮನದಲ್ಲಿ ಶೈತಾನ ಪ್ರವೇಶಿಸಿದ್ದಾನೆಂದು! ಮೊದಲು ಆತ ಮಾನವ ಶಿಶುವಾಗಿ ಹುಟ್ಟಿದವ. ಬೆಳೆದಂತೆ ಆತ ಮಾನವನಾಗಿ ಬೆಳೆಯಲಿಲ್ಲ. ಅನೇಕ ಸಮಾಜಘಾತುಕ ಶಕ್ತಿಗಳ ಸ್ನೇಹದೊಂದಿಗೆ ಆತ ದಾರಿ ತಪ್ಪಿದ ತರುಣನಾದ. ಪಾಕಿಸ್ತಾನ ಮತ್ತು ಕಾಶ್ಮೀರಗಳಿಂದ ಬಂದ ಕೆಲವೊಂದು ಮುದ್ರಿತ ಸಾಹಿತ್ಯ ಓದಿ ಬುದ್ಧಿ ಕಳೆದುಕೊಂಡ. ಧರ್ಮಾಂಧನಾದ ಎರಡು ಮೂರು ಬಾರಿ ಕಾಶ್ಮೀರಕ್ಕೆ ಹೋಗಿ ಬಂದು ಅಲ್ಲಿಯ ಸಂಘಟನೆಗಳನ್ನು ಮಿತ್ರರನ್ನಾಗಿ ಮಾಡಿಕೊಂಡು ಅವರ ಕೈಗೊಂಬೆಯಾಗಿ ಏಜಂಟನಾದ.

ಅವನ ತಂದೆ ಅಲ್ತಾಫಹುಸೇನ ಕಟ್ಟಾ ದೇಶಭಕ್ತರು.

ಭಾರತವೇ ಅವರ ಉಸಿರು ಜೀವನಾಡಿ....

ಆದರೆ ಅವರ ಮಗ ಇಮ್ರಾನ್.

ಪ್ರಥಮ ದರ್ಜೆಯ ದೇಶದ್ರೋಹಿ....

ಭಾರತದ ನಾಶವೇ ಅವನ ತಾರಕಮಂತ್ರ. ದೇಶದಲ್ಲಿ ಅಶಾಂತಿ ಹರಡುವದು, ಹಿಂಸೆ ಬೆರೆಸುವುದು....ನಾಶ ಮಾಡುವಾಗ ಅವನ ಗುರಿ ಮುಂದೊಂದು ದಿನ ಈ ಸಂಪೂರ್ಣ ಭಾರತವನ್ನು ಪಾಕಿಸ್ತಾನವನ್ನಾಗಿಸುವ ಮಹಾನ್ ಗುರಿ.

ಪಂಜಾಬ್ ಮತ್ತು ಕಾಶ್ಮೀರಗಳಲ್ಲಿರುವ ಇಂಥ ಗುರಿ ಸಾಧಿಸುವುದಕ್ಕೆ ಹುಟ್ಟಿಕೊಂಡಿರುವ ಸಂಸ್ಥೆಯ ಒಬ್ಬ ಅಧಿಕಾರಿಯಾಗಿ ಆತ ಕೆಲಸ ಆರಂಭಿಸಿದ್ದ. ತಮ್ಮ ಮಗನ ಈ ಮಹಾನ್ ಕೆಲಸದ ಸುಳಿವು ಅವನ ತಂದೆ ತಾಯಿಗಳಿಗೆ ಎಳ್ಳಷ್ಟು ಇರಲಿಲ್ಲ....ಆತನೂ ಅಷ್ಟೇ....ಅವರೆದುರು ಅತ್ಯಂತ ವಿನಮ್ರ ಪ್ರೀತಿಯ ಮಗನಾಗಿರುತ್ತಿದ್ದ....ಅವರ ಕಣ್ಮರೆಯಲ್ಲಿ ತನ್ನ ಸಮಾಜಬಾಹಿರ ದೇಶದ್ರೋಹಿ ಚಟುವಟಿಕೆಗಳನ್ನು ಮುಂದುವರೆಸುತ್ತಿದ್ದ. ಅವನ ಬಳಿ ಹಣದ

ರಾಶಿಯೇ ಇತ್ತು....ಅವನ ಸಂಘಟನೆ ಅವನ ಒಂದು ಸೂಚನೆ ಬಂದರೆ ಸಾಕು ಹಣದ ಹೊಳೆ ಹರಿಸುತ್ತಿತ್ತು. ಅದರ ಬಲದಿಂದ ಇಮ್ರಾನ್ ಚಿಕ್ಕವಯಸ್ಸಿನಲ್ಲಿಯೇ ಮಹಾವಿದ್ರೋಹಿಯಾಗಿ ಬೆಳೆದ. ತನ್ನ ಸಹಾಯಕ್ಕೆ ಸರಕಾರದ ಅನೇಕ ಅಧಿಕಾರಿಗಳನ್ನು ಕೊಂಡುಕೊಂಡ. ಅವರ ನೆರವಿನಿಂದ ಕಾರ್ಯ ಪ್ರವೃತ್ತನಾಗಿದ್ದ.

ಮೊದಮೊದಲು ಕೋಮು ಘರ್ಷಣೆ, ಜಗಳ....ಮುಂತಾದವುಗಳನ್ನು ಹುಟ್ಟುಹಾಕಿ "ಬಾಂಬೆ ಬ್ಲಾಸ್ಟ್" ಪ್ರಕರಣದವರೆಗೂ ಮುಂದುವರೆದ. ಚಿನ್ನ ಬೆಳ್ಳಿಗಳ ಕಳ್ಳಸಾಗಾಣಿಕೆ ಬ್ಲೂಫಿಲ್ಮ್ ತಯಾರಿಕೆ ಜೊತೆ ಮಾದಕವಸ್ತುಗಳ ವ್ಯಾಪಾರ ಆರಂಭಿಸಿ ಸಿಕ್ಕಾಪಟ್ಟೆ ಸಂಪತ್ತು ವೃದ್ಧಿಸಿದ.

ಅದರ ನಂತರ ಅವನ ದೃಷ್ಟಿ ಹೊರಳಿದ್ದು ಭಾರತ ದೇಶದ ಯುವ ಜನಾಂಗದತ್ತ.... ಭಾರತದ ಭಾವಿ ಪ್ರಜೆಗಳತ್ತ.... ಅವರನ್ನು ಸದೃಢರನ್ನಾಗಿ ಮಾಡಲು ದೇಶಭಕ್ತಿಯನ್ನಾಗಿಸಲು ಅಪ್ಪಟ ಪ್ರಾಮಾಣಿಕ ಸ್ವಾಭಿಮಾನಿಗಳನ್ನಾಗಿ ರೂಪಿಸಲು ಭಾರತ ಸರ್ಕಾರದ ಸತತ ಪ್ರಯತ್ನಗಳನ್ನು ಇವನ ಸಂಘಟನೆ ಹುಸಿ ಮಾಡತೊಡಗಿತು. ಯುವಕ ಯುವತಿಯರಿಗೆ ಅನೇಕ ಅರೆ ಆಮಿಷ ತೋರಿಸಿ, ವ್ಯಸನಿಯನ್ನಾಗಿಸಿದ. ಸಣ್ಣ ಸಣ್ಣ ಅಪರಾಧಗಳಲ್ಲಿ ತೊಡಗಿಸಿ ಅಪರಾಧದ ಮನೆಯಲ್ಲಿ ಸಿಲುಕಿಸಿ ಪೊಲೀಸರ ಭಯದಿಂದ ಕೈಗೊಂಬೆಯಾಗಿಸಿಕೊಂಡು ಅವನ ಮೋಸದ ಈ ಷಡ್ ತಂತ್ರದಲ್ಲಿ ಸಾವಿರಾರು ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಿಕ್ಕು ನರಳತೊಡಗಿದರು. ಅವರ ಸುತ್ತಲೂ ಜೇಡದಂತೆ ಬಲೆಹೆಣೆದ ಇಮ್ರಾನ್ ಅವರನ್ನೆಲ್ಲ ಆಳತೊಡಗಿದ. ಅವನ ಒಂದು ಮಾತಿಗೆ ಅವರು ತಮ್ಮ ಪ್ರಾಣ ಕೊಡಲೂ ಮುಂದಾದರು....ಲಾವಣ್ಯಳ ಪರಿಸ್ಥಿತಿಯೂ ಹಾಗೇ ಆಯಿತು.

ಮೊದಮೊದಲು ಆಕೆ ಕೊಕೋಕೋಲಾದೊಂದಿಗೆ ಆರಂಭಿಸಿದಳು. ಇಮ್ರಾನ್ ತನ್ನ ಜೊತೆ ಅನೂಪನ ತಂಗಿ ಪಲ್ಲವಿಯನ್ನು ಕರೆತಂದ. ಚಹಾಪಾನ, ಪಿಕ್ಚರ್ ಕೊನೆಗೆ ರಾತ್ರಿ ಡಿನ್ನರವರೆಗೆ ಗೆಳೆತನ ಮುಂದುವರೆಯಿತು. ಪ್ರತಿ ಸಾರಿಯೂ ಆತ ಅವರಿಬ್ಬರಿಗೂ ಆಯಿಸ್ಕ್ರೀಮ್ ತಿನ್ನಿಸುತ್ತಿದ್ದ. ಕೊನೆಗೆ ಕಾಫಿ ಕುಡಿದ ಮೇಲೆ ಸ್ಪೇಷಲ್ ಪಾನ್ ಜಗಿಯಲು ನೀಡುತ್ತಿದ್ದ ಆಯಿಸ್ಕ್ರೀಮ್ ಹಾಗೂ ಪಾನಿನ ಸವಿಗೆ ಇಬ್ಬರೂ ಮಾರು ಹೋದರು.

ಅದರ ಹಿಂದೆ ಬಿದ್ದರು. ಇಮ್ರಾನ್ ಅವರಿಬ್ಬರ ಹಿಂದೆ ಅಲೆಯುತ್ತಿದ್ದ. ಈಗ ಅವರಿಬ್ಬರೂ ಇಮ್ರಾನನ ಹಿಂದೆ ಸುತ್ತತೊಡಗಿದರು. ಆತ ಒಂದು ದಿನ ಭೇಟಿಯಾಗದಿದ್ದರೆ ನೀರಿನಿಂದ ತೆಗೆದೊಗೆದ ಮೀನಿನಂತೆ ಚಡಪಡಿಸುತ್ತಿದ್ದರು. ತನ್ನ ಆಳತೆಗೆ ಇಬ್ಬರೂ ಬಂದಿದ್ದಾರೆ ಎಂದು ಅರಿವಾದಾಗ ಇಮ್ರಾನ್ ತನ್ನ ಗುಪ್ತ ಮನೆಯ ವಿಳಾಸ ನೀಡಿದ. ಪಲ್ಲವಿಗೆ ಅಂದಿನಿಂದ ಕಷ್ಟಕ್ಕಿಟ್ಟು ಕೊಂಡಿತು. ಮನೆಯಲ್ಲಿ ತಂದೆ ತಾಯಿ ಅಣ್ಣ ಅವರ ಕಣ್ಣು ತಪ್ಪಿಸುವುದ ರೊಂದಿಗೆ ಸುತ್ತಲಿನ ಜನರನ್ನು ವಂಚಿಸಿ ಇಮ್ರಾನ್ ತರಿಸಿದ ವಿಳಾಸಕ್ಕೆ ಹೋಗುವುದು. ಅವಶ್ಯಕವಾಗಿತ್ತು. ಲಾವಣ್ಯ ಅಂಥ ಪರಿಸ್ಥಿತಿಯಲ್ಲಿರಲಿಲ್ಲ. ಆಕೆ ಸ್ವಚ್ಛಂದಹಕ್ಕಿ ಹೇಳುವವರು ಕೇಳುವವರು, ಪ್ರಶ್ನಿಸುವವರು ಇರಲಿಲ್ಲ. ಹೀಗಾಗಿ ಆಕೆ ತನಗಾಗಿ ತೋಡಿದ ಕುಣಿಯಲ್ಲಿ ತಾನಾಗಿ ಬಿದ್ದಳು. ಇಮ್ರಾನ್ ಬಯಸಿದ್ದು ಅದೇ ಆಗಿತ್ತು.

ಕೇವಲ ಆರು ತಿಂಗಳುಗಳಲ್ಲಿ ಲಾವಣ್ಯ ಅವನ ಕೈಬೊಂಬೆಯಾದಳು. ಆತ ಕುಣಿಸಿದಂತೆ ಕುಣಿಯಲಾರಂಭಿಸಿದಳು. ತಿಂಗಳಿಗೆ ಅರವತ್ತು ಸಾವಿರ ರೂಪಾಯಿ ಬ್ಯಾಂಕಿನಿಂದ ತೆಗೆದರೂ ಅವಳಿಗೆ ಸಾಕಾಗುತ್ತಿರಲಿಲ್ಲ. ಅದು ಮುಂದುವರೆದು ಲಕ್ಷಕ್ಕೆ ಬಂದು ಮುಟ್ಟಿತು. ಅದರೊಂದಿಗೆ ಅವಳ ಎಲ್ಲಾ ಚಟುವಟಿಕೆಗಳು, ಗತಿವಿಧಿಗಳು ವಿಡಿಯೋ ಕ್ಯಾಸೆಟ್‌ನಲ್ಲಿ ಚಿತ್ರೀಕರಿಸಲ್ಪಟ್ಟಿತು. ಇದಾವುದರ ಕಡೆ ಆಕೆಗೆ ಗಮನವಿರಲಿಲ್ಲ. ಅವರಿಗೆ ಬೇಕಾದದ್ದು "ಸ್ಮಾಕ್" ಸ್ಪೇಷಲ್ ಪಾಸ್ ಅದಕ್ಕಾಗಿ ಇಮ್ರಾನ್‌ನ ಆರಾಧಕಳಾದಳು.

ಬರುಬರುತ್ತಾ ಬ್ಯಾಂಕಿನ ಹಣ ಖಾಲಿಯಾಯಿತು.

ತಂದೆಯಿಂದ ತರಿಸಿಕೊಂಡದ್ದು ಸಾಲದಂತಾಯಿತು.

ಅಲ್ಲಿ....ಇಲ್ಲಿ ಎಲ್ಲಿ ಬೇಕಾದಲ್ಲಿ ಸಾಲ ಆರಂಭವಾಯಿತು. ಇಮ್ರಾನ್ ತಾನಾಗಿಯೇ ಹಲವಾರು ಕಡೆ ಸಾಲಕೊಡಿಸಿ ಅವಳಿಂದ ಬಾಂಡ್ ಮೇಲೆ ಸಹಿ ಪಡೆದ. ಹತ್ತು ಸಾವಿರ ಕೊಟ್ಟು ಅದರ ಮುಂದೆ ಒಂದು ಸೊನ್ನೆ ಇರಿಸಿ ಒಂದು ಲಕ್ಷ ಎಂದು ನಮೂದಿಸಿದ ...ಸಾಲದ ಹೊರೆ ಇಮ್ರಾನ್ ಹಿಂಸೆ ಅದರ ಜೊತೆಗೆ ಮಾದಕ ಪದಾರ್ಥದ ದುಷ್ಪರಿಣಾಮ ಮೂರು ಸೇರಿ ಆಕೆ ಕ್ಷಯೆ ಯಂತಾದಳು.

ಖೆಡ್ಡಾ ಸಿದ್ಧವಾಗಿತ್ತು.

ಬೇಟೆಯ ನಿರೀಕ್ಷೆಯಲ್ಲಿದ್ದ.

ಅದೂ ಸಹ ದೊರೆಯಿತು. ಪಾಂಡುರಂಗನಿಂದ ಅವನಿಗೆ ಕಾಮ್ಸಿಂಗನ ಪರಿಚಯವಾಯಿತು. ಪಾಂಡುರಂಗ ಅವನ ಹಸ್ತಕ ಪೊಲೀಸ್ ಇಲಾಖೆಯ ರಹಸ್ಯಗಳ ಪರಿಚಯ ಮಾಡಿಕೊಡ್ತಿದ್ದಾತ. ಅವನಿಂದ ಮತ್ತೆ ಹಲವಾರು ಜನ ಅವನಿಗಾಗಿ ಕೆಲಸ ಮಾಡಲಾರಂಭಿಸಿದ್ದರು.

ಕಾಮ್ಸಿಂಗ ಐದುಕೋಟಿ ರೂಪಾಯಿಯ ಬ್ರೌನ್‌ಶುಗರ್ ತರುವ ಕಂಟ್ರಾಕ್ಟ್ ಹೊತ್ತುಕೊಂಡ. ಅಷ್ಟು ಮಾಲು ಒಂದೇ ಬಾರಿ ಬಂದರೆ ಅದರಿಂದ ಇಮ್ರಾನ್ ಹತ್ತು ಕೋಟಿ ಗಳಿಸುವ ಯೋಜನೆ ಹಾಕಿಕೊಂಡ.... ಅದು ಹೇಗೋ ಪೊಲೀಸ್ ಕಿವಿಗೆ ಬಿದ್ದಿತು. ಕಾಮ್ಸಿಂಗ ಮಾಲಿನೊಂದಿಗೆ ಪರಾರಿಯಾದ....ಎಸ್. ಪಿ. ಸಾಹೇಬರು ಈ ಕೇಸಿಗಾಗಿಯೇ ಇನ್‌ಸ್ಪೆಕ್ಟರ್ ಅವಿನಾಶನನ್ನು ಕರೆಸಿಕೊಂಡರು. ಈ ಸುದ್ದಿ ಸಹ ಪಾಂಡುರಂಗನ ಮೂಲಕ ಅವನಿಗೆ ತಲುಪಿತು. ಅವರ ಮಾತು ಕೇಳಲು ಕಾಮ್ಸಿಂಗನಿಂದ ದೊರೆತಿದ್ದ 'ಸ್ಪೇಷಲ್ ಮೈಕ್ ಮಾತ್ರೆ' ಪಾಂಡುರಂಗನಿಗೆ ಕೊಟ್ಟಿದ್ದ ಅವರ ಪ್ಲಾನ್ ಫುಲ್ ಪ್ರೂಫ್ ಆಗಿದ್ದರೂ ಅವಿನಾಶನ ಚಾಣಾಕ್ಷತನದಿಂದಾಗಿ ಎಲ್ಲಾ ಹಾಳಾಗಿತ್ತು. ಈಗ ಅವಿನಾಶ ಕಾಮ್ಸಿಂಗ ಮತ್ತು ಪಾಂಡುರಂಗನ ಹಿಂದೆ ಬಿದ್ದ....

ಮೊದಲ ಬಾರಿ ಇಮ್ರಾನ್ ಭಯದ ನೆರಳು ಕಂಡು ಭೀತನಾದ.

ಎಸ್. ಪಿ. ಆಫೀಸಿನ ಸೆಂಟ್ರಿ ರಜಾಕ್‌ನಿಂದ ಇದೀಗ ಬಂದ ಸುದ್ದಿಯಂತೆ ಇನ್‌ಸ್ಪೆಕ್ಟರ್ ಅವಿನಾಶ ಹೊರಬಿದ್ದಿದ್ದ....ಅವನ ಹಿಂದೆ ಯಾರನ್ನಾದರೂ ಬಿಟ್ಟು ನೋಡಬೇಕಾಗಿತ್ತು. ಅದರೊಂದಿಗೆ ಪಾಂಡುರಂಗ ಮತ್ತು ಕಾಮ್ಸಿಂಗನ ಬಗ್ಗೆ ಚಿಂತೆ ಬೇರೆ ಆರಂಭವಾಗಿತ್ತು.

ಸದ್ಯದ ಪರಿಸ್ಥಿತಿಯಲ್ಲಿ ಈ ಎಲ್ಲಾ ಕೆಲಸ ಸಾಧಿಸಲು ಪೊಲೀಸ್ ರಿಕಾರ್ಡ್‌ನಲ್ಲಿರದ ಅಚ್ಚ ಹೊಸದಾದ ಮುಖ ಬೇಕಾಗಿತ್ತು....ಅದರಲ್ಲೂ ಸುಂದರ ಹುಡುಗಿಯಾಗಿದ್ದರೆ ಇನ್ನೂ ಅನುಕೂಲ....

ತಕ್ಷಣ ನೆನಪಾದದ್ದು ಲಾವಣ್ಯ.

ರಜಾಕ್ ಅವಳೆಲ್ಲಿದ್ದಾಳೆ ಎಂದು ಕಂಡು ಹಿಡಿದ.

ಒಂದು ದಿನ ಪೂರ್ತಿಯಾಗಿ ಅವರಿಗೆ "ಸ್ಟಾಕ್" ಸಿಗದಂತೆ ವ್ಯವಸ್ಥೆ ಮಾಡಿದ ಇಮ್ರಾನ್, ಲಾವಣ್ಯ ಭೂಮಿಗಿಳಿದು ಹೋದಳು, ಹುಚ್ಚಿಯಂತೆ

ಎಲ್ಲೆಡೆ ಅಲೆದಳು. ಎಷ್ಟು ಹಣ ನೀಡಿದರೂ ಅವಳಿಗೆ ಎಲ್ಲೂ "ಡೋಜ್" ದೊರೆಯಿಲ್ಲ. ಸ್ಪೇಷಲ್ ಪಾನಾಗಲಿ....ಆಯಿಸ್ಕ್ರೀಮ್ ಆಗಲಿ ಸಿಗಲಿಲ್ಲ. ಹತಾಶಳಾಗಿ ಇಮ್ರಾನನ ಗುಪ್ತ ಕೊಠಡಿಗೆ ಬಂದಳು.

ಅವಳ ಕಣ್ಣುಗಳು ಕೆಂಪಗಾಗಿದ್ದವು.

ಮೂಗಿನ ಹೊರಳೆಗಳು ಉಬ್ಬುತ್ತಿದ್ದವು. ಆಕೆ ಜೋರಾಗಿ ಉಸಿರು ಎಳೆದುಕೊಳ್ಳುತ್ತಿದ್ದಳು. ಎಷ್ಟಾದರೂ ಉಸಿರು ಸಾಲುತ್ತಿರಲಿಲ್ಲ. ಮೈಕೈ ನರಗಳೆಲ್ಲ ಬಿಗಿಯ ತೊಡಗಿದ್ದವು. ಅವಳು ಭೂಮಿಗಿಳಿದು ಹೋಗಿದ್ದಳು. ಬಿರುಗಾಳಿಯಂತೆ ಬಾಗಿಲು ತೆಗೆದು ಒಳಗೆ ನುಗ್ಗಿದ ಆಕೆ ದೊಪ್ಪನೆ ಇಮ್ರಾನ್‌ನ ಕಾಲಮೇಲೆ ಬಿದ್ದು ಬೇಡಿಕೊಂಡರು.

"ಪ್ಲೀಸ್... ನನಗೆ ಸ್ಟಾಕ್ಸ್ ಕೊಡು ನಾನು ಸಾಯುತ್ತಿದ್ದೇನೆ."

"ಹೌದು ಲಾವಣ್ಯ ನೀನೀಗ ಶೀತಲ ಕೋಳಿಯಾಗುತ್ತಿರುವೆ....ಅಂದರೆ ನೀನು ಕೋಲ್ಡ್ ಟರ್ಕಿಯಾಗುತ್ತಿರುವೆ'.

"ನೋ....ನೋ....ನಾನು ಕೋಲ್ಡ್ ಟರ್ಕಿಯಾಗಲಾರೆ. ಶೀತಲಕೋಳಿ ಆಗಲಾರೆ ನಿನಗೆ ಕೈ ಮುಗಿಯುತ್ತೇನೆ. ನನಗೆ ಡೋಜ್ ಕೊಡು ಸ್ಟಾಕ್ಸ್ ನೀಡು ಇಮ್ರಾನ್....ಪ್ಲೀಜ್....ನೀನು ಹೇಳಿದಂತೆ ಕೇಳಲು ನಾನು ಸಿದ್ಧ ಪ್ಲೀಜ್'.

ಲಾವಣ್ಯ ತನ್ನ ಕಣ್ಣೀರಿನಿಂದ ಅವರ ಬೂಟುಗಳನ್ನು ತೊರೆಯುತ್ತ ಬೇಡಿಕೊಂಡಳು.

# 5

ಸರಿಯಾಗಿ ಅರ್ಧಗಂಟೆ ನಂತರ ಒಂದು ಸೂಟ್‌ಕೇಸು, ಒಂದು ಹೋಲ್ಡಾಲಿನೊಂದಿಗೆ, ಡ್ರೈವಿಂಗ್ ಸೀಟಿನಲ್ಲಿ ಅವಿನಾಶನನ್ನು ಕೂಡಿಸಿಕೊಂಡ ಫಿಯೆಟ್ ಕಾರು ಕಾಮ್ಸ್ಟಿಂಗ ಇರಬಹುದೆಂದು ಶಂಕಿಸಲ್ಪಟ್ಟ "ಕೊಹಿಮಾ" ದತ್ತ ಓಡತೊಡಗಿತು. ಅವಿನಾಶ ಸಮಯ ನೋಡಿಕೊಂಡ. ಒಂದು ಹೊಡೆದು ಹದಿನೈದು ನಿಮಿಷಗಳಾಗಿದ್ದವು. ರಾತ್ರಿ ಎಂಟು ಗಂಟೆಯೊಳಗೆ ಆತ ಕೊಹಿಮಾ

ತಲುಪುವ ನಿರ್ಧಾರ ಕೈಕೊಂಡಿದ್ದ. ತನ್ನ ಕೆಲಸಕ್ಕೆ ರಾತ್ರಿ ಸಮಯ ಸೂಕ್ತ ಎಂದಾತ ಭಾವಿಸಿದ್ದ. ಕಾಮ್ತಿಂಗ ವಾಸವಾಗಿರುವ ಹೊಟೇಲ್ ಒಂದು ಬಗೆಯಿಂದ ರಾತ್ರಿ ಕ್ಲಬ್ಬಾಗಿ ಪರಿವರ್ತನೆ ಹೊಂದಿದೇತ್ತಿತ್ತು. ಆಸಕ್ತಿ ಇದ್ದ ಪ್ರವಾಸಿಗರು ಹೊಟೇಲ್ ಮಧ್ಯದ ಹಾಲಿನಲ್ಲಿ ಸೇರುತ್ತಿದ್ದರು. ಅವರಿಗಾಗಿ ಎಂದೇ ಕ್ಯಾಬರೆ ನೃತ್ಯ ನಡೆಯುತ್ತಿತ್ತು. ಯಾರಾದರೂ ಬಯಸಿದರೆ ನರ್ತಕಿಯರು ರಾತ್ರಿ ಸೇವೆಗೂ ಸಿದ್ಧರಾಗುತ್ತಿದ್ದರು. ಕಾಮ್ತಿಂಗಗೆ ಕ್ಯಾಬರೆ ಹುಡುಗಿಯರೆಂದರೆ ತುಂಬಾ ಇಷ್ಟ. ಅದನ್ನು ಅರಿತಿದ್ದ ಅವಿನಾಶ ರಾತ್ರಿ ಸಮಯದಲ್ಲೇ ಅವನ ಮೇಲೆ ಎರಗಲು ಸಿದ್ಧತೆ ಮಾಡಿಕೊಂಡಿದ್ದ. ಕಾಮ್ತಿಂಗನ ನಿರ್ಬಲತೆ ಅವನ ಅಸ್ತ್ರವಾಗಿತ್ತು.

ಈ ಯೋಜನೆಯಲ್ಲಿರುವ ಸಂಶಯ ಒಂದೇ ಒಂದು.

ಅದೇ ಪಾಂಡುರಂಗ.

ಕೈ ತಪ್ಪಿಸಿಕೊಂಡು ಪರಾರಿಯಾಗಿರುವ ಆತ ಕಾಮ್ತಿಂಗಗೆ ಸೂಚನೆ ನೀಡಿದರೆ ಹಕ್ಕಿ ಹಾರಿಹೋಗಬಹುದಿತ್ತು. ಅಷ್ಟೇ ಅಲ್ಲ ಅವಿನಾಶನನ್ನು ಎದುರಿಸಲು ಬಲವಾದ ವ್ಯವಸ್ಥೆ ಮಾಡುವ ಭಯವೂ ಇತ್ತು.

ಅಂಥ ಸಂದರ್ಭದಲ್ಲೇನು ಮಾಡುವುದು ?

ಪ್ರಶ್ನೆಗೆ ಸರಿಯಾದ ಉತ್ತರ ಹೊಳೆಯದಾಗಲು "ಸರಿ, ಸರಿ....ಮುಂದೆ ಯೋಚಿಸಿದರಾಯಿತು" ಎಂದು ತಲೆಕೊಡವಿ ಕಾರಿನ ವೇಗ ಹೆಚ್ಚಿಸಿದ. ಎಂಬತ್ತರಿಂದ ನೂರಾಮೂವತ್ತು ಕಿಲೋಮೀಟರಿಗೆ ವೇಗ ಏರಿತು ಕಿಟಕಿಯಿಂದ ಸುಂಯ್ ಎಂದು ಗಾಳಿ ಬೀಸಿ ಬಂದರೆ ಎಡಬಲಕ್ಕಿದ್ದ ಮರಗಳು ಎವೆಯಿಕ್ಕುವುದರೊಳಗೆ ಹಾಯ್ದು ಹೋಗುತ್ತಿದ್ದವು. ತುಟಿಗಳನ್ನು ಸೀಳಿಕೊಂಡು ಸಿಳ್ಳು ಹೊರಬರುತ್ತಿತ್ತು.

ಸತತವಾಗಿ ಎಲ್ಲೂ ನಿಲ್ಲದೇ ನಾಲ್ಕುಗಂಟೆ ಓಡಿದ ಕಾರು ಹೆದ್ದಾರಿ ಪಕ್ಕದಲ್ಲಿರುವ "ಸ್ಕಾಯ್‌ಲಾರ್ಕ್" ಹೊಟೇಲ್ ಮುಂದೆ ಬಂದು ನಿಂತಿತು. ಕಾರಿನಿಂದ ಕೆಳಗಿಳಿದ ಆತ ಒಂದು ಬಾರಿ ಬಲವಾಗಿ ಮೈಮುರಿದು ಕೈ ಕಾಲು ಜಾಡಿಸಿದ. ಮೈಕೈಯೆಲ್ಲಾ ನೋಯುತ್ತಿದ್ದವು. ಒಂದೆರಡು ಆಕಳಿಕೆಗಳೂ ಬಂದವು. ಕಾರು ಲಾಕ್ ಮಾಡಿ ಹೊಟೇಲತ್ತ ನಡೆದ. ಅವಿನಾಶ ಇನ್ನು

ಹೊಟೇಲ್ ಮೆಟ್ಟಲು ತುಳಿದಿರಲಿಲ್ಲ. ಹಿಂದಿನಿಂದ ಬಂದ ಬಿಳಿ ಕಾರು ಮಾರುತಿ ಅವನ ಫಿಯಟ್ ಹಿಂದೆ ನಿಂತುಕೊಂಡಿತು. ಕಡು ನೀಲಿ ಬಣ್ಣದ ಸೂಟು ಧರಿಸಿದ ವ್ಯಕ್ತಿ ಕೆಳಗಿಳಿದ. ಅವನಂತೆಯೇ ಹೊಟೇಲ್ ಪ್ರವೇಶಿಸಿದ ಮೈ ಮುರಿಯುತ್ತ.

ಅವಿನಾಶ ಖಾಲಿ ಮೇಜಿನ ಬಳಿಯಿರುವ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾ ಆ ವ್ಯಕ್ತಿಯನ್ನು ಗಮನಿಸಿದ. ನಂತರ ಕಿಟಕಿಯಿಂದ ಆಚೆ ತನ್ನ ಕಾರಿನ ಹಿಂದೆಯೇ ನಿಂತಿದ್ದ ಆ ವ್ಯಕ್ತಿಯ ಕಾರನ್ನು ಗಮನವಿಟ್ಟು ವೀಕ್ಷಿಸಿದ. ಮನದ ಮೂಲೆಯಲ್ಲಿ ಎಲ್ಲೊ ಒಂದೆಡೆ ಸಂಶಯ ಸುಳಿದಾಡಿತು....ಸಂಶಯ ಸರ್ಪ ಹೆಡೆ ಯಾಡಿಸಿತು. ಆ ಕಡು ನೀಲಿ ಬಣ್ಣದ ಸೂಟುಧಾರಿ ತನ್ನನ್ನು ಹಿಂಬಾಲಿಸುತ್ತಿದ್ದಾನೆಯೇ ?

ವೇಟರ್ ಬರುತ್ತಲೂ ತಿಂಡಿ ಕಾಫಿಗೆ ಆರ್ಡರ್ ನೀಡಿ ಮೇಲೆದ್ದ. ಬಾತ್‌ರೂಮಿಗೆ ಹೋಗಿ ಫ್ರೆಶ್ ಆಗಿ ಬಂದು ಕುಳಿತುಕೊಳ್ಳುತ್ತಾ ಮತ್ತೆ ಕಿಟಕಿಯಿಂದಾಚೆ ದೃಷ್ಟಿ ತೂರಿದ. ಕೈಯಲ್ಲಿ ನೀರಿನ ಜಗ್ ಹಿಡಿದುಕೊಂಡ ನೀಲಿ ಸೂಟ್‌ಧಾರಿ ತನ್ನ ಮಾರುತಿ ಕಾರಿನತ್ತ ನಡೆದಿತ್ತು. ಅವಿನಾಶ ಅವನನ್ನು ಹಿಂಬಾಲಿಸಲಿಲ್ಲ. ಕುಳಿತಲ್ಲಿಂದಲೇ ಅವನ ಮೇಲೆ ಕಣ್ಣಿಟ್ಟ, ಆ ವ್ಯಕ್ತಿ ಮತ್ತೆ ಎರಡೂ ಕಾರುಗಳೂ ಚೆನ್ನಾಗಿ ಕಾಣುತ್ತಿದ್ದವು. ತಿಂಡಿ ತಿನ್ನುತ್ತ ಅತ್ತಲೇ ನೋಡುತ್ತಿದ್ದ. ಎರಡು ಮೂರು ನಿಮಿಷಗಳು ಕಳೆದವು. ಬಾನೆಟ್ ಎತ್ತಿದ ಆತ ತನ್ನ ಕಾರಿನ ಟ್ಯಾಂಕಿಗೆ ನೀರು ಸುರಿಯುತ್ತ ಸುತ್ತಲು ದಿಟ್ಟಿಸಿದ. ಒಂದು ಬಾರಿ ಹೊಟೇಲಿನತ್ತ ತನ್ನನ್ನು ಯಾರೂ ಗಮನಿಸುತ್ತಿಲ್ಲ ಎಂದು ಖಾತ್ರಿಯಾದಾಗ ಆ ವ್ಯಕ್ತಿ ನೀರಿನ ಜಗ್ ಕೆಳಗಿಟ್ಟು ಸರಕ್‌ನೆ ಫಿಯಟ್ ಕಾರಿನತ್ತ ಸರಿದ.

ಅವಿನಾಶ ಜಾಗೃತನಾದ.

ಅವನ ಸಂಶಯ ದೃಢಪಟ್ಟಿತ್ತು....ಕಾರು ಲಾಕು ಮಾಡಿಕೊಂಡೇ ಬಂದಿದ್ದ. ಹೀಗಾಗಿ ಭಯಪಡುವ ಕಾರಣವಿರಲಿಲ್ಲ....ಮುಗುಳುನಗೆ ನಗುತ್ತ ಕಾಫಿ ಕುಡಿದು ಟ್ರೇನಲ್ಲಿ ಬಿಲ್ಲಿನ ಹಣದೊಂದಿಗೆ ಟಿಪ್ ಸೇರಿಸಿ ಇಟ್ಟು ಮೇಲೆದ್ದ....ಸುಪಾರಿ ಜಗಿಯುತ್ತ ಅದರೊಂದಿಗೆ ಮೆಲ್ಲನೆ ಸಿಳ್ಳು ಹಾಕುತ್ತ ಆತ ಹೊರಬಂದಾಗ ಅದೇ ವ್ಯಕ್ತಿ ನೀರಿನ ಜಗ್ ಹಿಡಿದುಕೊಂಡು ಎದುರಾಯಿತು. ದೃಷ್ಟಿ ದೃಷ್ಟಿ ಬೆರೆತವು. ಆ ವ್ಯಕ್ತಿ ವಿಚಲಿತವಾದಂತೆನಿಸಿತು, ಅದರೊಂದಿಗೆ

ಅವಿನಾಶನ ಮೈ ಜುಂ ಎಂದಿತು. ಅರೆ ಈ ವ್ಯಕ್ತಿ ಪರಿಚಿತ ಎಲ್ಲೋ ನೋಡಿದ್ದೆನಲ್ಲ ಎಂದುಕೊಂಡ ಮನದಲ್ಲಿ. ಕಾರಿನ ಬಳಿ ಬಂದು ನಿಂತ ಅವಿನಾಶ ಸಿಗರೇಟ್ ಪ್ಯಾಕಿನಿಂದ ಸಿಗರೇಟೊಂದನ್ನು ಎಳೆದು ಬಾಯಿಗಿರಿಸಿ ಕೊಂಡ. ಲೈಟರ್‌ನಿಂದ ಅದಕ್ಕೆ ಅಗ್ನಿ ಸ್ಪರ್ಶ ಮಾಡಿದ. ಅವನ ಬೆರಳು ಲೈಟರ್ ಅಡಿಯಲ್ಲಿದ್ದ ಚಿಕ್ಕ ಬಿರಡೆ ಅದುಮಿತು... ಸಿಗರೇಟ್ ಹೊಗೆ ಉಗುಳುತ್ತ, ಅವಿನಾಶ ಕಾರಿನ ಒಂದು ಸುತ್ತು ಹಾಕಿದ ಸಮಾಧಾನ ವಾಯಿತು. ಅಪಾಯದ ಸೂಚನೆ ಕಂಡುಬರಲಿಲ್ಲ.

ಅವನ ಕೈಯಲ್ಲಿಯ ಲೈಟರ್... ಒಂದು ವಿಶೇಷ ಉದ್ದೇಶಕ್ಕಾಗಿ ತಯಾರಿ ಸಲ್ಪಟ್ಟಿದ್ದು ಸಾಮಾನ್ಯವಾದ ಎಲ್ಲಾ ಲೈಟರಿನಂತೆ ಸಿಗರೇಟ್ ಉರಿಸಿ. ಅದರ ಕೆಳಗಿರುವ ಚಿಕ್ಕ ಗಾತ್ರದ ಬಿರುಡೆ ಅದುಮಿದರೆ ಲೈಟರ್ ಜಾಗೃತವಾಗುತ್ತಿತ್ತು. ಲೈಟರ್‌ನಿಂದ ಹತ್ತು ಅಡಿ ಅಂತರದಲ್ಲಿ ಅಡಗಿಸಿಟ್ಟಿದ್ದ ಅಪಾಯಕಾರಿ ವಸ್ತು ವನ್ನು ಅದು ಗುರುತಿಸುತ್ತಿತ್ತು. ಟೈಂ ಬಾಂಬ್ ಆಗಲಿ, ಬೇರೆ ವಿಸ್ಫೋಟಕ ಗಳಾಗಲಿ ಇದ್ದರೆ ಲೈಟರ್ ಮಧ್ಯದಲ್ಲಿರುವ ಕೆಂಪು ದೀಪ ಕಣ್ಣು ಮಿಟುಕಿಸುತ್ತಿತ್ತು.

ಆತ ಒಂದು ಬಾರಿ ಕಾರಿನ ಸುತ್ತು ಹಾಕಿದಾಗ ಲೈಟರಿನಲ್ಲಿ ಕೆಂಪು ದೀಪ ಮಿನುಗಲಿಲ್ಲ ಅಂದರೆ ಕಾರಿನಲ್ಲಿ ಆ ವ್ಯಕ್ತಿ ಬಾಂಬ್ ಫಿಕ್ಸ್ ಮಾಡಿಲ್ಲ ಎಂದಾ ಯಿತು. ಹಾಗಾದರೆ, ಹಾಗಾದರೆ ಆ ವ್ಯಕ್ತಿ ತನ್ನ ಕಾರಿನ ಬಳಿ ಬಂದದ್ದೇಕೆ ? ಲೈಟರ್ ಉರಿಸಿ ಮತ್ತೊಮ್ಮೆ ಪರೀಕ್ಷಿಸಿದ. ಲೈಟರ್ ಶಾಂತವಾಗಿತ್ತು.

ನೀಲಿ ಸೂಟು ಧರಿಸಿದಾತನಿಗೆ ಏನು ಮಾಡಬೇಕೆಂಬುದು ತೋಚಲೇ ಇಲ್ಲ. ಒಂದು ಬಗೆಯಿಂದ ಆತ ಶಿಲೆಯಂತಾಗಿದ್ದ ಅವನನ್ನೇ ದಿಟ್ಟಿಸುತ್ತಿ ದ್ದಂತೆ ಅವಿನಾಶನಿಗೆ ಒಮ್ಮಿಂದೊಮ್ಮೆಲೆ ನೆನಪಾಯಿತು. ಆತ ಯಾರೆಂದು ...

"ಅಂದ ಹಾಗೆ ಮಿಸ್ಟರ್ ಬ್ಲೂ ನಿನ್ನನ್ನೆಲ್ಲೋ ನೋಡಿದಂತಿದೆಯಲ್ಲ"

"ಮೂರ್ಖ....ನಾನು ನೀನು ಎಲ್ಲೂ ಭೇಟಿಯಾಗಿಲ್ಲ...."

"ಅದು ನಿನ್ನ ಅಭಿಮತ, ಆದರೂ ನನ್ನ ಮನಸ್ಸು ಹೇಳುತ್ತಿದೆ. ನಿನ್ನನ್ನು ನಾನೆಲ್ಲೋ ನೋಡಿದ್ದೇನೆ ಎಲ್ಲಿ " ಯೋಚಿಸುವವನಂತೆ ನಟಿಸುತ್ತಾ ರಿವಾಲ್ವರ್ ಅಡಿಸಿದ,...ಸೂಟುಧಾರಿ ತತ್ತರಿಸಿದ,

"ಏಯ್, ಇದು ಆಟಿಕೆಯಲ್ಲ. ದೂರ ಸರಿಸು ಅದನ್ನು.... ನಾನು ನಿನ್ನ ಶತೃವಲ್ಲ ..."

"ಹೌದಾ ? ಹಾಗಾದರೆ ನೀನಾರು ?"

"ನಾನು ನಿನ್ನ ಮಿತ್ರ"

'ಓಹ್ ಹೀಗೋ.... ನನಗೆ ಗೊತ್ತಿರಲಿಲ್ಲ. ಮಿತ್ರರಾದವರು ಕೈಯಲ್ಲಿ 32 ಪಾಯಿಂಟ್ ರಿವಾಲ್ವರ ಹಿಡಿದು ನನ್ನ ಕಾರನ್ನು ಶೋಧಿಸುತ್ತಾರೆಂದು' ಅವಿನಾಶ ಅಪಹಾಸ್ಯ ಮಾಡಿದ.

"ನಿನಗೆಲ್ಲೋ ಭ್ರಮೆಯಾಗಿದೆ. ನಾನು ರಿವಾಲ್ವರ್ ಹಿಡಿದಿದ್ದರೂ ನಿನಗಾಗಿ ಅಲ್ಲ. ಕಾರು ನಿಲ್ಲಿಸಿ ಮಧ್ಯದಾರಿಯಲ್ಲಿ ಕೊಳ್ಳೆ ಹಿಡಿಯುವ ದರೋಡೆಖೋರರಿಗಾಗಿ"

"ಅಂದ ಮೇಲೆ ನೀನು ಕಷ್ಟದಲ್ಲಿದ್ದವರನ್ನು ರಕ್ಷಿಸುವ ಶ್ರೀಕೃಷ್ಣಪರ ಮಾತ್ಮನ ಹನ್ನೊಂದನೆ ಅವತಾರವಾದಂತಾಯಿತು ದಯವಿಟ್ಟು ನಿನ್ನ ಕಾಲುಗ ಳನ್ನು ತೋರಿಸು"

"ಏಕೆ ? ನನ್ನ ಕಾಲಗಳೇಕೆ ?"

"ನಿನ್ನ ಕಾಲಿಗೆ ನಾನು ಸಾಷ್ಟಾಂಗ ನಮಸ್ಕಾರ ಹಾಕಬೇಕಾಗಿದೆ. ದಯವಿಟ್ಟು ನಿನ್ನ ಪೂಜ್ಯ ಪಾದಗಳೆಲ್ಲಿವೆ ಎಂಬುದನ್ನು ತೋರಿಸುವೆಯಾ ಪಾಂಡುರಂಗಾ....?"

ಆಕಸ್ಮಾತ್ತಾಗಿ ನುಡಿದ ಶಬ್ದ ಗುರಿ ಮುಟ್ಟಿತು.

ನೀಲಿ ಸೂಟುಧಾರಿ ಬೆಚ್ಚಿಬಿದ್ದು ಅವನತ್ತ ಪಿಳಿ ಪಿಳಿ ನೋಡತೊಡ ಗಿದ.... ಇಷ್ಟೆ ಸಾಕಾಯಿತು ಅವಿನಾಶನಿಗೆ ಆತ ಯಾರೆಂದು ತಿಳಿದು ಹೋಗಿತ್ತು.

"ಮಿಸ್ಟರ್ ಪಾಂಡುರಂಗ.... ನನ್ನ ಕಣ್ಣುಗಳೇ ಹಾಗೆ. ಎಕ್ಸ್‌ರೇಯಂತೆ. ಒಮ್ಮೆ ನೋಡಿದರೆ ಸಾಕು ಫೋಟೋ ಹಿಡಿದು ಬಿಡುತ್ತವೆ. ನಿನ್ನದೂ ಅಷ್ಟೇ ಎಸ್. ಪಿ. ಆಫೀಸಿನಲ್ಲಿ ನೀನು ನನಗೆ ಮೊದಲ ಬಾರಿ ಸೆಲ್ಯೂಟ್ ಹೊಡೆ ದಾಗ.... ನಂತರ ನಾನು ಆಫೀಸಿನೊಳಗೆ ಹೋಗುವಾಗ ನೀನು ಎದುರಿಗೆ ಬಂದೆಯಲ್ಲ ಆವಾಗ.... ಎರಡು ಬಾರಿ ನೋಡಿದಾಗಲೇ ನಿನ್ನನ್ನು ದಿಟ್ಟಿಸಿದ್ದೆ. ವೇಷ ಮಾಡಿದ್ದೆಂದರೆ ನಿನ್ನ ಈ ಬೆಲೆಬಾಳುವ ನೀಲಿ ಸೂಟು ಢೀಗಾಗಿ

ಮೋಸ ಹೋದೆ ಅಷ್ಟೇ"

"ಮಿಸ್ಟರ್.... ನೀನಾರೋ ನನಗೆ ಗೊತ್ತಿಲ್ಲ. ನನ್ನ ಹೆಸರು ಪಾಂಡು ರಂಗನೂ ಅಲ್ಲ. ದಾರಿ ಬಿಡು ಸಾಕು"

"ನಿನ್ನ ಹೆಸರು ಪಾಂಡುರಂಗ ಎಂದು ನನಗೆ ತಿಳಿದಿದೆ. ಅದರಂತೆ ನಾನಾರು ಎಂದು ನಿನಗೆ ತಿಳಿದಿದೆ.... ನನ್ನ ಮುಂದೆ ಆಟವಾಡಬೇಡ.... ತಪ್ಪಿಸಿಕೊಳ್ಳಲು ಪ್ರಯತ್ನಿಸಬೇಡ ನೀನು ಪಾತಾಳದಲ್ಲಿ ಅಡಗಿದ್ದರೂ ಹುಡುಕುವ ಶಕ್ತಿ ನನಗಿದೆ.... ಹೇಳು ನೀನು ನನ್ನನ್ನೇಕೆ ಹಿಂಬಾಲಿಸುತ್ತಿರುವೆ?"

"ಇಲ್ಲ.... ಇಲ್ಲ ಹಿಂಬಾಲಿಸುತ್ತಿಲ್ಲ ನಿನಗೆಲ್ಲೋ...."

"ಪಾಂಡುರಂಗ.... ನಾನು ಒಂದೇ ಒಂದು ಬಾರಿ ಕೇಳುವದು, ಮೂರ ಬಾರಿ ಅಲ್ಲ ಹೇಳು.... ಕಾಮ್ಲಿಂಗ ಎಲ್ಲಿ?"

"ಆಂ"

ಪಾಂಡುರಂಗನ ಬಾಯಿಯಿಂದ ಮಾತೇ ಹೊರಡಲಿಲ್ಲ.

ಅವಾಕ್ಕನೆ ಹಾಗೇ ನಿಂತಿದ್ದ.... ಅವಿನಾಶನೇ ಎಚ್ಚರಿಸಿದ

"ಮಿಸ್ಟರ್ ಪಾಂಡುರಂಗ ಕಾಮ್ಲಿಂಗ ಎಲ್ಲಿ?"

ಅವನ ಬೆರಳುಗಳು ರಿವಾಲ್ವನ ಕುದುರೆ ಮೇಲೆ ಬಿಗಿಯಾದವು.

ಪಾಂಡುರಂಗ ಭೀತಿಯಿಂದ ತತ್ತರಿಸಿ ಕಿರುಚಿಕೊಂಡ.

"ನೋ.... ನೋ"

"ಹಾಗಾದರೆ ಹೇಳು ಕಾಮ್ಲಿಂಗ ಎಲ್ಲಿ?"

"ಹೇಳುತ್ತೇನೆ....ಹೇಳುತ್ತೇನೆ"

ಅವಿನಾಶ ವಿಜಯದ ನಗೆ ನಗುತ್ತ ರಿವಾಲ್ವರ್ ಕೆಳಗಿಳಿಸುತ್ತಿದ್ದಂತೆ ಅವನ ಹಿಂದೆ ಬಂದು ನಿಂತ ಮೋಟಾರ್ ಬೈಕ್‌ನತ್ತ ಪಾಂಡುರಂಗ ಒಡೆದ ಕಣ್ಣುಗಳಿಂದ ನೋಡಿದ....ಬೈಕ್ ನಿಂತಿದ್ದರೂ ಇಂಜಿನ್ ಬಂದಾಗಿರಲಿಲ್ಲ ಹಿಂದೆ ಕುಳಿತವನಕೈಯಲ್ಲಿ ಸೈಲನ್ಸರ್ ತಗಲಿಸಿದ ರಿವಾಲ್ವರ್ ಪಾಂಡುರಂಗ ಮೃತ್ಯುವನ್ನು ಸಮ್ಮುಖದಲ್ಲಿ ಕಂಡು ಭೀತಿಯಿಂದ ಬೆವರೊಡೆಯುತ್ತಿದ್ದಂತೆ ಸಿಡಿದ ಎರಡು ಗುಂಡುಗಳು ಪಾಂಡುರಂಗನ ದೇಹ ಪ್ರವೇಶಿಸಿದವು. ಪಾಂಡುರಂಗನ ಕಣ್ಣು ಗಳಲ್ಲಿ ಸಾವಿನ ಕರಿನೆರಳು ಕಂಡಿದ್ದ ಅವಿನಾಶ ನಿಂತಲ್ಲಿಂದ ಕಾರಿನ ಹಿಂಭಾಗಕ್ಕೆ ನೆಗೆದಿದ್ದ.... ಎರಡು ಗುಂಡು ಪಾಂಡುರಂಗನಿಗೆ ತಾಗಿದ್ದರೆ ಉಳಿದ ನಾಲ್ಕು ಗುಂಡುಗಳು ಅವಿನಾಶನಿಗೆ ತಾಗದೇ ಕಾರಿಗೆ ತಾಗಿದವು.

ಮುಂದಿನ ಕ್ಷಣ ಬೈಕ್ ತಾನು ಬಂದ ದಾರಿಯಲ್ಲೇ ಮರಳಿ ಓಡಿತ್ತು. ಆದರ ಒಪ್ಪಳ ಸಂಪೂರ್ಣ ಕಡಿಮೆಯಾಗುವವರೆಗೂ ಅವಿತಿಟ್ಟುಕೊಂಡಿದ್ದ ಅವಿನಾಶ ಹೊರಬಂದ ನೆಲಕ್ಕೆ ಬಿದ್ದಿದ್ದ ಪಾಂಡುರಂಗನತ್ತ ಧಾವಿಸಿದ. ಜೀವವಿನ್ನು ಆಡುತ್ತಿತ್ತು. ಎತ್ತಿ ಹಿಂದಿನ ಸೀಟಿಗೆ ಮಲಗಿಸಿದ. ತನ್ನ ಕಾರಿನಲ್ಲಿಯ ತನ್ನೆರಡೂ ಸೂಟ್‌ಕೇಸು ಮತ್ತು ಹೋಲ್ಡಾರ್ ಅನ್ನು ಮಾರುತಿ ಕಾರಿಗೆ ಸಾಗಿಸಿ ತಾನು ಚಾಲಕ ಸ್ಥಾನದಲ್ಲಿ ಕುಳಿತುಕೊಂಡ... ಮಾರುತಿ ಓಡ ತೊಡಗಿತು ಕೊಹಿಮಾದತ್ತ.

ಕೊಹಿಮಾ ಸರಕಾರಿ ಆಸ್ಪತ್ರೆಯಲ್ಲಿ ಅವಿನಾಶನ ಬಾಯಿಯಿಂದ ಬಂದ ಎರಡೇ ಮಾತುಗಳು ಸಾಕಾದವು. "ಇನ್ಸ್‌ಪೆಕ್ಟರ್ ಅವಿನಾಶ್" ಪಾಂಡು ರಂಗನನ್ನು ಕೂಡಲೇ ಆಪರೇಶನ್ ಥಿಯೇಟರ್‌ಗೆ ಸಾಗಿಸಲಾಯಿತು. ಅವಿನಾಶ ಅಲ್ಲಿಯ ಪೊಲೀಸ್ ಅಧಿಕಾರಿಗಳಿಗೆ ತನ್ನ ಪರಿಚಯ ತಿಳಿಸಿ ನಡೆದ ದುರ್ಘಟನೆಯ ವರದಿ ಒಪ್ಪಿಸಿದ ಅರ್ಧಗಂಟೆಯಲ್ಲಿ ಸ್ಥಳೀಯ ಪೊಲೀಸ್ ಅಧಿಕಾರಿ ಮನೋಹರ ಡಲ್ಲಾ ಬಂದು ಕೇಸನ್ನು ತನ್ನ ಕೈಗೆ ತೆಗೆದುಕೊಂಡ.

ಎರಡು ಗಂಟೆಗಳ ಶಸ್ತ್ರಚಿಕಿತ್ಸೆನಂತರ ಪಾಂಡುರಂಗನನ್ನು ಹೊರಗೆ ತಂದರು. ಆತ ಪ್ರಾಣಾಪಾಯದಿಂದ ಪಾರಾಗಿದ್ದ. ಮೊದಲು ಅವನನ್ನು ಹದಿಮೂರನೇ ನಂಬರ್ ರೂಮಿಗೆ. ಅಲ್ಲಿಂದ ಇಪ್ಪತ್ತೇಳಕ್ಕೆ ಇಪ್ಪತ್ತೇಳ ರಿಂದ ಹದಿನೆಂಟಕ್ಕೆ ಹೀಗೇ ಹತ್ತಾರು ರೂಮಿಗೆ ಬದಲಿಸಿ ಕೊನೆಗೆ ಮತ್ತೆ ಹದಿಮೂರನೇ ರೂಮಿಗೆ ತಂದು ಮಲಗಿಸಿದರು. ಆಸ್ಪತ್ರೆಯಲ್ಲಿಯ ಯಾರಿಗೂ ಪಾಂಡುರಂಗ ಎಲ್ಲಿದ್ದಾನೆಂದು ತಿಳಿದಿರಲಿಲ್ಲ ತಿಳಿದದ್ದು ಕೇವಲ ಇಬ್ಬರಿಗೆ.... ಒಂದು ಅವಿನಾಶ್ ಎರಡನೆ ವ್ಯಕ್ತಿ ಮನೋಹರ ಡಲ್ಲಾ.

ರಾತ್ರಿ ಒಂದು ಗಂಟೆಯಾಗಿತ್ತು.

ಎಲ್ಲೆಡೆ ಶಾಂತಿ.... ನಿಶ್ಯಬ್ದತೆ.

ಹೊರಗಡೆ ಆಸ್ಪತ್ರೆಯಿಂದ ತುಸುದೂರದಲ್ಲಿ ಮೆಟಾಡೋರೊಂದು ಬಂದು ನಿಂತಿತು. ಅದರಿಂದ ನರ್ಸ್ ಉಡುಗೆಯಲ್ಲಿದ್ದ ತರುಣಿ ಕೆಳಗಿಳಿದಳು. ಅವಳ ಕಣ್ಣುಗಳು ಕೆಂಪಗಾಗಿದ್ದವು. ಮೂಗಿನ ಹೊಳೆಗಳು ಉಬ್ಬಿದ್ದವು. ಕಣ್ಣು ಮೂಗಿನಿಂದ ನೀರು ಸೋರುತ್ತಿತ್ತು. ಮೆಟಡೋರದಿಂದ ಧ್ವನಿ ಬಂದಿತು,

"ಲಾವಣ್ಯ.... ನಾನು ಹೇಳಿದ್ದು ನೆನಪಿದೆಯಲ್ಲವೆ ?"

ಆಕೆ ತಲೆಯಾಡಿಸಿದಳು.

"ನೆನಪಿರಲಿ.... ನಿನಗೆ ಎರಡು ಗಂಟೆ ಹಿಂದೆ ಸ್ನಾಕ್ ನೀಡಿದ್ದೇನೆ. ಇನ್ನು ಎರಡು ಗಂಟೆ ನಂತರ ಮತ್ತೊಂದು.... ಈ ಎರಡು ಗಂಟೆ ಅವಧಿಯಲ್ಲಿ ನೀನು ಪಾಂಡುರಂಗನನ್ನು ಹುಡುಕಿ ಖಲಾಸ್ ಮಾಡಬೇಕು. ಇಲ್ಲದಿದ್ರೆ ನಿನ್ನನ್ನು ನಾನು ಖಂಡಿತವಾಗಿ ಶೀತಲಕೋಳಿ ಮಾಡುತ್ತೇನೆ. ಎಚ್ಚರ....

ಲಾವಣ್ಯ ... ಶಿಲಾಪ್ರತಿಮೆಯಂತಾಗಿ ಅಲ್ಲೇ ನಿಂತಿರುವಂತೆಯೇ ಮೆಟಡೋರ್ ಕತ್ತಲೆಯಲ್ಲಿ ಮರೆಯಾಯಿತು.

ಭಯವಿಲ್ಲ.... ಅಪಾಯದ ಸಂಕೇತ ನೀಡಲಿಲ್ಲ.

ಕಾರು ಸ್ಟಾರ್ಟ್ ಮಾಡಿದ.... ಗಹನವಾದ ಯೋಚನೆಯಲ್ಲೇ ಆತ ಕಾರು ನಡೆಸತೊಡಗಿದ. ಆಗಾಗ್ಗೆ ಸೈಡ್ ಮೀರ್‌ನತ್ತ ನೋಡುತ್ತಿದ್ದ. ಯಾವುದೇ ವಾಹನ ಹಿಂಬಾಲಿಸಿಕೊಂಡು ಬರುತ್ತಿರುವ ಅನುಮಾನ ಬರಲಿಲ್ಲ ವಾದರೂ ನೆಮ್ಮದಿ ಮೂಡಲಿಲ್ಲ. ಬೇಡ ಬೇಡವೆಂದರೂ ಕಣ್ಣೆದುರು ಕಡುನೀಲಿಬಣ್ಣದ ಸೂಟು ಧರಿಸಿದ ವ್ಯಕ್ತಿ ಬಂದು ನಿಲ್ಲುತ್ತಿದ್ದ.... ಅವನನ್ನು ಗುರುತಿಸಲು ಅವಿನಾಶ ಯತ್ನಿಸುತ್ತಿದ್ದ.

ಅರ್ಧಗಂಟೆ ಕಳೆಯುವಷ್ಟರಲ್ಲಿ ಮೆಲ್ಲನೆ ಕತ್ತಲೆ ಆವರಿಸಲಾರಂಭಿಸಿತು. ಎಡಬಲಕ್ಕೆ ಉತ್ತರವಾದ ಗುಡ್ಡ-ಪರ್ವತ, ಶಿಖರಗಳಲ್ಲದೆ ಬಂಡೆಗಲ್ಲುಗಳು ಗೋಚರಿಸತೊಡಗಿದವು. ಕಾಡಿನದಟ್ಟಣೆ ಹೆಚ್ಚಲಾರಂಭಿಸಿತು.... ಅವಿನಾಶ ಮತ್ತಷ್ಟು ಜಾಗೃತನಾದ. ಯಾವುದೇ ಅಪಾಯ ಬಂದರೂ ಇಲ್ಲೇ ಇದೇ ಸಮಯದಲ್ಲಿ ಅದು ಎದುರಾಗಬಹುದೆಂದು ಆತ ಊಹಿಸಿದ. ಆತ ಎಚ್ಚರಿಕೆ ಯಿಂದ ಅತ್ತಿತ್ತ ನಿರೀಕ್ಷಿಸುತ್ತ ಕಾರು ನಡೆಸತೊಡಗಿದ.

ಬಹಳವೆಂದರೆ ಕಾರು ಐದಾರು ಕಿಲೋಮೀಟರ್ ದೂರ ಬಂದಿರಬೇಕು. ಅಕಸ್ಮಾತ್ ಆಗಿ ಅವನ ದೃಷ್ಟಿ ಫಿವಿಲ್ ಗಡಿಯಾರದತ್ತ ಹರಿಯಿತು. ಆತ ಬೆಚ್ಚಿದ. ಕಾರಿನ ಟ್ಯಾಂಕ್ ಭರ್ತಿಯಾಗುವವರೆಗೆ ಆತ ಪೆಟ್ರೋಲ್ ತುಂಬಿ ಸಿದ್ದ....ಆದರೆ ಈಗದು ಖಾಲಿಯಾಗಿದೆ ಎಂದು ಸೂಚಿಸುತ್ತಿತ್ತು. ಹೀಗೆ ಯೋಚಿಸುತ್ತಿದ್ದಂತೆಯೇ ಕಾರು ಎರಡು ಮೂರು ಬಾರಿ ಝಟಕ ಹೊಡೆ ಯುತ್ತ ನಿಂತೇಬಿಟ್ಟಿತು. ಕಾರಿನಿಂದ ಅವಿನಾಶ ಕೆಳಗಿಳಿದ.... ಬಾನೆಟ್

ತೆಗೆದು ಎಲ್ಲಾ ಪರೀಕ್ಷಿಸಿದ ಸರಿಯಾಗಿತ್ತು. ಹಾಗೇ ಹಿಂದೆ ಬಂದ ರಸ್ತೆಯನ್ನು ದೂರಕ್ಕೂ ವೀಕ್ಷಿಸಿದ.... ಆಗಲೇ ಕಣ್ಣಿಗೆ ಬಿದ್ದಿತು.

ಹನಿಹನಿಯಾಗಿ ಸೋರುತ್ತ ಬಂದ ಪೆಟ್ರೋಲ .

ಓಹ್ ಗಾಡ್.... ಪೆಟ್ರೋಲ್ ಟ್ಯಾಂಕಿಗೆ ಏಟು ಬಿದ್ದು ದಾರಿಯಲ್ಲೆಲ್ಲ ಸೋರುತ್ತಾ ಬಂದಿದೆ.... ಬಹುಶಃ ಇದು ಆ ನೀಲಿ ಸೂಟಿನವನ ಕರಾಮತ್ತು ಇರಬೇಕು. ಟೈಂ ಬಾಂಬ್ ಕೂಡಿಸುವ ಅಪಾಯಕ್ಕೆ ಕೈಹಾಕದ ಆತ ಕಲ್ಲಿನಿಂದ ಮೆಲ್ಲನೆ ಟ್ಯಾಂಕಿಗೆ ಏಟು ಹಾಕಿದ್ದ ಪೆಟ್ರೋಲ್ ಖಾಲಿಯಾಗಿ ಕಾರು ದಾರಿ ಮಧ್ಯದಲ್ಲೇ ನಿಲ್ಲಬೇಕೆಂದು ಆತ ಸಂಚು ಮಾಡಿರಬಹುದು. ಅಂತೂ ಆತ ಮಹಾಚಾಣಾಕ್ಷ ಎಂದ ಮನದಲ್ಲೇ....ಖಂಡಿತವಾಗಿ ಆತ ತನನ್ನು ಹಿಂಬಾಲಿಸಿ ಕೊಂಡು ಬಂದೇ ಬರುತ್ತಾನೆಂದುಕೊಂಡು ಕಾರನ್ನು ಅಲ್ಲೇ ನಿಲ್ಲಿಸಿ ತಾನು ಪಕ್ಕದಲ್ಲಿ ಜಿಗಿದು ಬಂಡೆ ಮರೆಗೆ ಅವಿತುಕೊಂಡ.

ಐದು ಹತ್ತು ನಿಮಿಷಗಳು ಉರುಳಿದವು.

ನಾಲ್ಕಾರು ವಾಹನಗಳು ಅತ್ತಿಂದತ್ತ ಓಡಾಡಿದರೂ ಯಾರಿಂದಲೂ ಆಪಾಯ ಒದಗಲಿಲ್ಲ. ಹಾಗೇ ಮತ್ತೆ ಐದಾರು ನಿಮಿಷಗಳು ಕಳೆದವು. ದೂರದಲ್ಲಿ ಮಬ್ಬು ಕತ್ತಲೆಯನ್ನು ಸೀಳಿಕೊಂಡು ರಸ್ತೆ ಮಧ್ಯದಲ್ಲಿ ಬರುತ್ತಿದ್ದ ಬಿಳಿ ಮಾರುತಿ ಕಾರು ಕಣ್ಣಿಗೆ ಬಿದ್ದಿತು. ಓಹ್... ತನ್ನ ಬೇಟೆಗಾರ ಬಂದ ಎಂದು ಕೊಂಡು ಮೈಯೆಲ್ಲಾ ಕಣ್ಣಾಗಿ ಬಂಡೆಮರೆಯಿಂದ ನಿರೀಕ್ಷಿಸತೊಡಗಿದ.

ಮಾರುತಿ ಬಂದು ಅವಿನಾಶನ ಕಾರಿನಿಂದ ತುಸು ದೂರದಲ್ಲಿ ನಿಂತು ಕೊಂಡಿತು. ಕಾರಿನಿಂದ ಯಾರೂ ಕೆಳಗೆ ಇಳಿಯಲಿಲ್ಲ ಬಹುಶಃ ಹೊರಗಿನ ವಾತಾವರಣವನ್ನು ಪರೀಕ್ಷಿಸುತ್ತಿರಬಹುದು. ಎರಡು ಮೂರು ನಿಮಿಷಗಳ ನಂತರ, ಚಾಲಕನ ಬಾಗಿಲು ತೆರೆಯಿತು. ನೀಲಿ ಸೂಟುಧಾರಿ ಕೆಳಗಿಳಿದ. ಅವನ ಕೈಯಲ್ಲಿ 32 ಪಾಯಿಂಟ್‌ನ ರಿವಾಲ್ವರ್.... ರಿವಾಲ್ವರ್ ಗುರಿ ಕಾರಿನತ್ತ ಹಿಡಿದೇ ಆತ ಸುತ್ತಲೂ ಪರೀಕ್ಷಿಸುತ್ತ ನಿಧಾನವಾಗಿ ನಡೆದು ಬಂದ. ಸರಕ್‌ನೆ ಕಾರಿನ ಕಿಟಕಿಯಲ್ಲಿ ರಿವಾಲ್ವರ್ ತೂರಿಸಿದ. ಮುಖ ಪೆಚ್ಚಾಯಿತು. ಕಾರು ಖಾಲಿ. ಪಕ್ಕದಲ್ಲಿ ಸರಿದು ನಿಂತು ಸುತ್ತಲೂ ಹದ್ದಿನ ದೃಷ್ಟಿ ಬೀರಿದ. ಮುಖದ ಮೇಲೆ ನಿರಾಶೆ ಒಡೆದು ಕಾಣುತ್ತಿತ್ತು. ಮತ್ತೆ ಏನು ಅನ್ನಿಸಿತೋ. ಕಾರಿನಡಿ ಕಾರಿನ ಹಿಂದೆ ಇಣುಕಿ ನೋಡಿ ಅಲ್ಲಿಯೂ ಬೇಟೆಯನ್ನು ಕಾಣದೆ

ರಿವಾಲ್ವರ್ ಜೇಬಿಗಿಳಿಸಿ ತನ್ನ ಕಾರಿನತ್ತ ಭಾರವಾದ ಹೆಜ್ಜೆ ಹಾಕತೊಡಗಿದ. ಕಾರು ಸಮೀಪಿಸುತ್ತಿದ್ದಂತೆ ತನ್ನ ಕಾರಿನ ಹಿಂಭಾಗದಿಂದ ಮಿಂಚಿನಂತೆ ಸರಿದು ಬಂದವನ ನೋಡಿ ಗಕ್‌ನೆ ನಿಂತು ಬಿಟ್ಟ. ಅವನ ಕಣ್ಣುಗಳು ಅಚ್ಚರಿ ಹಾಗೂ ಭಯದಿಂದ ಅಗಲಿಕೊಂಡವು. ಕೈಯಲ್ಲಿ ಸರ್ವಿಸ್ ರಿವಾಲ್ವರ್ ಹಿಡಿದು ನಗುತ್ತ ನಿಂತಿದ್ದ ಅವಿನಾಶ್ "ಹಲೋ ಮಿಸ್ಟರ್ ಬ್ಲೂ.... ಬನ್ನಿ....ಬನ್ನಿ...." ಸ್ವಾಗತಿಸಿದ.

## 6

ನಗೀನಾ....

ಮುಟ್ಟಿದರೆ ಮಾಸುವಂಥ ಬೆಳದಿಂಗಳ ಬಾಲೆ. ವಯಸ್ಸು ಇಪ್ಪತ್ತು ಮೀರಿರಲಿಲ್ಲ. ಮದಿರೆಪಾತ್ರೆಗಳಂಥ ಕಣ್ಣುಗಳು. ಕಾಶ್ಮೀರದ ಸೇಬು ಮೀರಿಸುವ ಕೆಂಪು ಕೆನ್ನೆಗಳು. ರಸಭರಿತ ಅಧರಗಳು. ಬೋರಂಗಿಯಂಥ ಕಪ್ಪು ಕಣ್ಣುಗಳು. ಅವಳ ಮುಖದ ಸೌಂದರ್ಯವೆಲ್ಲ ಮೂಗಿನಲ್ಲಿ ಕೇಂದ್ರೀಕೃತವಾಗಿತ್ತು. ಮಾಟಾದ, ಮುದ್ದಾದ ಮೂಗಿನಿಂದಲೇ ಆಕೆ ಸಾವಿರಾರು ಜನರಲ್ಲಿ ಎದ್ದು ಕಾಣುವಂಥ ಸುಂದರಿ ಎನಿಸಿಕೊಂಡಿದ್ದಳು.

ನೂರಾರು ಯುವತಿಯರು ಅಸೂಯೆಯಿಂದ ಉರಿದು ಬೀಳುವಷ್ಟು ಸೌಂದರ್ಯ ಸಂಪತ್ತನ್ನು ಆಕೆ ಪಡೆದಿದ್ದರೂ ನಗೀನಾ ದುರ್ದೈವಿಯಾಗಿದ್ದಳು. ದೈವ ಅವಳ ಜೊತೆ ಭಯಾನಕ ಆಟವಾಡಿತ್ತು. ಅವಳಿಗೆ ತನ್ನ ತಂದೆ ತಾಯಿ ಯಾರೆಂದೇ ತಿಳಿದಿರಲಿಲ್ಲ. ಬುದ್ಧಿ ತಿಳಿದಾಗ ಆಕೆ ಮೆಹರುನ್ನಿಸಾಳ ಆಶ್ರಯದಲ್ಲಿದ್ದಳು. ಆಗ ಆಕೆಗೆ ಐದಾರು ವರ್ಷಗಳು ಮಾತ್ರ. ಅವಳನ್ನೇ ತಂದೆ, ತಾಯಿ, ಬಂಧು ಬಳಗ ಎಲ್ಲಾ ಎಂದು ತಿಳಿದುಕೊಂಡಿದ್ದಳು. ಮೆಹರುನ್ನೀಸಾ ಸಹ ಅವಳಿಗೆ ತಾಯಿಯ ಪ್ರೀತಿ ಧಾರೆಯೆರೆದಿದ್ದಳು ... ಅವಳನ್ನು ಸಾಕಿದಳು, ಬೆಳೆಸಿದಳು, ಕಲಿಸಿದಳು. ಕಾಲೇಜು ಮೆಟ್ಟಲು ಹತ್ತಿಸಿದಳು ಆವಾಗಲೇ ನಗೀನಾಗೆ ತಿಳಿದದ್ದು ತನ್ನನ್ನು ಸಾಕಿ ಬೆಳೆಸಿದ ಮೆಹರುನ್ನೀಸಾ ಒಬ್ಬ ವೇಶ್ಯೆಯೆಂದು....

ಈ ವಿಷಯ ತಿಳಿದಿದ್ದು ಎಂಥ ಸಂದರ್ಭದಲ್ಲಿ ?

ಕಾಲೇಜಿಗೆ ಬಂದು ಒಂದು ವಾರ ಸಹ ಕಳೆದಿರಲಿಲ್ಲ....ಕಾಲೇಜಿನ ಎಲ್ಲ ಹುಡುಗರು ಅವಳ ಸುತ್ತ ತಿರುಗುತ್ತ ಜೊಲ್ಲು ಸುರಿಸತೊಡಗಿದರು, ಅವಳ

ಒಂದು ಕುಡಿನೋಟಕ್ಕಾಗಿ ಹಾತೊರೆಯುತ್ತಿದ್ದರು. ಅವರೆಲ್ಲರ ನಾಯಕ ನಂತಿದ್ದವ ರೋಮಿಯೋ ಸತ್ತಾರ ಹುಚ್ಚನಾಗಿದ್ದ. ನಗೀನಾಳನ್ನು ಪಡೆಯಲು ಸರ್ವ ಪ್ರಯತ್ನ ಮಾಡಿದ....ಹಕ್ಕಿ ಬಲೆಗೆ ಬೀಳಲಿಲ್ಲ. ಅಷ್ಟರಲ್ಲಿ ಆತ ಅವಳ ಬಗ್ಗೆ ಎಲ್ಲಾ ವಿಷಯ ಸಂಗ್ರಹಿಸಿದ್ದ... ಅವಳನ್ನು ಬ್ಲಾಕ್ ಮೇಲ್ ಮಾಡುವ ಹಂತಕ್ಕೂ ಬಂದ.

ಅಂದು ಕಾಲೇಜಿನ ಕಾರ್ಯಕ್ರಮಕ್ಕೆ [illegible]... ಹಾಲ್ ಪೂರ್ತಿ ತುಂಬಿದ್ದು ನೂರಾರು ಹುಡುಗರು ಅತ್ತಿಂದಿತ್ತ ಓಡಾಡುತ್ತಿದ್ದರು. ಸತ್ತಾರ ಬತ್ತಳಿಕೆಯಲ್ಲಿಯ ಕೊನೆಯ ಅಸ್ತ್ರ ಪ್ರಯೋಗಿಸಿದ. ಅವನ ಜೊತೆ ಡ್ಯಾನ್ಸ್ ಮಾಡದಿದ್ದರೆ ಅವಳ ಜೀವನದ ರಹಸ್ಯ ಬಯಲು ಮಾಡುವುದಾಗಿ ಹೆದರಿಸಿದ. ನಗಿನಾಗೆ ನಿಜವಾಗಿಯೂ ಏನೂ ತಿಳಿದಿರಲಿಲ್ಲ. ಹೀಗಾಗಿ ಆಕೆ ಅವನನ್ನು ಸಮರ್ಥ ರೀತಿಯಲ್ಲಿ ಎದುರಿಸಿದಳು. ಮುಖದ ಮೇಲೆ ನೀರು ಇಳಿಸಿದಳು. ಅವಮಾನದಲ್ಲಿ ಬೆಂದ ಸತ್ತಾರ ಅವಳನ್ನೆಳೆದು ಅವಳ ಮುಖದ ಮೇಲೆಲ್ಲ ಮುತ್ತಿಕ್ಕಿ ದೂರ ತಳ್ಳಿದ....ನೂರಾರು ಹುಡುಗರು ಹುಡುಗಿಯರು ನೋಡುತ್ತಿರುವಾಗಲೇ ಈ ಕಾರ್ಯ ನಡೆದು ಹೋಯಿತು. ಸತ್ತಾರ ಅಷ್ಟಕ್ಕೂ ಬಿಡದೇ ಅಬ್ಬರಿಸಿದ.

"ಇದು ಕಾಲೇಜೆಂದು ತಿಳಿದು ಇಷ್ಟಕ್ಕೇ ಬಿಟ್ಟಿರುವೆ. ಇಲ್ಲದಿದ್ರೆ ಸೂಳೆಯ ಮಗಳ ಜೊತೆ ಏನು ಮಾಡಬೇಕೋ ಅದನ್ನೆಲ್ಲ ಮಾಡಿ ಮುಗಿಸುತ್ತಿದ್ದೆ."

ಈ ರಹಸ್ಯೋದ್ಘಾಟನೆಯಿಂದ ನಗೀನಾಳ ಆತ್ಮೀಯ ಗೆಳೆಯರೆಲ್ಲರ ಮೇಲೆ ಸಿಡಿಲು ಎರಗಿದಂತಾಯಿತು. 'ಸೂಳೆಯ ಮಗಳು ನಗೀನಾ' ಎಂದು ತಿಳಿಯುತ್ತಿದ್ದಂತೆ ಅವಳ ಬಗ್ಗೆ ಅನುಕಂಪ ಹೊಂದಿದ್ದ ಅವರೆಲ್ಲ ಮೆತ್ತಗೆ ಜಾಗ ಖಾಲಿ ಮಾಡಿದರು. ತುಂಬಿದ ಕೊಡಗಳಂತಿದ್ದ ಕಣ್ಣುಗಳನ್ನು ನೆಲದಲ್ಲಿ ಹುಗಿಯುತ್ತ ನಗೀನಾ ಅಂದು ಕಾಲೇಜಿನಿಂದ ಹೊರಗೆ ಬಂದವಳು ಮುಂದೆ ಕಾಲೇಜು ಮೆಟ್ಟಿಲು ತುಳಿಯಲಿಲ್ಲ. ಮೆಹರುನ್ನೀಸಾಳಿಗೆ ವಿಷಯ ತಿಳಿದು ಆಕೆ ನಿಟ್ಟುಸಿರು ಬಿಟ್ಟು ಎಲ್ಲಾ ವಿಷಯ ತಿಳಿಸಿದಳು. ರೈಲು ಹಳಿಗೆ ಅವಳನ್ನು ಹೆತ್ತವರು ಚೆಲ್ಲಿ ಹೋಗಿದ್ದರು. ರೈಲು ದಾರಿಗೆ ಪಕ್ಕದಲ್ಲಿ ಜಟಕಾದಲ್ಲಿ ಹೋಗುತ್ತಿದ್ದ ಮೆಹರುನ್ನೀಸಾ ಅವಳನ್ನು ಎತ್ತಿ ಸಾಕಿದರು.

ನಗೀನಾ ಎಂದು ಹೆಸರಿಟ್ಟಳು. ಆಕೆ ವೇಶ್ಯೆಯಾಗಿದ್ದರೂ ನಗೀನಾಳನ್ನು ಆ ದಾರಿಯತ್ತ ಸುಳಿಯಲು ಕೊಡಲಿಲ್ಲ.

ನಗೀನಾ ತನ್ನ ಸಾಕು ತಾಯಿ ಮೆಹರುನ್ನೀಸಾಳ ದೊಡ್ಡಗುಣಕ್ಕೆ ಸೋತು ಹೋಗಿ ಅಪ್ಪಿಕೊಂಡು ಬಿಕ್ಕಿಬಿಕ್ಕಿ ಅತ್ತಳು. ಅಂದು ಸಾಕು ತಾಯಿ. ಸಾಕು ಮಗಳು ನಿಜವಾದ ತಾಯಿ ಮಕ್ಕಳಾದರು.

ನಗೀನಾ ಶಿಕ್ಷಣಕ್ಕೆ ಕೈ ಮುಗಿದು ಕೆಲಸದ ಬೇಟೆ ಆರಂಭಿಸಿದಳು.

ಹತ್ತಾರು ಕಡೆ ಸುತ್ತಿದ್ದು ವ್ಯರ್ಥವಾಯಿತು.

ಕೊನೆಗೊಂದು ಕಡೆ ನೌಕರಿ ಸಿಕ್ಕಿತು. ತಿಂಗಳಿಗೆ ಮೂರು ಸಾವಿರ ರೂಪಾಯಿ ಸಂಬಳ. ಅದರ ಜೊತೆ ಇರಲು ಮನೆ ಸಹ ಇತರ ಸೌಲಭ್ಯಗಳೂ ಆ ಮನೆಯಲ್ಲಿದ್ದವು. ಎರಡು ಮೂರು ದಿನ ಆಕೆ ಉತ್ಸಾಹದಿಂದ ಕೆಲಸ ಮಾಡಿದಳು. ಮೆಹರುನ್ನೀಸಾ 'ಧಂಧೆ' ಬಿಟ್ಟು ಮಗಳೊಂದಿಗೆ ಅವಳ ಜೊತೆಯೇ ವಾಸ ಮಾಡತೊಡಗಿದಳು.

ವಿಧಿಗೆ ಇದನ್ನು ನೋಡಲಾಗಲಿಲ್ಲ.

ಒಂದು ರಾತ್ರಿ....ಹನ್ನೊಂದು ಹನ್ನೆರಡು ಗಂಟೆ ಸುಮಾರು ಬೆಲ್ ಬಾರಿಸಿತು. ಮೆಹರುನ್ನೀಸಾ ಬಾಗಿಲು ತೆರೆದಳು. ಸಾಕಷ್ಟು ಕುಡಿದು ತೂರಾಡುತ್ತಿದ್ದ ಸತ್ತಾರ ಒಳನುಗ್ಗಿ ಬಂದ. ತಾಯಿ ಮಗಳು ಇಬ್ಬರೂ ಕೂಡಿ ಅವನನ್ನು ಹೊರ ಹಾಕಲು ಯತ್ನಿಸಿದ್ದು ವ್ಯರ್ಥವಾಯಿತು. ನಿಶೆಯ ಅಮಲಿನಲ್ಲಿದ್ದ ಸತ್ತಾರ ಒಂದೊಂದ ಮಾತು ಹೇಳಿದ...."ನಿನಗೆ ನೌಕರಿ ಕೊಟ್ಟು ಜೀವ ತುಂಬಿದವ ನಾನು ಈಗ ನಾನು ಹೇಳಿದಂತೆ ನೀನು ಕೇಳಲೇ ಬೇಕು...."

ನಗೀನಾ ತಬ್ಬಿಬ್ಬಾದಳು.

ಅವಳಿಗೆ ಗೊತ್ತೇ ಇರಲಿಲ್ಲ. ಆಕೆ ನೌಕರಿ ಮಾಡುವ ಕಂಪನಿಯ ಮಾಲಿಕ ಸತ್ತಾರ ಎಂದು ...

ಮುಂದೆ....

ನಡೆಯಬಾರದ್ದೆಲ್ಲ ನಡೆದೇ ಹೋಯಿತು.

ಶೀಲ ಕಳೆದುಕೊಂಡು ಜೀವಂತ ಶವದಂತೆ ಬಿದ್ದುಕೊಂಡ ನಗೀನಾಳಿಗೆ **ತನ್ನ ತಾಯಿ ಮೆಹರುನ್ನಿಸಾ ರಾತ್ರಿಯೇ ಸತ್ತು ಹೋದಳು ಎಂದು ತಿಳಿದಿದ್ದು**

ಮರುದಿನ ಮುಂಜಾನೆಯೇ .. ಸತ್ತಾರನನ್ನು ಎದುರಿಸಿದ ಆಕೆ ಗಾಯ ಹೊಂದಿ ಅಸುನೀಗಿದ್ದಳು....

ಪೊಲೀಸರು ಜೀವ ಹಿಂಡಿದರು.

ನಗೀನಾ ನಡೆದ ವಿಷಯ ಅವರೆಲ್ಲರಿಗೆ ತಿಳಿಸಿದರೂ ನಂಬಲಾಗಲಿಲ್ಲ.

ಸಂಶಯದ ಆಧಾರದ ಮೇಲೆ ನಗೀನಾಳನ್ನು ಒಂದೆಡೆ ಬಂಧಿಸಿಟ್ಟರು. ಎಂಟು ದಿನಗಳ ಕಾಲ ದಿನಕ್ಕೆ ಇಬ್ಬರು ಮೂವರಂತೆ ಬಂದ ಯಾರ್‍ಯಾರೋ ಅವಳ ಮೇಲೆ ಹದ್ದಿನಂತೆ ಎರಗಿ ತಮ್ಮ ಹಸಿವು ತೀರಿಸಿಕೊಂಡರು.

ಹದಿನೈದು ದಿನಗಳ ನಂತರ ಆಕೆ ಹೊರಗೆ ಬಂದು ಬೀದಿಯಲ್ಲಿ ನಿಂತಿದ್ದ ಆಕೆಗೆ ಆಶ್ರಯ ನೀಡಿದವನೂ ಸತ್ತಾರನೇ....

ಇಂದು ನಗೀನಾ ದೂರದ ಕೊಹಿಮಾದಲ್ಲಿ ಕ್ಯಾಬರೆ ಡ್ಯಾನ್ಸರ್....

ಹೊಟೇಲ್ ರೆಡ್‌ನೈಟ್‌ನಲ್ಲಿ ಆಕೆ ಕ್ಯಾಬರೆ ಡ್ಯಾನ್ಸರ್....

ಇಷ್ಟೆಲ್ಲ ವಿಷಯ ತಿಳಿದುಕೊಳ್ಳಲು ಅವಿನಾಶನಿಗೆ ಎರಡು ಗಂಟೆ ಸಾಕಾದವು. ಪಾಂಡುರಂಗ ಪ್ರಾಣಾಪಾಯದಿಂದ ಪಾರಾಗಿದ್ದಾನೆ ಎಂದು ತಿಳಿಯುತ್ತಲು ಅವನ ಸುರಕ್ಷತೆಯ ವ್ಯವಸ್ಥೆ ಮಾಡಿ ಉಳಿದಿದ್ದನ್ನು ಡಲ್ಲಾನಿಗೆ ವಹಿಸಿ ಆತ ಕೊಹಿಮಾ ತಲುಪಿದ್ದ. ಬಾರೊಂದರ ವೇಟರ್‌ನಿಂದ ಅವನಿಗೆ ನಗೀನಾಳ ಬಗ್ಗೆ ತಿಳಿಯಿತು. ಕಾಮ್ಮಿಂಗ ಕೊಹಿಮಾದಲ್ಲಿ ಇದ್ದದ್ದೇ ನಿಜವಾಗಿದ್ದರೆ ಖಂಡಿತವಾಗಿ ಆತ ರಾತ್ರಿ ನಗೀನಾಳನ್ನು ಪಡೆಯಲು ಯತ್ನಿಸುತ್ತಾನೆ ಎಂದು ತರ್ಕಿಸಿದ. ಆತ ಸುಂದರ ಬಲೆಯೊಂದನ್ನು ಹೆಣೆಯತೊಡಗಿದ.... ಬಲೆಯಲ್ಲಿ ಕಾಮ್ಮಿಂಗನನ್ನು ಕೆಡವಲು ನಗೀನಾಳ ಸಹಾಯ ಬೇಕಾಗಿದ್ದರಿಂದ ಮೊದಲು ಅವಳನ್ನು ಭೇಟಿಯಾಗಲು ನಿರ್ಧರಿಸಿ ಅವಳ ವಿಳಾಸ ತಿಳಿದುಕೊಂಡು ಟ್ಯಾಕ್ಸಿ ನಿಲ್ಲಿಸಿದ. ಒಂಭತ್ತು ಗಂಟೆಗೆ ಹತ್ತು ನಿಮಿಷವಿರುವಾಗಲೇ ಆತ ಟ್ಯಾಕ್ಸಿಯಿಂದ ಅವಳ ಮನೆಯೆದುರು ಇಳಿದ. ನಗೀನಾಳ ಶೋ ಇರುವುದು ಹತ್ತು ಗಂಟೆಗೆ. ಆಕೆ ಹೊರಡುವ ಸಿದ್ಧತೆಯಲ್ಲಿದ್ದಳು. ಅವಿನಾಶ ಕರೆಗಂಟೆ ಬಾರಿಸಿದ. ನಗೀನಾ ಅಚ್ಚರಿಯಿಂದ ಒಂದು ಬಾರಿ ಬಾಗಿಲತ್ತ ನೋಡಿ ಗಡಿಯಾರದತ್ತ ದಿಟ್ಟಿಸಿದಳು. ಕ್ಲಬ್ಬಿನ ಕಾರು ಬರಲು ಅರ್ಧ ಗಂಟೆಗಿಂತ ಹೆಚ್ಚು ಸಮಯವಿತ್ತು. ಒಂದು ಕ್ಷಣ ಅವಳ ಹುಬ್ಬುಗಳು ಗಂಟಿಕ್ಕಿದರೂ

ಮುಂದಿನ ಕ್ಷಣ ಮುಖ ಅರಳಿತು. ಬಳಕುತ್ತ ನಡೆದು ಬಾಗಿಲು ತೆರೆದಳು. ಎದುರಿಗೆ ನಿಂತಿದ್ದ ಮನ್ಮಥನ ರೂಪ ಹೊತ್ತ ಅವಿನಾಶ ಸಾದಾ ವೇಷದಲ್ಲಿ.

ನಗೀನಾಳ ಜೀವನದಲ್ಲಿ ಎಷ್ಟು ಜನ ಪುರುಷರು ಬಂದು ಹೋಗಿದ್ದರೋ ಅವಳಿಗೆ ತಿಳಿಯದು. ದಿನಕ್ಕೊಬ್ಬರಂತೆ ಹಿಡಿದರೂ ಇಲ್ಲಿಯವರೆಗೂ ಆಕೆ ಸುಮಾರು ಒಂದು ಸಾವಿರ ಜನರನ್ನಾದರೂ ಕಂಡಿರಬೇಕು... ಅವರಲ್ಲಿ ಬಹಳಷ್ಟು ಜನ ಸತ್ಕಾರನಿಗೆ ಹಣ ಕೊಟ್ಟು ಇವಳನ್ನು ಹಿಂಡಲು ಬಂದವರಾಗಿದ್ದರು. ಇನ್ನು ಕೆಲವರು ಒಂದು ಬಾರಿ ಅವಳ ಬಳಿ ಬಂದು ಅವಳ ರೂಪಸುಧೆಯ ಸವಿಯುಂಡು ಹೋದವರು. ಪುನಃ ತಾವಾಗಿಯೇ ಬಂದವರೂ ಆಗಿದ್ದರು....ಮತ್ತೆ ಕೆಲವರು ಅವಳ ನೃತ್ಯ ಕಂಡು ಹುಚ್ಚು ಹಿಡಿದು ಅವಳನ್ನು ಸೇರುವ ಹುಚ್ಚಿನಿಂದ ಬಂದವರು. ಇಂಥ ಹುಚ್ಚಿನಲ್ಲಿ ಬಂದವರು ಆಗರ್ಭ ಶ್ರೀಮಂತರಂತೂ ಆಗಿದ್ದರು. ಅದರ ಜೊತೆಗೆ ಸುಂದರರೂ ಆಗಿದ್ದರು ಎಂಬುದನ್ನು ಮರೆಯುವಂತಿರಲಿಲ್ಲ....ಬಾಗಿಲಿಗೆ ನಿಂತು ಅವಳೆಡೆ ಸಮ್ಮೋಹಿನಿ ನಗೆ ಚೆಲ್ಲುತ್ತಿರುವ 'ತರುಣ' ಅವರೆಲ್ಲರನ್ನೂ ಮೀರಿಸುವ ಸುಂದರವದನದ ಆಕರ್ಷಕ ವ್ಯಕ್ತಿತ್ವದ ದೊರೆಯಾಗಿದ್ದ. ಒಂದು ದೃಷ್ಟಿಯಿಂದ ನಗೀನಾ ಎಂಥ ಒಂದು ಗಂಡಿಗಾಗಿ ಕಾದಿದ್ದಳೋ ಅಂಥ ಗಂಡು ಅವಳೆದುರು ಬಂದು ನಿಂತಿತ್ತು....

ಮೇಕಪ್ ಪೂರ್ತಿಯಾಗಿತ್ತು.

ಪೋಷಾಕು ಧರಿಸುವುದು ಮಾತ್ರ ಬಾಕಿ ಉಳಿದಿತ್ತು.

ಒಂದು ಭಾರಿ ತನ್ನ ಮೇಲೆ ತಾನೇ ದೃಷ್ಟಿ ಹರಿಸಿದಳು.

ಮೈ 'ಜುಂ' ಎಂದಿತು....

ಕೆಂಪು ಹವಳದಂತಹ ಮಿನುಗುವ ದೇಹ ಹರಯ ಅದಕ್ಕೆ ಮೆರಗು ತಂದಿತ್ತು. ಮಾದಕ ಕಂಗಳು, ಭಾರವಾದ ಕುಚಗಳು, ದಷ್ಟಪುಷ್ಟ ತೊಡೆಗಳು... ನಡೆಯುವಾಗ ಉಸಿರು ಬಿಸಿ ಮಾಡುವಂತೆ ಹೊಯ್ದಾಡುವ ನಿತಂಬಗಳು... ಎಲ್ಲಾ ಈಗ ನಗ್ನವಾಗಿದ್ದವು. ಮೇಲೆ ತೆಳುವಾದ ಗುಲಾಬಿ ವರ್ಣದ ನೈಟಿ ಧರಿಸಿದ್ದರೂ ಒಳಗೆಲ್ಲಾ ಆಕೆ ನಗ್ನವಾಗಿದ್ದನ್ನು ಅದಕ್ಕೆ ಮುಚ್ಚಲಾಗಿರಲಿಲ್ಲ. ಕಪ್ಪು ವರ್ಣದ ಮಿಂಚು ಮಿಂಚುವ ಕಾಚಾ ಮತ್ತು ಬ್ರಾದಲ್ಲಿ ಆಕೆ ಕಾಮ

ದೇವತೆಯಾಗಿ ಶೋಭಿಸುತ್ತಿದ್ದಳು .. ಅವಳಿಗರಿವಿಲ್ಲದಂತೆ ಆಕೆಯ ದೇಹ ದೇಹದಲ್ಲಿಯ ಸಮಸ್ತ ನರಗಳು, ವಾಸನೆಯಿಂದ ದಹಿಸತೊಡಗಿದವು.

ಮೆಲುವಾಗಿ ನರಳಿದ ಆಕೆ ದಾಳಿಂಬೆ ಬೀಜದಂತಹ ಹಲ್ಲುಗಳಿಂದ ತನ್ನ ತುಟಿಗಳನ್ನು ಕಡಿದುಕೊಂಡು ಕಣ್ಣುಮುಚ್ಚಿದಳು.

ನಗ್ನ ದೇಹದ ಮೇಲೆ ಕರಿಕಾಳಿಂಗ ಹರಿದಾಡಿದಂತಾಯಿತು.

ಅವಳ ಅವಸ್ಥೆ ಕಂಡ ಅವಿನಾಶ ಮನದಲ್ಲಿ ಸಂತೋಷಪಟ್ಟ. ಅವಳನ್ನು ತನ್ನ ಬಲೆಯಲ್ಲಿ ಕೆಡವಿಕೊಳ್ಳಲು ಬಂದ ಆತನಿಗೆ ಬೇಟೆ ತಾನಾಗಿಯೇ ಬಂದು ಬಲೆಯಲ್ಲಿ ಬೀಳುತ್ತಿರುವುದನ್ನು ಕಂಡು ಆನಂದವಾಗಿತ್ತು.

ನಸುಬಾಗಿದ ಆತ ಮುಚ್ಚಿದ ಕಣ್ಣುಗಳ ಮೇಲೆ ಹೂ ಮುತ್ತನ್ನಿತ್ತ.

ಅವನ ತುಟಿ ಕಣ್ಣುಗಳನ್ನು ಸ್ಪರ್ಶಿಸುತ್ತಿರುವಂತೆ ಅರೆಬಿರಿದ ಕಮಲದಂತೆ ಅವಳ ತುಟಿಗಳು ಬಾಯಿಬಿಟ್ಟು ಆಹ್ವಾನ ನೀಡಿದವು. ಎರಡು ಮೂರು ಬಾರಿ ಚುಂಬಿಸಿದ ಆತ ಅವಳಲ್ಲಿ ಅನುರಕ್ತನಾದವನಂತೆ ನಟಿಸುತ್ತ ಭಾರವಾದ ದನಿಯಲ್ಲಿ ಮೃದುವಾಗಿ ನುಡಿದ.

"ನಗೀನಾ ಡಾರ್ಲಿಂಗ್"

"ಹಾಂ....ಎಸ್, ಮಾಯ್ ಲವ್.. " ಆಕೆ ಮೀನಿನಂತೆ ಚಡಪಡಿಸುತ್ತ ಇರಲು "ಒಳಗೆ ಹೋಗೋಣವೇ ?" ಎಂದ ಅವಿನಾಶ.

"ಹಾಂ...." ಆಕೆ ಒಪ್ಪಿಗೆ ಇತ್ತಳು.

ಅಪೂರ್ವ ಸೌಂದರ್ಯ ರಾಶಿಯನ್ನು ತೋಳತೆಕ್ಕೆಯಲ್ಲಿ ಬಂಧಿಸಿ ಬಲಗಾಲಿನ ಪಾದದಿಂದ ಬಾಗಿಲನ್ನು ಮುಚ್ಚಿ ಅವಳೊಂದಿಗೆ ಬೆಡ್‌ರೂಮಿಗೆ ಬಂದ. ಮೆಲುವಾಗಿ ಅವಳೊಂದಿಗೆ 'ಡನ್‌ಲಪ್' ಗಾದಿಯ ಮೇಲೆ ಉರುಳಿದ.

ಹತ್ತು ಹದಿನೈದು ನಿಮಿಷಗಳಲ್ಲಿ ನಗೀನಾ ಅವನ ಹಸ್ತಕಳಾದಳು. ಆತ ಕುಣಿಸಿದಂತೆ ಕುಣಿಯುವ ಅರಗಿಣಿಯಾದಳು....ಅರಬ ದೇಶದಿಂದ ಬಂದ ಓರ್ವ ಕೋಟ್ಯಾಧಿಪತಿ ತನ್ನನ್ನು ಅರಸಿಕೊಂಡು ಬಂದಿದ್ದಾನೆ ಎಂದು ತಿಳಿದಾಗಲೇ ಆಕೆ ಅರ್ಧ ಸತ್ತುಹೋಗಿದ್ದಳು. ಅದರ ಮೇಲೆ ಆತ ತನ್ನ ಕೋಟಿನ ಜೇಬಿನಿಂದ ತೆಗೆದ ಒಂದೊಂದೇ ಆಭರಣಗಳು ಅವಳನ್ನು ಪೂರ್ತಿ ಕೊಂದು ಹಾಕಿದವು. ಇದೇ ಸುಸಮಯ ಎಂದರಿತ ಅವಿನಾಶ ತನ್ನ ಬಲೆಯನ್ನು ನಿಧಾನವಾಗಿ ಬೀಸಿ

ಅವಳಿಂದ ತನಗೇನಾಗಬೇಕಾಗಿದೆ ಎಂಬುದನ್ನು ತಿಳಿಸಿದ....ಮುಲುಗುಟ್ಟುತ್ತಾ ಕೇಳಿದ ಆಕೆ .. ಒಂದೇ ಮಾತು ಕೇಳಿದಳು.

"ಅವನ ಮೇಲೇಕೆ ನಿಮಗೆ ಕಣ್ಣು"

"ನಗೀನಾ ಡಾರ್ಲಿಂಗ್....ಅವನ ಒಂದು ಸಹಿ ನನಗೆ ಅರಬ ಕಂಟ್ರಿಯಲ್ಲಿಯ ಆಸ್ತಿ ಕೊಡಿಸಿ ಕೊಡುತ್ತದೆ. ನೀನು ಅವನನ್ನು ನಿನ್ನ ರೂಮಿಗೆ ಕರೆ ತಂದು ಈ ಕಾಗದದ ಮೇಲೆ ಸಹಿ ಮಾಡಿಸು ಸಾಕು....ಮುಂದೆ, ನಾನು ನೀನು ಈ ಜಗತ್ತಿಗೆ ರಾಜರಾಣಿಯರಾಗಿ ಮೆರೆಯೋಣ"

"ಹೌದಾ"

"ಹೌದು"

"ಒಂದು ವೇಳೆ ಆತ ನಿನ್ನಲ್ಲಿಗೆ ಬರದಿದ್ದರೆ ?"

"ಆತ ಕರೆದಲ್ಲಿಗೆ ನೀನೇ ಹೋಗು....ನಾನು ನಿನ್ನ ಬೆಂಬತ್ತಿ ಬರುತ್ತೇನೆ."

"ಸರಿ ಹಾಗಾದರೆ"

ಕಾಮ್ತಿಂಗನ ಬಗ್ಗೆ ಪೂರ್ತಿ ಪರಿಚಯ ಮಾಡಿಕೊಟ್ಟ ಅವಿನಾಶ ಮೇಲೇಳುತ್ತಿದ್ದಂತೆ ಆಕೆ ಅವನ ಕೈಹಿಡಿದು ತನ್ನ ಮೇಲೆ ಎಳೆದುಕೊಂಡಳು.... "ನನ್ನ ತನುಮನಗಳಿಗೆ ಕಿಚ್ಚು ಹಚ್ಚಿ ಎದ್ದು ಹೋಗುತ್ತಿದ್ದಿಯಲ್ಲ....ಸರೀನಾ ಮೊದಲು ಈ ಜ್ವಾಲೆ ಆರಿಸು....ಬಾ...."

ಅವಿನಾಶ ಪಾರಾಗಲು ಪ್ರಯತ್ನಿಸುತ್ತಿದ್ದಂತೆ ಅವಳ ಹಿಡಿತ ಜೋರಾಗ ತೊಡಗಿತು. ಅದೇ ಕ್ಷಣ ಬಾಗಿಲು ಕರೆಗಂಟೆ ಬಾರಿಸಿದ್ದು ಅವನಿಗೆ ವರವಾಗಿ ಪರಿಣಮಿಸಿತು. ಅವಳ ಗಲ್ಲದ ಮೇಲೆ ಅಧರಗಳನ್ನಿರಿಸಿ ಕಿವಿಯಲ್ಲಿ ಪಿಸುಗುಟ್ಟಿದ.

"ಈಗ ಬೇಡ ರಾತ್ರಿಗಿರಲಿ...."

ಆಕೆ ಅವನ ಆ ಅರ್ಥ ಮಾತಿಗೆ ತೊಪ್ಪಗೆ ತೊಯ್ದು ಹೋಗಿ ಮೇಲೆದ್ದು ಕುಳಿತಳು. ಮತ್ತೆ ಗಂಟೆ ಕರೆಯಿತು.

"ಯಾರು ?" ಕೂಗಿ ಕೇಳಿದಳು.

"ಮೇಮ್ ನಾನು ಡ್ರೈವರ್" ಡಿಸೋಜಾ ಧ್ವನಿ ಕೇಳಿಸಿತು.

"ಹಾಂ ಇರು ಬಂದೆ...."

ಬೇಗ ಬೇಗ ಬಟ್ಟೆ ಧರಿಸಿದಳು. ಹೊರಟು ನಿಂತಳು,

"ನಾನು ಡೋರ್ ಲಾಕ್ ಮಾಡುವುದಿಲ್ಲ....ನಾನು ಹೋದ ನಂತರ ನೀನು ಹೊರಗೆ ಬಂದೇ ಬಾಗಿಲು ಮುಚ್ಚಿಕೊ....ತಾನೇ ಲಾಕ್ ಆಗುತ್ತದೆ."

ಆಕೆ ಹೋದ ಐದಾರು ನಿಮಿಷಗಳ ನಂತರ ಅವಿನಾಶ ಮೇಲೆದ್ದು ಹೊರಗೆ ಬಂದು ಬಾಗಿಲು ಮುಚ್ಚುತ್ತಲೂ ಇಂಟರ್‌ಲಾಕ್ ಕೂಡಿಕೊಂಡಿತು. ಸಿಳ್ಳೆ ಹಾಕುತ್ತ ಬೀದಿಗೆ ಬಂದ... ಟ್ಯಾಕ್ಸಿ ಇನ್ನೂ ನಿಂತೇ ಇತ್ತು. ಹಿಂದುಗಡೆ ಕುಳಿತು ಕ್ಲಬ್‌ಗೆ ಹೊರಡಲು ಆದೇಶ ನೀಡಿದ....

ಟ್ಯಾಕ್ಸಿ ಓಡತೊಡಗಿತು.

ಅವಿನಾಶ ತನ್ನ ಕಾಯಕದಲ್ಲಿ ಮಗ್ನನಾದ.

ಕೋಟನ್ನು ಪೂರ್ತಿಯಾಗಿ ಹೊರಳಿಸಿ ಹಾಕಿಕೊಂಡ. ನೀಲಿ ಕೋಟಿನ ಬದಲು ಈಗ ನಾಸಿಪುಡಿಕಲರಿನ ಕೋಟು ಮೈಮೇಲೆ ಬಂದಿತು. ಕೋಟು ಜೇಬಿನಿಂದ ಟೈ ವಿಗ್... ಫ್ರೆಂಚ್ ದಾಟಿ ಮೀಸೆ ಹೊರತೆಗೆದ. ತಲೆಯ ಮೇಲೆ ವಿಗ್ ಧರಿಸಿದ. ಗಡ್ಡ ಮೀಸೆ ಅಂಟಿಸಿಕೊಂಡ. ರೇಶಿಮೆ ಬಣ್ಣದ ಟೈ ಬದಲು ಆಕಾಶ ಕಲರಿನ ಟೈ ಧರಿಸಿ.

ಬದಲಾಗದವು ಎಂದರೆ ಕಾಲಲ್ಲಿಯ ಶೂಗಳು ಮಾತ್ರ.

ಸಿಗಾರೊಂದನ್ನು ತೆಗೆದು ಬಾಯಿಗಿರಿಸಿಕೊಂಡು ಅಗ್ನಿ ಸ್ಪರ್ಶ ಮಾಡಿದ. ನಾಲ್ಕಾರು ಬಾರಿ ಹೊಗೆಯುಗುತ್ತಿದ್ದಂತೆ ಅಸಂಖ್ಯ ಬಣ್ಣದ ದೀಪಗಳಿಂದ ಜಗಮಗಿಸುತ್ತಿರುವ ಕ್ಲಬ್ ಕಟ್ಟಡ ಕಣ್ಣಿಗೆ ಬಿದ್ದಿತು. "ಡ್ರೈವರ್ ಗಾಡಿ ಗೇಟಿಗೆ ನಿಲ್ಲಿಸು" ಎಂದು ಅಪ್ಪಣೆ ಮಾಡಿದ.

"ಎಸ್ ಸರ್" ಎನ್ನುತ್ತ ಆತ ಸರಿಯಾಗಿ ಕ್ಲಬ್ ಗೇಟಿಗೆ ತಂದು ಟ್ಯಾಕ್ಸಿ ನಿಲ್ಲಿಸಿದ. ದರ್ಬಾನ್ ಮುಂದೆ ಬಂದು ಕಾರಿನ ಬಾಗಿಲು ತೆರೆದ. ನೂರರ ಎರಡು ಮೂರು ನೋಟುಗಳನ್ನು ಡ್ರೈವರ್ ಕಡೆ ಚಾಚಿ "ಚೇಂಜ್ ನಿನಗೇ ಇರಲಿ" ಎಂದೆನ್ನುತ್ತ ಅವಿನಾಶ ಕೆಳಗೆ ಇಳಿದ.

ಡ್ರೈವರ್‌ಗೆ ಅತ್ಯಾನಂದವಾಯಿತು. ಇಷ್ಟೊಂದು ಹಣ ಕಂಡು "ಥ್ಯಾಂಕ್ಯು... ಥ್ಯಾಂಕ್ಯು....ಕ್ಯು... ಕ್ಯು"

ಅವನ ನಾಲಿಗೆ ತೊದಲತೊಡಗಿತು.

ಅವನ ಕಣ್ಣುಗಳು ಅವಿನಾಶನ ಮುಖದ ಮೇಲೆ ನೆಟ್ಟಿದ್ದವು.

ಅರೆ ಅರೆ ಇದೇಂತಾಯಿತು ಕಾರಿನಲ್ಲಿ ಕುಳಿತ ವ್ಯಕ್ತಿ ಒಂದಾಗಿದ್ದರೆ

ಕೆಳಗೆ ಇಳಿಯುತ್ತಿರುವವರೇ ಬೇರೆ ಮೊದಲ ವ್ಯಕ್ತಿ ಎಲ್ಲಿ ಹೋದ ? ಈತ ಎಲ್ಲಿಂದ ಬಂದ ?....ಆತನಿಗೆ ಒಂದೂ ತಿಳಿಯಲಿಲ್ಲ....

## 7

ಎರಡು ಗಂಟೆಗಳು....

ಕೇವಲ ಎರಡು ಗಂಟೆಗಳು....

ಈ ಅವಧಿಯಲ್ಲಿ ಪಾಂಡುರಂಗನನ್ನು ಹುಡುಕಿ "ಕಲಾಸ್" ಮಾಡಬೇಕು ಇಲ್ಲದಿದ್ದರೆ ಕೋಲ್ಡ್ ಟರ್ಕಿ ಆಗ ಬೇಕಾಗುತ್ತದೆ. ರಾತ್ರಿಯ ಆ ಚಳಿಯಲ್ಲೂ ಆಕೆ ಬೆವೆತಳು. ಶಿಲಾಪ್ರತಿಮೆಯಂತೆ ನಿಂತ ಆಕೆಯ ಎದುರೇ ಅವಳನ್ನು ಕರೆತಂದ ಮೆಟಡೋರ್ ಕತ್ತಲಲ್ಲಿ ಮರೆಯಾಯಿತು....

ಒಂದೆರಡು ನಿಮಿಷಗಳ ಕಾಲ ಹಾಗೆಯೇ ನಿಂತಿದ್ದ ಆಕೆ ಕಾಲು ಕಿತ್ತು ಎತ್ತಿಟ್ಟಳು. 'ಹಾ....ಅಯ್ಯೋ' ಎಂದು ನರಳಿದಳು. ಕಾಲುಗಳೆರಡೂ ಮುರಿದು ಹೋದಷ್ಟು ನೋವೆನಿಸಿತು. ಎರಡು ಮೂರು ತಿಂಗಳಿಂದ ನಡೆದೇ ಇರಲಿಲ್ಲ. ಯಾವೊತ್ತೂ 'ಸ್ಮ್ಯಾಕ್'ನಲ್ಲಿ ಮೈಮರೆತು ಗಾದಿಯ ಮೇಲೆ ಉರಳಾಡುತ್ತಿದ್ದಂತೆ ಆಕೆ 'ಸ್ಮ್ಯಾಕ್' ಮುಗಿದಾಗಲೇ ಹೊರಬರುತ್ತಿದ್ದಳು.... ಟ್ಯಾಕ್ಸಿಯಲ್ಲಿ.

ಈಗ ನಡೆಯುವದೆಂದರೆ....

ಅಭ್ಯಾಸ ತಪ್ಪಿಹೋಗಿದ್ದ ಕಾಲುಗಳು ಮೊದಮೊದಲು ಹಠ ಮಾಡಿದವು. ಮುಂದೆ ತಾವೇ ಸರಿಹೋದವು... ನೋವು ಕಡಿಮೆಯಾಗುತ್ತಿದ್ದಂತೆ ಆಕೆ ಆಸ್ಪತ್ರೆಯತ್ತ ಭರಭರನೆ ಹೆಜ್ಜೆಹಾಕಿದಳು ಎರಡು ಗಂಟೆಗಳಲ್ಲಿ ಆಕೆ ಪಾಂಡುರಂಗನನ್ನು ಹುಡುಕಬೇಕಾಗಿತ್ತು. ಆತ ಕೈಗೆ ಸಿಕ್ಕಮೇಲೆ... ಕೊಲೆ.

ಮೈ ಕೊರಡಿನಂತೆ ಸೆಟೆಯಿತು.

ಕೊಲೆ....ಹೌದು–ನಾಜೂಕಾದ ಕೈಗಳಿಂದ ಇಂದು ಕೊಲೆ ಮಾಡ ಬೇಕಾಗಿತ್ತು. ಕೊಲೆ ಮಾಡದಿದ್ದರೆ ಅವಳ ಜೀವನ ನಾಶವಾಗುತ್ತಿತ್ತು. ಮೈಕೈ

ಎಲ್ಲಾ ಸೆಟೆದು ಹಿಮದಲ್ಲಿ ಬಿದ್ದು ಒದ್ದಾಡಿ ಒದ್ದಾಡಿ ಕಟ್ಟಿಗೆಯಂತಾಗಿ ಸೆಟೆದು ಸತ್ತುಹೋಗುವ ಕೋಳಿಮರಿಯಂತೆ ಈಕೆಯೂ ಸಹಿತ 'ಸ್ಮ್ಯಾಕ್' ಇಲ್ಲದೇ ಶೀತಲಕೋಳಿಯಾಗಿ ಸಾಯಬೇಕಾಗಿತು.

ಅದು ಲಾವಣ್ಯಾಗಳಿಗೆ ಇಷ್ಟವಿರಲಿಲ್ಲ.

ಆಕೆಗೆ ಸಾವು ಬೇಕೆನಿಸಿರಲಿಲ್ಲ–ಅದರಲ್ಲೂ ಇಂಥ ಭಯಾನಕ ಸಾವನ್ನು ಆಕೆ ಕನಸಿನಲ್ಲೂ ಬಯಸಿರಲಿಲ್ಲ. ಆದರೇನು ಮಾಡುವುದು ? ಅವಳ ದುರ್ದೈವ ಅವಳನ್ನು ಈ ದಾರಿಯಲ್ಲಿ ತಂದು ನಿಲ್ಲಿಸಿತ್ತು.

ಎಂಥ ಸುಂದರವಾದ ಜೀವನ ಅವಳದು ?

ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುವ ತಂದೆ

ಮಮತಾಮಯಿ ತಾಯಿ–

ಪ್ರಾಣಪ್ರಿಯ ಸ್ನೇಹಿತರು

ಬೇಡಿದಷ್ಟು ಬಂದು ಬೀಳುವ ಹಣ....

ಸುಂದರವಾದ ಕಾಲೇಜು ಜೀವನ....

ನೋಡನೋಡುತ್ತಿದ್ದಂತೆ ಹುಣ್ಣಿಮೆಯ ರಾತ್ರಿಯಂತಿದ್ದ ಅವಳ ಬಾಳು ಅಮಾವಾಸ್ಯೆಯ ಗಾಡಾಂಧಕಾರದಲ್ಲಿ ಪರಿವರ್ತನೆ ಹೊಂದಿತ್ತು. ಅದೇ.... ಅದೇ.... ದುರ್ವ್ಯಸನಕ್ಕಾಗಿ ಬ್ರೌನ್ ಶುಗರಿಗಾಗಿ ಒಂದು ಸ್ಮ್ಯಾಕ್‌ಗಾಗಿ ಅವಳ ಬಳಿಯಿದ್ದ ಎಲ್ಲಾ ಹಣ ಹಾಳಾಗಿ ನಲವತ್ತು ಐವತ್ತು ಸಾವಿರ ರೂಪಾಯಿ ಸಾಲ ಅವಳ ತಲೆಯ ಮೇಲಿತ್ತು. ಈ ಮೊತ್ತ ಅವಳಿಗೆ ಅಷ್ಟು ದೊಡ್ಡ ಮೊತ್ತವೂ ಆಗಿರಲಿಲ್ಲ. ಡ್ಯಾಡಿಗೆ ಒಂದು ಫೋನ್ ಮಾಡಿದರೆ ಸಾಕು ಎರಡೇ ದಿನಗಳಲ್ಲಿ ಬಂದು ಬೀಳುತ್ತಿತ್ತು. ಅವಳ ಚಿಂತೆಗೆ ಮೂಲ....ಹಣವಾಗಿರಲಿಲ್ಲ.

ಇಮ್ರಾನನ ಬಳಿಯಿರುವ ಐದಾರು ಕ್ಯಾಸೆಟ್‌ಗಳಾಗಿದ್ದವು ...'ಮಾದಕ' ಹೊಟ್ಟೆ ಸೇರಿದಾಗ ಆಕೆಗೆ ತಾನೇನು ಮಾಡಿದೆ ಎಂಬ ನೆನಪು ಇರುತ್ತಿರಲಿಲ್ಲ.... ಎಚ್ಚರ ಬಂದಾಗ ಮಾತ್ರ ಆಕೆ ವಿಚಿತ್ರ ಅವಸ್ಥೆಯಲ್ಲಿರುತ್ತಿದ್ದಳು. ಎಚ್ಚೆತ್ತು ಸುಧಾರಿಸಿಕೊಳ್ಳಬೇಕು ಎಂದು ಅನ್ನುತ್ತಿದ್ದಂತೆ ಮತ್ತೆ "ಡೋಸ್" ಬೇಕೆನಿಸುತ್ತಿತ್ತು. ಅದಿರದಿದ್ದರೆ ಜೀವವೇ ಹೋಗುತ್ತದೆ ಎಂಬ ಭಯವಾಗಿ ಡೋಜ್‌ಗೆ ಶರಣಾಗುತ್ತಿದ್ದಳು. ಮತ್ತೆ ಮತ್ತೆ ಅದೇ ಸ್ಥಿತಿ. ತಾನು ಮೈಮರೆತಾಗ ತಾನು ಯಾವ ಸ್ಥಿತಿಯಲ್ಲಿರುತ್ತೇನೆ. ಏನು ಮಾಡುತ್ತೇನೆ

ಎಂಬುದು ಅವಳಿಗೆ ತಿಳಿದಿದ್ದು ಒಂದು ಬಾರಿ ಅವಳಿಗೆ ಒಂದೆರಡು ಕ್ಯಾಸೆಟ್ ತೋರಿಸಿದಾಗಲೇ ಅದನ್ನು ನೋಡಲಾಗದೇಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡಳು "ಲಾವಣ್ಯ ಇಂಥ ಕ್ಯಾಸೆಟ್‌ಗಳು ಬರೆ ಐದಾರು ಇವೆ. ನೀನೇನಾದರೂ ನನಗೆ ಕೈ ಕೊಡಲು ಯತ್ನಿಸಿದರೆ ಇವೆಲ್ಲ ಮಾರ್ಕೆಟಿಗೆ ಬರುತ್ತವೆ. ಒಂದೆರಡು ಅರಬದಲ್ಲಿರುವ ನಿನ್ನ ತಂದೆಯವರಿಗೂ ತಲಪುತ್ತವೆ ಹುಷಾರ್" ಎಂದು ಇಮ್ರಾನ್ ಗದರಿದ ಮೇಲಂತೂ ಆಕೆ ಭೂಮಿಗಿಳಿದುಹೋದಳು.

ಅಂದಿನಿಂದ ಆರಂಭವಾಯಿತು ಅವಳ ಹೊಸ ದಿನ.

ಇಮ್ರಾನ್ ಹೇಳಿದಂತೆ ಕೇಳುವದು. ಆತ ನೀಡಿದ ಪ್ಯಾಕೆಟ್‌ಗಳನ್ನು ಆತ ಹೇಳಿದ ವಿಳಾಸಕ್ಕೆ ತಲುಪಿಸುವದು. ಅವರ ಕೆಲಸವಾಯಿತು. ಅದಕ್ಕೆ ಬದಲಾಗಿ ಅವಳಿಗೆ ಕೇಳಿದಷ್ಟು ಸ್ಮ್ಯಾಕ್ ಸಿಗುತ್ತಿತ್ತು. ಅವನ ಕೈಗೊಂಬೆ ಯಾಗಿ ಆಕೆ ಜೀವಂತ ಶವದ ಸರಳ ಜೀವನ ಸಾಗಿಸುತ್ತಿದ್ದಳು.

ಎರಡು ಗಂಟೆಗಳ ಹಿಂದೆ ಆಕೆಗೆ ಚಟ ಜೋರಾಯಿತು.

ಮೈನರಗಳು ಬಿಗಿದು ಉಸಿರು ಕಟ್ಟಿದಂತಾಯಿತು. ಕಣ್ಣುಗಳು ಭಗ ಭಗ ಉರಿಯಲಾರಂಭಿಸಿದವು. ಉರಿ ತಾಳಲಾಗದೇ ಕಣ್ಣು ಮೂಗುಗಳಿಂದ ನೀರು ಸೋರಲಾರಂಭಿಸಿತು. ಆಕೆ ಸ್ಮ್ಯಾಕ್‌ಗಳು ಹುಡಕಾಡಿದಳು....ಅಷ್ಟೇ. ಗೊತ್ತಿರುವ ಜಾಗದಲ್ಲಿಟ್ಟಿದ್ದ ಎರಡು ಮೂರು ಚಿಕ್ಕ ಪೊಟ್ಟಣಗಳು ಎಲ್ಲೋ ಮಾಯವಾಗಿದ್ದವು. ಅವೆಲ್ಲಿ ಹೋದವು ಎಂಬುದು ತಿಳಿಯದೇ ಆಕೆ ಚಡಪಡಿಸಿದಳು....ವಿಲಿವಿಲಿ ಒದ್ದಾಡಿದಳು.

ಸಾವು ಹತ್ತಿರವಾದಾಗ.

ಕೋಲ್ಡ್ ಟರ್ಕಿ ನೋಡಿದಾಗ ಬದುಕಬೇಕೆಂಬ ಆಶೆ ಜಾಗೃತವಾಗಿ ಇಮ್ರಾನನ್ನು ಹುಡುಕಿಕೊಂಡು ಓಡಿದಳು. ಅವನಿಂದ ಸಿಕ್ಕಿದ್ದು ಒಂದೇ ಒಂದು ಸ್ಮ್ಯಾಕ್....ಮತ್ತೆ ಸಿಗಬೇಕೆಂದರೆ ಆತ ಹೇಳಿದ ಕೆಲಸಮಾಡಬೇಕು ಪಾಂಡುರಂಗನನ್ನು ಹುಡುಕಿ ಖಲಾಸ್ ಮಾಡಬೇಕು ಅದಕ್ಕೂ ಆಕೆ ಸಿದ್ಧಳಾಗಿ ಬಂದ್ದಿದಳು.

ನರ್ಸ್ ವೇಷದಲ್ಲಿ.

ಸ್ಮ್ಯಾಕ್‌ಸಿಕ್ಕಿದ್ದರಿಂದ ದೇಹದಲ್ಲಿ ಚೈತನ್ಯ ಮೂಡಿತ್ತು. ಅದಕ್ಕಿಂತ ಹೆಚ್ಚಾಗಿ ಆಕೆ....ಇಮ್ರಾನ್‌ಗೆ ತಿಳಿಯದಂತೆ ಅವನ ಕಣ್ಣು ತಪ್ಪಿಸಿ ಹಾರಿಸಿದ

ಒಂದು ಚಿಕ್ಕ ಪುಟಿಕೆ.. ಬ್ರೌನ್‌ಶುಗರ್‌ನ ಚಿಕ್ಕ ಪುಟಿಕೆ. ಪಾಂಡುರಂಗನ ಇತಿಶ್ರೀ ಮಾಡಿದ ಮೇಲೆ ದೂರ ಎಲ್ಲಾದರೂ ಕುಳಿತು ಹಾಯಾಗಿ ಅದನ್ನು ಸೇವಿಸುವ ಉತ್ಕಟ ಬಯಕೆಯಾಯಿತು. ಆಕೆಯ ದೇಹದಲ್ಲಿ ಸ್ಫೂರ್ತಿ ಮೂಡಿತ್ತು. ಕಣ್ಣುಗಳಿಂದ ಹರಿಯುವ ನೀರು ನಿಂತಿತ್ತು. ಕಣ್ಣುಗಳ ಉರಿತ ಕಡಿಮೆಯಾಗಿತ್ತು. ಆಕೆ ಲವಲವಿಕೆಯಿಂದ ಆಸ್ಪತ್ರೆ ಪ್ರವೇಶಿಸಿದಳು. ಆಸ್ಪತ್ರೆಯೆಂದರೆ.. ನಾಲ್ಕು ಮಹಡಿಗಳ ಭವ್ಯ ಇಮಾರತು ಲಿಫ್ಟ್ ಸೌಕರ್ಯವಿದ್ದುದರಿಂದ ಅಷ್ಟು ದೊಡ್ಡ ಆಸ್ಪತ್ರೆಯಲ್ಲಿ ಹೇಗಾದರೂ ಮಾಡಿ ಪಾಂಡುರಂಗನನ್ನು ಹುಡುಕಬೇಕು ಎಂದು ನಿರ್ಧರಿಸಿದ ಲಾವಣ್ಯ ಲಿಫ್ಟ್ ಪ್ರವೇಶಿಸಿದಳು. ಅವಳ ಹಿಂದೆಯೇ ಧಡಧಡ ಬಂದ ಕಾನ್‌ಸ್ಟೇಬಲ್ ಅವಳ ಜೊತೆಗೇ ನಿಂತುಕೊಂಡಾಗ ಭಯದಿಂದ ಉಸಿರುಸಿಕ್ಕಂತಾಯಿತು. ಅವಳನ್ನು ಅಪಾದಮಸ್ತಕ ನೋಡಿ ಅವಳ ಸೌಂದರ್ಯ ಕಣ್ಣುಗಳಿಂದಲೇ ಕುಡಿದ ಕಾನ್‌ಸ್ಟೇಬಲ್. ಆಕೆ ಮುಖ ಮೇಲೆತ್ತಿ ನೋಡುವುದಕ್ಕೆ ಒಮ್ಮೆ ಅಸಹ್ಯವಾಗಿ ನಕ್ಕ. ಅವಳ ಮೈಗೆ ಕೊಳ್ಳಿಯಿಟ್ಟಂತಾಯಿತು. ಮರುಕ್ಷಣ ಸುಧಾರಿಸಿ ಕೊಂಡು ಮುಗುಳ್ನಕ್ಕಳು. ಅವನಿಗೆ ಸ್ವರ್ಗ ಒಂದೇ ಗೇಣು ಉಳಿದಂತಾಯಿತು.

"ಮೂರನೇ ಮಹಡಿ ಸ್ಪೇಶಲ್ ರೂಮು ಇಪ್ಪತ್ತೇಳರಲ್ಲಿ ಇರುತ್ತೇನೆ" ಎಂದು ಸಂಕ್ಷಿಪ್ತವಾಗಿ ಅವರಿಗೆ ಆಹ್ವಾನ ನೀಡಿದ ಆತ. ಗೋಣು ಆಡಿಸಿದ ಆಕೆ ಎರಡನೇ ಮಹಡಿಗೆ ಬರುತ್ತಿದ್ದಂತೆ ಲಿಫ್ಟಿನಿಂದ ಹೊರಬಂದಳು. ಅಲ್ಲಿಂದ ಆರಂಭವಾಯಿತು ಅನ್ವೇಷಣೆ. ಎರಡು ಮೂರು ಬಾರಿ ನಾಲ್ಕು ಮಹಡಿ ಹತ್ತಿ ಇಳಿದಿದ್ದಾಯಿತು. ಪಾಂಡುರಂಗ ಎಲ್ಲಿ ಎಂದು ತಿಳಿಯದಿದ್ದರೂ ಒಂದು ವಿಷಯವಂತೂ ಚೆನ್ನಾಗಿ ತಿಳಿಯಿತು. ಆಸ್ಪತ್ರೆಯಲ್ಲೆಲ್ಲ ಭದ್ರವಾದ ಪೊಲೀಸ್ ಪಹರೆಯಿದೆ....ಹತ್ತು ಹನ್ನೆರಡು ರೂಮುಗಳ ಮುಂದೆಯಂತೂ ನಾಲ್ಕು ನಾಲ್ಕು ಜನ ಪಿಸಿಗಳು ಅಂದರೆ ಇದರರ್ಥ ಎಲ್ಲೋ ಒಂದೆಡೆ ಪಾಂಡುರಂಗ ಇರಲೇಬೇಕು ಅವನಿಗಾಗಿ ಭದ್ರ ವ್ಯವಸ್ಥೆ....

ಸಮಸ್ಯೆ ಎದುರಾದದ್ದು....ಆ ಎಂಟು ಹತ್ತು ರೂಮುಗಳಲ್ಲಿ ಯಾವ ರೂಮಿನಲ್ಲಿ ಆತ ಇರಬಹುದು ಎಂದು ತಿಳಿಯದಿದ್ದಾಗ....ಇದರಲ್ಲೇ ಒಂದು ಒಂದೂವರೆ ಗಂಟೆ ಕಳೆದುಹೋಯಿತು. ಉಳಿದದ್ದು ತುಸುವೇ ಸಮಯ

ಅಷ್ಟರಲ್ಲಿ ಕೆಲಸ ಪೂರ್ತಿಮಾಡಬೇಕು. ಆಗದಿದ್ದ ಪಕ್ಷದಲ್ಲಿ ...ಪರಿಣಾಮ ನೆನಪಾದಾಗ ಗಡಗಡ ನಡುಗಿದಳು ಆಕೆ.

ತಲೆಸುತ್ತಿಬಂದಂತಾಯಿತು.

ಸ್ವಾಗತಕಾರಳ ಪಕ್ಕದಲ್ಲಿ ಹತ್ತಾರು ಕುರ್ಚಿಗಳು. ಪಕ್ಕದಲ್ಲಿ ಬೆಂಚು, ಸ್ಟೂಲ್ ಆಸ್ಪತ್ರೆ ಸಿಬ್ಬಂದಿಗಾಗಿ. ಒಂದು ಸ್ಟೂಲ ಮೇಲೆ ಆಕೆ ಕೂತುಕೊಂಡು ಸುಧಾರಿಸಿಕೊಳ್ಳ ತೊಡಗಿದರು.

"ಸಿಸ್ಟರ್... ಸಿಸ್ಟರ್....ಕರೆಬಂತು. ಆಕೆ ತಲೆಎತ್ತಿ ನೋಡಿದರು.

"ಧಡ್" ಎಂದಿತು ಪುಟ್ಟ ಹೃದಯ.

ಎದುರಿಗೆ ಇಮ್ರಾನ್ ನಿಂತಿದ್ದ....ಯುವಕ ಡಾಕ್ಟರ್ ವೇಷದಲ್ಲಿ. ಆತ ಮೆಟಡೋರಿನಲ್ಲಿ ಹೋದ ಎಂದುಕೊಂಡಿದ್ದಳು. ಆದರೆ....

"ಸಿಸ್ಟರ್ ನನ್ನ ಬ್ರದರ್ ಸಿಕ್ಕನಾ ?" ಮೆಲುವಾಗಿ ಕೇಳಿದ ಆತ.

"ಇಲ್ಲ"

"ಅಂದರೆ ಈಗಲೇ ಹುಡುಕಲೇ ಬೇಕು.

"ನಾನು ಒಂದು ಗಳಿಗೆ ಸಹ ಕುಳಿತಿಲ್ಲ, ಹುಡುಕುತ್ತಲೇ ಇದ್ದೇನೆ.

"ನನಗೆ ಗೊತ್ತು"

"ಹಾಂ ?"

"ಹಾಂ. ನಾನು ನಿನ್ನ ಹಿಂದೆಯೇ ಇದ್ದೇನೆ. ನಿನ್ನಲ್ಲಿ ಗತಿವಿಧಿಗಳನ್ನು ನಾನು ನಿರೀಕ್ಷಿಸಿದ್ದೇನೆ....ಏನಾದರೂ ದಾರಿ ಹುಡುಕು....ಸಮಯವಿಲ್ಲ.

"ಎಲ್ಲಾಗೊತ್ತಿದ್ದೂ ನನ್ನ ಹೆದರಿಸಿದರೆ ಹೇಗೆ ?

"ಹೆದರಿಸುತ್ತಿಲ್ಲ....ನೆನಪು ಮಾಡಿಕೊಡುತ್ತಿದ್ದೇನೆ. ಹಾಂ ಒಂದು ಕೆಲಸ ಮಾಡು ನೀನು ಲಿಫ್ಟ್‌ನಲ್ಲಿದ್ದಾಗ ನಿನ್ನೊಂದಿಗೆ ಬಂದನಲ್ಲ ಆ ಕಾನ್‌ಸ್ಟೇಬಲ್....

"ಅದು ನಿನಗೆ ಗೊತ್ತೇ ?"

"ಹಾಂ. ನಾನು ತುಸುದೂರದಲ್ಲಿದ್ದೆ....ಆತ ಎಲ್ಲಿದ್ದಾನೆ ?

"ಮೂರನೇ ಮಹಡಿ....ಸ್ಪೇಷಲ್ ರೂಮು ಇಪ್ಪತ್ತೇಳರಲ್ಲಿ.

"ಗುಡ್ ಅವನನ್ನು ಬುಟ್ಟಿಗೆ ಹಾಕಿಕೊ–ಬಾಯಿ ಬಿಡಿಸು ಕೆಲಸ ಸರಳ ವಾಗುತ್ತದೆ."

ಕಡ್ಡಿ ಮುರಿದಂತೆ ಮಾತನಾಡಿ ಅಲ್ಲಿಂದ ಸರಿದು ಮಾಯವಾದ ಇಮ್ರಾನ್.

ಆಶಾಕಿರಣವೊಂದು ಮೂಡಿದಂತಾಯಿತು.

ಚಟಕ್‌ನೆ ಮೇಲೆದ್ದ ಆಕೆ ಲಿಫ್ಟಿನತ್ತ ನಡೆದಳು.

ಇಪ್ಪತ್ತೇಳನೇ ರೂಮಿನ ಬಳಿ ಬಂದಾಗ ನಿರಾಶೆ ಕಾದಿತ್ತು. ಅಲ್ಲಿ ಡ್ಯುಟಿ ಮೇಲೆ ಇದ್ದ ಕಾನ್‌ಸ್ಟೇಬಲ್ ಬೇರೆಯಾಗಿದ್ದ. ಕೈಯಲ್ಲಿ ಟ್ರೇ ಹಿಡಿದು ಕೊಂಡು ಅವನ ಮುಂದೇ ಹಾಯ್ದು ಉದ್ದಕ್ಕೂ ಕಾರಿಡಾರಿನಲ್ಲಿ ನಡೆದು ಹೋದಳು ಲಾವಣ್ಯ.... ಅವಳ ಬೂಟಿನ ಸದ್ದಿಗೆ ಮುಖಪತ್ರಿ ನೋಡಿದ ಆತ ತುಸು ಗಲಿಬಿಲಿಗೊಂಡ. ಆ ನರ್ಸ್ ತನ್ನ ರೂಮಿಗೆ ಬರಬಾರದೇ ಎಂದು ಕೊಂಡು ಕಲ್ಪನೆಯಲ್ಲಿ ತೇಲಿ ಸುಖ ಕಂಡ.... ಆಕೆ ಹಾಯ್ದು ಹೋಗುತ್ತಲು ತೆಳುವಾದ ನಡು, ಬಳಕುವ ನಿತಂಬ ಕಂಡು ಕೈಕೈ ಹಿಸುಕಿಕೊಂಡ ಆಹಾ ಎಂಥ ಸುಂದರವಾದ ಹಕ್ಕಿ, ಇದು ಆಸ್ಪತ್ರೆಯಾಗಿರದೇ ಬೇರೆ ಜಾಗವಾಗಿದ್ದರೆ ?... ಎಂದು ಊಹಿಸಿ ಆನಂದಿತನಾದ. ಐದಾರು ನಿಮಿಷಗಳ ನಂತರ ಲಾವಣ್ಯ ಪುನಃ ಅವನೆದುರೇ ಹಾಯ್ದುಹೋದಳು. ಈ ಬಾರಿಯು ಮೊದಲಿನ ಕಾನ್‌ಸ್ಟೇಬಲ್ ದರ್ಶನವಾಗಲಿಲ್ಲ

ಲಾವಣ್ಯ ಮರೆಯಾದ ಕ್ಷಣವೇ ರೂಮಿನೊಳಗಿದ್ದ ಕಾನ್‌ಸ್ಟೇಬಲ್ ಹೊರಗೆ ಬಂದ. ಈಗ ಒಳಗೆ ಹೋಗುವ ಸರದಿ ಹೊರಗಿನವರದು. ಆದರೆ ಆವನಿಗೆ ಮನಸಿಲ್ಲ.... ಆ ಸುಂದರ ಹಕ್ಕಿಗಾಗಿ ಆತ ಕಾಯ್ದು ಕುಳಿತಿದ್ದ.

"ಏಯ್ ಒನ್‌ಸೆವೆಂಟಿ ನೀನು ಒಳಗೆ ಹೋಗು"

ಹೊರಗೆ ಬಂದಾತ ಹೇಳಿದ. ಅವನೆಡೆ ನೋಡಿ ನಕ್ಕ ಒನ್‌ಸೆವೆಂಟಿ.

"ತುಸು ಇರು. ಇದೀಗ ಒಂದು ಹಕ್ಕಿ ಬರುತ್ತದೆ. ನೋಡುವಿಯಂತೆ" ಎಂದ. ಈಗ ಬೆಪ್ಪಾದ ಒಳಗಿನಿಂದ ಹೊರಬಂದಾತ.

ಇಬ್ಬರ ಕಣ್ಣುಗಳೂ ಕಾರಿಡಾರ್ ತುದಿಯಲ್ಲಿ ಅಂಟಿದವು.

ಬಹಳ ಹೊತ್ತು ಕಾಯಬೇಕಾಗಲಿಲ್ಲ....

ಎರಡೇ ನಿಮಿಷ.

ಬಳಕುತ್ತ ಬಂದಳು ಒಯ್ಯಾರಿ.. ಲಾವಣ್ಯ.

ಹಾಯ್....ಹಾಯ್ ಎಂದು ಕೈಕೈ ತಿಕ್ಕಿಕೊಂಡ ಒನ್‌ಸೆವೆಂಟಿ,

"ಅರೆ. ಇವಳು....ಇವಳು ನನಗೆ ಗೊತ್ತು" ಎಂದ ಹೊರಬಂದವನು.

"ಏನೆಂದೆ ? ನಿನಗೆ ಗೊತ್ತಾ ?" ಒರಟಾಗಿ ಕೇಳಿದ.

"ಹೂಂ" ಹೆಮ್ಮೆಯಿಂದ ಬೀಗಿ ಆಕೆ ಹತ್ತಿರ ಬರುತ್ತಲೇ ಹಾಯ್ ಎಂದ....ಲಾವಣ್ಯಳಿಗೂ ಅದೇ ಬೇಕಾಗಿತ್ತು.

"ಅರೆ-ನೀವು ?" ಹಕ್ಕಿಯಂತೆ ಉಲಿದಳಾಕೆ.

"ಹಾಂ. ನಾನೇ ಕಾನ್‌ಸ್ಟೇಬಲ್ ಶಿವರಾಜ್....ಈತ ನನ್ನ ಸ್ನೇಹಿತ ಚಂದ್ರು...."ಲಾವಣ್ಯ ಇಬ್ಬರೆಡೆ ನೋಡಿ ಮೋಹಕವಾಗಿ ನಕ್ಕಳು.

"ನನ್ನ ಡ್ಯೂಟಿ ಇಲ್ಲೇ ಇದೆ....ಒಂದು ಮುದಿಪೇಷಂಟು. ನನಗಂತೂ ಜೀವ ಬೇಸರವಾಗಿದೆ. ಒಂದು ಗುಟುಕು ಚಹಕುಡಿಯಬೇಕೆಂದರೇ ಈ ಮುದಿಗೊಡ್ಡು ಬಿಡುವಂತಿಲ್ಲ".

"ಹೌದಾ"

"ಹಾಂ. ಅರೆ ನಿಂತೇಬಿಟ್ಟೆನಲ್ಲ....ನನ್ನ ಬಾಸ್ ನೋಡಿದರೆ....

ಹೆದರಿದಂತೆ ನಟಿಸಿ ಆಕೆ ಹೊರಡುವಂತೆ ತೋರಿಸಿದಳು.

"ಅಷ್ಟೇಕೆ ಹೆದರಿಕೆ. ಒಳಗೆ ಬನ್ನಿ....ಫ್ಲಾಸ್ಕಿನಲ್ಲಿ ಕಾಫಿ ಇದೆ" ಶಿವರಾಜ್ ಅವಳಿಗೆ ಆಹ್ವಾನ ನೀಡಿದ.

"ಹೌದಾ....ಗುಡ್....ಆದರೆ"

"ಆದರೇನಾಯಿತು ?

"ನಿಮ್ಮ ಪೇಷಂಟು ?"

"ನಿಮ್ಮಂತೇ ನಮ್ಮದು' ಅಂತರವಿಷ್ಟೇ.... ಇಲ್ಲಿ ಮುದುಕಿ. ಎರಡು ದಿನಗಳಿಂದ ಎಚ್ಚರವಿಲ್ಲ. ನಮ್ಮ ಸಾಹೇಬರ ಬಳಗದವರಂತೆ ಯಾರೋ ವಿಷಹಾಕಿ ಕೊಲೆ ಮಾಡಲು ಯತ್ನಿಸಿದ್ದರು"

"ಅಯ್ಯೋ ಪಾಪ".

"ಬನ್ನಿ ಒಳಗೆ"

ಅತ್ತಿತ್ತ ನೋಡುತ್ತ ಲಾವಣ್ಯ ಒಳಗೆ ಬಂದಳು.

ಇಬ್ಬರೂ ಹಿಂಬಾಲಿಸಿ ಬಾಗಿಲು ಮುಚ್ಚಿದರು.

ಒಮ್ಮೆಲೆ ಕತ್ತಲೆಯಾದಂತೆ ಆಗಿ ಲಾವಣ್ಯ ಹೆದರಿದವಳಂತೆ ಅಪ್ಪಯ್ಯ ಎಷ್ಟು ಕತ್ತಲಿದೆಯಲ್ಲ" ಎಂದು ಉಸಿರಿ ಇಬ್ಬರಿಗೂ ಡೀ ಕೊಟ್ಟಳು. ಅವಳ

ದೇಹದ ಉಬ್ಬುತಗ್ಗುಗಳ ಸ್ಪರ್ಷ ಅವರಿಗಾಗಿ ಸೇಂದಿ ಕುಡಿದ ಮಂಗನಂತಾದರು ಅವರು.

"ಸಾರಿ ಸಾರಿ....ನಾನು ಏನೇನೋ ಮಾಡಿದೆ.

"ನೀವು ಮಾಡಿದರೇನಾಯಿತು ಬಿಡಿ....ನಾನು ಮಾಡಿಲ್ಲವಲ್ಲ" ಧೈರ್ಯ ತಂದುಕೊಂಡು ಶಿವರಾಜ್ ಮನದ ಆಶೆ ಹೊರಹಾಕಿದ. "ಆಂ ?.... ಏನೇದಿರಿ ?....ಹಾಂ. ನೀವೂ ತುಂಟರಿದ್ದೀರಿ" ಆಕೆ ಹುಸಿಕೋಪ ತೋರಿಸಿ ದಾಗ ಅವರಿಬ್ಬರೂ ಅಸಹ್ಯವಾಗಿ ನಕ್ಕರು.

ಶಿವರಾಜ್ ಫ್ಲಾಸ್ಕಿನಿಂದ ಕಾಫಿ ತೆಗೆದುಕೊಟ್ಟ.

ಅವರಿಗೆ ಒತ್ತಿಕೊಂಡೇ ನಿಂತು ಆಕೆ ಕಾಫಿಕುಡಿದಳು.

ಬೇಕೆಂತಲೇ ಅವರಿಬ್ಬರೂ ಅವರ ದೇಹಕ್ಕೆ ತಮ್ಮ ದೇಹ ತಾಗಿಸಿ ವಿಚಿತ್ರ ಆನಂದ ಅನುಭವಿಸಿದರು.

"ಆಹಾಹಾ....ಈಗ ಸಮಾಧಾನವಾಯಿತು. ಈ ರುಚಿಯಾದ ಕಾಫಿ ಕುಡಿಸಿದ್ದಕ್ಕೆ ನೀವು ಕೇಳಿದ್ದನ್ನು ಕೊಡಬೇಕೆಂಬ ಇಚ್ಛೆಯಾಗಿದೆ ನನಗೆ" ಅವರಿಬ್ಬರೂ ಅವಳೆಡೆ ನೋಡಿದರು. ಅವರ ಕಣ್ಣುಗಳು ಆನಂದದಿಂದ ಮಿನುಗತೊಡಗಿದವು.

## 8

ಫ್ರೆಂಚ್ ಕಟ್, ದಾಡಿ, ಮೀಸೆ ಧರಿಸಿದ ನಾಸಿಪುಡಿ ಕಲರಿನ ಸೂಟು ಧಾರಿ ವ್ಯಕ್ತಿ ಟ್ಯಾಕ್ಸಿಯಿಂದಿಳಿದು ಕೈಗೆ ನೂರರ ನೋಟುಗಳನ್ನು ತುರುಕಿ, ಚೇಂಜ್ ನೀನೇ ಇಟ್ಟುಕೊ ಅಂದಾಗ ಡ್ರೈವರ್‌ಗೆ ಆದ ಆನಂದ ಅಷ್ಟಿಷ್ಟಲ್ಲ. ಆದರೆ ಆ ಆನಂದ ಬಹಳ ಸಮಯ ಉಳಿಯಲಿಲ್ಲ....ಒಮ್ಮೆಲೆ ಆತ ಬೆಚ್ಚಿಬಿದ್ದ.

ಆರೆ! ಈ ವ್ಯಕ್ತಿ ಟ್ಯಾಕ್ಸಿಯಲ್ಲಿ ಯಾವಾಗ ಕುಳಿತ ?

ಟ್ಯಾಕ್ಸಿಯಲ್ಲಿ ಕುಳಿತ ವ್ಯಕ್ತಿಯೇ ಬೇರೆ, ಇಳಿದವರೇ ಬೇರೆ....

ಮೊದಲು ಕುಳಿತ ವ್ಯಕ್ತಿ ಎಲ್ಲಿ ಹೋಯಿತು ?

ಡ್ರೈವರ್ ಯೋಚಿಸಿ ಯೋಚಿಸಿ ಕಂಗಾಲಾದ. ಉತ್ತರ ಮಾತ್ರ ಹೊಳೆಯಲಿಲ್ಲ. ಕೈತುಂಬ ಸಿಕ್ಕ ಹಣ ನೋಡಿ ಮಿಕ್ಕಿದ್ದೆಲ್ಲ ಮರೆತು ಟ್ಯಾಕ್ಸಿ ಮುನ್ನಡೆಸಿದ.

ರಾತ್ರಿ ಹನ್ನೊಂದು ಆಗುತ್ತಿದ್ದಂತೆ ಕ್ಲಬ್‌ಗೆ ರಂಗೇರತೊಡಗಿತು. ಜೋಡಿ ಜೋಡಿಯಾಗಿ ಬಂದವರು ತಮಗಾಗಿ ಕಾಯ್ದಿರಿಸಿದ್ದ ಮೇಜಿನ ಬಳಿ ಆಸೀನರಾಗತೊಡಗಿದರು. ಅವಿನಾಶ ಒಬ್ಬನೇ ತುಸು ದೂರ ಮೂಲೆಯೊಂದ ರಲ್ಲಿ ಕುಳಿತು ನಿಧಾರವಾಗಿ ಸ್ಕಾಚ್ ಹೀರತೊಡಗಿದ್ದ. ಆತ ಸುಲಭವಾಗಿ ಉಳಿದವರ ಕಣ್ಣಿಗೆ ಬೀಳದಿದ್ದರೂ ಅವನ ಕಣ್ಣಿನಿಂದ ಮಾತ್ರ ಯಾರೂ. ಪಾರಾಗುವಂತಿರಲಿಲ್ಲ. ಅಂಥ ಸ್ಥಳವನ್ನೇ ಆತ ಆಯ್ದುಕೊಂಡು ಕುಳಿತಿದ್ದ. ಒಂಟಿಯಾಗಿಕುಳಿತಿದ್ದ ಆವನನ್ನು ಗಮನಿಸಿದಒಂದಿಬ್ಬರು"ಮಾಡರ್ನ್‌ಲಲನೆಯರು" ಅವನತ್ತ ತಮ್ಮ ಕುಡಿನೋಟ ಹಾರಿಸಿದ್ದರು. ಒಬ್ಬಳಂತೂ ತನ್ನ ತುಂಬಿನಿಂತ ಸ್ತನಗಳನ್ನು ಅಶ್ಲೀಲವಾಗಿ ಪ್ರದರ್ಶಿಸಿ ಹಲ್ಲುಕಿರಿದಿದ್ದಳು. ಮೊದಮೊದಲು ತನಗೆ ಯಾವ ಪಾರ್ಟನರ್ ಬೇಡ ಎಂದು ತೀರ್ಮಾನಿಸಿದ್ದ ಅವಿನಾಶ ಕೊನೆಗೆ ಒಂಟಿಯಾಗಿದ್ದರೆ ಸಂಶಯಕ್ಕೆ ಆಸ್ಪದವಾಗುತ್ತದೆ ಎಂದು ತರ್ಕಿಸಿ. ನೆಪಕ್ಕೆ ಮಾತ್ರ ಬಟ್ಟೆ ದರಿಸಿದ್ದ ತುಂಬಿದೆದೆಯ ಲಲನೆಯನ್ನು ಕಣ್ಸನ್ನೆಯಿಂದ ಹತ್ತಿರ ಕರೆದ. ಕುಚಗಳನ್ನು ಕುಣಿಸುತ್ತಲೇ ಬಂದು ಅವನೆದುರಿನ ಕುರ್ಚಿಯಲ್ಲಿ ಆಕೆ ಕುಳಿತು "ಹಾಯ್.... ನನ್ನ ಹೆಸರು "ರೀನಾ" ಎಂದಳು. ಅವಿನಾಶ ಸಹ ಔಪಚಾರಿಕವಾಗಿ "ಹಾಯ್" ಎಂದು ಕೈಕುಲುಕುತ್ತ "ನಾನು ಕ್ಯಾಪ್ಟನ್ ಜಠಾರ" ಎಂದ. ವೇಟರ್ ಬಂದು ನಿಲ್ಲುತ್ತಲು ಇಬ್ಬರಿಗೂ ವಿಸ್ಕಿ ಆರ್ಡರ್ ಮಾಡಿದ ಅವಿನಾಶ್.... ವಿಸ್ಕಿ ಸಿಪ್ ಮಾಡುತ್ತ ರೀನಾ ಅಂಗಚೇಷ್ಟೆ ಆರಂಭಿಸಿದಳು. ಕಾಲಿಗೆ ಕಾಲು ತಾಗಿದವು. ಕಾಲಿನ ಬೆರಳುಗಳಿಂದ ಆಕೆ ಅವಿನಾಶನ ಕಾಲುಗ ಳನ್ನು ಕೆರೆದಳು. ಅತ್ತಿತ್ತ ಬೇಕೆಂತಲೇ ಸಿಗರೇಟಿಗೆ ಅಗ್ನಿ ಸ್ಪರ್ಶ ಮಾಡುವ ನೆಪದಲ್ಲಿ ಕೆನ್ನೆಗೆ ತನ್ನ ಕೆನ್ನೆ ತಿಕ್ಕಿದಳು.... ಇವನ್ನೆಲ್ಲ ಅವಿನಾಶ ತೆಪ್ಪಗೆ ಸಹಿಸಿ ಕೊಂಡ. ಸಹಿಸಿಕೊಳ್ಳಲೇಬೇಕಾಗಿತ್ತು. ಬೇರೆ ದಾರಿ ಇರಲಿಲ್ಲ....

ಸ್ವಲ್ಪ ಸಮಯ ಬಿಟ್ಟು "ರೀನಾ ಭಾರೀ ಗಡಸು ಕಂಠದಲ್ಲಿ ಅವಿನಾಶನಿಗೆ ನಿರ್ಭಿಡೆಯಿಂದ ಕರೆ ನೀಡಿದಳು.

**"ಡಾರ್ಲಿಂಗ್.... ನನ್ನ ಮೈಮೇಲೆ ಜೇಳು ಹರಿದಾಡುತ್ತಿವೆ.... ಏಳಿ"**

"ಎಲ್ಲಿಗೆ ?"

"ಇದೇ ಕ್ಲಬ್ಬಿನ ಹದಿನಾರನೇ ನಂಬರ್ ರೂಮು ಬುಕ್ ಮಾಡಿದ್ದೇನೆ"

"ತುಸು ಇರು.... ನಾನು ನನ್ನ ಸ್ನೇಹಿತನಿಗಾಗಿ ಕಾಯುತ್ತಿದ್ದೇನೆ...."

"ಓಹ್ ನೋ.... ನನಗೆ ಇಬ್ಬರ ಹವ್ಯಾಸವಿಲ್ಲ"

"ಶಟಪ್.... ನಾನು ಅಂಥವನಲ್ಲ.... ತೆಪ್ಪಗೆ ಕುಳಿತುಕೋ ಅಥವಾ ಗೆಟ್ ಔಟ್"

ಅವಿನಾಶ ಮೆಲ್ಲಗೆ ಗುಡುಗಿದಾಗ ಆಕೆ ಮೆತ್ತಗಾದಳು.

ಕೈಗೆ ಸಿಕ್ಕ ಗಿರಾಕಿ ಎಲ್ಲಿ ಕಳೆದುಹೋಗುತ್ತ್ತೋ ಎಂಬ ಭಯದಿಂದ ...

"ಕೋಪವೇಕೆ ಡಾರ್ಲಿಂಗ್.... ನಾನು ಅಂಥವಳಲ್ಲ ಎಂದೆ"

"ನನ್ನ ಮುಂದೆ ನಖರ ಬೇಡ. ನಿಮ್ಮ ಅಡ್ಡಬೇರು ಉದ್ದಬೇರು ಎಲ್ಲಾ ಗೊತ್ತು"

"ಆಂ ?"

"ಹೌದು.... ನಾನು ಪೊಲೀಸ್ ಆಫೀಸರ್"

ಎದೆಯ ಮೇಲೆ ಗುದ್ದಿದಂತಾಯಿತು ಅವಳಿಗೆ.... ಒಳ್ಳೆ ಬಕರಾ ಸಿಕ್ಕಿದೆ ಹಣ ಕೀಳಬಹುದು ಎಂದು ಕನಸು ಕಂಡ ಆಕೆಗೆ 'ಪೊಲೀಸ್ ಆಫೀಸರ್' ಎಂಬ ಶಬ್ದ ಅವಳನ್ನು ಪಾತಾಳಕ್ಕೆ ತಳ್ಳಿತು.

ನಾಯಿ ಮರಿಯಂತೆ ಕುಂಯಗುಡುತ್ತ ಮೇಲೇಳಲು ಯತ್ನಿಸಿದಳು.

"ಡೋಂಟ್ ಟ್ರ್ರಾಯ್.... ಸಿಟ್ ಹಿಯರ್ ಓನ್ಲಿ.... ಅವಿನಾಶ ಗುಡುಗಿದ"

"ನಿನಗೆಷ್ಟು ಬೇಕೋ ಅಷ್ಟು ಹಣ ಕೊಡುತ್ತೇನೆ"

ರೀನಾಳಿಗೆ ನಂಬಿಕೆ ಆಗಲೇ ಇಲ್ಲ.

ಕೈಗೆ ಸಿಕ್ಕ ಹೆಣ್ಣುಗಳನ್ನು ಕಬ್ಬಿನ ಸಿಪ್ಪೆಯಂತೆ ಜಾಲಾಡಿಸಿ ಎದ್ದು ಹೋಗುವ ಪೊಲೀಸ್ ಅಧಿಕಾರಿಗಳನ್ನು ಹಲವಾರು ಕಂಡಿದ್ದಳಾಕೆ. ಆದರೆ ಇಲ್ಲಿ ಅವನೇ ತಾನಾಗಿ ಹಣ ಕೊಡುತ್ತೇನೆ ಅನ್ನುತ್ತಿದ್ದಾನಲ್ಲ.

ನಂಬಿಕೆಯಾಗದಿದ್ದರೂ ವಿಧಿಯಿಲ್ಲದೇ ಕುಳಿತುಕೊಂಡಳು.

ಮತ್ತೆ ಅರ್ಧಗಂಟೆ ಕಳೆಯಿತು.

ಈ ಮಧ್ಯೆ ಅವಿನಾಶ ಕ್ಲಬ್ಬಿನಲ್ಲೆಲ್ಲ ಕಣ್ಣಾಡಿಸುತ್ತಿದ್ದ....ಕಾಮ್ತಿಂಗ ಆಗಲೇ ಅವನ ಸಂಗಡಿಗರೆಂದು ಕಂಡು ಬರುವ ಸಂಧಿಗ್ನ ವ್ಯಕ್ತಿಗಳಲ್ಲಿ ಅವರ ದೃಷ್ಟಿಗೆ ಬಿದ್ದಿರಲಿಲ್ಲ. ರೀನಾ ಮಾತ್ರ ಸಿಕ್ಕಷ್ಟು ಕೆತ್ತಿದರಾಯ್ತು ಎಂದುಕೊಂಡು ಬೇಕಾದಷ್ಟು ತಿಂದು ಕುಡಿದು ತೇಗಿದ್ದಳು....

ಸ್ಟೇಜಿನ ಮೇಲೆ ಇಬ್ಬರು ಮೂವರು ಕ್ಯಾಬರೆ ಮಾಡುತ್ತಿದ್ದರು.

ಯಾರ ಆಸಕ್ತಿಯು ಅವರತ್ತ ಇರಲಿಲ್ಲ

ಮುಂದೆ ಒಮ್ಮೆಲೆ ಧ್ವನಿವರ್ಧಕದಲ್ಲಿ 'ನಗೀನಾ'ಳ ಹೆಸರು ಕೇಳಿ ಬರುತ್ತಿದ್ದಂತೆ ಕ್ಲಬ್ ಜಾಗೃತವಾಯಿತು. ಕೇಕೆ ಸಿಳ್ಳು. ಚಪ್ಪಾಳೆಗಳಿಂದ ಹಾಲ್ ಪ್ರತಿಧ್ವನಿಸತೊಡಗಿತು. ಬಹುಶಃ ಅವರೆಲ್ಲರಿಗೆ ನಗೀನಾಳ ಪ್ರತೀಕ್ಷೆ ಇದ್ದಂತಿತ್ತು. ಕ್ಲಬ್ ಯಜಮಾನ ಪಕ್ಕಾ ವ್ಯಾಪಾರಿ ಅದಕ್ಕಾಗಿ ಅವರನ್ನೆಲ್ಲ ತುಂಬಾ ಹೊತ್ತು ಕಾಯಿಸಿದ್ದ. ಅವರೆಲ್ಲರಿಂದ ಹಣ ಕಿತ್ತಿದ್ದ. ಇನ್ನು ಹೆಚ್ಚು ಹೊತ್ತು ಕಾಯಿಸುವುದು ಸೂಕ್ತವಲ್ಲವೆಂದು ನಗೀನಾಳನ್ನು ಸ್ಟೇಜ್ ಮೇಲೆ ತಂದಿದ್ದ.

ಅವಿನಾಶನ ಕಣ್ಣುಗಳು ಚುರುಕಾದವು.

ತುಂಬಾ ಹೊತ್ತಿನಿಂದ ಖಾಲಿಯಾಗೇ ಇದ್ದ ಮೇಜಿನ ಬಳಿ ಒಂದು ವ್ಯಕ್ತಿ ನಡೆದು ಬರುತ್ತಿತ್ತು. ಅವನ ಎಡಬಲಕ್ಕೆ ಇಬ್ಬರು ಅದೇ ತಾನೇ ತಮ್ಮ ಪ್ರೋಗ್ರಾಂ ಮುಗಿಸಿ ಕೆಳಗೆ ಇಳಿದು ಬಂದ ಕ್ಯಾಬರೆ ನರ್ತಕಿಯರು. ಅವರಿಬ್ಬರನ್ನು ಒತ್ತಿ ಹಿಡಿದು ಬರುತ್ತಿದ್ದ ಆತ ತುಂಬಾ ಕುಡಿದಂತಿತ್ತು. ಸರಿಯಾಗಿ ನಡೆಯಲಾಗದೇ ಜೋಲಿ ಹೊಡೆಯುತ್ತ. ಅವರನ್ನು ತಬ್ಬಿಕೊಂಡಾಗ ಅವರು ಖಿಲಖಿಲನೆ ನಕ್ಕರು ಅವಿನಾಶ ಅವನನ್ನೇ ತದೇಕಚಿತ್ತದಿಂದ ದಿಟ್ಟಿಸಿದ. ಕೆಂಚುಕೂದಲಿನ ಅವನಿಗೆ ಬಹಳವೆಂದರೆ ನಲವತ್ತು ವರ್ಷಗಳು ಇರಬಹುದು. ನಸು ಉಬ್ಬಿದ ಹಲ್ಲುಗಳು. ಚೂಪಾದ ಮೂಗು, ದೊಗಲೆ ಶರ್ಟು ಕೆಳಗೆ ಜೀನ್ಸ್ ಕಾಲಲ್ಲಿ ಬೆಲೆಬಾಳುವ ಬೂಟುಗಳು. ಪರದೇಶದಿಂದ ಬಂದ ವಿದೇಶಿ ಯಾತ್ರಿಕನಂತಿದ್ದ ಆತ.

ಆದರೂ ಅವಿನಾಶನ ಮನದಲ್ಲಿ ಏನೋ ಸಂಶಯ.

ಎರಡು ನಿಮಿಷ ತೆಪ್ಪಗೆ ಕುಳಿತವ ಮೆಲ್ಲನೆ ಮೇಲೆದ್ದ....'ಏಯ್ ಮ್ಯಾನ್....ನನ್ನ ದುಡ್ಡು ಮಡಗಿ ಹೋಗು....ಪುಕ್ಕಟೆ ಮಜಾ ಮಾಡಬೇಡ"

ರೀನಾ ಅವನ ಕೈಹಿಡಿದೆಳೆದು ಅಸಹ್ಯವಾಗಿ ಕೈತಿರುವುತ್ತ ನುಡಿದಾಗ ಸುತ್ತಲಿನವರ ಮನರಂಜನೆಯ ವಸ್ತು ತಾನಾಗಬಾರದೆಂದುಕೊಂಡು ಅವಿನಾಶ ಜೇಬಿನಿಂದ ನೂರರ ಒಂದು ನೋಟು ತೆಗೆದು ಅವಳ ಎರಡೂ ಕುಚಗಳ ಮಧ್ಯೆ ತುರುಕಿ ಗುರುಗುಟ್ಟಿದ.

"ನೌ ಗೆಟ್ ಲಾಸ್ಟ್. "

ಅವಳಿಗೇನು ?

ಕಂಠಪೂರ್ತಿ ಕುಡಿದಿದ್ದಳು. ಹೊಟ್ಟೆ ಬಿರಿಯುವಂತೆ ತಿಂದಿದ್ದಳು.

ಮೇಲೆ ನೂರು ರೂಪಾಯಿ ಸಿಕ್ಕಿತ್ತು.

ಖುಷಿಯಿಂದ ಮೇಲೆದ್ದಳು. "ಜಿಯೋ....ಜಿಯೋ ಮೇರೇ ರಾಜಾ" ಎಂದು ಹಾಡುತ್ತ ಹೊರಗಡೆ ನಡೆದಳು.

ಟೈ ಸರಿಪಡಿಸಿಕೊಂಡು ಒಂದು ಬಾರಿ ತಲೆ ಮೇಲಿದ್ದ ವಿಗ್ ಮೇಲೆ ಕೈಯಾಡಿಸಿಕೊಂಡ ಅವಿನಾಶ್ ಬಾಯಿಗೊಂದು ಸಿಗರೇಟು ಇರಿಸಿಕೊಂಡು, ಕುಡಿದವನಂತೆ ನಟಿಸುತ್ತ ತರುಣ ಕುಳಿತಲ್ಲಿ ಬಂದ.

"ಏಯ್ ಫ್ರೆಂಡ್....ಲೈಟರ್ ಪ್ಲೀಜ್" ಎಂದ.

ಇಬ್ಬರೂ ಹುಡುಗಿಯರಿಂದ ಕಣ್ಣು ಕಿತ್ತು ಮೇಜಿನ ಮೇಲಿದ್ದ ಲೈಟರ್ ಅವನೆಡೆ ಚಾಚಿದ. ಅವಿನಾಶ ಸಹ ಸಿಗರೇಟು ಅವನೆಡೆ ಮುಂದೆ ಮಾಡಿದ.

ಅವನ ಮುಖಕ್ಕೆ ಸಮೀಪವಾಯಿತು ಅವಿನಾಶನ ಮುಖ.

ಸಿಗರೇಟು ಉರಿಸಿ ಭುಸುಭುಸು ಹೊಗೆ ಬಿಟ್ಟು ಅವನ ಮುಖದಿಂದ ಕಣ್ಣು ಕಿತ್ತಿದ ಅವಿನಾಶ....

ಆ ತರುಣನನ್ನು ಆತ ಗುರುತಿಸಿದ್ದ.

ಅವನೇ ಕಾಮ್ತಿಂಗ....

ಫಸ್ಟ್ ಕ್ಲಾಸಾಗಿ ಮೇಕಪ್ ಮಾಡಿಕೊಂಡಿದ್ದ ಅವನನ್ನು ಅವಿನಾಶ ಕೇವಲ ಅವನ ಚಿಕ್ಕ ಚಿಕ್ಕ ಕಪ್ಪು ಕಣ್ಣುಗಳಿಂದಲೇ ಗುರುತಿಸಿದ್ದ....

ಅದು ಕಾಮ್ತಿಂಗ ಮಾಡಿದ ತಪ್ಪು....

"ಥ್ಯಾಂಕ್ಯು....ಥ್ಯಾಂಕ್ಯು ಬ್ರದರ್....

ಮತ್ತೆ ತನ್ನ ಮೇಜಿನ ಬಳಿ ಬಂದ.

ರೀನಾ ಇರಲಿಲ್ಲ....ಅರ್ಧ ಖಾಲಿಯಾಗಿದ್ದ ವಿಸ್ಕಿ ಬಾಟಲ್ ಸಹ ಇರಲಿಲ್ಲ. ಆಕೆ ಎಗರಿಸಿದ್ದಳು ಅಂತ ಕಾಣುತ್ತದೆ.

ನಗೀನಾ ಸ್ಟೇಜ್ ಮೇಲೆ ಬರುತ್ತಿದ್ದಂತೆ ಜನ ಹುಚ್ಚುಹುಚ್ಚಾಗಿ ಕೂಗಿ ಅವಳಿಗೆ ವಿಶ್ ಮಾಡಿದರು. ಆಕೆಯೂ ಅಷ್ಟೇ. ಎಲ್ಲರೆಡೆ ನೋಡಿ ಅಶ್ಲೀಲವಾಗಿ ನಟಿಸಿ, "ಏರ್‌ಕಿಶ್" ನೀಡಿ ಅವರನ್ನು ಖುಷಿಪಡಿಸಿದಳು.

ಒಂದು ಬಗೆಯ ನಗ್ನ ನೃತ್ಯ.

ಹಾಲ್‌ನಲ್ಲಿದ್ದವರೆಲ್ಲ ಎಲ್ಲಾ ಮರೆತು ಅವಳತ್ತಲೇ ಆಕರ್ಷಿತರಾಗಿದ್ದರು. ವಿಸ್ಕಿ . ಸ್ಕಾಚ್ ಅಷ್ಟೆ ಏಕೆ ತಮ್ಮ ಪಕ್ಕದಲ್ಲಿ ಇದ್ದ ಸಂಗಡಿಗರೂ ಸಹ ಅವರಿಗೆ ನೆನಪಿರಲಿಲ್ಲ....

ಡಿಸ್ಕೊ ದೀಪಗಳ ವರ್ಣಮಯ ಕುಣಿತದಲ್ಲಿ ನಗೀನಾ ತನ್ನ ಸುಂದರ ದೇಹದ ಎಲ್ಲಾ ಅಂಗಗಳನ್ನು ಲಯಬದ್ಧವಾಗಿ ಕುಣಿಸತೊಡಗಿದಾಗ ಕ್ಲಬ್‌ನಲ್ಲಿದ್ದ ಎಲ್ಲರ ಕಣ್ಣುಗಳಲ್ಲಿ ಹಸಿಹಸಿಯಾದ ಕಾಮ ಕುಣಿಯತೊಡಗಿತು. ಎರಡು ಮೂರು ಕಡೆ ಸೀಸೆ, ಗ್ಲಾಸ್ ಒಡೆದು ಪುಡಿಪುಡಿಯಾದವು. ಕೆಲವರು ಕೇಕೆ ಹಾಕಿದರೆ, ಕೆಲವರು ತಮ್ಮ ತಮ್ಮ ಪಕ್ಕದಲ್ಲಿದ್ದ ಪಾರ್ಟನರ್ ಮೇಲೆ ದಾಳಿ ಮಾಡಿದರು. ಏನೂ ಆಗದ ಕೈಲಾಗದವರು ಬಿಸಿಯುಸಿರು ಬಿಟ್ಟು ತೆಪ್ಪಗಾದರು. ಹರಯದ ಬಿಸಿರಕ್ತದ ತರುಣರು ತೂರಾಡುತ್ತಾ ಸ್ಟೇಜ್ ಬಳಿ ಬಂದು ಜೇಬಿನಿಂದ ನೋಟುಗಳನ್ನು ಹಿರಿದು ಅವಳ ಮೇಲೆ ತೂರ ತೊಡಗಿದರು. ಒಬ್ಬನಂತೂ ನೂರರ ಐದಾರು ನೋಟುಗಳನ್ನು ಬಾಯಿಯಲ್ಲಿ ಕಚ್ಚಿ ಹಿಡಿದು, ಅವಳೆಡೆ ನೋಡಿ ಸನ್ನೆ ಮಾಡಿದ. ನರ್ತಿಸುತ್ತ ಬಂದ ಆಕೆ ಅವನ ಬಾಯಿಯಲ್ಲಿದ್ದ ಆ ನೋಟುಗಳ ಚಿಕ್ಕ ಕಂತೆಯನ್ನು ತನ್ನ ಬಾಯಿಯಿಂದ ಕಚ್ಚಿ ತೆಗೆದುಕೊಂಡಾಗ ಹೋಹೋ ಎಂದು ಹುಚ್ಚರಂತೆ ಅರಚಿದರು ಅವಳ ಪ್ರಿಯರು....

ಅದೇ ವೇಳೆಗೆ,

ಹಾಂ....ಅದೇ ವೇಳೆಗೆ....ಕಾಮ್ರಿಂಗನ ಪಕ್ಕದಲ್ಲಿದ್ದ ತರುಣಿಯೊಬ್ಬಳು ಎದ್ದು ನಗೀನಾಳನ್ನು ಸಮೀಪಿಸಿದಳು....ಅವಿನಾಶ ಜಾಗೃತನಾದ ಏನೋ ಘಟಿಸಲಿದೆ ಎಂದಾತ ಊಹಿಸಿದ್ದ....ಅದು ನಿಜವಾಗುವ ಲಕ್ಷಣ ಕಂಡು ಬಂದಿತು....ನರ್ತಿಸುತ್ತಿದ್ದ ನಗೀನಾಳ ಕಿವಿಯಲ್ಲಿ ಏನೋ ಉಸುರಿದ ಆ ತರುಣಿ

ಪುನಃ ಬಂದು ಕಾಮ್ತಿಂಗನ ಪಕ್ಕದಲ್ಲಿ ಕುಳಿತಳು... ಅವಿನಾಶ ಅವರನ್ನೇ ಗಮನಿಸುತ್ತಿದ್ದ... ಮೂವರೂ ಗುಸುಗುಸು ಮಾತನಾಡಿದರು....ಇಬ್ಬರ ಕೈಗೂ ಕಾಮ್ತಿಂಗ ನೋಟುಗಳನ್ನು ತುರುಕಿದ. ಚುಂಬಿಸಿದ ಇಬ್ಬರೂ ಎದ್ದು ಹೊರ ನಡೆದರು....

ನಗೀನಾಳ ನೃತ್ಯ ಅಂತಿಮ ಹಂತಕ್ಕೆ ಬಂದಿತ್ತು.

ವಾದ್ಯಗಳ ಸ್ವರ ತಾರಕಕ್ಕೇರಿತ್ತು... ವೇಗವೂ ಹೆಚ್ಚಾಗಿತ್ತು.

ಅದಕ್ಕೆ ತಕ್ಕಂತೆ ನರ್ತಿಸುತ್ತ ತನ್ನ ಒಂದೊಂದೇ ಬಟ್ಟೆ ಕಳಚಿ ಎಸೆದ ನಗೀನಾ ಒಮ್ಮಿಂದೊಮ್ಮೆಲೇ ಪೂರ್ತಿ ನಗ್ನಳಾಗುತ್ತಲೂ ಹಾಲ್‌ನಲ್ಲಿದ್ದ ಎಲ್ಲಾ ದೀಪಗಳು ಆರಿ ಗಪ್ ಎಂದು ಕತ್ತಲೆ ಆವರಿಸಿತು. ಒಂದರ್ಧನಿಮಿಷದ ನಂತರ ಮತ್ತೆ ದೀಪ ಉರಿದಾಗ ಸ್ಟೇಜ್ ಮೇಲೆ ನಗೀನಾ ಇರಲಿಲ್ಲ. ಮೇಜಿನ ಬಳಿ ಕಾಮ್ತಿಂಗ....

ಸರಕ್‌ನೆ ಮೇಲೆದ್ದ ಅವಿನಾಶ ಸ್ಟೇಜ್ ಪಕ್ಕದಲ್ಲಿದ್ದ ರಸ್ತೆ ಮೂಲಕ ಹಿಂಭಾಗಕ್ಕೆ ಬಂದ....ಅದೊಂದು ಕಾರಿಡೋರ್ ಎಡಬಲಕ್ಕೆ ರೂಮುಗಳು ಅಲ್ಲೇ ಹತ್ತಿರದಲ್ಲೇ ಇತ್ತು. ಅವನಿಗೆ ಬೇಕಾದ ಗ್ರೀನ್ ರೂಮ್... ಬಾಗಿಲು ತಳ್ಳಿಕೊಂಡು ಒಳನುಗ್ಗಿದ. ನಗೀನಾ ಇರಲಿಲ್ಲ. ಅತ್ತಿತ್ತ ದೃಷ್ಟಿ ಹರಿಸಿದ. ಡ್ರೆಸಿಂಗ್ ಟೇಬಲ್ ಮೇಲೆ ಕೈಯಾಡಿಸಿದ. ಡ್ರಾ ಹಿಡಿದೆಳೆದು ಹುಡುಕಾಡಿದ. ಬೇಕಾದ ವಸ್ತುಗಳು ಸಿಗಲಿಲ್ಲ.

ನಗೀನಾ ಎಲ್ಲಿ ಎಂಬುದಕ್ಕೆ ಸುಳಿವು ಸಹ ಕಂಡು ಬರಲಿಲ್ಲ....ಮೇಲೆದ್ದು ನಿಂತು ಟೊಂಕದ ಮೇಲೆ ಕೈಯಿಟ್ಟು ಸುತ್ತಲೂ ನಿರೂಪಿಸಿದ. ಒಮ್ಮೆಲೆ ನಗು ಬಂದಿತು. ಕಂಕುಳಲ್ಲಿ ಮಗುವನ್ನಿಟ್ಟುಕೊಂಡು ಊರೆಲ್ಲಾ ಹುಡುಕಿದರಂತೆ. ಅವನ ಸ್ಥಿತಿಯೂ ಅದೇ ಆಗಿತ್ತು. ಡ್ರೆಸಿಂಗ್ ಟೇಬಲ್ ಎದುರು ಇರುವ ನಿಲುವುಗನ್ನಡಿ ಮೇಲೆ ಲಿಪ್‌ಸ್ಟಿಕ್‌ನಿಂದ ರೂಮ್ ನಂಬರ್ 207 ಎಂದು ಬರೆದದ್ದು ಕಾಣಿಸಿತು.

ಖಂಡಿತವಾಗಿಯೂ ನಗೀನಾ ಅವನಿಗಾಗಿಯೇ ಇಟ್ಟ ಸಂದೇಶವದು.

ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬರೆವ ಆ ಸಂದೇಶ ನೋಡದೇ ರೂಮೆಲ್ಲಾ ಆತ ಜಾಲಾಡಿಸಿದ್ದ....

ರೂಮಿನಿಂದ ಹೊರಬಂದು ಬಾಗಿಲು ಮುಚ್ಚಿ ಲಿಫ್ಟ್ ಕಡೆ ನಡೆದ....

ಎರಡನೂರಾ ಏಳನೇ ರೂಮು ಬಾಗಿಲು ಮುಚ್ಚಿತ್ತು. ಮೆಲುವಾಗಿ ತಳ್ಳಿದ ಬಾಗಿಲು ತೆರೆಯಲಿಲ್ಲ. ಒಳಗಿನಿಂದ ಲಾಕ್ ಮಾಡಲಾಗಿತ್ತು.... ಮೆಲ್ಲನೆ ಸಿಳ್ಳು ಹಾಕುತ್ತ ಅತ್ತಿತ್ತ ಅಲೆದಾಡತೊಡಗಿದ....ಸಮಯ ಸರಿಯ ತೊಡಗಿತು....

ಏನೋ ಕಟಕ್ ಎಂದು ಸಪ್ಪಳವಾಯಿತು.

ಗಕ್ ಎಂದು ನಿಂತ ಅವಿನಾಶ ಯೋಚಿಸತೊಡಗಿದ. ಇದೀಗ ಕೇಳಿದ ಸಪ್ಪಳ ಎಲ್ಲಿಂದ ಬಂದಿತು ಎಂದು....ಒಂದು ನಿಮಿಷದಲ್ಲೇ ಆತ ಅದರ ಮೂಲ ಶೋಧಿಸಿದ್ದ. ಸಪ್ಪಳ ಬಂದದ್ದು ಕಾಮ್ತಿಂಗನ ರೂಮಿನಿಂದ. ಮೆಲ್ಲನೆ ಹೆಜ್ಜೆ ಹಾಕಿ ಅದರ ಮುಂದೆ ಬಂದ....ಸ್ವಲ್ಪ ಸಮಯದ ಹಿಂದೆ ರೂಮಿನಲ್ಲಿ ದೀಪ ಉರಿಯುತ್ತಿದ್ದು ಈಗ ದೀಪಗಳು ನಂದಿದ್ದವು. ಕತ್ತಲೆ ಆವರಿಸಿತ್ತು.

ಏನಿದರ ಅರ್ಥ ?

ಅವರು ನಿದ್ರಿಸುತ್ತಿರಬೇಕು... ಅಥವಾ ಹೊರಗೆ ಹೋಗಿರಬಹುದು.

ಎರಡನೆ ಕಾರಣವಂತೂ ಸಾಧ್ಯವಿರಲಿಲ್ಲ. ಆತ ಹೊರಗಡೆ ಕಾವಲಿದ್ದ. ಅವನ ಕಣ್ಣು ತಪ್ಪಿಸಿ ಅವರು ಹೋಗುವ ಸಾಧ್ಯತೆ ಇರಲಿಲ್ಲ. ಇನ್ನೂ ನಿದ್ದೆ ಅದು ಆಗದ ಮಾತು. ನಗೀನಾಳಂಥ ಹೆಣ್ಣನ್ನು ಕರೆತಂದು ನಿದ್ದೆ ಮಾಡುವಷ್ಟು ಮೂರ್ಖ ಅವನಾಗಿರಲಿಲ್ಲ. ಅಲ್ಲದೇ ಕಾಮ್ತಿಂಗ ಪೂರ್ತಿ ಬೆಳಕಿನಲ್ಲೇ ಮುಕ್ತ ಕಾಮಕೇಳಿಯಾಡುವನೆಂದೂ ತಿಳಿದಿತ್ತು.

ಹಾಗಾದರೆ....ಹಾಗಾದರೆ....

ಏನೋ ಅಪಾಯ ಒದಗಲಿದೆ....

ಅವಿನಾಶ ಮೈಯೆಲ್ಲಾ ಕಿವಿಯಾಗಿಸಿಕೊಂಡು ಬಾಗಿಲಿಗೆ ಆತು ನಿಂತು ಆಲಿಸಿದ. ಯಾವ ಸಪ್ಪಳವೂ ಕೇಳಿ ಬರಲಿಲ್ಲ.

ಬಾಗಿಲಂತೂ ಭದ್ರವಾಗಿ ಮುಚ್ಚಲ್ಪಟ್ಟಿತ್ತು.

ಅದನ್ನು ತೆರೆಯದೇ ಬೇರೆ ದಾರಿ ಇರಲಿಲ್ಲ. ಜೇಬಿನಿಂದ ಮಾಸ್ಟರ್ ಕೀ ಹೊರತೆಗೆದ....ಐದು ಹತ್ತು ಸೆಕೆಂಡುಗಳಲ್ಲಿ ಬೀಗ ತೆರೆಯಿತು. ಮೆಲ್ಲಗೆ ಬಾಗಿಲು ದೂಡಿದ. ಸಪ್ಪಳ ಮಾಡದೇ ತೆರೆದುಕೊಂಡಿತು.

ಒಳಗೆ ಕಾಲಿಟ್ಟು ಬಾಗಿಲು ಮುಚ್ಚಿದ.

ಒಳಗಿನಿಂಧ ಲಾಕ್ ಮಾಡಲ್ಪಟ್ಟಿತು.

ಕತ್ತಲೆ ಸೀಳಿಕೊಂಡು ನಿಧಾನವಾಗಿ ಜಾಗ್ರತೆಯಿಂದ ಹೆಜ್ಜೆ ಇಡುತ್ತ ಮುಂದೆ ನಡೆದ. ಟಿಪಾಯ್....ಸೋಫಾ....ಕುರ್ಚಿ... ಕಾಲಿಗೆ ತಾಗಿದವು. ಒಂದೆಡೆ ಕೈಗೆ ಫ್ಲಾವರ್ ಪಾಟ್ ತಗಲಿ ಕೆಳಗೆ ಬಿದ್ದು ಫಳ್ ಎಂದು ಒಡೆಯಿತು.

ಆಶ್ಚರ್ಯ....

ಫ್ಲವರ್ ಪಾಟ್ ಸುದ್ದಿಗೂ ಒಳಗಿನಿಂದ ಪ್ರತಿಕ್ರಿಯೆ ಇಲ್ಲ....

ಹಾಗೇ ಒಳಗಿನ ಕೋಣೆಗೆ ಬಂದ....ಬಾಗಿಲು ದೂಡಲು ಮುಂದಾದ.

ಬಾಗಿಲಿಗೆ ಆತು ನಿಂತ ಮಾನವ ಶರೀರ ಕೈಗೆ ತಗಲಿತು. ಕೈತಡು ಕಾಡುತ್ತಲೂ ಹಾಗೆ ಮೆಲುವಾಗಿ ಅವನ ಮೇಲೆ ಒರಗುತ್ತಲು ಅದರ ಭಾರತಾಳಲಾರದೇ ಆ ವ್ಯಕ್ತಿಯೊಂದಿಗೇ ಅವಿನಾನ ಹಿಂದಕ್ಕೊರಗಿದ. ಮೊದಲು ತಲೆ ಗೋಡೆಗೆ ಬಡಿದು ಕಣ್ಣಲ್ಲಿ ದೀಪ ಉರಿಸಿದಂತಾಯಿತು. ಹಾಗೇ ಆತ ಕಾರ್ಪೆಟ್ ಮೇಲೆ ಉರುಳಿದ. ಆ ವ್ಯಕ್ತಿ ಸಹ ಅವನ ಪಕ್ಕದಲ್ಲೇ ಉರುಳಿತು.

ಒಂದೆರಡು ನಿಮಿಷ ಮಿಸುಕಲಾಗಲಿಲ್ಲ.

ಏಳಬೇಕು ಎಂದುಕೊಂಡಾಗ ತಟಕ್‌ನೇ ದೀಪ ಬೆಳಗಿತು....

ದೀಪದ ಪ್ರಕಾಶದಲ್ಲಿ ಅವಿನಾಶ ರೂಮಿನಲ್ಲಿ ಕಣ್ಣಾಡಿಸಿದ.

ಉಸಿರೇ ನಿಂತುಹೋಯಿತು. ಅವನ ಪಕ್ಕದಲ್ಲಿ ನಗೀನಾಳ ನಗ್ನ ದೇಹ....ಆಕೆ ಜೀವಂತವಾಗಿಲ್ಲವೆಂದು ಅವಳ ಕಣ್ಣುಗಳೇ ಹೇಳುತ್ತಿದ್ದವು.... ಅವಿನಾಶ ಕಷ್ಟಪಟ್ಟು ಎದ್ದು ನಿಂತ... ಅವಳೆಡೆ ಬಾಗಿದ....ಫಳಕ್‌ನೆ ದೀಪ ಮಿಂಚಿತು. ಪ್ರಕಾಶದತ್ತ ನೋಡಿದ. ಕಿಟಕಿಯಲ್ಲಿ ಕೆಮರಾ ಹಿಡಿದ ಕಾಮ್ರಿಂಗ ಕಂಡು ಬಂದ. ಕುಟಿಲ ನಗೆಸೂಸಿದ ಆತ ಹಾವಿನಂತೆ ಫೂತ್ಕರಿಸಿ ನುಡಿದ "ಥ್ಯಾಂಕ್ಯೂ ಮಿಸ್ಟರ್ ಅವಿನಾಶ್....ಮತ್ತೆ ಭೇಟಿಯಾಗೋಣ...."

# 9

ಶಿವರಾಜ ಮತ್ತು ಚಂದ್ರು ಇಬ್ಬರೂ ಒಬ್ಬರ ಮುಖ ಒಬ್ಬರು ನೋಡಿದರು.

"ಇಷ್ಟು ಉತ್ತಮವಾದ ಕಾಫಿ ಕೊಟ್ಟಿದ್ದಕ್ಕೆ ನೀವು ಬೇಡಿದ್ದನ್ನು ಕೊಡುವ ಇಚ್ಛೆಯಾಗಿದೆ ನನಗೆ"

ನರ್ಸ್ ನುಡಿದ ಮಾತು ಇಬ್ಬರ ಮನದಲ್ಲಿ ಪ್ರತಿಧ್ವನಿಸುತ್ತಿತ್ತು. ಆ ಮಾತಿನ ಅರ್ಥವೂ ಅವರಿಗಾಗಿತ್ತು. ಕಣ್ಣುಗಳಲ್ಲೇ ಮಾತಾಡಿಕೊಂಡು ಒಂದು ನಿರ್ಧಾರಕ್ಕೆ ಬಂದರವರು. ಅಷ್ಟರಲ್ಲಿ ಲಾವಣ್ಯ ಮತ್ತೊಂದು ಕಪ್ ಕಾಫಿ ಕುಡಿದಿದ್ದಳು.

"ಗುಡ್.. ನಾನಿನ್ನು ಬರಲೇ ?

ಇಬ್ಬರೂ ಅವಳೆಡೆ ನೋಡಿದರು.

"ಮತ್ತೆ .. ಮತ್ತೆ....ಇದೀಗ ನೀವು ಅಂದ ಮಾತು ಕೇಳಿದ್ದು ಕೊಡುವೆ...."

ಶಿವರಾಜ ಅರ್ಥಂಬರ್ಥ ಕಡಿಕಡಿದು ಮಾತನಾಡಿದ.

ಲಾವಣ್ಯಳ ಮುಖದ ಮೇಲೆ ನಗೆ ಮಿನುಗಿತು.

"ಹೌದು....ಹೇಳಿದೆ ?"

"ಮತ್ತೆ ...ಮತ್ತೆ"

"ಗಾಬರಿಯಾಗಬೇಡಿ ನಾನು ಈಗಲೇ ಸಿದ್ಧ"

"ಹೌದಾ ?"

"ಆದರೆ, ಆದರೆ...."

"ಏನಾಯಿತು ?"

ಲಾವಣ್ಯ ಇಬ್ಬರ ಕಡೆಯೂ ನೋಡಿದಳು. ಚಂದ್ರು ತಟಕ್ನೆ ಹೇಳಿದ.

"ನೀವು ತಪ್ಪು ತಿಳಿದುಕೊಂಡಿದ್ದೀರಿ....ನಾವಿಬ್ಬರು ಬೇರೆ ಬೇರೆಯಾಗಿ...." ಖಿಸಕ್ ಎಂದು ನಕ್ಕಳು ಲಾವಣ್ಯ.

"ಒಪ್ಪಿಗೇನಾ ?" ಶಿವರಾಜ ಆಶೆಯಿಂದ ಕೇಳಿದ.

"ಒಪ್ಪಿಗೆ ಆದರೆ ಈಗ ಸಾಧ್ಯವಾಗದು"

"ಏಕೆ ?"

"ನಿಮ್ಮ ಬಾಸ್ ಬರುವುದಿಲ್ಲವೇ ?"

"ನೋ....ಅವರು ಬೆಳಿಗ್ಗೆಯೇ ಬರುವುದು"

"ಸರಿ ಹಾಗಾದರೆ ಅಷ್ಟರಲ್ಲಿ ನನ್ನ ಇನ್ನೊಂದು ಪೇಶಂಟ್ ಇದೆ. ಅದನ್ನು ನೋಡಿಕೊಂಡು ಬೇಗ ಬಂದು ಬಿಡುತ್ತೇನೆ."

ಇಬ್ಬರ ಮುಖವೂ ಹರಳೆಣ್ಣೆ ಕುಡಿದಂತಾಯಿತು.

"ಇನ್ನೊಂದು ಪೇಶೆಂಟಾ ?" ಚಂದ್ರು ಕೇಳಿದ.

"ಹೌದು ?"

"ಯಾವದದು ?"

"ತಿಳಿಯದು....ಇರಿ ಚೀಟಿ ನೋಡಿ ಹೇಳುತ್ತೇನೆ"

ಲಾವಣ್ಯ ಹುಡುಕಿದಂತೆ ನಟಿಸಿದಳು. ಚೀಟಿ ಇದ್ದರಲ್ಲವೆ ?

ಗಾಬರಿಯಾಗಿ ಚಡಪಡಿಸಿದಳು.

"ಅರೆ....ಎಲ್ಲಿ ಹೋಯಿತು ಇದೀಗ ಇತ್ತಲ್ಲ....ಅಯ್ಯೋ ನನ್ನ ನೌಕರಿ ಗತಿ ಏನು ?....ಪೇಶಂಟ್ ಸಿಗದಿದ್ದರೆ ಏನು ಮಾಡಲಿ ?"

ಶಿವರಾಜ, ಚಂದ್ರುನೆ ಅಲ್ಲಿ ಇಲ್ಲಿ ಹುಡುಕಿದರು. ಹುಡುಕುವ ನೆವದಲ್ಲಿ ಅವಳ ಸೊಂಟ, ನಿತಂಬ, ಕುಚ ತಡಕಾಡಿದರು. ಲಾವಣ್ಯ ಅದಕ್ಕೆ ಆಸ್ಪದ ಮಾಡಿಕೊಟ್ಟಳು. ಕೊನೆಗೂ ಚೀಟಿ ಸಿಗಲೇ ಇಲ್ಲ.

ಇದ್ದರಲ್ಲವೇ ಸಿಗುವುದು ?

ಹೌಹಾರಿದ ಲಾವಣ್ಯ ಅಲ್ಲೇ ಕುಸಿದಳು ಕುರ್ಚಿ ಮೇಲೆ....

"ಚೀಟಿ ಕಳೆದರೇನಾಯಿತು ? ಹಾಗೇ ಹೋದರಾಯಿತು"

"ನನ್ನ ಸಮಸ್ಯೆ ಅದಲ್ಲ ಶಿವೂ"... ಲಾವಣ್ಯ ಪ್ರೀತಿಯಿಂದ ನುಡಿದಾಗ ಶಿವು ಭೂಮಿಯಿಂದ ಮೂರಡಿ ಮೇಲೆ ಏರಿದ್ದ.

"ಮತ್ತೇನು ?"

"ನನಗೆ ಪೇಶೆಂಟ್ ರೂಮ್ ನಂಬರು, ಮಹಡಿ ಯಾವುದೂ ಗೊತ್ತಿಲ್ಲ"

"ಹೌದಾ ?"

"ಹಾಂ,...ಹೆಸರೊಂದು ಮಾತ್ರ ಗೊತ್ತಿದೆ"

"ಒಳ್ಳೆಯದಾಯಿತು....ಅಷ್ಟಾದರೂ ನೆನಪಿದೆಯಲ್ಲ"

ಚಂದ್ರುವಿಗೆ ಅವರಿಬ್ಬರೂ ಈ ರೀತಿ ಮಾತನಾಡುವುದು ಸಹ್ಯವಾಗಲಿಲ್ಲ. ಮಧ್ಯೆ ಬಾಯಿ ಹಾಕಿದ.

"ಹೆಸರು ಹೇಳಿ ನಾವು ಹುಡುಕಿ ತರುತ್ತೇವೆ"

"ನಿಮ್ಮ ಡಿಪಾರ್ಟ್‌ಮೆಂಟಿಗೇ ಸಂಬಂಧಿಸಿದ್ದು"

"ಹೌದಾ ?"....

"ಹಾಂ....ಪಾಂಡುರಂಗ....ಪಾಂಡುರಂಗ. ಯಾರೋ ಗುಂಡು ಹೊಡೆದಿದ್ದಾರಂತೆ.

"ಹಾಂ ಗೊತ್ತಾಯ್ತು....ಗೊತ್ತಾಯ್ತು" ಶಿವರಾಜ ಅರಚಿದ.

"ಓಹ್ ಗಾಡ್" ಉಸಿರ್ಗರೆದ ಲಾವಣ್ಯ ಕೇಳಿದಳು" ಎಲ್ಲಿದ್ದಾನೆ ?"

"ಅದು ತಿಳಿಯದು. ನಮ್ಮ ರಾವ್ ಸಾಹೇಬರು ಜಾಗ್ರತೆಯಿಂದ ಅವನನ್ನು ಮುಚ್ಚಿಟ್ಟಿದ್ದಾರೆ.

"ಅಂದರೆ ನಿಮಗೂ ತಿಳಿದಿಲ್ಲವೆ ?"

"ಇಲ್ಲ"

"ಹಾಗಾದರೆ ನನ್ನನ್ನು ಕಾಪಾಡುವವರು ಯಾರು ?"

"ಡೋಂಟ್ ವರಿ ನಾನದಕ್ಕೆ ದಾರಿ ಹುಡುಕುತ್ತೇನೆ"

ಶಿವರಾಜ ಹೆಮ್ಮೆಯಿಂದ ಹೇಳಿ ಫೋನು ಇದ್ದಲ್ಲಿ ಬಂದು ಡೈಲ್ ಮಾಡಿದ. ಇನ್‌ಸ್ಪೆಕ್ಟರ್ ಡಲ್ಲಾ ಹೆಸರು ನಂಬರ್ ಹೇಳಿ ಸಂಬಂಧ ಕೊಡುವಂತೆ ನುಡಿದ.

ಆ ಕಡೆಯಿಂದ ಡಲ್ಲಾ ಧ್ವನಿ ಕೇಳುತ್ತಲೂ ವಿನಯದಿಂದ ನುಡಿದ.

"ಗುಡ್ ನೈಟ್....ಅಲ್ಲ....ಸರ್ ಗುಡ್ ಮಾರ್ನಿಂಗ್... ಅಲ್ಲ ಗುಡ್ ನೈಟ್ ಸರ್"

"ಯಾರದು ?"

"ಸರ್ ನಾನು ಶಿವರಾಜ್ ಹವಾಲ್ದಾರ್...."

"ಏನದು ಇಷ್ಟು ರಾತ್ರಿ "

"ಸಾರಿ ಸರ್... ಅರ್ಜೆಂಟ್ ಇತ್ತು ಅದಕ್ಕೆ...."

"ಹಾಂ....ಹಾಂ ಏನು ಹೇಳು...."

"ಸರ್....ನಮ್ಮ ಪಾಂಡುರಂಗ...."

"ಆಂ....ಪಾಂಡುರಂಗ ಏನಾಯಿತು ? ಏನಾಯಿತು ಹೇಳು ?" ದುಗುಡ ತುಂಬಿದ ದನಿಯಲ್ಲಿ ಡಲ್ಲಾ ಚೀರಿಕೊಂಡ.

"ಏನೂ ಆಗಿಲ್ಲ ಸರ್....ಇದೀಗ ಯಾರೋ ಫೋನು ಮಾಡಿದರು"

"ಏನಂತ ?"

"ಅವನ ಕೆಲಸ ಮುಗಿಸಲಾಗಿದೆ....ಆತ ಬದುಕಿಲ್ಲ ಎಂದು"

"ನಾನ್ಸೆನ್ಸ್ ಏನದು ನಿನ್ನ ಮಾತಿನ ಅರ್ಥ ?

"ನನ್ನ ಮಾತಲ್ಲ ಸರ್ ಅವನು ಹೇಳಿದ್ದು...."

ಐದಾರು ಸೆಕೆಂಡು ಡಲ್ಲಾ ಮಾತನಾಡಲಿಲ್ಲ. ಯೋಚಿಸುತ್ತಿರುವಂತೆ ಅನಿಸಿತು. ಶಿವರಾಜನೇ ಕೇಳಿದ.

"ಸರ್, ಸರ್"

"ಹಾಂ....ಹಾಂ... ಶಿವರಾಜ್....ಒಂದು ಕೆಲಸ ಮಾಡು"

"ಹೇಳಿ ಸರ್"

"ಅರವತ್ತಮೂರನೇ ನಂಬರ್ ರೂಮಿಗೆ ಹೋಗಿ ಪಾಂಡುರಂಗನ ಬಗ್ಗೆ ವಿಚಾರಿಸು....ಕ್ವಿಕ್"

"ಎಸ್ ಸರ್"

ರಿಸೀವರ್ ಕೆಳಗಿಟ್ಟು ಹೆಮ್ಮೆಯಿಂದ ಲಾವಣ್ಯಳ ಕಡೆ ನೋಡಿದ. ಆಕೆ ಕೇಳಿದಳು.

"ಗೊತ್ತಾಯ್ತಾ ?"

"ಗೊತ್ತಾಗದೆ ನಾನು ಬಿಡುತ್ತೇನೆಯೆ ?"

"ಗುಡ್...."

"ಅರವತ್ತ ಮೂರನೇ ನಂಬರ್ ರೂಮಿಗೆ ಹೋಗಿ ವಿಚಾರಿಸು ಎಂದರು"

"ಅಂದ್ರೆ ಪಾಂಡುರಂಗ ಅದೇ ರೂಮಿನಲ್ಲಿದ್ದಾನೆ ಎಂದಾಯಿತು. ಅಬ್ಬಾ, ನೀನೂ ಪ್ರಚಂಡ ಸ್ಕಾಟ್‌ಲಂಡ್‌ಯಾರ್ಡಿನಲ್ಲಿರಬೇಕಾಗಿತ್ತು....ತಪ್ಪಿ ಇಲ್ಲಿ ಹುಟ್ಟಿದ್ದೀಯಾ"

ಲಾವಣ್ಯ ಖುಷಿಯಿಂದ ಕುಣಿ ಕುಣಿದು ಮಾತನಾಡಿದಾಗ ಶಿವು ಮತ್ತು ಚಂದ್ರು ಇಬ್ಬರ ಹೃದಯ ಹಾರಿ ಬಾಯಿಗೆ ಬಂದಿತ್ತು.

ಲಾವಣ್ಯ ಕುಣಿದು ಕುಪ್ಪಳಿಸಿದಾಗ ಅವಳ ಕುಚಗಳೂ ಸಹ ಫಡಫಡ ಅಂದಿದ್ದವು.

ಅವರಿಬ್ಬರ ಬಾಯಿಯಿಂದ ಮಾತೇ ಹೊರಡಲಿಲ್ಲ. ಲಾವಣ್ಯ ಅವಸರ ಮಾಡಿದಳು.

"ಏಳಿ....ಏಳಿ....ಮೊದಲು ಪಾಂಡುರಂಗನನ್ನು ವಿಚಾರಿಸಿಕೊಂಡು ಬರೋಣ....ಆಮೇಲೆ ಬೆಳಗಿನವರೆಗೆ ಇದ್ದೇ ಇದೆಯಲ್ಲ...."

ಮುಖ ಕೆಂಪಗೆ ಮಾಡಿ ಅರ್ಥಗರ್ಭಿತವಾದ ಮಾತನ್ನು ಅರ್ಧಕ್ಕೆ ನಿಲ್ಲಿಸಿದಳು ಆಕೆ.

ಮೂವರೂ ಹೊರಗೆ ಬಂದರು.

ಕಾರಿಡಾರಿಗೆ ಬರುತ್ತಲೂ ಶಿವರಾಜ ತಡೆದ.

"ಅರೆ ಇಲ್ಲಿ ಯಾರಾದರೂ ಇರಬೇಕಲ್ಲ....ಯಾರಾದರೂ ಬಂದರೆ.... ಫೋನು....ವಗೈರೆ...."

"ಅದಕ್ಕೇನು ಚಂದ್ರು ಇರಲಾರನೆ...."

ಲಾವಣ್ಯಳಿಂದಲೇ ಈ ಮಾತು ಬಂದ ಮೇಲೆ ಚಂದ್ರುವಿಗೆ ನಿರಾಕರಿಸಲಾಗಲಿಲ್ಲ .. ಇಂಗು ತಿಂದ ಮಂಗನಂತೆ ಮುಖ ಕಹಿ ಮಾಡಿಕೊಂಡು ಸಮ್ಮತಿ ಸೂಚಿಸಿದ. ಶಿವು ಲುಟುಲುಟು ಮುಂದೆ ನಡೆಯುತ್ತಿದ್ದಂತೆ ಅವನನ್ನು ಹಿಂಬಾಲಿಸಿದ ಲಾವಣ್ಯಳತ್ತ ನೋಡಿ ಕೈಕೈ ಹಿಸುಕಿಕೊಂಡ....ಶಿವರಾಜನ ಅದೃಷ್ಟಕ್ಕೆ ಕರುಬತೊಡಗಿದ....

ಅರವತ್ತ ಮೂರನೇ ರೂಮಿಗೆ ಬರುತ್ತಿದ್ದಂತೆ ಲಾವಣ್ಯ ಚಿಂತಿತಳಾದಳು. ಬೆನ್ನು ಹತ್ತಿದ ಬೇತಾಳದಂತೆ ಜೊತೆಯೇ ಬರುತ್ತಿರುವ ಶಿವರಾಜನ ಎದುರು ಪಾಂಡುರಂಗನನ್ನು ದಾರಿಯಿಂದ ಸರಿಸುವುದು ಹೇಗೆ ?

ಯೋಚಿಸುತ್ತಿದ್ದಂತೆ ಉಸಿರು ವೇಗವಾಯಿತು.

ಎದೆಯಲ್ಲಿ ಬೆಂಕಿಯಿಟ್ಟ ಅನುಭವ.

ಓ ದೇವರೆ ಸ್ನ್ಯಾಕ್‌ನ ಸಮಯವಾಯಿತು ? ಎಂದುಕೊಳ್ಳುತ್ತ ವಾಚ್ ಕಡೆ ನೋಡಿದಳು. ಎರಡು ಗಂಟೆಯ ಅವಧಿ ಮುಗಿಯಲು ಕೇವಲ ಹದಿನೈದು ನಿಮಿಷಗಳು ಮಾತ್ರ ಉಳಿದಿದ್ದವು. ಅಷ್ಟರಲ್ಲಿ ಕೆಲಸ ಮುಗಿಸಿ ಹೊರಗೆ

ಹೋಗಬೇಕಾಗಿತ್ತು. ಅಲ್ಲಿ ಅವಳಿಗಾಗಿ ಕಾಯುತ್ತಿದ್ದ ಮೆಟಾಡೋರಿನಲ್ಲಿ ಮತ್ತೆ ಬೇಡಿದಷ್ಟು ಸ್ಮ್ಯಾಕ್ ಸಿಗುತ್ತಿತ್ತು ಅಲ್ಲಿಯವರೆಗೂ....

ಅವಳ ವರ್ತನೆ ಅರ್ಥವಾಗದೇ ಚಡಪಡಿಸಿಗ ಶಿವರಾಜ ಅವಳ ಹಿಂದೆ ಓಡಿದ.

ಅರವತ್ತ ಮೂರನೇ ನಂಬರಿನಲ್ಲಿ ಪಾಂಡುರಂಗ ಇರಲಿಲ್ಲ. ಅಲ್ಲಿಂದ ಅವನನ್ನು ಐವತ್ತನಾಲ್ಕಕ್ಕೆ ಸ್ಥಳಾಂತರಿಸಲಾಗಿದೆ ಎಂದು ತಿಳಿಯಿತು. ಐವತ್ತ ನಾಲ್ಕಕ್ಕೆ ಓಡಿದರು. ವ್ಯರ್ಥ....ಎಪ್ಪತ್ತೆರಡಕ್ಕೆ ಎಂದು ಉತ್ತರ ಬಂದಿತು.... ಅಲ್ಲಿಯೂ ಆತ ದೊರೆಯಲಿಲ್ಲ....ಹೀಗೇ ಮೇಲೆ ಕೆಳಗೆ ಇಬ್ಬರೂ ಓಡಾಡಿ ದರು .. ಲಾವಣ್ಯಳಿಗೆ ತಡೆದುಕೊಳ್ಳಲಾಗುತ್ತಿರಲಿಲ್ಲ. ಅವಳ ಎದೆ ಕಮ್ಮಾರನ ತಿದಿಯಂತೆ ಹೊತ್ತಿ ಉರಿಯುತ್ತಿತ್ತು. ಮೈಮೇಲೆ ಅವಳಿಗೆ ಎಚ್ಚರವಿರಲಿಲ್ಲ. ಬಟ್ಟೆಗಳು ಅಸ್ತವ್ಯಸ್ತವಾಗಿದ್ದವು. ಕಣ್ಣು ಮೂಗುಗಳಿಂದ ನೀರು ಸೋರ ಲಾರಂಭಿಸಿತ್ತು.

ಅವಳ ಆ ವಿಕಾರ ರೂಪ ಕಂಡು ಶಿವರಾಜ್ ತಬ್ಬಿಬ್ಬಾದ....

ಅಂತೂ ಕೊನೆಗೆ ಹದಿನೆಂಟನೇ ನಂಬರ್ ರೂಮಿಗೆ ಬಂದಾಗ ಅವರಿಗೆ ಫಲ ದೊರೆಯುವ ಲಕ್ಷಣ ಕಂಡು ಬಂದವು.

"ಪಾಂಡುರಂಗ ಎಲ್ಲಿ ?" ಬಾಂಬಿನಂತೆ ಸಿಡಿದು ಕೇಳಿದಳು ಲಾವಣ್ಯ.

ಅಲ್ಲಿದ್ದ ರೂಮ್‌ಬಾಯ್ ಗಾಬರಿಯಾದರೂ ಸುಧಾರಿಸಿಕೊಂಡು ಒಮ್ಮೆ ಶಿವರಾಜನ ಕಡೆ ನೋಡಿದ. ಅದರರ್ಥ ತಿಳಿದುಕೊಂಡ ಆತ.

"ಹಾಂ ಹೇಳು ಗಾಬರಿಯಾಗಬೇಡ, ಇವರೂ ನಮ್ಮ ಇಲಾಖೆ ಯವರೇ...."

ಪಕಪಕ ಇಬ್ಬರ ಮುಖ ಎರಡು ಮೂರು ಬಾರಿ ನೋಡಿದ ರೂಮ್ ಬಾಯ್ ಉತ್ತರಿಸಲಾಗಲಿಲ್ಲ....ಶಿವರಾಜ್ ಒತ್ತಾಯಿಸಿದ.

"ಹೂಂ ಬೇಗ ಹೇಳು... ಎಲ್ಲಿ ಪಾಂಡುರಂಗ ?"

"ಇಲ್ಲಿದ್ದವರಲ್ಲವೆ ?" ಗಲಿಬಿಲಿಗೊಂಡ ಆತ ಉತ್ತರಿಸುವ ಬದಲು ಪ್ರಶ್ನಿಸಿದ.

"ಹಾಂ. ಹಾಂ ಅವರೇ ಎಲ್ಲಿಗೆ ಒಯ್ದಿದ್ದಾರೆ ?"

"ಶವಾಗಾರಕ್ಕೆ"

"ಶವಾಗಾರ ಎಲ್ಲಿದೆ ?"

"ಕೆಳಗೆ ಬೇಸ್‌ಮೆಂಟಿನಲ್ಲಿದೆ....ಎಡಭಾಗದಲ್ಲಿ ಕೊನೆಯ ಹಾಲ್"

"ಥ್ಯಾಂಕ್ಸ್....ಬಾ ಲಾವಣ್ಯ"

ಭರಭರ ಹೋಗುತ್ತಿದ್ದ ಪಾಂಡುರಂಗನ ಹಿಂದಿದ್ದ ಲಾವಣ್ಯಳಿಗೆ ಒಂದೂ ಅರ್ಥವಾಗಲಿಲ್ಲ.

ಪಾಂಡುರಂಗ ಶವಾಗಾರದಲ್ಲಿ ಅಂದರೆ....ಆತ ಸತ್ತು ಹೋದನೆ ? ಹೌಹಾರಿದಳಾಕೆ....

"ಶವಾಗಾರದಲ್ಲಿ ಏಕೆ ? ಶಿವೂ...."

ಶಿವರಾಜ ಹೊರಳಿ ಮುಖದ ತುಂಬ ನಗೆ ತಂದು ಅವಳಿಗೆ ತಿಳಿಸಿ ಹೇಳಿದ. "ಇದು ನಿಮ್ಮಂಥವರಿಗೆಲ್ಲ ಅರ್ಥವಾಗದು. ಇದೆಲ್ಲಾ ಪೊಲೀಸ್ ರಹಸ್ಯ. ಅವನ ಜೀವಕ್ಕೆ ಅಪಾಯವಿರುವುದರಿಂದ ಇಷ್ಟೆಲ್ಲ ರೂಮು ಬದಲು ಮಾಡಿ ಶವಾಗಾರದಲ್ಲಿ ಅಡಗಿಸಿದ್ದಾರೆ. ಶವದ ಮನೆಗೆ ಯಾರು ಬರುತ್ತಾರೆ ? ನೀನೇ ಹೇಳು."

ಹೌದಲ್ಲವೆ ?....ಎಂಥಾ ಮೋಸ....ಲಾವಣ್ಯಳ ಮುಖದ ಮೇಲೆ ಈಗ ಸಮಾಧಾನ ಮೂಡಿತು....ಇನ್ನು ಹೇಗಾದರೂ ಮಾಡಿ ಶಿವರಾಜನನ್ನು ದಾರಿಯಿಂದ ಸರಿಸಬೇಕು....ಪಾಂಡುರಂಗನನ್ನು ತಲುಪಬೇಕೆಂದರೆ ಶಿವರಾಜ....

ಲಾವಣ್ಯ ಮನದಲ್ಲೇ ನಿರ್ಧಾರ ಮಾಡಿಕೊಂಡಳು.

ಇಬ್ಬರೂ ಬೇಸಮೆಂಟಿಗೆ ಬಂದರು.

ಎಡಭಾಗದ ಕೊನೆಯ ಹಾಲ್‌ನಲ್ಲೇ ಇರುವುದು ಪಾಂಡುರಂಗ.

ಎರಡು ಹೆಜ್ಜೆ ಹೋಗುವಷ್ಟರಲ್ಲಿ ಕಣ್ಣಿಗೆ ಬಿತ್ತು ಮೂತ್ರಿ ಮಾಡುವ ಕೊಠಡಿ. ಅದರೆದುರು ಗಕ್ಕನೆ ನಿಂತ ಲಾವಣ್ಯ 'ಶಿವೂ' ಎಂದು ಕೂಗಿದಳು. ಮುಂದಿದ್ದ ಆತ ನಿಂತುಕೊಂಡ.

"ಅರ್ಜಂಟ್....ನನ್ನ ಜೊತೆ ನೀನೂ ಬಾ"

ಶಿವರಾಜನಿಗೆ ಅರ್ಥವಾಯಿತು. ಅಲ್ಲಿ ಯಾರೂ ಇರಲಿಲ್ಲ. ತನ್ನ ಕೆಲಸಕ್ಕೂ ಅದು ಸುರಕ್ಷಿತವಾದ ಸ್ಥಳವೆಂದು ಮನದಲ್ಲೇ ಮಂಡಿಗೆ ತಿನ್ನುತ್ತ ಆಗಲಿ ಎಂದು ತಲೆಯಾಡಿಸುತ್ತಾ ಒಳಬಂದ....

ಆತ ಒಳಗೆ ಬರುವುದೇ ತಡ....ಚಿರತೆಯಂತೆ ಅವನ ಮೇಲೆ ಎರಗಿದಳು ಲಾವಣ್ಯ....ಅವನಿಗೆ ಉಸಿರಾಡಲು ಕೊಡದೇ ಚೀರಲೂ ಆಸ್ಪದ ನೀಡದೆ ಆಕೆ ಅವನ ಎದೆಯ ಮೇಲೆ ಗುದ್ದಿ....ಒದ್ದು ನೆಲಕ್ಕೆ ಕೆಡವಿ ಕುತ್ತಿಗೆ ಹಿಚುಕ ಲಾರಂಭಿಸಿದಳು.

ಆಕೆಯ ಶರೀರದಲ್ಲಿ ಪ್ರೇತ ಪ್ರವೇಶಿಸಿತ್ತು.

ಬ್ರೌನ್ ಶುಗರ್ ಪ್ರೇತ....ಅದನ್ನು ತಡೆಯಲು ಆಕೆ ದಾರಿಗೆ ಅಡ್ಡ ಬಂದವರನ್ನೆಲ್ಲ ಮುಗಿಸಲು ಸಿದ್ಧಳಾಗಿದ್ದಳು....ಮೊದಲ ಸರದಿ ಶಿವರಾಜನದು. ಒದ್ದಾಡಿದ ಆತ ಎರಡು ಮೂರು ನಿಮಿಷಗಳಲ್ಲಿ ನಿಶ್ಚೇತನಾದ....ಅವನ ಎದೆ ಯಿಂದ ಮೇಲೆದ್ದ ಆಕೆ ಒಂದೆರಡು ನಿಮಿಷ ಜೋರಾಗಿ ಉಸಿರು ತೆಗೆದು ಕೊಂಡಳು....ನಂತರ ಸೊಂಟ....ಮೊಲೆ ಕಟ್ಟು ಎಲ್ಲಾ ತಡಕಾಡಿದಳು. ಇಮ್ರಾನನ ಕಣ್ಣು ತಪ್ಪಿಸಿ ಎಗರಿಸಿದ್ದ ಬ್ರೌನ್‌ಶುಗರ್ ಬೇಟೆಗಾಗಿ ಎಷ್ಟು ಹುಡುಕಿದರೂ ಅದೂ ಸಿಗಲೇ ಇಲ್ಲ. ಎಲ್ಲೋ ಬಿದ್ದು ಹೋಗಿತ್ತು....

ವಿಕಾರ ರೂಪದಲ್ಲಿದ್ದ ಆಕೆ ತನ್ನೆರಡೂ ಕಣ್ಣು ಹಿಗ್ಗಿಸಿ ಎಲ್ಲಿ ಬಿದ್ದಿರ ಬಹುದು ಎಂದು ಯೋಚಿಸಿದಾಗ ನೆನಪಾಯಿತು....ಪಾಂಡುರಂಗನ ವಿಳಾಸ ತಿಳಿಯಲು ಆಕೆ ನಾಟಕ ಮಾಡಿ ಚೀಟಿ ಹುಡುಕಾಡಿದ್ದಳು. ಅವರೂ ಸಹ ಅವಳೊಂದಿಗೆ ಹುಡುಕಾಟ ಮಾಡಿದ್ದು ನೆನಪಿಗೆ ಬಂದು ಅಲ್ಲಿಯೇ ಎಲ್ಲೋ ಬಿದ್ದಿರಬೇಕು ಎಂದುಕೊಂಡಳು.

ಮತ್ತೆ ಅಲ್ಲಿಗೆ ಹೋಗುವಂತಿರಲಿಲ್ಲ....

ಸಮಯ ಮೀರಿ ಹೋಗಿತ್ತು... ಆದಷ್ಟು ಬೇಗ ಪಾಂಡುರಂಗನನ್ನು ಮುಗಿಸಿ ಹೊರಗೋಡುವುದು ಸೂಕ್ತ ಎಂದು ನಿರ್ಧರಿಸಿ ಪ್ರೇತದಂತೆ ಕರಕರ ಹಲ್ಲು ಕಡಿಯುತ್ತ ಧಪ್ ಧಪ್ ಎಂದು ಹೆಜ್ಜೆಯೊಂದಿಗೆ ಹೊರಗೋಡಿದಳು....

ಶವಾಗಾರ ಎಡಭಾಗದ ಕೊನೆಯಲ್ಲಿತ್ತು. ಧಡಾರ್ ಎಂದು ಬಾಗಿಲು ತೆರೆದು ಒಳಗೆ ಪ್ರವೇಶಿಸಿದಳು. ಅಲ್ಲಿದ್ದವು ಐದಾರು ಸ್ಟ್ರೆಚರ್‌ಗಳು. ಅದೆಲ್ಲಾ ಖಾಲಿಯಾಗಿದ್ದವು. ಗೋಡೆಗೆ ತಾಗಿ ಮುಖದ ತುಂಬಾ ಬಿಳಿ ಅರಿವೆ ಹೊದಿಸಿದ ದೇಹ ಕಣ್ಣಿಗೆ ಬಿತ್ತು.

"ಓಹ್, ಸತ್ತಂತೆ ನಟನೆಯೋ...."

ಪಿಶಾಚಿಯಂತೆ ಗಹಗಹಿಸಿ ನಕ್ಕ ಆಕೆ ಸುತ್ತಲೂ ದಿಟ್ಟಿಸಿದಳು. ಮೂಲೆ

ಯಲ್ಲಿದ್ದ ಮೇಜಿನ ಮೇಲೆ ಹತ್ತಾರು ಬಗೆಯ ಆಯುಧಗಳು ಕಂಡು ಬಂದವು. ಅತ್ತ ಧಾವಿಸಿದ ಆಕೆ ಹರಿತವಾದ ಚೂರಿಯೊಂದನ್ನು ಕೈಗೆತ್ತಿಕೊಂಡು ಬಿದ್ದು ಕೊಂಡಿದ್ದ ದೇಹದ ಮೇಲೆ ಹತ್ತಾರುಬಾರಿ ಚುಚ್ಚಿ ಚುಚ್ಚಿ ಕೂಗತೊಡಗಿದಳು. "ಪಾಂಡುರಂಗ ಸಾಯಿ....ನೀನು ಸಾಯಿ....ನೀನು ಸತ್ತರೇ. ನನಗೆ ಜೀವದಾನ ಇಲ್ಲದಿದ್ದರೆ ನಾನು ಶೀತಲಕೋಳಿಯಾಗಬೇಕಾಗುತ್ತದೆ...."

# 10

ಅವಿನಾಶ ಒಡೆದ ಕಣ್ಣುಗಳಿಂದ ನಾಮ್ತಿಂಗನ ಕಡೆ ನೋಡಿದ.

ಆತ ಕುಟಿಲನಗೆ ನಗುತ್ತ ಕ್ಯಾಮರಾ ಹೆಗಲಿಗೆ ನೇತು ಹಾಕಿಕೊಂಡು ವ್ಯಂಗ್ಯ ಮಾಡಿದ.

"ಅಲೆಮಾರಿ ಪೊಲೀಸ್ ಇನ್‌ಸ್ಪೆಕ್ಟರ್ ಅವಿನಾಶ್.... ನೀನೊಬ್ಬನೇ ಜಾಣ ಎಂದು ತಿಳಿದುಕೊಂಡಿದ್ದೀಯಾ.... ಸಿಗರೇಟಿಗೆ ಅಗ್ನಿಸ್ಪರ್ಶ ಮಾಡಿಸಿ ಕೊಳ್ಳುವ ನೆವದಲ್ಲಿ ನನ್ನ ಬಳಿ ಬಂದು ಚೆಕ್ ಮಾಡಿದೆ.... ನಾನು ನಿನ್ನನ್ನು ಪರೀಕ್ಷಿಸಿದೆ....ಮೂರ್ಖ.... ಮೇಕಪ್ ಮಾಡಿಕೊಂಡು ಡ್ರೆಸ್ ಚೇಂಜ್ ಮಾಡಿಕೊಂಡ ನಿನಗೆ ನಿನ್ನ ಶೂಗಳನ್ನು ಬದಲಿಸಬೇಕು ಎಂದು ಹೊಳೆಯ ಲಿಲ್ಲವೆ ?...."

ಅವಿನಾಶನಿಗೆ ತಪ್ಪಿನ ಅರಿವಾಗಿತ್ತು.

ತಾಮಾಡಿದ ತಪ್ಪಿಗೆ ಆತ ಭಾರೀ ಬೆಲೆ ಬೇರೆ ತೆತ್ತಿದ್ದ,

ನಗೀನಾಳ ಸಾವು ಅವನ ತಪ್ಪಿನಿಂದೇ ಆಗಿತ್ತು.... ಕಾಮ್ತಿಂಗ ಎಷ್ಟೇ ಚತುರನಾಗಿದ್ದರೂ ಕಣ್ಣು ಬದಲಿಸಿಕೊಂಡಿರಲಿಲ್ಲ.... ತಾನು ಶೂ.... ಯೋಚಿ ಸುತ್ತಿದ್ದ ಆತ ಒಮ್ಮೆಲೆ ಬೆಚ್ಚಿ ಬಿದ್ದ ಪೊಲೀಸ್ ಗಾಡಿ ಸೈರನ್....ಆತ ತಬ್ಬಿಬ್ಬಾದ.... ಅವನ ಅವಸ್ಥೆ ಕಂಡು ಕಾಮ್ತಿಂಗ ಮನಸಾರೆ ನಕ್ಕ.

"ಹೇಗಿದೆ ನನ್ನ ಪ್ಲಾನ್ ? ನನಗಾಗಿ ನೀನು ಈ ಕ್ಯಾಬರೆ ಡ್ಯಾನ್ಸರ್ ಮೂಲಕ ಬಲೆಬೀಸಿದೆ, ನೀನು ಬೀಸಿದ ಬಲೆಯನ್ನೇ ನಾನು ನಿನಗೇ ಹೊರಳಿ ಸಿದೆ.... ಅವಿನಾಶ ಯೋಚಿಸು ನೀನೆಂಥ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿರುವೆ

ಎಂದು ನೀನೊಬ್ಬ ಪೊಲೀಸ್ ಅಧಿಕಾರಿ. ಆದರೆ ಮಾರುವೇಷದಲ್ಲಿದ್ದೀಯಾ.... ಆದೂ ಅಲ್ಲದೆ ಕ್ಯಾಬರೆ ಡ್ಯಾನ್ಸರ್ ನಗೀನಾಳ ನಗ್ನದೇಹದೊಂದಿಗೆ.... ನೀನು ಎಲ್ಲಾ ಸಬೂಬು ಹೇಳಿ ಪೊಲೀಸರ ಕೈಯಿಂದ ಪಾರಾಗುವಷ್ಟರಲ್ಲಿ ನಾನಿಲ್ಲಿಂದ ಪಾರಾಗಿರುತ್ತೇನೆ.... ಹಾಂ ಒಂದು ಮಾತು.... ನಾನು ಮಾತ್ರ ಹೇಡಿಯಂತೆ ಹೆದರಿ ಓಡಿ ಹೋಗುವುದಿಲ್ಲ.... ನಿನಗೆ ಸರಿಯಾದ ಪೆಟ್ಟು ಕೊಡಲು ಹೊರಗೆ ಕಾಯುತ್ತಿರುತ್ತೇನೆ ... ಅಂದರೇನೇ ಮಜಾ ಬರುವುದು."

ಬಾಗಿಲ ಮೇಲೆ ಪ್ರಹಾರ ಆರಂಭವಾಯಿತು.

ಅವಿನಾಶ ಚಡಪಡಿಸಲಾರಂಭಿಸಿದ.... ವಿಜಯದ ನಗೆ ನಗುತ್ತಲೇ ಕಾಮ್ರಿಂಗ ಕಿಟಕಿಯಿಂದ ಮರೆಯಾದ.... ಅವಿನಾಶ ಕಿಟಕಿಯತ್ತ ಹೆಜ್ಜೆ ಹಾಕುತ್ತಿರುವಾಗಲೇ ಫಡಾರ್ ಎಂದು ಬಾಗಿಲು ಮುರಿದು ಬಿದ್ದು ಕೈಯಲ್ಲಿ ರಿವಾಲ್ವರ್ ಹಿಡಿದಿದ್ದ ಪೊಲೀಸ್ ಅಧಿಕಾರಿಯೊಬ್ಬ ಒಳನುಗ್ಗಿದ.... ಅವನ ಹಿಂದೆ ಐದಾರು ಜನ ರೈಫಲ್‌ದಾರಿ ಕಾನ್‌ಸ್ಟೇಬಲ್‌ರು....

ಅವಿನಾಶ ಓಡುವ ಉಪಾಯ ಕೈಬಿಟ್ಟು ಅವರತ್ತ ಹೊರಳಿ ತನ್ನೆರಡೂ ಕೈಗಳನ್ನು ಮೇಲೆತ್ತಿ ಶರಣಾಗತನಾದ.... ಮುಂದಿನ ಕ್ಷಣ ಆತ ಬಂದಿಯಾಗಿದ್ದ. ಪೊಲೀಸರ ಕೆಲಸ ಮುಗಿಯಲು ಒಂದು ಗಂಟೆಗಿಂತ ಹೆಚ್ಚು ಸಮಯ ಹಿಡಿಯಿತು. ಅಲ್ಲಿಯವರೆಗೂ ಅವಿನಾಶ ಮೂಲೆಯಲ್ಲಿದ್ದ ಕುರ್ಚಿ ಮೇಲೆ ತೆಪ್ಪಗೆ ಕುಳಿತಿದ್ದ. ಐದು ನಿಮಿಷಗಳಿಗೆ ಒಮ್ಮೆ ಸಿಗರೇಟು ಸೇದುವುದನ್ನು ಮಾತ್ರ ಆತ ಬಿಟ್ಟಿರಲಿಲ್ಲ.

ಸಾಮಾನ್ಯ ಅಪರಾಧಿಗಳಂತೆ ಅವನನ್ನು ವ್ಯಾನಿಗೆ ತಳ್ಳಲಾಯಿತು. ನಾಲ್ಕು ಜನರ ಮಧ್ಯೆ ಆತನನ್ನು ವ್ಯಾನ್ ಮೂಲಕ ಠಾಣೆಗೆ ಕರೆತಂದು,ಲಾಕಪ್‌ಗೆ ತಳ್ಳಿದ ಪೊಲೀಸ್ ಅಧಿಕಾರಿ ಅವನನ್ನು ವಿಚಾರಿಸದೇ ತನ್ನ ರೂಮಿನತ್ತ ನಡೆದಾಗ ಅವಿನಾಶ ತಡೆದ.

"ಆಫೀಸರ್ ನನ್ನ ವಿಚಾರಣೆ ಮಾಡುವುದಿಲ್ಲವೆ ?"

"ಅದರ ಅವಶ್ಯಕತೆಯಿಲ್ಲ. ಪೂರ್ತಿ ಎರಡು ದಿನ ಇಲ್ಲೇ ಬಿದ್ದಿರು. ಮೂರನೆ ದಿನ ನೀನೇ ಎಲ್ಲಾ ಬಾಯಿಬಿಡುತ್ತೀ...."

"ಅದರ ಅವಶ್ಯಕತೆಯಿಲ್ಲ ಆಫೀಸರ್"

"ಅಂದ್ರೆ ಈಗಲೇ ಎಲ್ಲಾ ಹೇಳಿ ಬಿಡುತ್ತೀಯಾ"

"ಅದರ ಅವಶ್ಯಕತೆಯೂ ಇಲ್ಲ"

"ಶಟಪ್ ಹುಚ್ಚುಚ್ಚಾಗಿ ಬೊಗಳಬೇಡ ಬಾಯಿ ಮುಚ್ಚಿಕೊಂಡು ಬಿದ್ದಿರು"

"ಅದರ ಅವಶ್ಯಕತೆಯೇ ಇಲ್ಲ ಆಫೀಸರ್"

ಆ ಪೊಲೀಸ್ ಅಧಿಕಾರಿಗೆ ರೇಗಿಹೋಯಿತು. ಮೊದಲೇ ನೈಟ್‌ಡ್ಯೂಟಿ. ಮನೆಯಲ್ಲಿದ್ದ ಹೆಂಡತಿಯ ನೆನಪಾಗುತ್ತಿತ್ತು. ಅದಲ್ಲದೆ ಮರ್ಡರ್ ಕೇಸು.... ಎಲ್ಲಾ ಕೆಲಸ ಮುಗಿಸಿಕೊಂಡು ಬರುವಷ್ಟರಲ್ಲೇ ತಲೆ ಸಿಡಿಯತೊಡಗಿತ್ತು. ಒಂದೆರಡು ಗಂಟೆ ಮನೆಯಲ್ಲಿ ಹಾಯಾಗಿ ಕಳೆದು ವಿಶ್ರಾಂತಿ ಪಡೆಯಬೇಕೆಂದರೆ ಇವನ ತಲೆಹರಟೆ.

ರೇಗದೇ ಏನು? ಸಿಟ್ಟಿನಿಂದ ಬೆಂಕಿಯಂತಾಗಿ ಆತ ಧಾವಿಸಿದ ಅವಿನಾಶನತ್ತ. ಹೀಗಾಗುತ್ತದೆ ಎಂದರಿತಿದ್ದ ಅವಿನಾಶ್ ಗುಪ್ತ ಜೇಬಿನಲ್ಲಿ ಬಚ್ಚಿಟ್ಟಿದ್ದ ತನ್ನ ಗುರುತಿನ ಪತ್ರ ತೆಗೆದು ಅವನ ಮುಖಕ್ಕೆ ಹಿಡಿದ.

"ಇನ್‌ಸ್ಪೆಕ್ಟರ್ ಅವಿನಾಶ್.... ಫ್ರಮ್ ಕ್ರೈಂಬ್ರ್ಯಾಂಚ್" ಎಂದ....

ಸರ್ಪಕ್ಕೆ ಗರುಡನ ಗೆರೆ ತೋರಿಸಿದಂತಾಯಿತು....ಮುಗುಳುನಗೆ ನಗುತ್ತಾ ಫ್ರೆಂಚ್ ಕಟ್ ದಾಡಿ.... ಮೀಸೆ ಎಲ್ಲಾ ತೆಗೆದು ಹೊರಗೆಸೆದ ಅವಿನಾಶ.

"ದಯವಿಟ್ಟು ಇನ್‌ಸ್ಪೆಕ್ಟರ್ ಡಲ್ಲಾ ಅವರನ್ನು ಸಂಪರ್ಕಿಸಿ ನಿಮಗೆಲ್ಲಾ ವಿಷಯ ತಿಳಿಯುತ್ತದೆ."

ಆ ಪೊಲೀಸ್ ಅಧಿಕಾರಿಯ ವರ್ತನೆ ಒಮ್ಮೆಲೆ ಬದಲಾಯಿತು.

ಲಾಕಪ್ ಬಾಗಿಲು ತೆರೆದು ಅವನನ್ನು ಹೊರಗೆ ಕರೆತಂದ. ತನ್ನ ಆಫೀಸಿನಲ್ಲಿ ತನ್ನೆದುರು ಕುರ್ಚಿ ಮೇಲೆ ಕುಳ್ಳಿರಿಸಿದ.... ಕಾಫಿ ತರಿಸಿದ.... ಕಾಫಿ ಕುಡಿದಾದ ಮೇಲೆ ಶಾಂತವಾಗಿ ಕೇಳಿದ....

"ಈಗ ಹೇಳಿ ಮಿಸ್ಟರ್ ಅವಿನಾಶ....ಏನು ವಿಷಯ"

ಅವಿನಾಶ ತಾನು ಬಂದ ವಿಷಯದ ಬಗ್ಗೆ ಚಾಚು ತಪ್ಪದೆ ಎಲ್ಲಾ ಹೇಳಿ ಆದ ಮೇಲೆ ನುಡಿದ.

"ಇನ್ನು ಮೇಲಾದರೂ ಡಲ್ಲಾ ಅವರಿಗೆ ಫೋನು ಮಾಡಿ"

"ಆದರ ಅವಶ್ಯಕತೆಯಿಲ್ಲ"

ಸಹಜವಾಗಿ ನಾಲಗೆ ಮೇಲೆ ಬರುತ್ತಲೂ ಒಂದು ಕ್ಷಣ ತಬ್ಬಿಬ್ಬಾದ ಆತ ಮುಂದೆ ಖೊಳ್ ಎಂದು ನಕ್ಕ.... ಅವಿನಾಶನೂ ಧನಿ ಕೂಡಿಸಿದ.

"ಸನಗೆ ಅವಶ್ಯಕತೆ ಇದೆ ನಾನು ಮಾತನಾಡಬೇಕಾಗಿದೆ"

ಮತ್ತೆ ನಗು ಮಿಂಚಿತು. ಇಬ್ಬರ ಮುಖದ ಮೇಲೂ....

ಡಲ್ಲಾ ಮನೆಗೆ ರಿಂಗ್ ಮಾಡಿದ ಆಫೀಸರ್ ತುಂಬಾ ಹೊತ್ತು ಗಂಟೆ ಬಾರಿಸುತ್ತಲೇ ಇತ್ತು. ಸಮಯ ನೋಡಿದ. ಬೆಳಗಿನ ನಾಲ್ಕಕ್ಕೆ ಸಮೀಪಿಸಿತ್ತು. ರಿಸೀವರ್ ಕೆಳಗಿಡಬೇಕೆಂದುಕೊಂಡಾಗಲೇ ಆ ಕಡೆಯಿಂದ ಫೋನು ಎತ್ತಿ ಹಲೋ ಅಂವದ್ದು ಕೇಳಿಸಿತು.

"ಗುಡ್ ಮಾರ್ನಿಂಗ್ ಮೇಡಮ್....ನಾನು ಡಿಸೋಜಾ . ಎಸ್. ಐ. ಸಾಹೇಬರು ಇದ್ದಾರಾ ?" ಯಾವಾಗ ? ಯಾವ ಆಸ್ಪತ್ರೆ ? ಸರಿ ಸರಿ ಮೇಡಮ್ ?

ಡಿಸೋಜಾ ರಿಸೀವರ್ ಕೆಳಗಿಡುತ್ತಲೇ ಅವನ ಬಾಯಿಯಿಂದ ಆಸ್ಪತ್ರೆ ಎಂಬ ಶಬ್ದ ಕೇಳಿದ ಅವಿನಾಶ ಸರಕ್‌ನೆ ಕೇಳಿದ....

"ಆಸ್ಪತ್ರೆ ? ಯಾವ ಆಸ್ಪತ್ರೆ ? ಏನು ವಿಷಯ ?"

"ಅದೊಂದೂ ನನಗೆ ತಿಳಿಯದು ಅರ್ಧಗಂಟೆ ಮೊದಲು ಆಸ್ಪತ್ರೆಯಿಂದ ಫೋನು ಬಂದಿತಂತೆ. ಡಲ್ಲಾ ಸಾಹೇಬರು ಹೊರಟು ಹೋದರು ಎಂದು ತಿಳಿಯಿತು ಅಷ್ಟೇ"

"ನನಗೆ ಗೊತ್ತಿದೆ. ನಡೆಯಿರಿ ನಾನು ಕರೆದೊಯ್ಯುತ್ತೇನೆ" ಡಿಸೋಜಾ ಯೋಚನಾ ಮಗ್ನನಾದ... ಅವಿನಾಶ ಒತ್ತಾಯಿಸಿದ.

"ಡಿಸೋಜಾ...ಯೋಚಿಸಲು ಈಗ ಸಮಯವಿಲ್ಲ...ನಿಮ್ಮ ಡಲ್ಲಾ ಸಾಹೇಬರ ಪ್ರಾಣ ಅಪಾಯದಲ್ಲಿದೆ... ನನ್ನ ಮಾತು ನಂಬಿ....ನಡೆಯಿರಿ... ಬೇಗ !"

ಡಿಸೋಜಾಗೆ ಬೇರೆ ದಾರಿಯಿರಲಿಲ್ಲ. ತನ್ನ ಸಿಬ್ಬಂದಿಯೊಂದಿಗೆ ಮತ್ತೆ ಹೊರ ಹೊರಟ. ಈ ಬಾರಿ ಟೀಮಿನ ಕಪ್ತಾನ ಆತನಾಗಿರದೇ ಅವಿನಾಶ ನಾಗಿದ್ದ. ಹತ್ತು ಹದಿನೈದು ನಿಮಿಷಗಳಲ್ಲಿ ಆಸ್ಪತ್ರೆ ತಲುಪಿದರು. ಈ ಮಧ್ಯೆ ಅವಿನಾಶ ಎಲ್ಲರಿಗೂ ಅವರವರ ಡ್ಯೂಟಿ ತಿಳಿಸಿ ಹೇಳಿದ್ದ....ಜೀಪು ಆಸ್ಪತ್ರೆ

ಮುಂದೆ ನಿಲ್ಲುತ್ತಲೂ ಡಿಸೋಜಾ ಮತ್ತು ಅವಿನಾಶ ಒಳಗೋಡಿದರು.... ಶಿವರಾಜ ಮತ್ತು ಚಂದ್ರು ಡ್ಯೂಟಿ ಮೇಲಿದ್ದ ರೂಮಿನ ನಂಬರು ತಿಳಿದಿತ್ತು. ಹೀಗಾಗಿ ತೊಂದರೆಯಿಲ್ಲದೆ ಅಲ್ಲಿಯವರಿಗೆ ತಲುಪಿದರು. ಅಲ್ಲಿಯ ಪರಿಸ್ಥಿತಿಯೇ ಬೇರೆಯಾಗಿತ್ತು....ಅವರಿಗೆ ದೊರೆಕಿದ್ದು ಕೇವಲ ಚಂದ್ರು.... ಅವನಿಂದ ನರ್ಸ್ ವಿಷಯ ತಿಳಿಯಿತು. ಪಾಂಡುರಂಗನ ಬಗ್ಗೆ ನರ್ಸ್ ತೋರಿಸಿದ ಆಸ್ಥೆ ಸಂಶಯಕ್ಕೆ ಎಡೆ ಮಾಡಿಕೊಟ್ಟಿತು.

ಡಿಸೇಜಾ ಮುಂಗಾಣದಂತಾಗಿದ್ದ.

ಅವನ ಹಿರಿಯ ಅಧಿಕಾರಿ ಅಪಾಯದಲ್ಲಿದ್ದ. ಆ ವಿಷಯ ತಿಳಿದಿದ್ದರೂ ಅವನಿಂದ ಏನೂ ಮಾಡಲಾಗಿರಲಿಲ್ಲ. ಅವಿನಾಶನೇ ಧೈರ್ಯ ಹೇಳಿದ. ಡಿಸೋಜಾ ಧೈರ್ಯಗೆಡಬೇಡಿ....ನಾದಿದ್ದೇನೆ....ಇರಿ ನೆನಪು ಮಾಡಿಕೊಳ್ಳು ತ್ತೇನೆ. ಸಾಯಂಕಾಲ ನಾನೇ ಪಾಂಡುರಂಗನನ್ನು ಇಲ್ಲಿಗೆ ತಂದವ ಅವರ ರಕ್ಷಣೆ ಭಾರ ಎಲ್ಲಾ ಅವರಿಗೆ ಬಿಟ್ಟುಕೊಟ್ಟಿದ್ದೆ. ಶತೃ ಮರಳಿಬಂದು ಪಾಂಡುರಂಗನ ಮೇಲೆ ಆಕ್ರಮಣ ಮಾಡಬಹುದು ಎಂಬ ಭೀತಿ ಇದ್ದುದರಿಂದ ಅವನನ್ನು ಇಟ್ಟಿದ್ದ ರೂಮು ಮೇಲಿಂದ ಮೇಲೆ ಬದಲಾಯಿಸಲಾಯಿತು. ಧೈರ್ಯ ಕಳೆದುಕೊಳ್ಳಬೇಡಿ"

ಒಮ್ಮೆಂದೊಮ್ಮೆಲೆ ಅವಿನಾಶನ ವರ್ತನೆ ಬದಲಾಯಿತು.

ಆತ ಗಾಳಿಯಲ್ಲಿ ಜೋರಾಗಿ ಉಸಿರು ತೆಗೆದುಕೊಳ್ಳತೊಡಗಿದ.... ಪೊಲೀಸ್ ಡಾಗ್ ತರಹ....ವಾಸನೆ ಆಘ್ರಾಣಿಸುತ್ತ ಮಂಚದ ಕೆಳಗೆ ಬಾಗಿದ ಚಿಕ್ಕದೊಂದು ಪುಡಿಕೆ ಅದನ್ನು ಬಿಚ್ಚಿದ....ಬೂದುಬಣ್ಣದ ಪುಡಿ. ತುಸು ಚಿಟಿಕೆಯನ್ನು ತೆಗೆದುಕೊಂಡು ನಾಲಿಗೆ ಮೇಲೆ ಇಟ್ಟುಕೊಂಡ....ಮುಖ ಗಂಭೀರವಾಯಿತು.

"ಇದು ಬ್ರೌನ್ ಶುಗರ್ ಇಲ್ಲಿ ಹೇಗೆ ಬಂದಿತು ?

ಚಂದ್ರುವಿಗೆ ನರ್ಸ್ ಚೀಟಿ ಹುಡುಕ್ಕಿದ್ದು ನೆನಪಾಗಿ ಹೇಳಿದ.

"ಇದು ಆ ನರ್ಸ್ ಬಳಿ ಇರಬೇಕು. ಇಲ್ಲಿಯೇ ಆಕೆ ತನ್ನ ಮೇಲು ಬಟ್ಟೆ ಬಿಚ್ಚಿ ಜಾಡಿಸಿದ್ದಳು"

"ಹಾಗಾದರೆ ಆಕೆ ತುಂಬಾ ಅಪಾಯಕಾರಿ ಪ್ರಾಣಿ ನಾವು ಅವಳನ್ನು ಬೇಗ ಹುಡುಕಬೇಕು. ಬ್ರೌನ್ ಶುಗರ್ ಸ್ಮ್ಯಾಕ್ ಸಿಗದಿದ್ದರೆ ಆಕೆ ಹಿಂಸಾರೂಪ

ಧರಿಸುತ್ತಾಳೆ. ಎದುರು ಬಂದವರನ್ನು ಕತ್ತರಿಸಿ ಹೋಗುತ್ತಾಳೆ. ಬೇಗ ನಾವು ಅವಳನ್ನು ಹುಡುಕಬೇಕು. ನಡೆಯಿರಿ...."

ಇದನ್ನೆಲ್ಲ ಕೇಳಿದ ಮೇಲಂತೂ ಡಿಸೋಜಾ ಭೂಮಿಗಿಳಿದು ಹೋದ.

ಮುಂದೆ ಆರಂಭವಾಯಿತು. ಇಲಿಬೆಕ್ಕಿನ ಆಟ ಡಲ್ಲಾ ಸಾಹೇಬರ ಜೀವ ಗಂಡಾಂತರದಲ್ಲಿದೆ ಎಂಬ ಅರಿವಾಗುತ್ತಲು ಪೊಲೀಸರು ಚುರುಕಾಗಿದ್ದರು. ಡಿಸೋಜಾ ಅಂತೂ ಚಿಂತಾಕ್ರಾಂತನಾಗಿದ್ದ. ಅವನ ಹಿರಿಯ ಅಧಿಕಾರಿ ಬಗ್ಗೆ ವ್ಯಾಕುಲಗೊಂಡಿದ್ದ. ಅವನ ಮುಖಭಾವ ಗಮನಿಸಿದ ಅವಿನಾಶ್ ಧೈರ್ಯ ನೀಡಿದ.

"ಡಿಸೋಜಾ....ನೀವು ನಿಶ್ಚಿಂತೆಯಿಂದಿರಿ....ಡಲ್ಲಾ ಸಾಹೇಬರು ಸುರುಕ್ಷಿತರಾಗಿದ್ದಾರೆ"

"ನನಗೇಕೋ ಹೆದರಿಕೆಯಾಗುತ್ತಿದೆ.... ನೀವಿರದಿದ್ದರೆ ನಾನೊಬ್ಬನೇ...."

"ಎಲ್ಲಕ್ಕಿಂತ ದೊಡ್ಡವ ಬೇರೊಬ್ಬನಿದ್ದಾನೆ ಡಿಸೋಜಾ....ಅವನ ಎಣಿಕೆಯಂತೆ ಎಲ್ಲಾ ನಡೆಯುವುದು....ಹೂಂ....ಮುಂದಿನ ಕಾರ್ಯ ನೋಡಿಕೊಳ್ಳಿ"

ಡಿಸೋಜಾಗೆ ಎಷ್ಟೋ ಸಮಾಧಾನವಾಯಿತು.

ಒಂದು ರೂಮಿನಿಂದ ಮತ್ತೊಂದು ರೂಮಿಗೆ ಓಡಾಟ.ಮಧ್ಯೆ ಮಧ್ಯೆ ನರ್ಸ್ ಮುಖಚರ್ಯೆ ಹೇಳಿ ಅವಳ ಬಗ್ಗೆ ವಿಚಾರಣೆ ಸಹ ನಡೆದಿತ್ತು....ಕೆಲವರು ಈ ಕಡೆ ನೋಡಿದ್ದೇನೆ ಅಂದರು....ಕೆಲವರು ಆ ಕಡೆ....ಎಲ್ಲ ಕಡೆ ಹುಡುಕಿ ಆಯ್ತು ಡಲ್ಲಾ ಸಾಹೇಬರೂ ಸಿಗಲಿಲ್ಲ....ನರ್ಸ್ ಕಾಣಲಿಲ್ಲ.

ಅವರಿಬ್ಬರೂ ಕಾಣೆಯಾಗಿದ್ದರು.

ಏನಿದರ ಅರ್ಥ ?

ಡಲ್ಲಾ ಅವರನ್ನು ಆ ನರ್ಸ್ ಅಪಹರಿಸಿದಳೋ ಅಥವಾ ನರ್ಸನ್ನು ಡಲ್ಲಾ ಬಂಧಿಸಿ ಕರೆದೊಯ್ದರೋ....ಇದರ ಮಧ್ಯೆಯೇ ಮತ್ತೊಂದು ಸಮಸ್ಯೆ ಎದುರಾಯಿತು....ಪಾಂಡುರಂಗ ಎಲ್ಲಿ ? ಆತ ಎಲ್ಲಿ ಎಂಬುದು ಡ್ರೈವರ್, ಪಾಂಡುರಂಗನಿಗೆ, ಡಲ್ಲಾ ಸಾಹೇಬರಿಗಷ್ಟೇ ತಿಳಿದಿತ್ತು. ಹೀಗಾಗಿ ರಹಸ್ಯದ ಪರದೆ ಹಿಂದೆ ಈಗ ಪಾಂಡುರಂಗ ಸಹ ಮರೆಯಾಗಿದ್ದ....

ಪಾಂಡುರಂಗ, ಡಲ್ಲಾ ಮತ್ತು ನರ್ಸ್.... ಈ ಮೂವರೂ

ಕಾಣೆಯಾಗಿದ್ದರು. ಅವಿನಾಶ ಸೋಲೊಪ್ಪಿಕೊಳ್ಳಲಿಲ್ಲ. ಪರಿಶೋಧನೆ ಆರಂಭಿಸಿದ... ಅಲ್ಲಿಯೇ ತಿಳಿದು ಬಂದಿತು. ಎರಡು ಮೂರು ಗಂಟೆ ಹಿಂದೆ ಮರಣ ಹೊಂದಿದ್ದ ವ್ಯಕ್ತಿಯ ಶವ ಮಾಯವಾಗಿತ್ತು. ಯಾರೋ ಅಪಹರಿಸಿದ್ದರು.

ಇಷ್ಟು ಸೂಚನೆ ಸಾಕಾಯಿತು ಅವಿನಾಶನಿಗೆ.

ಅದರ ಹಿಂದೆಯೇ ಬಿದ್ದ....ಶವ ಯಾರದು ಎಂದು ತಿಳಿಯಲಿಲ್ಲ. ಆದರ ವಿವರ ಮಾತ್ರ ಪೂರ್ತಿ ತಿಳಿದು ಬಂದಿತು .. ಎರಡು ದಿನಗಳ ಹಿಂದೆ ರಾತ್ರಿ ಮೂರು ಗಂಟೆ ಸಮಯ....ಮಾರುತಿ ಕಾರಿನಲ್ಲಿ ಬಂದವರೊಬ್ಬರು ಭಯಾನಕ ರೀತಿಯಲ್ಲಿ ಗಾಯಗೊಂಡಿದ್ದ ಸುಮಾರು ನಲವತ್ತು ವರ್ಷದ ವ್ಯಕ್ತಿಯೊಬ್ಬನನ್ನು ಆಸ್ಪತ್ರೆಗೆ ಸೇರಿಸಿದರು. ಅವರ ವೇಷ ಭೂಷಣ ಮೈಮೇಲಿದ್ದ ಚಿನ್ನದ ಒಡವೆಗಳನ್ನು ಗಮನಿಸಿದ ರಾತ್ರಿ ಡ್ಯೂಟಿ ಮೇಲಿದ್ದ ಸರ್ಜನ್ ದೇಶಪಾಂಡೆ ಕೂಡಲೇ ಪೇಶೆಂಟನ್ನು ಆರೈಕೆಗೆ ತೆಗೆದುಕೊಂಡರು. ಒಂದು ಒಂದೂವರೆ ಗಂಟೆ ನಂತರ ಎಲ್ಲ ರೀತಿಯ ವೈದ್ಯಕೀಯ ಸೇವೆ ನೀಡಿದ ಮೇಲೆ ರೋಗಿ ಬದುಕುವ ಸೂಚನೆ ಕಂಡು ಬಂದಿತು.

ಇದರಿಂದ ದೇಶಪಾಂಡೆ ಆನಂದಿತರಾದರು.

ಅವರು ಆಪರೇಶನ್ ಥಿಯೇಟರಿನಿಂದ ಹೊರಬರುತ್ತಿರುವಾಗ ಅವರ ಕಣ್ಣುಗಳಲ್ಲಿ ಸಂತಸ ಕುಣಿಯುತ್ತಿತ್ತು. ಅವರ ಮನದಲ್ಲಿದ್ದದ್ದು ನಿಜವಾದರೆ ಅಂದೇ ಅವರು ಲಕ್ಷಾಧೀಶ್ವರರಾಗುತ್ತಿದ್ದರು....ಪೊಲೀಸ್ ಕೇಸು" ಎಂದು ಹೇಳಿ ಪೊಲೀಸರಿಗೆ ತಿಳಿಸಬೇಕು ಎಂದು ಹೇಳಿ ಲಕ್ಷಲಕ್ಷ ಹಣ ಕೇಳಲು ಮನದಲ್ಲಿ ಪ್ಲಾನ್ ಮಾಡಿದ್ದರು.

ಆದರೆ ಅವರ ಕನಸಿನ ಗೋಡೆ ಕಳಚಿ ಬಿದ್ದಿತ್ತು....ಮಾರುತಿ ಕಾರಿನಲ್ಲಿ ಬಂದ ವ್ಯಕ್ತಿ ಮಾಯವಾಗಿತ್ತು.

ದೇಶಪಾಂಡೆ ಗಾಬರಿಯಾದರು, ಲಕ್ಷಾಧಿಪತಿಯಾಗುವ ಕನಸು ಭಗ್ನವಾಗಿ ಜೈಲು ಸೇರುವ ಭೀತಿ ಮೂಡಿತು. ಕೂಡಲೇ ಪೊಲೀಸರಿಗೆ ಫೋನು ಮಾಡಿದರು....ಎರಡು ದಿನ ಅವರನ್ನು ಕಾಡಿದ ಪೊಲೀಸ್ ಅಧಿಕಾರಿ ಅವರ ತಪ್ಪಿಲ್ಲವೆಂದು ತಿಳಿದ ಮೇಲೆ ಕಾಡುವುದನ್ನು ಬಿಟ್ಟ....ಮಾರನೇ ದಿವಸ ಆ ವ್ಯಕ್ತಿ ಸಾವನ್ನಪ್ಪಿದ....ಅವನ ಶವ ಸಾಗಿಸಿ ಶವಾಗಾರದಲ್ಲಿಡಲಾಗಿತ್ತು....ಅದೇ ಶವ

ಈಗ ಮಾಯವಾಗಿ ಹೊಸ ಸಮಸ್ಯೆ ಉದ್ಭವಿಸಿದ್ದರಿಂದ ದೇಶಪಾಂಡೆ ಚಿಂತಾಕ್ರಾಂತರಾಗಿದ್ದರು.

ಅವಿನಾಶನಿಗೆ ಇದರ ಹಿಂದೆ ಯಾವುದೋ ರಹಸ್ಯವಡಗಿದೆ ಎಂಬ ಸಂಶಯ ಮೂಡಿ ಅವರನ್ನು ನಾನಾ ರೀತಿ ಪ್ರಶ್ನಿಸಿದ. ಅವರು ನಿಜ ಹೇಳುತ್ತಿದ್ದಾರೆ ಎಂದೆನಿಸಿತು. ಅವರ ಮಾತಿನಲ್ಲಿ ಕಪಟವಿರಲಿಲ್ಲ.

"ತಾವು ಶವಾಗಾರದಲ್ಲಿದ್ದ ಎಲ್ಲಾ ಶವ ಪರೀಕ್ಷಿಸಿದಿರಾ ?"

"ಹಾಂ....ಒಂದು ಪರೀಕ್ಷಿಸಿದೆ"

"ಒಂದು .. ಒಂದು ಅಂದರೆ ?"

"ಈ ಆಸ್ಪತ್ರೆಯಲ್ಲಿ ಮೂರು ಶವಾಗಾರಗಳಿವೆ....ನಾನು ಶವ ಕಳಿಸಿದ ಶವಾಗಾರದಲ್ಲಿ ಶವವಿಲ್ಲ. ಬಹುಶಃ ಅದು ಬೇರೊಂದು ಶವಾಗಾರದಲ್ಲಿ ಇದ್ದರೂ ಇರಬಹುದು"

"ಹಾಗಾದರೆ ಸಮಯ ವ್ಯರ್ಥ ಕಳೆಯಬೇಡಿ. ಬನ್ನಿ ನಾನೂ ನಿಮ್ಮ ಜೊತೆ ಬರುತ್ತೇನೆ"

ದೇಶಪಾಂಡೆ ಅವರೊಂದಿಗೆ ಅವಿನಾಶ ಡಿಸೋಜಾ ಎರಡನೇ ಶವಾಗಾರದಲ್ಲಿ ಧಾವಿಸಿದರು. ಅಲ್ಲಿಯ ಪರಿಶ್ರಮ ವ್ಯರ್ಥವಾಯಿತು. ಅಲ್ಲಿ ದೇಶಪಾಂಡೆ ಗುರುತಿಸಿದಂತ ಶವ ಇರಲಿಲ್ಲ.

ಉಳಿದಿದ್ದು ನೆಲಮಹಡಿಯಲ್ಲಿ ಇದ್ದ ಶವಾಗಾರ.

ಸರಿ ಮೂವರೂ ಲಿಫ್ಟ್ ಮೂಲಕ ಅತ್ತ ಓಡಿದರು.

ನೆಲಮಹಡಿಯಲ್ಲಿ ಲಿಫ್ಟ್ ನಿಲ್ಲುತ್ತಲೂ ಅದರ ಬಾಗಿಲು ತೆರೆದು ಅವರು ಹೊರಗೆ ಕಾಲಿಡುತ್ತಿದ್ದಂತೆ ವಿಚಿತ್ರ ಕಂಪನ ಹೊಂದಿದ ಭಯಾನಕ ಧ್ವನಿಯೊಂದು ಪ್ರತಿಧ್ವನಿಸಿತು.

"ನಾ ನಿನ್ನನ್ನು ಜೀವಂತ ಬಿಡುವುದಿಲ್ಲ....ನನ್ನ ದಾರಿಗೆ ಅಡ್ಡ ಬಂದಿದ್ದೀಯಾ ನಿನ್ನನ್ನು ಚೂರಿಯಿಂದ ಇರಿದು ಛಿದ್ರಛಿದ್ರ ಮಾಡುತ್ತೇನೆ"

"ಶಟಪ್....ಹುಚ್ಚಿಯಂತೆ ಮಾತನಾಡದೇ ಚೂರಿ ಕೆಳಗೆ ಹಾಕು"

"ಅರೆ ಇದು ಡಲ್ಲಾ ಸಾಹೇಬರ ಧ್ವನಿ....ಡಿಸೋಜಾ ಉದ್ಗರಿಸುತ್ತಿದ್ದಂತೆ ಅವಿನಾಶ ಧ್ವನಿ ಬಂದ ಕಡೆ ಓಡಿದ...."

ಅಟ್ಟಹಾಸ ಮಾಡಿ ವಿಕಟವಾಗಿ ನಕ್ಕಿತು ನಾರಿಕಂಠ,

"ನಿನ್ನ ಬಳಿ ರಿವಾಲ್ವರೇ ಇಲ್ಲ ನನ್ನನ್ನೇನು ಮಾಡಬಲ್ಲೆ"

"ನಿನ್ನ ಬಂಧಿಸಲು ರಿವಾಲ್ವರ್ ಬೇಕಾಗಿಲ್ಲ... ನನ್ನ ಕೈಗಳೇ ಸಾಕು"

"ನನ್ನ ಬಳಿ ಬಂದ ಕೈಗಳನ್ನು ನಾನು ಕತ್ತರಿಸಿ ಹಾಕುತ್ತೇನೆ" ಹುಷಾರ್.

ಅವಿನಾಶ ನೆಲಮಹಡಿಯ ಶವಾಗಾರದಲ್ಲಿ ಓಡಿ ಬರುತ್ತಿದ್ದಂತೆ ಅವರ ಕಿವಿಗೆ ಬಿದ್ದ ವಾಕ್ಯಗಳಿವು....ಆತ ಏದುಸಿರು ಬಿಡುತ್ತ ಶವಾಗಾರದ ಬಾಗಿಲಿಗೆ ಬರುತ್ತಲೇ ಡಲ್ಲಾ ವಿಕಾರ ಕಂಠದಲ್ಲಿ ಚೀರಿಕೊಂಡಿದ್ದು ಕೇಳಿ ಆತ ತಟಸ್ಥನಾದ....ಆತ ಎಣಿಸಿದಂತೆಯೇ ಆಗಿತ್ತು....ಡಲ್ಲಾ....

ಕಲ್ಲಿನಂತೆ ನಿಂತಿದ್ದ ಅವಿನಾಶನನ್ನು ಸರಿಸಿ ಡಿಸೋಜಾ ಒಳಗೆ ಕಾಲಿಟ್ಟವ ಅಲ್ಲಿಯ ಭಯಾನಕ ದೃಶ್ಯ ಕಂಡು ಕಿಟಾರನೆ ಕಿರುಚಿಕೊಂಡ.

# 11

ಎಸ್.ಐ ಡಿಸೋಜಾ ಪ್ರತಿಮೆಯಂತೆ ನಿಂತಿದ್ದ. ಅವನ ಹಿಂದೆ ಇದ್ದ ದೇಶಪಾಂಡೆ ಅವರಿಗೆ ಮುಂದೆ ಹೋಗಲು ಧೈರ್ಯವಾಗದೇ ಅಲ್ಲೇ ತಟಸ್ಥರಾದರು.

"ಅವಿನಾಶ್ ಮಿಸ್ಟರ್ ಅವಿನಾಶ್ ಹೆಲ್ಪ್‌ಮಿ.... ಪ್ಲೀಜ್"

ಡಲ್ಲಾನ ಕೂಗು ಅವಿನಾಶನನ್ನು ಎಚ್ಚರಿಸಿತು. ಅವರೆಡೆ ನೋಡಿದ. ಡಲ್ಲಾನ ಎಡಗೈಯಿಂದ ರಕ್ತ ಹರಿಯುತ್ತಿತ್ತು. ಅವರ ಎದೆಯ ಭಾಗ, ಮುಂಗೈ ಎಲ್ಲಾ ರಕ್ತಮಯ. ಅವನೆದುರು ಎರಡು ಮೂರು ಅಡಿ ಅಂತರದಲ್ಲಿ ನಿಂತಿದ್ದ ನರ್ಸ್ ಪೂರ್ತಿಯಾಗಿ ರಕ್ತದಲ್ಲಿಯೇ ನೆನೆದಿದ್ದಳು. ಬಲಗೈಯಲ್ಲಿದ್ದ ಚೂರಿಯಿಂದ ಹನಿಹನಿಯಾಗಿ ಇನ್ನೂ ರಕ್ತ ಜಿನುಗುತ್ತಿತ್ತು ಅವಳು ಕರಕರ ಹಲ್ಲು ಕಡಿಯುತ್ತಿದ್ದಳು. ಅವಳ ಕಣ್ಣುಗಳು ಕತ್ತಲೆಯಲ್ಲಿ ಮಿನುಗುವ ಬೆಕ್ಕಿನ ಕಣ್ಣುಗಳಂತೆ ಫಳಫಳ ಹೊಳೆಯುತ್ತಿದ್ದವು. ಅವಳು ಉನ್ಮಾದಾವಸ್ಥೆಯಲ್ಲಿದ್ದಳು. ಪಿಶಾಚಿಯಂತೆ ನಗುತ್ತಿದ್ದಳು. ಕಣ್ಣು ಬಾಯಿ ಮೂಗುಗಳಿಂದ ನೀರು ಒಸರತೊಡಗಿತ್ತು.

ಒಮ್ಮೆಲೆ ಬಾಗಿಲಿಗೆ ಬಂದ ಇಬ್ಬರು ಮೂವರನ್ನು ಕಂಡು ಆಕೆ ಇನಿತೂ ವಿಚಲಿತಳಾಗಲಿಲ್ಲ.... ಪಿಶಾಚಿಯಂತೆ ವಿಕಟವಾಗಿ ನಕ್ಕು ಫೂತ್ಕರಿಸಿದಳು· "ನೀವೂ ಬಂದಿರಾ.... ಬನ್ನಿ.... ನಿಮಗಾಗಿಯೇ ಕಾಯುತ್ತಿದ್ದೆ.... ಅಲ್ಲಿ ನೋಡಿ ... ಅಲ್ಲಿ ಪಾಂಡರಂಗ.... ಪಾಂಡುರಂಗ ನನ್ನ ಕೈಯಲ್ಲಿ ಗೋವಿಂದಾ ಆದ.... ಅವನನಂತರ ಇವನ ಸರದಿ. ಪಾಪ ಉಳಿದುಕೊಂಡಿದ್ದಾರೆ. ಆದರೆ ನಾನು ಇವನನ್ನು ಬಿಡುವುದಿಲ್ಲ. ನನ್ನ ದಾರಿಗೆ ಅಡ್ಡ ಬಂದಿದ್ದಾನೆ ಈತ. ನಾನಿವನನ್ನು ಬಿಡುವುದಿಲ್ಲ. ಇವನನ್ನು ಮುಗಿಸಿ ನಂತರ ನಿಮ್ಮನ್ನು ವಿಚಾರಿಸಿ ಕೊಳ್ಳುತ್ತೇನೆ...."

ಡಿಸೋಜಾ ಎರಡು ಹೆಜ್ಜೆ ಹಿಂದೆ ಸರಿದರೆ, ದೇಶಪಾಂಡೆ ಅಲ್ಲಿಂದ ಕಂಬಿ ಕಿತ್ತಿದವರು ಲಿಫ್ಟ್ ಬಳಿ ಬಂದು ನಿಂತೇ ಉಸಿರು ತೆಗೆದುಕೊಂಡರು. ಅವಿನಾಶ ಅವಳನ್ನು ದಿಟ್ಟಿಸಿದ. ಅವಳ ರೂಪ.... ಮಾತನಾಡುವ ದಾಟಿ ಎಲ್ಲಾ ಆಕೆ ಬ್ರೌನ್ ಶುಗರದ ಪ್ರಭಾವದಲ್ಲಿದ್ದಾಳೆಂದು 'ಸಾರಿ ಹೇಳುತ್ತಿದ್ದವು. ಅಂಥ ಸಮಯದಲ್ಲಿ ಸಾಮಾನ್ಯ ಮನುಷ್ಯನೂ ಹುಲಿಯಾಗುತ್ತಾನೆ. ಶಕ್ತಿಯಿಂದ ಅವನನ್ನು ವಶಪಡಿಸಿಕೊಳ್ಳಲಾಗುವುದಿಲ್ಲ.... ಉಪಾಯದಿಂದಲೇ ಸಾಧ್ಯ....

ಆಕೆ ಡಲ್ಲಾ ಕಡೆ ಹೆಜ್ಜೆಯಿಡುತ್ತಿದ್ದಂತೆ ಆತ ಗಡಗಡ ನಡುಗಿ ಅರಚಿದ "ಡಿಸೋಜಾ.... ರಿವಾಲ್ವರದಿಂದ ಇವಳನ್ನು ಶೂಟ್ ಮಾಡು, ಬಿಡಬೇಡ"

ಡಿಸೋಜಾ ರಿವಾಲ್ವರಿಗೆ ಕೈ ಹಾಕುತ್ತಿದ್ದಂತೆ ಅವಿನಾಶ ತನ್ನ ಜೇಬಿನಿಂದ ರಿವಾಲ್ವರ್ ತೆಗೆದು ಅವಳೆಡೆ ಗುರಿ ಹಿಡಿದ.

"ತೆಪ್ಪಗೆ ಬಾಯಿ ಮುಚ್ಚಿಕೊಂಡು ನನ್ನೆಡೆ ಬಾ ... ಇಲ್ಲದಿದ್ದರೆ ಶೂಟ್ ಮಾಡ್ತೇನೆ"

"ಏನೆಂದೆ? ಶೂಟ್ ಮಾಡ್ತೀಯಾ.... ಅದೂ ನನ್ನಂಥ ಒಂದು ಹೆಣ್ಣಿನ ಮೇಲೆ ಮಾಡು. ಮಾಡು ಬೇಡವೆಂದವರಾರು ?...."

ಅರಚುತ್ತಾ!ಆಕೆ ಒಮ್ಮೆಂದೊಮ್ಮೆಲೆ ಚಿರತೆಯಂತೆ ಅವನ ಮೇಲೆ ಹಾರಿದಳು. ಅವಿನಾಶ ಅವಕ್ಕಾದ. ಅವಳು ಇಷ್ಟು ಚುರುಕಾಗಿ ಆಕ್ರಮಣ ಮಾಡುತ್ತಾಳೆಂದುಕೊಂಡಿರಲಿಲ್ಲ.... ಕೈಯಲ್ಲಿ ರಿವಾಲ್ವರ್ ಹಾರುತ್ತಿದ್ದಂತೆ ಆತ ಆಯತಪ್ಪಿ ಡಿಸೋಜಾನ ಮೇಲೆ ಬಿದ್ದ.... ಇಬ್ಬರೂ ಧಡಾರನೇ ನೆಲಕ್ಕೆ

ಬೀಳುತ್ತಿದ್ದಂತೆ ನರ್ಸು . ಲಾವಣ್ಯ ... ರಿವಾಲ್ವರ್ ಎತ್ತಿಕೊಂಡು ಅವರಿಬ್ಬರಿಗೆ ಗುರಿ ಹಿಡಿದಳು.

"ಈಗ ಹೇಳಿ ಶೂಟ್ ಮಾಡುವ ಸರದಿ ಯಾರದು ?.... ಆಂ ? ಯಾರದು ?"

"ನಿನ್ನದು" ಚಟಾರನೆ ನುಡಿದ ಅವಿನಾಶ್.

"ಮತ್ತೆ.... ಮತ್ತೆ" ಆವಾಗ ಏನೆಂದೆ ?

"ತಪ್ಪಾಯಿತು.... ಹಾಗೆನ್ನಬಾರದಿತ್ತು.... ತಾಯೀ ಕ್ಷಮಿಸು"

"ಆಂ ? ತಾಯಿ ಅನ್ನುತ್ತೀಯಾ.... ನಾನು ತಾಯಿಯೇ ನಿಂಗೆ ?"

"ಅಲ್ಲ ತಾಯಿ ಅಲ್ಲ.... ತಂಗೀ... ತಂಗಿ"

"ಸಟಪ್" ನನಗದು ಹಿಡಿಸೋಲ್ಲ.

"ಮತ್ತೇನೆನ್ನಲಿ?"

"ಡಾರ್ಲಿಂಗ್ ಅನ್ನು... ಡೀಯರ್ ಅನ್ನು ಲವರ್ ಅನ್ನು.... ಬೇಬಿ ಅನ್ನು...."

"ನೋ ನೋ ನನ್ನಿಂದಾಗದು"

"ಆಗದೇ.... ಹಾಗಾದರ ಶೂಟ್ ಮಾಡ್ತೇನೆ...."

ಆಕೆ ರಿವಾಲ್ವರ್ ಅವನೆಡೆ ಚಾಚಿದಳು.

ಅವಿನಾಶ್ ಮುಗಳ್ನಗುತ್ತ ಹೇಳಿದ.

"ಇಲ್ಲ.... ಇಲ್ಲ... ನೀ ನನಗೆ ಶೂಟ್ ಮಾಡಲಾರೆ...."

"ಆಂ ?.... ಮಾಡಲಾರೇನೆ ? ಏಕೆ ?"

"ಏಕೆಂಬುದನ್ನು ನೀನೇ ಯೋಚಿಸಿ ಹೇಳು "

ಲಾವಣ್ಯ ಯೋಚಿಸಲಾರಂಭಿಸಿದಳು .... ಅವಿನಾಶ ಮಂದಹಾಸ ಬೀರುತ್ತಾ ಮೆಲ್ಲನೆ ಮೇಲೆದ್ದ....ಅವನೆಡೆಯೇ ಕೌತುಕದಿಂದ ನೋಡುತ್ತಿದ್ದಡಲ್ಲಾ ಮಧ್ಯೆ ಆತ ತನ್ನ ಕೈಗಾದ ಗಾಯವನ್ನು ಮರೆತಂತೆ ಕಾಣುತ್ತಿತ್ತು.

"ಊಂ.... ಹೂಂ.... ನನಗೆ ಗೊತ್ತಿಲ್ಲ"

"ಗೊತ್ತಾಗಲಿಲ್ಲವೇ?"

"ಇಲ್ಲ ಗೊತ್ತಾಗಲಿಲ್ಲ"

"ಹಾಗಾದರೆ ಸೋತೆ ಎಂದು ಒಪ್ಪಿಕೊ....?"

"ಒಪ್ಪಿಕೊಳ್ತೀನೆ...."

"ನಾನು ಕೇಳಿದ್ದನ್ನು ತಪ್ಪು ದಂಡ ಕೊಡುತ್ತೀಯಾ"

"ಹಾಂ"

"ಹಾಗಾದರೆ ನಿನ್ನ ಕೈಯಲ್ಲಿಯ ರಿವಾಲ್ವರ್ ಕೊಡು"

"ಊಂ.... ಹೂಂ.... ಅದಾಗದು ಬೇಕಾದರೆ ಇದನ್ನು ಕೊಡುತ್ತೇನೆ."

ತನ್ನ ಕೈಯಲ್ಲಿದ್ದ ಚೂರಿ ಅವನತ್ತ ಬಿಸಾಡಿದಳು.

"ಹಾಗಾದರೆ ನಿನಗೆ ಬೇಕಾದ ವಸ್ತು ನಾ ಕೊಡುವುದಿಲ್ಲ"

"ಹೌದಲ್ಲವೇ ನಾನು ಮರೆತೇ ಬಿಟ್ಟಿದ್ದೆ.... ನಿನ್ನ ಬಳಿ ಏನಿದೆ? ನನಗೆ ಬೇಕಾದಂಥ ವಸ್ತು ನೀನು ನಿಜ ಹೇಳುತ್ತೀಯಾ ?"

"ಇದೆ.... ಖಂಡಿತವಾಗಿದೆ.... ನಾನು ಸುಳ್ಳು ಹೇಳುತ್ತಿಲ್ಲ"

"ರಿವಾಲ್ವರ್ ಕೊಟ್ಟರೆ ಕೊಡ್ತೀಯಾ"

"ಕೊಡ್ತೇನೆ"

"ನಿಜವಾಗ್ಲೂ"

"ನಿಜವಾಗ್ಲೂ"

"ತಗೋ ಹಾಗಾದರೆ ನನಗಿದು ಬೇಕಾಗಿಲ್ಲ ಲಾವಣ್ಯ ಕೈಲಿದ್ದ ರಿವಾಲ್ವರ್ ಅವನೆಡೆ ತೂರಿ ಒಗೆದಳು....

ಡಲ್ಲಾ ಮತ್ತು ಡಿಸೋಜಾ ಈ ಚಮತ್ಕಾರ ನೋಡಿ ಚಕಿತರಾದರು.

"ಹೂಂ.... ಈಗ ಕೊಡು. ನನಗೆ ಬೇಕಾದ ವಸ್ತುವನ್ನು.

"ನಾನು ಕೊಡದಿದ್ದರೆ ಏನು ಮಾಡ್ತೀಯಾ?"

ಅವಳ ಕಣ್ಣುಗಳು ವಿಕಾರವಾಗಿ ಅರಳಿದವು.... ಮೂಗಿನ ಹೊಳ್ಳೆ ಉಬ್ಬಿದವು. ವೇಗವಾಗಿ ಆಕೆ ಉಸಿರಾಡಿಸಲಾರಂಭಿಸಿದ್ದರಿಂದ ತುಂಬಿದೆದೆಗೆ ಮಹಾಪೂರ ಬಂದಂತಾಯಿತು.... ರಾಕ್ಷಸಿಯಂತೆ ಆಕೆ ಅರಚಿದಳು.

"ಕೊಡದಿದ್ದರೆ ನಿಮ್ಮನ್ನೆಲ್ಲ ಹಲ್ಲುಗಳಿಂದ ಕಚ್ಚಿಕಚ್ಚಿ ತುಂಡು ಮಾಡುತ್ತೇನೆ. ಕೈಗಳಿಂದ ಹರಿದು ಹಾಕುತ್ತೇನೆ.... ಕಾಲುಗಳಿಂದ ಒದ್ದು ಒದ್ದು ಹಣ್ಣು ಮಾಡುತ್ತೇನೆ. "ಇಷ್ಟಾಗುವುದರೊಳಗೆ ನಾನು ಗುಂಡು ಹಾರಿಸಿ ನಿನ್ನ ಕೊಂದು ಬಿಡುತ್ತೇನೆ."

"ನೀನು ಕೊಂದರೂ ಪರವಾಗಿಲ್ಲ....ನಾನು ಮಾಡಿಯೇಮಾಡ್ತೇನೆ. ಸತ್ತು ದೆವ್ವವಾಗಿ ನಿನ್ನನ್ನು ತಿಂದು ಹಾಕ್ತೇನೆ."

ಹುಚ್ಚಿಯಂತೆ ಆಕೆ ಅರಚಿದರೂ, ಸಾವಿಗೂ ಹೆದರದೆ ಆ ರೀತಿ ಖಂಡಿತ ಮಾಡಲು ಸಾಧ್ಯ .. ಪ್ರಯತ್ನಿಸಲು ಸಾಧ್ಯ.... ಎಂದು ಅರಿತಿದ್ದ ಅವಿನಾಶ ಜೇಬಿಗೆ ಕೈಹಾಕಿ ಪುಡಿಕೆಯನ್ನು ಹೊರತೆಗೆದ.

"ಇದೋ ಇಲ್ಲಿದೆ ನೋಡು ನಿನಗೆ ಬೇಕಾದ ವಸ್ತು"

ಅವನ ಕೈಯಲ್ಲಿಯ ಪುಡಿಕೆ ನೋಡುತ್ತಿದ್ದು, ಒಂದೇ ಸೆಕೆಂಡಿನಲ್ಲಿ ಆಕೆ ಬದಲಾದಳು. ಅವಳ ರೌದ್ರಾವತಾರ ಮಾಯವಾಗಿ ದೈನ್ಯತೆ ಮೂಡಿತು ಮುಖದ ಮೇಲೆ.

"ಹೌದು.... ಇದೇ.... ಇದೇ.... ಕೊಡು...."

"ಕೊಡದಿದ್ದರೆ"

"ಹಾಗೆ ಮಾಡಬೇಡಿ.... ನೀನು ಹೇಳಿದಂತೆ ಕೇಳುತ್ತೇನೆ.... ಕುಣಿ ಅಂದರೆ ಕುಣಿಯುತ್ತೇನೆ.... ಹಾಡೆಂದರೆ ಹಾಡುತ್ತೇನೆ. ಬಟ್ಟೆ ಬಿಚ್ಚಿ ಹಾರಾಡು ಎಂದರೆ ಅದನ್ನು ಮಾಡುತ್ತೇನೆ"

"ಅದಾವುದೂ ಬೇಡ"

"ಮತ್ತೆ"

"ನಮ್ಮೊಂದಿಗೆ ಮೆತ್ತಗೆ ಬಂದರೆ ಸಾಕು"

"ಓಹೋ ಬರುತ್ತೇನೆ"

"ತಂಟೆ ಮಾಡಿದರೆ?"

"ಮಾಡುವುದಿಲ್ಲ?"

"ಪ್ರಾಮಿಸ್"

"ಪ್ರಾಮೀಸ್"

"ತೆಗೆದುಕೊ ಬಾ ಹಾಗಾದರೆ"

ಹಸುಗೂಸಿನಂತೆ ಕಿಲಕಿಲ ಮಾಡುತ್ತ ಕೇಕೆ ಹಾಕುತ್ತ ಅವಿನಾಶನ ಬಳಿ ಬಂದ ಲಾವಣ್ಯ ಅದನ್ನು ತೆಗೆದುಕೊಂಡಳು. ಬಿಚ್ಚಿ ಅವರಲ್ಲಿದ್ದ ಎಲ್ಲಾ ಪೌಡರು ಒಂದೇ ಬಾರಿ ಬಾಯಿಗೆ ಸುರಿದುಕೊಂಡು "ಆಹ್.... ಹಾ!.... ಎಂದು ನೆಮ್ಮದಿಯ ಉಸಿರು ಬಿಟ್ಟು ನೆಲದ ಮೇಲೆ ಕುಸಿದಳು. ಅವಳ ಕಂಕುಳಲ್ಲಿ ಕೈಹಾಕಿ ಮೇಲೆಬ್ಬಿಸಿದ ಅವಿನಾಶ್.,

'ನಡೆ ... ನನ್ನ ಜೊತೆ"

"ಓಕೆ.... ಓಕೆ.... ಫ್ರೆಂಡ್.... ನನಗೆ ಎರಡು ನಿಮಿಷ ಟೈಂ ಕೊಡು"

ಅವಿನಾಶ ಅವಳ ಬಗ್ಗೆ ಚಿಂತಿಸುವುದನ್ನು ಬಿಟ್ಟು.... ಡಲ್ಲಾ ಕಡೆ ನೋಡಿದ.

ಅವರು ದಿಗ್ಮೂಢರಾಗಿ ಅವಿನಾಶನನ್ನೇ ವೀಕ್ಷಿಸುತ್ತಿದ್ದರು.... ಅವರಿಗೆ ಅದೇ ತಾನೇ ನಡೆದ ಘಟನೆಯನ್ನು ನಂಬಲಿಕ್ಕೇ ಆಗುತ್ತಿರಲಿಲ್ಲ....

ಸಾವಿಗೂ ಹೆದರದೇ ಹತ್ತಾರು ಜನರನ್ನು ಒಂದೇ ಬಾರಿ ಸೀಳಿ ಒಗೆಯುವಷ್ಟು ಕ್ರೂರಳಾಗಿದ್ದ ನರ್ಸ್ ಈಗ ಅವಿನಾಶನ ಮುಂದೆ ಬೆಕ್ಕಿನ ಮರಿಯಂತಾಗಿದ್ದಳು.

ಹೇಗಾಯಿತಿದು?

ಇದೆಂಥ ಪವಾಡ?....

"ಮಿಸ್ಟರ್ ಡಲ್ಲಾ ಬನ್ನಿ."

ಅವಿನಾಶ ಮತ್ತೆ ಕೂಗಿ ಕರೆದ....

'ಆಂ?.... ಬಂದೆ ಬಂದೆ' ಎರಡೇ ಹಾರಿಕೆಗೆ ಡಲ್ಲಾ ಬಂದು ಅವಿನಾಶನನ್ನು ಕೂಡಿಕೊಂಡ. ಡಿಸೋಜಾ ಅವರ ಕೈಗೆ ತನ್ನ ಜೇಬಿನಲ್ಲಿದ್ದ ವಸ್ತ್ರ ಸುತ್ತುತ್ತಿರುವಂತೆ ಏನೋ ನೆನಪಿಸಿಕೊಂಡ ಅವಿನಾಶ.

"ಅರೆ.... ದೇಶಪಾಂಡೆ ಎಲ್ಲಿ?...."

"ಅವರು ಹೊರಗೋಡಿದರು ಆಗಲೇ" ಡಿಸೋಜಾ ನಗುತ್ತಾ ಉತ್ತರಿಸಿದ.

"ಇಲ್ಲ ಅವರು ಇಲ್ಲೇ ಇರಬೇಕು ನೋಡಿ"

ಡಿಸೋಜಾ ಹೊರಗೆ ಇಣುಕಿದ.. ಲಿಫ್ಟ್ ಬಳಿ ನಿಂತಿದ್ದರು ದೇಶಪಾಂಡೆ.

"ಡಾಕ್ಟರ್ .... ಬನ್ನಿ ಏನೂ ಹೆದರಿಕೆಯಿಲ್ಲ"

ಡಿಸೋಜಾ ಕೂಗಿದ ಮೇಲೆ ಧೈರ್ಯದಿಂದ ಮುಂದಡಿಯಿಟ್ಟ ದೇಶಪಾಂಡೆ ಅವರ ಬಳಿ ಬಂದರು....ಮೆಲ್ಲನೆ ಇಣುಕಿ ನೋಡಿದರು. ಎಲ್ಲರೂ ಒಳಗೆ ಸುರಕ್ಷಿತರಾಗಿದ್ದರು.

ನರ್ಸ್.... ಲಾವಣ್ಯ ಗೋಡೆಗೊರಗಿ ಕುಳಿತು ತನ್ನಷ್ಟಕ್ಕೆ ತಾನೇ ಏನೋ ಗೊಣಗುತ್ತಿದ್ದಳು.... ಹಾಡು ಹಾಡುತ್ತಿದ್ದಳು. ಅವಳ ಸಾಮ್ರಾಜ್ಯವೇ

ಬೇರೆಯಾಗಿತ್ತು. ಆ ಪವಾಡ ಮಾಡಿ ತೋರಿಸಿದ ಅವಿನಾಶನೆಡೆ ಮೆಚ್ಚುಗೆಯಿಂದ ನೋಡಿದರು.

"ಡಾಕ್ಟರ್ ನನ್ನ ಪ್ರಶಂಸೆ ಆಮೇಲೆ ಮಾಡುವಿರಂತೆ. ಮೊದಲು ನಮ್ಮ ಡಲ್ಲಾ ಸಾಹೇಬರಿಗೆ ಚಿಕಿತ್ಸೆ ನೀಡಿ"

ಡಾಕ್ಟರ್ ಡಲ್ಲಾ ಅವರೆಡೆ ನೋಡಿ ಸಂತಸದಿಂದ ಅಭಿನಂದಿಸಿದರು.

'ಕಂಗ್ರ್ಯಾಚ್ಯುಲೇಶನ್ಸ್ ಮಿಸ್ಟರ್ ಡಲ್ಲಾ.... ನಿಮಗೆ ಪುನರ್ಜನ್ಮ ದೊರೆಯಿತು.'

ಡಲ್ಲಾ ಉತ್ತರಿಸಲಿಲ್ಲ.... ಮುಗಳು ನಕ್ಕ.

'ಬನ್ನಿ ಮೇಲೆ ಹೋಗೋಣ ... ಇಲ್ಲಿ ಬರಿ ಶವಗಳು ಮಾತ್ರ'

ದೇಶಪಾಂಡೆ ಅವರ ಬಾಯಿಯಿಂದ 'ಶವ' ಎಂಬ ಶಬ್ದ ಬರುತ್ತಲೇ ಅಲರ್ಟ್ ಆದ ಅವಿನಾಶ ದೇಶಪಾಂಡೆಯವರಿಗೆ ಹೇಳಿದ.

"ಡಾಕ್ಟರ್ ಮೊದಲು ಇಲ್ಲಿದ್ದ ಶವ ನೋಡಿ ಹೇಳಿ.... ನಾಪತ್ತೆಯಾದ ಶವದ ಬಗ್ಗೆ ತಲೆ ಕೆಡಿಸಿಕೊಂಡಿದ್ದಿರಲ್ಲ.... ಅದು ... ಅದು"

"ಹಾಂ. ಹಾಂ. ಗೊತ್ತಾಯಿತು.... ಗೊತ್ತಾಯಿತು...."

ಭರಭರನೆ ಶವದ ಬಳಿ ಹೆಜ್ಜೆ ಹಾಕಿದ ಅವರು ಹಾ.... ಎಂದು ಹೆದರಿ ಹಿಂದೆ ಜಿಗಿದರು.

"ಏನಾಯ್ತು.... ಶವ ಕಚ್ಚಿತಾ?"

"ನೋ.... ನೋ ಎಂದುತ್ತರಿಸಿದ ದೇಶಪಾಂಡೆ ತಮ್ಮ ಉತ್ತರಕ್ಕೆ ತಾವೇ ನಕ್ಕರು.... ಶವವೆಂದಾದರೂ ಕಚ್ಚುತ್ತದೆಯೆ?

"ಹೆಣದ ಹೊಟ್ಟೆ ಎದೆ ಎಲ್ಲಾ ಬಗೆದು ಬಿಟ್ಟಿದ್ದಾಳೆ ಚೂರಿಯಿಂದ ಅದಕ್ಕಾಗಿ ಹೆದರಿಕೆಯಾಯಿತು ... ಅಷ್ಟೇ"

ದೇಶಪಾಂಡೆ ತಾವಾಗಿಯೇ ಉತ್ತರಿಸಿ ಶವದ ಮುಖ ಚೆನ್ನಾಗಿ ಪರೀಕ್ಷಿಸಿ ನೋಡುತ್ತಾ "ಹಾಂ.... ಹಾಂ.... ಇದೇ ನಾಪತ್ತೆಯಾಗಿದ್ದ ಶವ" ಎಂದರು.

ಅವಿನಾಶ ಶವದ ಬಳಿ ಬಂದ. ನಿಜವಾಗಿಯೂ ಅಲ್ಲಿಯ ದೃಶ್ಯ ಭೀಭತ್ಸವಾಗಿತ್ತು.

ಮುಖ ಮಾತ್ರ ಸ್ಪಷ್ಟವಾಗಿ ಕಾಣುತ್ತಿತ್ತು.

"ಡಾಕ್ಟರ್ ಇವನಾರೆಂದು ತಿಳಿಯಲೇ ಇಲ್ಲವೇ?"

'ಇಲ್ಲ'

"ಇನ್ನೂ ವರೆಗೂ"

"ಹೌದು"

"ಮತ್ತೆ ಕರೆತಂದವರು"

"ಅವರೂ ಸಹ ಗೊತ್ತಾಗಲಿಲ್ಲ.... ಒಂದು ಮಾತು ನಿಜ. ಆತ ಎಲ್ಲೇ ಇದ್ದರೂ ಇಂದಿಲ್ಲ ನಾಳೆ ನನ್ನ ದೃಷ್ಟಿಗೆ ಬಿದ್ದೇ ಬೀಳುತ್ತಾನೆ"

ಹಾಗೇನಾದರೂ ಆದರೆ ಪೊಲೀಸ್ ಠಾಣೆಗೆ ಫೋನು ಮಾಡಿ"

ಎಲ್ಲರೂ ಮೇಲೆ ಬಂದರು.

ಡಲ್ಲಾ ಸಾಹೇಬರ ಕೈಗಾದ ಗಾಯತೊಳೆದು ಪಟ್ಟಿ ಹಾಕಿದ ದೇಶಪಾಂಡೆ ಸೆಪ್ಟಿಕ್ ಆಗಬಾರದೆಂದು ಚುಚ್ಚುಮದ್ದು ಚುಚ್ಚಿದರು. ಅವರಿಗೆ ವಂದನೆ ಹೇಳಿ ನರ್ಸ್ ಲಾವಣ್ಯಳೊಂದಿಗೆ ಅವಿನಾಶ ಹೊರಟು ನಿಂತ.

"ಅಂದ ಹಾಗೆ ನಿಮ್ಮ ಪರಿಚಯ ನನಗಾಗಲೇ ಇಲ್ಲವಲ್ಲ"

ದೇಶಪಾಂಡೆ ವಿಷಾದ ವ್ಯಕ್ತಪಡಿಸಿದರು. ಅವಿನಾಶ ನಕ್ಕ.

"ಸಂತೋಷ. ಈಗಲಾದರೂ ನೆನಪಾಯಿತಲ್ಲ.... ನನ್ನ ಹೆಸರು ಅವಿನಾಶ್ ಇನ್‌ಸ್ಪೆಕ್ಟರ್ ಅವಿನಾಶ್"

"ಓಹೋ ನೀವು ಅಲೆಮಾರಿ ಇನ್‌ಸ್ಪೆಕ್ಟರ್ ಅವಿನಾಶ ಅವರೋ"

ದೇಶಪಾಂಡೆ ಜೋರಾಗಿ ನಕ್ಕಾಗ ಅವರೊಂದಿಗೆ ಮೂವರೂ ಮುಕ್ತವಾಗಿ ನಕ್ಕರು.

ನರ್ಸ್ ಲಾವಣ್ಯ ಈಗ ಯಾವ ತಂಟೆಯನ್ನು ಮಾಡುತ್ತಿರಲಿಲ್ಲ.

ತನ್ನಷ್ಟಕ್ಕೆ ತಾನೇ ಆಡಿಕೊಳ್ಳುತ್ತಿದ್ದಳು ... ಹಾಡುತ್ತಿದ್ದಳು.... ಕೇವಲ ಅವಳ ರಟ್ಟೆಗಟ್ಟಿಯಾಗಿ ಹಿಡಿದಿದ್ದರು. ಅವಿನಾಶ್ ಮತ್ತು ಡಲ್ಲಾ.... ಡಿಸೋಜಾ ಮುಂದೆ ಮುಂದೆ ನಡೆಯುತ್ತಿದ್ದರು... ಇಬ್ಬರು ರಟ್ಟೆಗಳನ್ನು ಒಲವಾಗಿ ಹಿಡಿದಿದ್ದರೂ ನಡೆಯಲಾಗದೇ ಲಾವಣ್ಯ ಆಗಾಗ ಕುಸಿಯುತ್ತಿದ್ದಳು.

ಅವಳಿಗೆ ನಡೆಯಲು ಶಕ್ತಿಯೇ ಇರಲಿಲ್ಲ.

ಅರ್ಧಗಂಟೆ ಹಿಂದೆ ಹುಲಿಯಂತೆ ಅರ್ಭಟಿಸಿದ ಆಕೆ.... ಈಗ ಸತ್ತ ಹಾವಿನಂತಾಗಿದ್ದಳು.... ಲಿಫ್ಟಿನಿಂದ ನಾಲ್ವರೂ ಕೆಳಗೆ ಬಂದರು.

ಗಕ್ ಎಂದು ಎದ್ದಳು ಲಾವಣ್ಯ.

"ಏಕೆ ? ಏನಾಯಿತು ?"

"ಆತ ನನಗಾಗಿ ಕಪ್ಪು ವ್ಯಾನ್‌ನಲ್ಲಿ ಕಾಯ್ತಿರ್‍ತಾನೆ... ಪಾಂಡುರಂಗನ್ನ ಕೊಂದರೆ ಇನ್ನಷ್ಟು 'ಸ್ಮ್ಯಾಕ್' ಕೊಡ್ತೇನೆ ಎಂದು ಹೇಳಿದ್ದ. ನಾನು ಆಗಲೇ ಪಾಂಡುರಂಗನನ್ನು ಕೊಂದಾಯಿತು. ನೀವಿಲ್ಲೇ ಇರಿ....ನಾನು ಅವನಿಂದ ಇನ್ನಷ್ಟು ಸ್ಮ್ಯಾಕ್ ಇಸಿದುಕೊಂಡು ನಿಮ್ಮ ಬಳಿ ಬರುತ್ತೇನೆ."

ಕೊಸರಾಡಿಕೊಳ್ಳುತ್ತಾ ಆಕೆ ಬಡಬಡಿಸಿದಾಗ ಅವಿನಾಶನಿಗೆ ಮುಂದೆ ಬರಲಿರುವ ಅಪಾಯದ ಬಗ್ಗೆ ವಾಸನೆ ಹೊಡೆಯಿತು.

"ಡಲ್ಲಾ....ಡಿಸೋಜಾ....ಇಲ್ಲೇಯೇನೋ ಘಟಿಸುತ್ತಿದೆ. ಭಯಾನಕ ಘಟನೆ ಎಚ್ಚರ....ಎಚ್ಚರ...."

ಅವನ ಮಾತು ಮುಗಿದಿರಲಿಲ್ಲ. ಚಕ್ಕನೆ ಬೆಳಗಿದ ಜೋಡು ದೀಪಗಳು, ಭಾರೀ ವೇಗದಿಂದ ಎದುರು ಹಾಯ್ದು ಹೋದ ಕಪ್ಪು ವ್ಯಾನ್‌ನಿಂದ ಗುಂಡಿನ ಸುರಿಮಳೆ....ಮೂವರೂ ನೆಲಕಚ್ಚಿ ಬೀಳುತ್ತಿದ್ದಂತೆ ನರ್ಸ್ ಲಾವಣ್ಯಳ ಕಂಠದಿಂದ ಕರ್ಣಕಠೋರ ಚೀತ್ಕಾರ ಹೊರಬಿದ್ದಿತು....

## 12

ಒಂದೆಡೆ ಒಂಟಿಯಾಗಿ ಕುಳಿತಿದ್ದ ಅವಿನಾಶ್ ಒಂದರ ಹಿಂದೆ ಒಂದರಂತೆ ನಡೆಯುತ್ತ ಬಂದ ಅಪರಾಧಗಳ ಮಾಲೆ....ಹತ್ಯಾಕಾಂಡ....ಕೊಲೆ ಸುರುಳಿ ಬಗ್ಗೆ ಚಿಂತಿಸುತ್ತಿದ್ದ... ಎಸ್. ಪಿ. ತಾರಾನಾಥರ ಶಿಫಾರಸಿನ ಮೇಲೆ ಬಂದು ಹಾಜರಾಗುತ್ತಿದ್ದಂತೆ ಆರಂಭವಾಗಿತ್ತು. ಅವರ ಆಫೀಸಿನಲ್ಲಿ ಮೇಜಿನ ಅಡಿಯಿದ್ದ ವಿಶೇಷ ಮೈಕ್ರೋಫೋನ್....ಅದರ ಜಾಡು ಹಿಡಿದು ನಡೆದಾಗ ಪರಾರಿಯಾದ ಪಾಂಡುರಂಗ....ಪಾಂಡುರಂಗನ ಹಿಂದೆಯೇ ಸಾಗುತ್ತಿದ್ದಂತೆ ಅವನ ಕೊಲೆಗೆ ಯತ್ನ. ಇದರ ಹಿಂದೆ ಇರುವ ವ್ಯಕ್ತಿ ಕಾಮ್ತಿಂಗ ಎಂದು ತಿಳಿದಾಗ ಕೊಹಿಮಾದಲ್ಲಿರುವ ಅವನನ್ನು ಬಂಧಿಸಲು ಆಗಮಿಸುತ್ತಿದ್ದಂತೆ ನಗೀನಾಳ ಕೊಲೆ....ಕೈಬೆರಳ ಅಂತರದಲ್ಲಿ ತಪ್ಪಿಸಿಕೊಂಡು ಪರಾರಿಯಾದ

ಕಾಮ್ರೋಗ, ಆಸ್ಪತ್ರೆಯಲ್ಲಿದ್ದು ಸಾವು....ಜೀವಗಳ ಮಧ್ಯೆ ಹೊಯ್ದಾಡುತ್ತಿರುವ ಪಾಂಡುರಂಗನನ್ನು ಮುಗಿಸಲು ಬಂದ ಡ್ರಗ್ ಅಡಿಟ್ ನರ್ಸ್... ತಪ್ಪು ಗ್ರಹಿಕೆಯಲ್ಲಿ ಆವಳಿಂದ ಆಕ್ರಮಣಕ್ಕೊಳಗಾದ ಅಪರಿಚಿತ ಶವ .. ದುಷ್ಕರ್ಮಿಗಳ ಕೈಗೆ ಸಿಕ್ಕಿ ಜರ್ಜರಿತನಾದ ಅಪರಿಚಿತನ ಸಾವು .. ನರ್ಸಿನ ರೂಪರಾಶಿಯ ಬಲೆಯಲ್ಲಿ ಸಿಕ್ಕು ಅವಳೊಡನೆ ಸುಖಿಸುವ ಕನಸು ಕಂಡ ಶಿವರಾಜ ಮತ್ತು ಚಂದ್ರು ಅವರ ಮೂರ್ಖತನದಿಂದಾಗಿ ನರ್ಸ್ ಕೈಯಲ್ಲಿ ಸಿಕ್ಕು ಗಾಯ ಹೊಂದಿದ ಡಲ್ಲಾ....

ಇದೆಲ್ಲಾ ಏನು ?

ಇವರೆಲ್ಲ ಯಾರು ?

ಏನೋ ಕಂಡು ಹಿಡಿಯಲು ಯಾರನ್ನೋ ಬೆಂಬತ್ತಿ ಹೋದರೆ ಏನೇನೋ ನಡೆಯುತ್ತಿದೆಯಲ್ಲ ?

ಇಲ್ಲಿಯುವರೆಗೂ ನಡೆದ ಘಟನೆಗಳು ಬೇರೆ ಬೇರೆಯಾಗಿವೆಯೇ ?

ಒಂದೇ ಕೇಸಿಗೆ ಸಂಬಂಧಿಸಿದಂತೆ ಒಂದೇ ಸೂತ್ರದಲ್ಲಿ ಬಂಧಿಸಿವೆಯೋ? ಯೋಚಿಸಿದಷ್ಟು ಜಟಿಲವಾಗುತ್ತ ನಡೆದಿತ್ತೇ ಹೊರತು ಇವುಗಳಿಗೆಲ್ಲ ಪರಿಹಾರ ಮಾತ್ರ ಕಂಡು ಬರುತ್ತಿರಲಿಲ್ಲ... ಈ ಎಲ್ಲ ಪ್ರಕರಣಗಳ ಹಿಂದೆ ಇರುವ ಉದ್ದೇಶ....ಹೊಳೆಯುತ್ತಿರಲಿಲ್ಲ.

ಅವಿನಾಶ ಎಲ್ಲಿಂದ ಆರಂಭಿಸಿದ್ದನೋ ಅಲ್ಲೇ ಇದ್ದ.

ಒಂದಿನಿತು ಅವನಿಂದ ಮುಂದೆ ಸಾಗಲಾಗಿರಲಿಲ್ಲ....

ಹೀಗೇಕೆ ?

ಅಪರಾಧಿ ಅಷ್ಟು ಚಾಣಾಕ್ಷನಾಗಿರುವನೋ ಅಥವಾ ತಾನೇ ಮೂರ್ಖನಂತೆ ವರ್ತಿಸಿ ಅವನಿಗೆ ಗೆಲುವು ಕೊಡಿಸುತ್ತಿರುವೇನೋ....ಇದೇ ರೀತಿ ಒಂದಲ್ಲ ಹತ್ತು ಬಗೆಯಿಂದ ಆತ ಯೋಚಿಸುತ್ತಿದ್ದ....ಒಂದು ಗಂಟೆಯ ವಿಚಾರದಿಂದ....ತನ್ನನ್ನೇ ತಾನು ಪರೀಕ್ಷೆಗೆ ಒಳಪಡಿಸಿಕೊಂಡಿದ್ದರಿಂದಾಗಿ ಆತನೊಂದು ನಿರ್ಧಾರಕ್ಕೆ ಬಂದಿದ್ದ. ಇದರಲ್ಲಿ ತನ್ನ ಪ್ರಮಾದವೇನೂ ಇಲ್ಲ... ತನ್ನ ತಪ್ಪಿನಿಂದ ಯಾವ ದುರ್ಘಟನೆಗಳೂ ನಡೆದಿಲ್ಲ....ಅದರ ಬದಲಾಗಿ ಅಪರಾಧಿಯೇ ಗಾಭರಿಯಾಗಿದ್ದು ತನ್ನ ರಹಸ್ಯವೆಲ್ಲಿ ಬಯಲಿಗೆ ಬರುತ್ತದೋ

ಎಂದು ಹೆದರಿ ಸಂಶಯ ಬಂದವರನ್ನೆಲ್ಲ ದಾರಿಯಿಂದ ಸರಿಸಲು ಹೊರಟಿದ್ದಾನೆ.

ಒಂದು ವೇಳೆ ಆತ ಹಾಗೆ ಮಾಡಿದ್ದೇ ಆದರೆ ಸೂತ್ರಗಳೆಲ್ಲ ಕೈಯಿಂದ ತಪ್ಪಿಸಿಕೊಂಡು ಆತನವರೆಗೆ ತಲುಪಲಾಗುವುದಿಲ್ಲ....ಆದ್ದರಿಂದ ಈಗ ಎದುರು ಇರುವ ಸಾಕ್ಷಿ... ಸೂತ್ರಗಳನ್ನು ಮುಚ್ಚಿಟ್ಟುಕೊಂಡೇ ಹೊರಡುವುದು ಸೂಕ್ತ ...

ಈ ನಿರ್ಧಾರಕ್ಕೆ ಬರುತ್ತಿದ್ದಂತೆ ಜಾಡ್ಯವೆಲ್ಲ ಹೊರಟು ಹೋಗಿ ಹೊಸ ಮನುಷ್ಯನಾದ. ಆಸ್ಪತ್ರೆಯಲ್ಲಿರುವ ಪಾಂಡುರಂಗ ಮತ್ತು ನರ್ಸ್ ಇವರಿಬ್ಬರನ್ನು ಕೇಂದ್ರಬಿಂದುವನ್ನಾಗಿಟ್ಟುಕೊಂಡೇ ಮುಂದುವರೆಯಲು ಆತ ಕಾರ್ಯೋನ್ಮುಖನಾದ. ಪಾಂಡುರಂಗ ಯಾರು ? ಎಲ್ಲಿಯವ ಎಂದು ತಿಳಿದಿತ್ತು ? ನರ್ಸ್ ವೇಷದಲ್ಲಿ ಬಂದು ಅವನನ್ನು ಕೊಲ್ಲಲು ಮುಂದಾದವಳ ಬಗ್ಗೆ ಏನೂ ತಿಳಿದಿರಲಿಲ್ಲ.

ಆಕೆಗೆ ಮೂರು ನಾಲ್ಕು ಗುಂಡುಗಳು ತಗಲಿದ್ದವು. ಡಲ್ಲಾ, ಡಿಸೋಜಾ, ಅವಿನಾಶ ಮೂವರು ಪೋಲೀಸ್ ಇಲಾಖೆಯವರಾಗಿದ್ದುದರಿಂದ ಮುಂಬರುವ ಅಪಾಯ ಕಂಡುಹಿಡಿದು ಚಕ್ಕನೆ ದೀಪ ಬೆಳಗಿ, ಯಾವುದೋ ಗಾಡಿಯೊಂದು ತಮ್ಮ ಕಡೆ ವೇಗವಾಗಿ ಬರುತ್ತಿರುವುದನ್ನು ಗ್ರಹಿಸಿ ನೆಲಕ್ಕಂಟಿಕೊಂಡರು.... ಆದರೆ ಪಾಪ ! ಬ್ರೌನ್ ಶುಗರ್ ಸೇವಿಸಿ ಅದರ ಮಾಯೆಯ ಪರದೆಯಲ್ಲಿರುವ ಅಭಾಗಿನಿ ನರ್ಸ್‌ಗೆ ಈ ಅಪಾಯದ ಬಗ್ಗೆ ಹೇಗೆ ತಿಳಿಯಬೇಕು ? ತತ್ಪರಿಣಾಮವಾಗಿ ಮೂರು ಗುಂಡು ಹೊಟ್ಟೆ, ತೊಡೆ, ಕೈಗೆ ತಗಲಿದ್ದರೆ ಒಂದು ಗುಂಡು ಮಾತ್ರ ತಲೆ ಸವರಿಕೊಂಡು ಹೋಗಿತ್ತು. ಅದೊಂದೇ ಗುಂಡು ಅವಳನ್ನು ಅಪಾಯದಲ್ಲಿ ಕೆಡವಿದ್ದು. ಇನ್ನಿತರ ಮೂರು ಭಾಗಗಳ ಗುಂಡುಗಳಿಂದ ಹೆಚ್ಚಿನ ಹಾನಿಯಾಗಿರಲಿಲ್ಲ.... ಏನೇ ಆಗಿದ್ದರೂ ನರ್ಸ್ ಇನ್ನೂ ಮೂರ್ಛಾವಸ್ಥೆಯಲ್ಲಿದ್ದಳು... ಪಾಂಡುರಂಗನನ್ನು ಕೊಲ್ಲಲು ಬಂದ ಆಕೆ ತಾನೇ ಸಾವಿಗೆ ಅತಿಥಿಯಾಗುವವಳಿದ್ದಳು.

ಅವಳಿಂದಲೇ ತನ್ನ ಮುಂದಿನ ಪರಿಶೋಧನೆ ಆರಂಭಿಸಲು ನಿರ್ಧರಿಸಿದ ಅವಿನಾಶ ಪೋಲೀಸ್ ಠಾಣೆ ಕಡೆ ನಡೆದ. ಡಲ್ಲಾ ಮನೆಯಲ್ಲಿಯೇ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಡಿಸೋಜಾ ಠಾಣೆಯಲ್ಲಿದ್ದು....ಅವಿನಾಶನನ್ನು ನೋಡಿ ಉತ್ಸಾಹದಿಂದ ಅವನನ್ನು ಸ್ವಾಗತಿಸಿದ್ದ, ಹಿಂದಿನ ದಿನ ರಾತ್ರಿ

ಯಾರನ್ನು ನಗೀನಾಳ ಕೊಲೆಯ ಆಪಾದನೆ ಮೇಲೆ ಲಾಕಪ್‌ಗೆ ತಳ್ಳಿದ್ದನೋ ಅವನನ್ನೇ ಇಂದು ಅತ್ಯುತ್ಸಾಹದಿಂದ ಸ್ವಾಗತಿಸುತ್ತಿದ್ದ .. ಎಂಥಾ ಬದಲಾವಣೆ ? ...

ಡಿಸೋಜಾ ಎಸ್ ಐ., ಅವಿನಾಶ ಇನ್ಸ್‌ಪೆಕ್ಟರ್.

ಹೀಗಾಗಿ ವಂದನೆ ಸಲ್ಲಿಸಿ ತನ್ನ ಕುರ್ಚಿ ಬಿಟ್ಟುಕೊಟ್ಟ ಡಿಸೋಜಾ, ವಿನಯದಿಂದಲೇ ಅವನ ಸ್ಥಾನದಲ್ಲಿ ಕೂಡಲು ನಿರಾಕರಿಸಿದ ಅವಿನಾಶನೇ ಒತ್ತಾಯದಿಂದ ಅವನನ್ನು ಅವನ ಕುರ್ಚಿ ಮೇಲೆ ಕುಳ್ಳಿರಿಸಿ ಪಕ್ಕದ ಕುರ್ಚಿಯಲ್ಲಿ ತಾನು ಕುಳಿತ.

"ಸರ್, ತಮ್ಮನ್ನು ನಾನಾಗಲೀ ನಮ್ಮ ಡಲ್ಲಾ ಸಾಹೇಬರಾಗಲೀ ಮರೆಯುವಂತಿಲ್ಲ. ತಮ್ಮಿಂದಾಗಿಯೇ ಅವರು ಉಳಿದುಕೊಂಡರು.

"ಹೌದು, ನನ್ನಿಂದಾಗಿಯೇ ಅವರು ಸಾವಿಗೆ ಅತಿಥಿಯಾಗಲಿದ್ದರು"

"ತಮ್ಮಿಂದಾಗಿಯೇ ?....ಅದು ಹೇಗೆ ಸರ್ ?"

"ಅವರು... ಪಾಂಡುರಂಗನನ್ನು ಉಳಿಸಲು ಹೊರಟಿದ್ದರು. ಪಾಂಡುರಂಗ ಯಾರು ? ನನ್ನನ್ನು ಕೊಲ್ಲಲು ಬಂದು ತಾನೇ ಆಹುತಿಯಾದವನಲ್ಲವೇ. ನಾನೇ ಅವನನ್ನು ತಂದು ಆಸ್ಪತ್ರೆಗೆ ದಾಖಲು ಮಾಡಿದ್ದೆ....ಅವನ ಜವಾಬ್ದಾರಿ ಡಲ್ಲಾ ಸಾಹೇಬರಿಗೆ ವಹಿಸಿದ್ದೆ...."

"ತಮ್ಮ ಮಾತಿನ ಅರ್ಥ ನನಗಾಗಲಿಲ್ಲ ಸರ್"

"ತೀರಾ ಸರಳವಾಗಿದೆ ಡಿಸೋಜಾ....ಪೊಲೀಸ್ ಇಲಾಖೆಯ ನಾವೆಲ್ಲಾ ಸಹೋದರರು. ನಮ್ಮ ಊರು ಬೇರೆಯಾಗಿರಬಹುದು....ನಮ್ಮ ಬಾಸ್ ಬೇರೆ ಇರಬಹುದು....ಆದರೂ ನಮ್ಮದು ಒಂದೇ ಇಲಾಖೆ. ನಮ್ಮದು ಒಂದೇ ಧರ್ಮ....ಒಂದೇ ಡ್ರೆಸ್ಸು... ಹೀಗಿರುವಾಗ ನೀನೇಕೆ ನನಗೆ ಕೃತಜ್ಞನಾಗಿರಬೇಕು....ನನ್ನ ಉಪಕಾರ ನೀವೇಕೆ ಸ್ಮರಿಸಬೇಕು....ನಾನು ನನ್ನ ಕರ್ತವ್ಯ ಮಾಡಿದ್ದೇನೆ ಅಷ್ಟೇ ಅಲ್ಲವೇ ?

ಡಿಸೋಜಾ ಮೂಢನಾದ ಅವಿನಾಶನ ವ್ಯಾಖ್ಯೆ ನೋಡಿ.

ಆತ ನುಡಿದದ್ದರಲ್ಲಿ ಕಠೋರ ಸತ್ಯವಡಗಿತ್ತು. ಪೊಲೀಸ್ ಇಲಾಖೆಯಲ್ಲಿಯ ಕರ್ಮಚಾರಿಗಳ ಮಧ್ಯೆ ಇರುವ ವೈಮನಸ್ಸು ತಪ್ಪು ಕಲ್ಪನೆ, ಒಂದೇ ಇಲಾಖೆಗೆ ಸಂಬಂಧಿಸಿದ ಬೇರೆ ಬೇರೆ ವಿಭಾಗದವರು ಒಬ್ಬರನ್ನೊಬ್ಬರು

ದ್ವೇಷಿಸುವ ಬಗೆ ಎಲ್ಲವನ್ನು ಆತ ತನ್ನ ಎರಡೇ ಮಾತುಗಳಲ್ಲಿ ಸೂಚ್ಯವಾಗಿ ಅರುಹಿ ಪೊಲೀಸ್ ಇಲಾಖೆಗೆ ಸಂಬಂಧಿಸಿದ ನಾವೆಲ್ಲ ಸಹೋದರರಂತೆ ಒಂದಾಗಿರಬೇಕು ಎಂದು ತಿಳಿಸಿದ್ದ....

"ನಿಜವಾಗಿಯೂ ನಿಮ್ಮ ವಿಚಾರ ಪ್ರಶಂಸನೀಯ ಸರ್"

"ಮತ್ತೆ ನನ್ನನ್ನು ಹೊಗಳಲಾರಂಭಿಸಿದಿರಿ"

"ನಿಮ್ಮನ್ನು ಹೊಗಳಿ ನನಗೇನೂ ಆಗಬೇಕಾಗಿಲ್ಲ ಸರ್. ನಿಮ್ಮಂಥವರ ಸ್ಫೂರ್ತಿಯಿಂದಲೇ ನಮ್ಮಂಥವರು ಏನಾದರೂ ಸಾಧಿಸಬೇಕಾಗಿದೆ... ಅದನ್ನು ಹೇಳಬೇಕಾಗಿತ್ತು."

"ಹೇಳಿಯಾಯಿತಲ್ಲ ? ಈಗ ಹೇಳಿ ಡಲ್ಲಾ ಸಾಹೇಬರು ಹೇಗಿದ್ದಾರೆ ?"

'ಆರಾಮಾಗಿದ್ದಾರೆ ಸರ್....ದೇವರ ದಯದಿಂದ ಬೆರಳುಗಳಿಗೆ ಗಾಯ ಮಾತ್ರ ಆಗಿದೆ. ಅವು-ಕತ್ತರಿಸಿಲ್ಲ .. '

'ಮತ್ತೆ ಪಾಂಡುರಂಗ ?'

'ಅವನಿಗಿನ್ನು ಎಚ್ಚರ ಬಂದಿಲ್ಲ ಸಾರ್' ನರ್ಸ್‌ಗೂ ಸಹ ಇಬ್ಬರೂ ಇನ್ನೂ ಕ್ರಿಟಿಕಲ್ ಕಂಡಿಷನ್‌ನಲ್ಲಿದ್ದಾರೆ. ವೈದ್ಯರು ಏನೂ ಹೇಳ್ತಾ ಇಲ್ಲ.

'ಡಿಸೋಜಾ ಒಂದು ಪ್ರಶ್ನೆ'

'ಕೇಳಿ ಸರ್'

'ಪಾಂಡುರಂಗನ ಬಗ್ಗೆ ನನಗೆ ಗೊತ್ತಿದೆ. ನರ್ಸ್ ಬಗ್ಗೆ ನನಗೇನೂ ತಿಳಿಯದು ನಾನವಳನ್ನು ಪ್ರಥಮ ಭಾರಿ ನೋಡುತ್ತಿದ್ದೇನೆ'

'ನಾನೂ ಅಷ್ಟೇ ಸರ್'

'ಅವಳನ್ನು ನೋಡಿದರೆ ನಿನಗೇನನಿಸುತ್ತದೆ ? ಆಕೆ ಯಾರಿರಬಹುದು ? ನರ್ಸಂತೂ ಅಲ್ಲವೆ ಅಲ್ಲ.

'ಡಿಸೋಜಾ ವಿಚಾರಮಗ್ನನಾದ. ಅವನ ಕಣ್ಣೆದುರು ನರ್ಸ್ ಬೇರೆ ಬೇರೆ ವೇಷ, ರೂಪದಲ್ಲಿ ಹಾಯ್ದು ಹೋದಳು. ಯಾವದೂ ಹೊಂದಿಕೆ ಯಾಗುತ್ತಿರಲಿಲ್ಲ.

"ನನಗೆ" ತಿಳೀತಾ ಇಲ್ಲ.

"ಹೌದಾ ? ಆಕೆ ಶಿಕ್ಷಕಿಯಾಗಿರಬಹುದೆ ?"

"ಇಲ್ಲ ಸರ್"

"ಏಕೆ ?"

'ಶಿಕ್ಷಕಿಯಾಗುವ ವಯಸ್ಸು ಅವಳದಲ್ಲ ನನಗನಿಸುವ ಮಟ್ಟಿಗೆ ಆಕೆ ವಿದ್ಯಾರ್ಥಿನಿ"

'ಗುಡ್ ಪಾಯಿಂಗ್' 'ವಿದ್ಯಾರ್ಥಿನಿ ಅಂದರೆ ಓದುತ್ತಿದ್ದಾಳೆ ಎಂದರ್ಥವೆ ?'

'ಹೌದು ಸಾರ್'

'ಯಾವ ವಿದ್ಯಾರ್ಥಿನಿಯಾಗಿರಬಹುದು ? ಮೆಡಿಕಲ್ಲೋ ಇಂಜಿನಿಯ ರಿಂಗೋ ಅಥವಾ 'ಇವೆರಡೂ ಅಲ್ಲ ಸರ್' 'ಏಕೆ ?'

'ಮೆಡಿಕಲ್ ಆಗಿದ್ದರೆ ಆಕೆ ಪಾಂಡುರಂಗನನ್ನು ಕೊಲ್ಲಲು ಚೂರಿ ಬದಲು ಸುಲಭವಾಗಿ ಕೊಲ್ಲಲು ಯಾವುದಾದರೂ ಮೆಡಿಸಿನ್ ಉಪಯೋಗಿಸು ತ್ತಿದ್ದಳು."

'ಶಹಬ್ಬಾಶ್....ನಿಮ್ಮ ವಾದ ಒಪ್ಪುವಂತಹುದು'

'ಇನ್ನು ಇಂಜಿನಿಯರ್ ...ಆ ವಿದ್ಯಾರ್ಥಿಯಾಗಿದ್ದರೆ ನರ್ಸ್ ವೇಷ ಧರಿಸುವ ವಿಚಾರವೇ ಬರುತ್ತಿರಲಿಲ್ಲ....

'ಹೂಂ... ಮುಂದೆ ಹೇಳು'

'ನನಗನಿಸುವ ಮಟ್ಟಿಗೆ ಆಕೆ ಡಿಗ್ರಿ ಕಾಲೇಜ್ ವಿದ್ಯಾರ್ಥಿನಿ .. ಡ್ರಗ್‌ಗೆ ಆಕೆ ಬಲಿಯಾಗಿದ್ದಾಳೆ . ಅದರ ಆಮಿಷದಲ್ಲಿ ಸಿಲುಕಿಕೊಂಡಿದ್ದಾಳೆ....ಅಪರಾಧಿ ಅವಳ ಸುತ್ತ ಬಲೆ ಹೆಣೆದು ಅವಳಿಂದ ಈ ಕೆಲಸ ಮಾಡಿಸಲು ಮುಂದಾಗಿದ್ದಾನೆ. ನರ್ಸ್ ವೇಷ ತೊಡಗಿಸಿದವನೂ ಅವನೆ. ಅವಳಿಗೆ ಗುಂಡು ಹಾರಿಸಿದವನು ಅವನೇ"

'ಶಹಬ್ಬಾಶ್ ಡಿಸೋಜಾ....ನನಗಿಂತ ನೀವೇನೂ ಕಡಿಮೆಯಿಲ್ಲ.... ನಿಮ್ಮ ತರ್ಕದಲ್ಲಿ ಹುರುಳಿದೆ....ನನಗೆ ನಿಮ್ಮ ತರ್ಕ ಹೊಸ ದಾರಿ ತೋರಿಸಿ ಕೊಟ್ಟಿತು. ಆ ದಾರಿಯಲ್ಲೇ ನಾನು ನನ್ನ ಶೋಧನೆ ಆರಂಭಿಸುವೆ'

ಡಿಸೋಜಾ ತನ್ನ ಪ್ರಶಂಸೆಯ ಮಾತು ಕೇಳಿ ಆನಂದಿತನಾದ.

"ಸರ್ ನೀವು ನನ್ನ ಮುಖಸ್ತುತಿ ಮಾಡುತ್ತಿದ್ದೀರಿ"

'ನಿಜವಾಗಿಯೂ ಅಲ್ಲ ಡಿಸೋಜ....ನಾನು ಒಂದು ದೃಷ್ಟಿಯಿಂದ ಮೂಕನಾಗಿದ್ದೆ. ನನ್ನೆದುರು ಇದ್ದ ಎಲ್ಲ ದಾರಿಗಳು ಬಂದಾಗಿದ್ದವು. ದಿಕ್ಕು

ತಪ್ಪಿದಂತಾದ ನಾನು ಏನಾದರೂ ಹೊಸ ದಾರಿ ಇಲ್ಲವೇ ಹೊಸ ವಿಚಾರಗಳು ನಿಮ್ಮಿಂದ ಬರಬಹುದೆಂದು ಮಾತಿಗೆಳೆದೆ. ನೋಡಿ ನಿಮ್ಮ ಜೊತೆ ನಾವು ಮಾಡಿದ ಚರ್ಚೆ ಎಂಥ ಫಲ ಕೊಟ್ಟಿತು !

"ನನ್ನ ತರ್ಕ ತಮಗೆ ಒಪ್ಪಿಗೆಯಾದಂತಾಯಿತು ಹಾಗಾದರೆ"

'ನೂರಕ್ಕೆ ನೂರು ಡಿಸೋಜಾ ನನ್ನ ಇನ್ನೊಂದು ಪ್ರಶ್ನೆ'

'ಕೇಳಿ ಸರ್. ನನ್ನ ಬುದ್ದಿಗೆ ಸಿಲುಕಿದಷ್ಟು ಹೇಳುತ್ತೇನೆ'

'ನಿಮ್ಮ ತರ್ಕದ ಪ್ರಕಾರ ನರ್ಸ್ ವೇಷದಲ್ಲಿ ಬಂದ ತರುಣಿ ನರ್ಸ್ ಅಲ್ಲ. ಆಕೆ ಡ್ರಗ್ ಅಡಿಟ್....ಉನ್ಮಾದಾವಸ್ಥೆಯಲ್ಲಿ ಪಾಂಡುರಂಗನ ಕೊಲೆ ಮಾಡಲು ಆಕೆ ಬಂದಿದ್ದಾಳೆ. ಅವಳನ್ನು ಡ್ರಗ್ ನಶೆಯಲ್ಲಿ ತನ್ನ ಬಲೆಗೆಳೆದು ಕೊಂಡು ಅವಳನ್ನು ಪಾಂಡುರಂಗನ ಕೊಲೆ ಮಾಡಲು ಕಳಿಸಿದ್ದಾನೆ. ನರ್ಸ ವೇಷ ಸಹ ಅವನೇ ಮಾಡಿಸಿದ್ದಾನೆ ರೈಟ್ ?

'ಹಂಡ್ರೆಡ್‌ಪರ್ಸೆಂಟ್ ರೈಟ್ ಸರ್'

'ಹಾಗಾದರೆ ಯಾರು ಅವಳನ್ನು ಕಳಿಸಿದ್ದಾರೋ ಅವರೇ ಅವಳ ಮೇಲೆ ಗುಂಡು ಹಾರಿಸಿದರು ಎಂದು ಇದೀಗ ನೀವು ಹೇಳಿರುವಿರಿ .. ಏಕೆ ? ಅವನ ಕೊಲೆಯಿಂದ ಅವಳನ್ನು ಕಳಿಸಿದಾತನಿಗೆ ಏನು ಲಾಭವಿದೆ ?

ಡಿಸೋಜಾ ಉತ್ತರಿಸಲು ಸಮಯ ತೆಗೆದುಕೊಂಡ. ಬಹುಶಃ ಆತನ ಮನದಲ್ಲಿ ತನ್ನ ತರ್ಕದ ಬಗ್ಗೆ ಮರು ವಿಶ್ಲೇಷಣೆ ಮಾಡಿಕೊಂಡಿರ ಬೇಕು'

"ಅದಕ್ಕೆ ಒಂದೇ ಕಾರಣ ಸರ್"

'ಏನದು'

'ಯಾವ ಕೆಲಸದ ಮೇಲೆ ಅವಳನ್ನು ಕಳಿಸಲಾಗಿತ್ತು ಆ ಕೆಲಸದಲ್ಲಿ ಆಕೆ 'ಫೇಲ್' ಆದಳೆಂದು ಅವನಿಗೆ ತಿಳಿದಿದೆ.

'ಅದು ಹೇಗೆ'

'ನಾವು ಮೂವರು ಅವಳನ್ನು ಹಿಡಿದು ತರುವುದನ್ನು ನೋಡಿದ್ದಾನೆ. ಅಥವಾ ಆತ ನಮ್ಮ ಹಿಂದೆಯೂ ಇದ್ದು ನಮ್ಮನ್ನು ಅನುಸರಿಸಿರಬೇಕು'

'ಒಪ್ಪತಕ್ಕ ಮಾತು .. ಅವಳಿಗೆ ವಹಿಸಿದ ಕೆಲಸ ಅವಳಿಂದ ಮಾಡಲಾಗದಿದ್ದರೆ ಅವಳ ಕೊಲೆ ಏಕೆ ಮಾಡಬೇಕು ?'

'ಅದಕ್ಕೂ ಒಂದೇ ಕಾರಣ' ಡಿಸೋಜಾ ನಗುತ್ತಲೇ ನುಡಿದ.

'ಅದನ್ನೂ ಹೇಳಿ ಬಿಡಿ'

'ಅವಳ ಬಂಧನದಿಂದ ಆತ ಭಯಪಟ್ಟಿದ್ದಾನೆ. ಆಕೆ ಬಾಯಿಬಿಟ್ಟರೆ ಅವನ ಹೂರಣವೆಲ್ಲ ಹೊರ ಬೀಳುತ್ತದೆ. ಅದಕ್ಕಾಗಿ ಅವಳ ಬಾಯಿ ಮುಚ್ಚಲು ಅವನೇ ಮುಂದಾಗಿದ್ದಾನೆ'

'ಕರೆಕ್ಟ್... ಅಂದ ಮೇಲೆ ನರ್ಸ್‌ಗೆ ಅಪರಾಧಿಯ ಪರಿಚಯ ಚೆನ್ನಾಗಿದೆ ಅಂದಂತಾಯಿತು.

'ಹೌದು ಸರ್....ಇದರಿಂದ ಅದು ಸ್ಪಷ್ಟವಾಗುತ್ತದೆ'

'ಡಿಸೋಜಾ....ನಿಮಗೆ ತುಂಬಾ ವಂದನೆಗಳು ನನಗೆ ನಿಮ್ಮ ತರ್ಕದಿಂದ ಒಂದು ನಿರ್ದಿಷ್ಟ ಗುರಿ ಮುಟ್ಟುವ ದಾರಿ ದೊರೆತಿದೆ. ನರ್ಸ್ ನಮಗೆ ಬೇಕಾದ ಅತ್ಯಂತ ಪ್ರಮುಖ ಸಾಕ್ಷಿ. ಅವಳನ್ನು ನಾವು ಬಿಡಬಾರದು'

'ನಿಜ ಸರ್'

'ಒಂದು ಕೆಲಸ ಮಾಡಿ ಡಿಸೋಜಾ....ಇನ್ನಷ್ಟು ಬಲವಾದ ಕಾವಲು ಹಾಕಿ-ಪತ್ರಿಕೆಗೆ ಹೇಳಿಕೆ ನೀಡಿ ಅವಳ ಫೋಟೋ ಪತ್ರಿಕೆಯಲ್ಲಿ ಅಚ್ಚು ಮಾಡಿ ಅವಳ ಬಗ್ಗೆ ಮಾಹಿತಿ ನೀಡುವಂತೆ ಜನತೆಗೆ ಅಫೀಲ್ ಮಾಡಿ'

'ರೈಟ್ ಸರ್'

'ನಡೆಯರಿ ಹಾಗಾದರೆ, ಆಸ್ಪತ್ರೆ ಕಡೆ ಹೋಗೋಣ'

"ಇಬ್ಬರೂ ಠಾಣೆಯಿಂದ ಹೊರಬಂದರು. ಅವಿನಾಶನ ಕಾರು ಸಹ ರಿಪೇರಿಯಾಗಿ ಬಂದಿತ್ತು. ಅದನ್ನು ಅಲ್ಲೇ ಬಿಟ್ಟು ಜೀಪಿನಲ್ಲಿ ನಡೆದರು ಇಬ್ಬರೂ. ಡಿಸೋಜಾ ತನ್ನೊಂದಿಗೆ ಮತ್ತೆ ಮೂರು ಜನ ಕಾನ್‌ಸ್ಟೇಬಲ್‌ರನ್ನು ಕರೆದುಕೊಂಡ. ಮೂವರು ರೈಫಲ್‌ಗಳೊಂದಿಗೆ ಸುಸಜ್ಜಿತರಾಗಿದ್ದರು. ಪ್ರಸಂಗ ಬಂದರೆ ಅಪಾಯದ ಪರಿಗಳಲ್ಲಿ ಅವರಿಗೆ ರೈಫಲ್ ಉಪಯೋಗಿಸಲು ಒಪ್ಪಿಗೆ ನೀಡಿದ.

ನರ್ಸ್ ಮತ್ತು ಪಾಂಡುರಂಗ ಇಬ್ಬರನ್ನು ಒಂದೇ ರೂಮಿಗೆ ತರಲಾಗಿತ್ತು. ಒಳಗೆ ಇಬ್ಬರು ಹೊರಗೆ ಇಬ್ಬರು ಕಾವಲಿದ್ದರು. ಅವರಲ್ಲದೇ ಒಬ್ಬ ಮೇಲ್ ನರ್ಸ್ ಸಹ....ಅವಿನಾಶ್ ತನ್ನ ಸಮಾಧಾನ ವ್ಯಕ್ತಪಡಿಸಿದ,

ತನ್ನೊಂದಿಗೆ ಕರೆ ತಂದಿದ್ದ ಮೂರು ಜನರನ್ನು ಡಿಸೋಜಾ ಮೆಟ್ಟಿಲು ಬಳಿ, ಲಿಫ್ಟ್ ಬಳಿ ಹಾಗೂ ಲೆಟ್ರಿನ್ ಬಳಿ ಕಾವಲಿರಿಸಿದ. ಪಾಂಡುರಂಗನ ಸ್ಥಿತಿ ಚಿಂತಾಜನಕವಾಗಿತ್ತು. ನರ್ಸ್ ಬಗ್ಗೆ ಸ್ವಲ್ಪ ಆಶಾಭಾವನೆ ವ್ಯಕ್ತ ಪಡಿಸಿದರು ಡಾಕ್ಟರ್ ದೇಶಪಾಂಡೆ.

"ಪಾಂಡುರಂಗನ ಆಶೆ ನಾವು ಬಿಟ್ಟಿದ್ದೇವೆ ನಾಳೆಯೊಳಗಾಗಿ ಅವನಿಗೆ ಪ್ರಜ್ಞೆ ಬರದಿದ್ದರೆ ಆತ ಉಳಿಯಲಾರ ಇನ್ನು ಈಕೆ. ಅಪಾಯದಿಂದ ಪಾರು ಆಗಿದ್ದಾಳೆ. ಇಂದು ಮೆದುಳಿನ ಎಕ್ಸರೇ ತೆಗೆಯುತ್ತೇವೆ. ಗುಂಡಿನಿಂದ ಅಲ್ಲಿ ಏನಾದರೂ ಗಾಯವಾಗಿದ್ದರೆ ಕನಿಷ್ಠ ಪಕ್ಷ ಒಂದು ತಿಂಗಳವರೆಗೆ ಆಕೆ ಕೋಮಾದಲ್ಲಿರುತ್ತಾಳೆ. ಅಷ್ಟರಲ್ಲಿ ನಾವು ಆಪರೇಶನ್ ಮಾಡಿ ಚಿಕಿತ್ಸೆ ನೀಡ ಬೇಕಾಗುತ್ತದೆ"

'ಒಂದು ವೇಳೆ ಗುಂಡಿನಿಂದ ಗಾಯವಾಗಿರದಿದ್ದರೆ ?'

'ಎರಡು ಮೂರು ದಿನಗಳಲ್ಲಿ ಆಕೆ ಎಚ್ಚರಾಗುತ್ತಾಳೆ'

ಅವಿನಾಶ ಫೋಟೋಗ್ರಾಫರನನ್ನು ಕರೆಸುವಂತೆ ಡಿಸೋಜಾನಿಗೆ ನೆನಪು ಮಾಡಿದ. ಆಸ್ಪತ್ರೆಯಿಂದಲೇ ಡಿಸೋಜಾ ಪಾರಸ್ ಸ್ಟುಡಿಯೋಗೆ ಫೋನು ಮಾಡಿ ರಾಬರ್ಟ್‌ನನ್ನು ಕಳಿಸಿಕೊಡುವಂತೆ ಹೇಳಿದ.

ಅವಿನಾಶ ಮತ್ತು ಡಿಸೋಜಾ ಇಬ್ಬರೂ ಸೇರಿ ಆಸ್ಪತ್ರೆಯ ಒಂದು ರೌಂಡ್ ಹಾಕಿದರು. ಹೊರಗಿನಿಂದ ಬರಬಹುದಾದ ಅಪಾಯದ ಬಗ್ಗೆ ಯೋಚಿಸಿದರು ಅಷ್ಟರಲ್ಲಿ ರಾಬರ್ಟ್ ಬಂದು ಎರಡು ಮೂರು ಫೋಟೋ ತೆಗೆದಿದ್ದ....ಶೀಘ್ರ ಅವುಗಳ ಎಂಟು ಹತ್ತು ಪ್ರತಿ ತಂದು ಕೊಡುವಂತೆ ಡಿಸೋಜಾ ಅವನಿಗೆ ಸೂಚನೆ ನೀಡಿದ. ಹೆಗಲಿಗೆ ಕ್ಯಾಮರಾ ನೇತು ಹಾಕಿ ಕೊಂಡ ರಾಬರ್ಟ್ ಲಿಫ್ಟ್ ಪ್ರವೇಶಿಸುತ್ತಿದ್ದಂತೆ ಲಿಫ್ಟ್ ಮುಂದೆ ಹಾಯ್ದು ಮೆಟ್ಟಿಲು ಕಡೆ ಇಳಿಯುತ್ತಿದ್ದ ವ್ಯಕ್ತಿಯತ್ತ ಅವಿನಾಶನ ದೃಷ್ಟಿ ಹರಿಯಿತು.

ಅರೆ ಈತನನ್ನು ಎಲ್ಲೋ ನೋಡಿದಂತಿದೆಯಲ್ಲ ಎಲ್ಲಿ ನೋಡಿರಬಹುದು ಎಂದು ಜ್ಞಾಪಿಸಿಕೊಳ್ಳ ತೊಡಗಿದ.

ಪಟಕ್‌ನೆ ನೆನಪಾಯಿತು. ಹಾಸ್ಪಿಟಲ್ ರೌಂಡ್ ಹಾಕುವ ಮುನ್ನ ಆತ ಕೆಳಗಡೆ ರಿಸೆಪ್ಷನ್ ಬಳಿಯಿದ್ದ... ಈಗ ಇಲ್ಲಿ....ರಾಬರ್ಟ್‌ನನ್ನು ಆತ

ಹಿಂಬಾಲಿಸುತ್ತಿದ್ದಾನೆ. ಓಹ್ ಗಾಡ್ ಎಂದು ಹಣೆಚಚ್ಚಿಕೊಂಡ ಆತ ಜೋರಾಗಿ ಅರಚಿದು.

ಡಿಸೋಜಾ....ಬೇಗ ಕೆಳಗೆ ಓಡಿ....ರಾಬರ್ಟ್ ರಕ್ಷಣೆ ಮಾಡಿ ಅವನ ಜೀವ ಗಂಡಾಂತರದಲ್ಲಿದೆ.

ಡಿಸೋಜಾ ಇಬ್ಬರು ಕಾನ್‌ಸ್ಟೇಬಲ್‌ರೊಂದಿಗೆ ಮೆಟ್ಟಿಲುಗಳತ್ತ ಧಾವಿಸುತ್ತಿದ್ದಂತೆ ಅವಿನಾಶ ಕಿಟಕಿ ಕಡೆ ಓಡಿದ....

# 13

ಹೆಗಲಿಗೆ ಕ್ಯಾಮರಾ ನೇತು ಹಾಕಿಕೊಂಡ ರಾಬರ್ಟ್ ಆಸ್ಪತ್ರೆ ಎದುರಿಗೆ ಪಾರ್ಕ್ ಮಾಡಿಟ್ಟಿದ್ದ ತನ್ನ ಸ್ಕೂಟರ್ ಕಡೆ ಹೆಜ್ಜೆ ಹಾಕ ತೊಡಗಿದ. ಬಲಭಾಗದಿಂದ ಆ್ಯಂಬುಲೆನ್ಸ್ ಒಂದು ಕಾರು ಬಂದಿದ್ದರಿಂದಾಗಿ ಎರಡು ಹೆಜ್ಜೆ ಹಿಂದೆ ಸರಿದು ನಿಂತುಕೊಂಡ. ನೇರವಾಗಿ ಅವನೆದುರೇ ಮೇನ್ ರೋಡಿನಲ್ಲಿ ಮರದಡಿ ನಿಂತಿದ್ದ ಕಪ್ಪು ವ್ಯಾನ್ ಸ್ಟಾರ್ಟ್ ಆದ ಶಬ್ದ ಮೆಲುವಾಗಿ ಕೇಳಿಸಿತು. ಕೆಂಪು ಗೆರೆಗಳಿದ್ದ ಷರ್ಟು ಧರಿಸಿದ ವ್ಯಕ್ತಿಯೊಂದು ಭರಭರನೆ ಮೆಟ್ಟಿಲು ಇಳಿದು ರಾಬರ್ಟ್ ಕಡೆ ಧಾವಿಸುತ್ತಿರುವುದು ಮೂರನೇ ಮಹಡಿ ಕಿಟಕಿಯಿಂದ ಕೆಳಗೆ ಇಣುಕುತ್ತಿದ್ದ ಅವಿನಾಶನ ಕಣ್ಣಿಗೆ ಬಿದ್ದಿತು. ಬಲಭಾಗದಲ್ಲಿ ಸೊಂಟದ ಮೇಲಿದ್ದ ತನ್ನ ಸರ್ವಿಸ್ ರಿವಾಲ್ವರ್ ಹೊರತೆಗೆದು ಗುರಿ ಹಿಡಿಯುತ್ತಾ ಅವಿನಾಶ ಕೂಗಿದ. "ರಾಬರ್ಟ್ ಹುಷಾರ್....ಕೆಂಪು ಶರ್ಟ್‌ನ ಮನುಷ್ಯನಿಂದ ದೂರವಿರು....ಹುಷಾರ್" ತನ್ನ ಹೆಸರು ಕಿವಿಗೆ ಬೀಳುತ್ತಿದ್ದಂತೆ ರಾಬರ್ಟ್ ಸಹಜವಾಗಿ ತಲೆ ಎತ್ತಿ ಮೇಲೆ ನೋಡಿದ... ಅವಿನಾಶ ಕಣ್ಣಿಗೆ ಬಿದ್ದ. ಆತ ಕೂಗಿದ್ದು ಅರ್ಥವಾಯಿತು. ಹಿಂದೆ ಹೊರಳಿದ... ಕುರುಚಲು ಗಡ್ಡ ಮೀಸೆ ಬಿಟ್ಟಿದ್ದ ಕೆಂಪು ಗೆರೆಯ ಶರ್ಟ್ ಧರಿಸಿದ್ದ ವ್ಯಕ್ತಿ ತನ್ನೆಡೆ ಧಾವಿಸುತ್ತಿರುವುದು ಕಾಣಿಸಿತು. ಅವನ ಬಲಗೈ ಪ್ಯಾಂಟಿನ ಜೇಬಿನಿಂದ ಹೊರಬಂದಾಗ ಉದ್ದ ಹಿಡಿಕೆಯ ಚೂರಿ ಇದ್ದದ್ದು ಅವನ ದೃಷ್ಟಿಗೆ ಬಿದ್ದು ಆತನು ಅಲ್ಲಿಂದ ಕಂಬಿಕಿತ್ತ.

ರಾಬರ್ಟ್ ಓಡುತ್ತಿದ್ದಂತೆ ಕಪ್ಪು ವ್ಯಾನ್ ಸ್ಟಾರ್ಟ್ ಆಗಿ ಅವನೆಡೆ ಧಾವಿಸಿತು. ಕೆಂಪು ಗೆರೆಯ ಶರ್ಟು ಧರಿಸಿದಾತನೂ ಅವನ ಮುಂದೆ ಸಡೆದ,

"ಸ್ಟಾಪ್... ನಾನು ಗುಂಡು ಹಾರಿಸಬೇಕಾಗುತ್ತದೆ" ಅವಿನಾಶ ಎಚ್ಚರಿಸಿದ್ದು ವ್ಯರ್ಥವಾಯಿತು. ಆತ ಹೊರಳಿ ಸಹ ನೋಡಲಿಲ್ಲ ಅವಿನಾಶ ಎರಡನೇ ಬಾರಿ ಕೂಗಿ ಹೇಳಿದ... ಈ ಭಾರಿ ಆ ವ್ಯಕ್ತಿ ತನ್ನ ಕೈ ಮೇಲೆತ್ತಿತ್ತು. ಕೈಯಲ್ಲಿ ಫಳಫಳ ಹೊಳೆಯುವ ಚೂರಿ.

ಅವನ ಉದ್ದೇಶ ಅವಿನಾಶನಿಗೆ ಅರ್ಥವಾಯಿತು.

ಮುಂದೆ ಓಡುತ್ತಿದ್ದ ರಾಬರ್ಟ್ ಅವನ ಗುರಿಯಾಗಿದ್ದ

ಅವಿನಾಶನ ಬೆರಳುಗಳು ಕದುರೆ ಅದುಮಿದವು ... 'ಢಂ' ಎಂಬ ಸಪ್ಪಳ. ಆ ವ್ಯಕ್ತಿಯ ಕೈಯಲ್ಲಿಯ ಚೂರಿ ಹಾರಿಹೋಯಿತು. ಚೀರಿಕೊಂಡ ಆತ ಕೈಜಾಡಿಸುತ್ತ ಓಡಿದ ಕೈಯಿಂದ ರಕ್ತ ಜಿನುಗುತ್ತಿತ್ತು. ರಾಬರ್ಟ್ ಓಡಿ ಪಾರಾಗಿದ್ದ. ಕಪ್ಪು ವ್ಯಾನ್ ತನ್ನ ದಿಕ್ಕು ಬದಲಿಸಿತು. ರಾಬರ್ಟ್‌ನನ್ನು ಬಿಟ್ಟು ಕೆಂಪುಗೆರೆ ಶರ್ಟ್ ತೊಟ್ಟವನ ಬಳಿ ಬರುತ್ತಿದ್ದಂತೆ ಅವರ ಸೈಡ್ ಡೋರ್ ತೆರೆದುಕೊಂಡಿತು. ಆತ ಓಡುತ್ತಿದ್ದ ವ್ಯಾನ್ ಒಳಗೆ ಜಂಪ್ ಮಾಡಿದ.

ಮತ್ತೊಂದು ಗುಂಡು ಹಾರಿತ್ತು ಅವಿನಾಶನ ರಿವಾಲ್ವರದಿಂದ.

'ಅಯ್ಯೋ' ಎಂದಾತ ಚೀರಿಕೊಂಡ. ಅವನ ಕಾಲಿನ ಮೀನ ಕಂಡಕ್ಕೆ ಗುಂಡು ತಾಕಿತ್ತು ಯಾರೋ ಅವನನ್ನು ಒಳಗೆಳೆದುಕೊಂಡರು ವ್ಯಾನ್ ವೇಗವಾಗಿ ಓಡಿ ಮರೆಯಾಯಿತು.

ಅಷ್ಟರಲ್ಲಿ ಅವಿನಾಶ ಅದರ ನಂಬರು ನೋಡಿ ಗುರುತಿಸಿಕೊಂಡಿದ್ದ.

ಅದು ನಕಲಿ ನಂಬರು ಎಂದು ಅರಿತಿದ್ದರೂ ಅವನ ಕಣ್ಣುಗಳು ಅದನ್ನು ಗುರುತಿಸಿದವು... ಡಿಸೋಜಾ ಮತ್ತು ಕಾನ್‌ಸ್ಟೇಬಲ್ ಗಾಬರಿಯಾಗಿ ಓಡುತ್ತ ಬಂದಾಗ ರಾಬರ್ಟ್ ಮರದ ಮರೆಯಿಂದ ಸರಿದು ಅವರ ಬಳಿ ಬಂದ.... ಕೂದಲೆಳೆಯಷ್ಟು ಅಂತರದಲ್ಲಿ ಆತ ಸಾವಿನಿಂದ ಪಾರಾಗಿದ್ದ ಇನ್ನೂ ತನ್ನತ್ತ ನೋಡುತ್ತಿದ್ದ ಅವಿನಾಶನತ್ತ ನೋಡಿ ಕೃತಜ್ಞತೆಯಿಂದ ಕೈ ಮುಗಿದ. ಡಿಸೋಜಾ ಅವನನ್ನು ತನ್ನ ಜೀಪ್‌ಗೆ ತಂದು ಅದರಲ್ಲಿ ಕುಳ್ಳಿರಿಸಿದರು.

ಜೀಪು ಹೊರಡುತ್ತಿದ್ದಂತೆ ಡಿಸೋಜಾ ಮತ್ತೆ ಆಸ್ಪತ್ರೆ ಕಡೆ ಹೆಜ್ಜೆ ಹಾಕಿದ....

"ಡಿಸೋಜಾ-ಅಪರಾಧಿ ತುಂಬಾ ಗಾಬರಿಯಾಗಿದ್ದಾನೆ. ಅವನ

ಬತ್ತಳಿಕೆಯಿಂದ ಹೊರಬಂದ ಎಲ್ಲಾ ಬಾಣಗಳು ಅವನತ್ತಲೇ ವಾಪಸಾಗುತ್ತಿವೆ. ಹೀಗಾಗಿ ಆತ ತನ್ನ ಸಹನೆ ಕಳೆದುಕೊಂಡು ಹುಚ್ಚನಂತೆ ವರ್ತಿಸುತ್ತಿದ್ದಾನೆ. ಇದರ ಸದುಪಯೋಗ ನಾವು ಪಡೆಯಬೇಕು....ನೀವು ಕೂಡಲೇ ರಾಬರ್ಟ್ ಬಳಿ ಹೋಗಿ ನರ್ಸಿನ ಫೋಟೋ ಫ್ರೇಂಮ್ ಹಾಕಿಸಿಕೊಂಡು ಅವನಿಗೆ ಎಂಟು ದಿನ ಊರಿಂದ ದೂರ ಹೋಗಲು ತಿಳಿಸಿ. ಇಲ್ಲದಿದ್ದರೆ ಅವನ ಜೀವಕ್ಕೆ ಅಪಾಯವಿದೆ...ನಾನು ಇಂದೇ ಊರಿಗೆ ಹೋಗುತ್ತೇನೆ...ಪಾಂಡುರಂಗನ ಮನೆ-ಸಂಸಾರ ಎಲ್ಲಾ ಅಲ್ಲೇ ಇರೋದು....ನನಗೇನಾದರೂ 'ಕ್ಲೂ' ಸಿಗುತ್ತದೇನೋ ನೋಡುತ್ತೇನೆ. ನೀವು....ನಾಳಿನ ಪತ್ರಿಕೆಗಳಲ್ಲಿ ನರ್ಸಿನ ಭಾವಚಿತ್ರ ಪ್ರಕಟಿಸಿ....ಏನಾದರೂ ಅತ್ಯಂತ ಮಹತ್ವದ ವಿಷಯ ತಿಳಿದು ಬಂದರೆ ಕೂಡಲೇ ನನಗೆ ತಿಳಿಸಿ"

ಅವಿನಾಶನ ಮಾತುಗಳು ಡಿಸೋಜಾಗೆ ಒಪ್ಪಿಗೆಯಾದವು.

ಆತ ಒಪ್ಪಿಕೊಂಡ.

ಅಂದೇ ಅವಿನಾಶ ತನ್ನ ಕಾರಿನಲ್ಲಿ ಊರ ಕಡೆ ಪ್ರಯಾಣ ಬೆಳೆಸಿದ. ಮಧ್ಯ ದಾರಿಯಲ್ಲಿ ಅಪಾಯ ಎರಗಬಹುದೆಂದು ಎಲ್ಲಾ ಸಿದ್ಧತೆಯೊಂದಿಗೆ ಇದ್ದ ಅವನಿಗೆ ನಿರಾಶೆಯಾಯಿತು. ಆತ ನಿರಾತಂಕವಾಗಿ ಊರು ತಲುಪಿದ್ದ. ರಾತ್ರಿ ಬಹಳವಾಗಿದ್ದರಿಂದ ನೇರವಾಗಿ ಮನೆಗೆ ನಡೆದ ಆತ ವಿಶ್ರಾಂತಿ ತೆಗೆದುಕೊಂಡ.

ಮರುದಿನ ಎಸ್. ಪಿ. ಸಾಹೇಬರನ್ನು ಅವರ ಮನೆಯಲ್ಲೇ ಕಂಡ. ತಾರಾನಾಥರು ಉತ್ಸಾಹದಿಂದ ಅವನನ್ನು ಸ್ವಾಗತಿಸಿ ವಿವರವಾಗಿ ಎಲ್ಲವನ್ನು ಕೇಳಿದರು.

'ಅವಿನಾಶ್' ಕೇಸ್ ಬರಬರುತ್ತ ಜಟಿಲವಾಗುತ್ತಿದೆಯಲ್ಲ ?

'ಹೌದು ಸರ್....ಹಾಗೆ ಅಂತ ನಾವು ಚಿಂತಿಸುವ ಅವಶ್ಯಕತೆಯಿಲ್ಲ. ಸಧ್ಯದ ಪರಿಸ್ಥಿತಿಯಲ್ಲಿ ನಮಗೆ ಗೆಲುವು ದೊರೆಯುತ್ತಿಲ್ಲ. ಹಾಗಂತ ನಾವು ಸೋತಿದ್ದೂ ಇಲ್ಲ....ನಮ್ಮ ಆಕ್ರಮಣದಿಂದ ಆತ ಗಾಬರಿಯಾಗಿದ್ದಾನೆ. ಹತಾಶನಾಗಿದ್ದಾನೆಂಬುದು ಮಹತ್ವದ ಅಂಶ ಸರ್".

"ಆತ ಹತಾಶನಾಗಿದ್ದಾನೆ ಎಂದು ಹೇಗೆ ಹೇಳುವೆ".

"ಸಾಮಾನ್ಯವಾಗಿ ಅಪರಾಧಿ ದೂರ ಕುಳಿತು ಸಮಾಧಾನದಿಂದ ಬೇಟೆಯ

ದಾರಿ ಕಾಯುತ್ತಾನೆ ಇಲ್ಲಿ ಹಾಗೆ ಆಗಿಲ್ಲ ಸರ್, ಅಪರಾಧಿಯೂ ಖುಲ್ಲಾ ಬೀದಿಗೆ ಬಂದು ದಾಳಿ ನಡೆಸುತ್ತಿದ್ದಾನೆ. ಅವನ ರಹಸ್ಯ ಹೊರಗೆಡವಬಲ್ಲ ಮಹತ್ವದ ಸಾಕ್ಷಿಗಳಾದ ಪಾಂಡುರಂಗ, ನರ್ಸ್ ನಮ್ಮ ಬಂಧಿಗಳಾಗಿದ್ದಾರೆ. ಅವರಿಗೆ ಎಚ್ಚರ ಬರುವುದನ್ನೇ ನಾನು ಕಾಯುತ್ತಿದ್ದೇನೆ. ಆ ಅಪಾಯ ಎದುರಿಸಲು ಸಿದ್ಧರಾಗದ ಅವರು ಸಾಕ್ಷಿಗಳನ್ನು ದಾರಿಯಿಂದ ಸರಿಸಲು ಪ್ರಯತ್ನ ಮಾಡಿ ಸೋತಿದ್ದಾರೆ. ಆ ದೃಷ್ಟಿಯಲ್ಲಿ ನಮಗೆ ಗೆಲುವು ದೊರೆತಿದೆ.

"ಕರೆಕ್ಟ್.... ನಿನ್ನ ವಾದದಲ್ಲಿ ಹುರುಳಿದೆ. ನಿನ್ನ ಮುಂದಿನ ವಿಚಾರವೇನು ?

"ಏನೋ ನನಗೊಂದು ಸಂಶಯ....ಪಾಂಡುರಂಗ ಇದೇ ಊರಿನವ. ಅವನನ್ನು ಕೊಲ್ಲಲು ಬಂದ ನರ್ಸ್ ಸಹ ಇದೇ ಊರಿನವಳು ಇರಬಹುದು ಎಂದು...."

"ಅದಕ್ಕೆ ಪುಷ್ಠಿ ಏನು ?"

"ಕೊಹಿಮಾ ಹತ್ತಿರ ಪಾಂಡುರಂಗ ನನ್ನ ಕೊಲ್ಲಲು ಬಂದು ತನ್ನ ಶತ್ರುಗಳ ಕೈಯಲ್ಲಿ ಸಿಕ್ಕಿ ಗಾಯ ಹೊಂದಿದ. ಅವನನ್ನು ಕೊಹಿಮಾದ ಆಸ್ಪತ್ರೆಗೆ ಸೇರಿಸಿದಾಗ ಕೊಲ್ಲಲು ಪ್ರಯತ್ನ ಮಾಡಲಾಯಿತು. ಪಾಂಡುರಂಗ ನನ್ನು ನೋಡಿದವರು ಯಾರೂ ಇಲ್ಲ. ಈ ನರ್ಸ್ ಹೊರತಾಗಿ....ಹೀಗಾಗಿ ಆಕೆ ಬಹುಶಃ ಈ ಭಾಗದವಳೇ ಇರಬೇಕು ಅಥವಾ ಪಾಂಡುರಂಗನಿಗೆ ಪರಿಚಯವಿದ್ದವಳಾಗಿರಬೇಕು ಎಂಬ ಭಾವನೆ"

"ಹಾಗಾದರೆ ಆಕೆ ಪಾಂಡುರಂಗನ ಬದಲು ಅಪಹರಿಸಲ್ಪಟ್ಟ ಶವದ ಮೇಲೆ ಏಕೆ ಚೂರಿಯಿಂದ ಇರಿದಳು ?"

"ಹಾಂ ಸರ್....ಇಲ್ಲಿ ನನ್ನ ವಾದ ತಪ್ಪುತ್ತದೆ. ಆದರೆ....ಸರ್ ನರ್ಸ್ ತುಂಬಾ ಹೊತ್ತಿನಿಂದ ಪಾಂಡುರಂಗನನ್ನು ಹುಡುಕುತ್ತಿದ್ದಳು. ಆತ ದೊರೆತಿರಲಿಲ್ಲ. ಅಲ್ಲದೆ ಆಕೆಗೆ ಸ್ಮಾಕ್ ಬೇಕಾಗಿತ್ತು. ಅದೂ ದೊರೆತಿರ ಲಿಲ್ಲ. ಇದರಿಂದಾಗಿ ಆಕೆ ವ್ಯಗ್ರಳಾಗಿದ್ದಾಳೆ. ಇದೂ ಒಂದು ಕಾರಣ ವಾಗಿರಬಹುದು...."

"ಹಾಂ....ಸಾಧ್ಯವಿದೆ"

"ನಾನು ಶಹರದ ಪ್ರತಿ ಕಾಲೇಜಿಗೂ ಹೋಗಿ ಯಾವುದಾದರೂ ಹುಡುಗಿ ಕಾಣೆಯಾಗಿರುವಳೇ ಹೇಗೆ ಎಂದು ವಿಚಾರಿಸುತ್ತೇನೆ. ದಾರಿಯಲ್ಲಿ ಬರುವ ಠಾಣೆಗಳಲ್ಲೂ ಸಹ...."

"ಹಾಂ ಒಳ್ಳೆ ವಿಚಾರ....ಇದರ ಜೊತೆಯೇ ಠಾಣೆಗಳಲ್ಲಿರುವ ಅಪರಾಧಿಗಳ ಭಾವಚಿತ್ರವಿರುವ ಆಲ್ಬಂ ಮೇಲೂ ಕಣ್ಣು ಆಡಿಸಿ...."

"ಸರಿ ಸರ್"

ಅವಿನಾಶ್ ಅವರಿಗೆ ವಂದಿಸಿ ಹೊರಬಂದ....

ಸಮೀಪದ ಕಾಲೇಜಿಗೆ ಭೇಟಿ ಕೊಟ್ಟು ಅರ್ಧ ಗಂಟೆಗೂ ಹೆಚ್ಚು ಕಾಲ ಸಮಯ ಕಳೆದಿದ್ದು ವ್ಯರ್ಥವಾಯಿತು....ಹಾಗೇ ಮುಂದೆ ದಾರಿಯಲ್ಲಿದ್ದ ಎರಡು ಠಾಣೆ ಹೊಕ್ಕು ಅಲ್ಲಿದ್ದ ಆಲ್ಬಂ ತಿರುವಿ ಹಾಕಿದ....ನರ್ಸನ್ನು ಹೋಲುವ ವ್ಯಕ್ತಿಯ ಭಾವಚಿತ್ರ ಅಲ್ಲಿ ಎಲ್ಲೂ ಕಾಣಿಸಲಿಲ್ಲ...."

ಅಲ್ಲಿಂದ ಮತ್ತೊಂದು ಕಾಲೇಜು.

ಈ ರೀತಿ ಶಹರದ ಐದಾರು ಕಾಲೇಜುಗಳು ಮುಗಿದು ಡಿಗ್ರಿ ಕಾಲೇಜಿನ ಹತ್ತಿರ ಆತ ಬಂದಿದ್ದ. ಸಮಯ ಮೂರು ಗಂಟೆ ಸಮೀಪಿಸಿತ್ತು. ಬೆಳಿಗ್ಗೆ ಒಂಭತ್ತು ಗಂಟೆಗೆ ಆರಂಭವಾದ ಅವನ ಈ ಯಾತ್ರೆಗೆ ಗೆಲುವು ಸಿಕ್ಕಿರಲಿಲ್ಲ.... ಕಾಲೇಜ್ ಕಾಂಪೌಂಡ್ ಪ್ರವೇಶಿಸಿ ಆಫೀಸಿನ ಎದುರು ಜೀಪ್ ನಿಲ್ಲಿಸಿದ. ಆತ ಪ್ರಿನ್ಸಿಪಾಲರ ಕೋಣೆಯತ್ತ ಹೆಜ್ಜೆ ಹಾಕುತ್ತಿದ್ದಂತೆ....ಪಲ್ಲವಿ ಅವನೆದುರು ಹಾಯ್ದು ಹೋದಳು.

ಅವಿನಾಶ ಪಲ್ಲವಿಯನ್ನು... ಪಲ್ಲವಿ ಅವಿನಾಶನನ್ನು ಒಂದು ಬಾರಿ ನೇರವಾಗ ದಿಟ್ಟಿಸಿದರು. ಅವರ ದೃಷ್ಟಿ ಎದುರಿಸಲಾರದೇ ಆಕೆ ಮುಖ ಕೆಳಗೆ ಮಾಡಿ ಅಲ್ಲಿಂದ ಆದಷ್ಟು ಬೇಗ ಸರಿದುಕೊಳ್ಳಲು ವೇಗವಾಗಿ ನಾಲ್ಕು ಹೆಜ್ಜೆ ಹಾಕಿದಾಗಲೇ ಆತ ತಡೆದ.

"ಮಿಸ್. ಸ್ವಲ್ಪ ಸಹಾಯ ಮಾಡುತ್ತೀರಾ ?"

ಪಲ್ಲವಿಗೆ ನಿಲ್ಲದ ಹೊರತು ಬೇರೆ ದಾರಿಯೇ ಇರಲಿಲ್ಲ. ಅವನತ್ತ ಹೊರಳಿದಳು.

"ಹೇಳಿ ಸರ್....ಏನಾಗಬೇಕು ?"

"ಆಫೀಸಿನಲ್ಲಿ ಪ್ರಿನ್ಸಿಪಾಲರಿದ್ದಾರೆಯೇ ?"

ಛೆ ಇದೆಂಥ ವ್ಯರ್ಥ ಪ್ರಶ್ನೆ....ಆಫೀಸಿನೆದುರೇ ನಿಂತು....

"ಹಾಂ ಇದಾರೆ" ಚುಟುಕಾಗಿ ಉತ್ತರಿಸಿದಳು.

"ಅವರ ಹೆಸರೇನು ?"

"ಮಿಸೆಸ್ ಛಾಯಾ ಗೋಪಾಲನ್...."

"ಥ್ಯಾಂಕ್ಯೂ"

ಆಕೆ ಹೊರಳುತ್ತಿದ್ದಂತೆ ಮತ್ತೆ ತಡೆದ ಆತ. ಪಲ್ಲವಿಯ ಜೀವವೇ ಹೋದಂತಾಯಿತು.

"ಅಂದ ಹಾಗೆ ...ಅಂದ ಹಾಗೆ...."

ಅವಿನಾಶ ಸುತ್ತಲೂ ನಿರೂಪಿಸಿದ....ಅಲ್ಲಿಂದ ಹಾಯ್ದು ಹೋಗುತ್ತಿದ್ದ ವಿದ್ಯಾರ್ಥಿನಿಯರೆಲ್ಲ ಅವರತ್ತಲೇ ಆಸಕ್ತರಾಗಿದ್ದರು.

"ನಿಮ್ಮ ಕಾಲೇಜಿನಲ್ಲಿ ನಾಲ್ಕಾರು ದಿನಗಳಿಂದ ಯಾವುದಾದರೂ ಹುಡುಗಿ ಕಾಣೆಯಾಗಿದ್ದಾಳೆಯೇ"

"ಧಡಕ್" ಎಂದಿತು ಎದೆ ಗುಂಡಿಗೆ....

"ಇಲ್ಲ...."

"ತಿಂಗಳಿಂದ"

"ನನಗೆ ಗೊತ್ತಿಲ್ಲ"

"ಥ್ಯಾಂಕ್ಸ್ ..."

ಆತ ಆಫೀಸಿನತ್ತ ಹೆಜ್ಜೆ ಹಾಕಿದವ ಧಡಧಡನೆ ಮೆಟ್ಟಿಲು ಹುತ್ತುತ್ತಿದ್ದವ "ಗಕ್" ಎಂದು ನಿಂತು ಬಿಟ್ಟ....ಇದೀಗ ಮಾತನಾಡಿದ ಹುಡುಗಿ ಕಣ್ಣು.... ಮೂಗು ವಿಚಿತ್ರವಾಗಿ ಅರಳಿಸಿಕೊಳ್ಳುತ್ತಿದ್ದಳಲ್ಲ....ಹಾಂ....ಅಂದ ಹಾಗೆ ಒಂದು ಬಗೆಯ ವಾಸನೆ ಅದೇ....ನರ್ಸ್ ಬಳಿಯಿದ್ದ ಪುಡಿಕೆಯ ವಾಸನೆ....ಓಹ್ ಗಾಡ್....ಈಕೆ....ಈಕೆ ಸಹ ಡ್ರಗ್ ಅಡಿಟ್....ಸರಕ್‌ನೆ ಹೊರಳಿದ....ಪಲ್ಲವಿ ಎಲ್ಲೂ ಕಾಣಲಿಲ್ಲ....

ಮೆಟ್ಟಿಲ ಮೇಲೆ ನಿಂತು ಎಲ್ಲೆಡೆ ದೃಷ್ಟಿ ಹರಿಸಿದ. ಆ ಹುಡುಗಿ ಕಂಡು ಬರಲಿಲ್ಲ.

"ಹಲೋ....ತಮಗೆ ಯಾರು ಬೇಕಾಗಿತ್ತು ?"

ನೆಯವಾದರೂ ಗಡಸು ಕಂಠ ಕೇಳಿಸಿತು. ಹೊರಳಿದ ನಲವತ್ತೈದು ಐವತ್ತರ ಮಹಿಳೆ.

"ಪ್ರಿನ್ಸಿಪಾಲರನ್ನು ಕಾಣಬೇಕಾಗಿತ್ತು"

"ನಾನೇ"

"ನೀವೇನಾ ಛಾಯಾ ಗೋಪಾಲನ್"

"ಹೌದು ಬನ್ನಿ... ಒಳಗೆ ಮಾತನಾಡೋಣ"

ಮತ್ತೊಮ್ಮೆ ಸುತ್ತಲೂ ನೋಡಿ ಆತ ಪ್ರಿನ್ಸಿಪಾಲರನ್ನು ಹಿಂಬಾಲಿಸಿದ.... ಆತ ಕಾಣದಂತಾಗಲು ಅವನ ಜೀಪಿನ ಹಿಂದೆ ಅವಿತುಕೊಂಡಿದ್ದ ಪಲ್ಲವಿ ಹೊರ ಬಂದಳು. ಅಲ್ಲಿಂದ ಮುಂದೆ ಒಂದು ನಿಮಿಷವನ್ನು ವ್ಯರ್ಥಗೊಳಿಸದೇ ಅವಸರ ದಿಂದ ಹೊರಬಂದು ಖಾಲಿ ಬರುತ್ತಿದ್ದ ಆಟೋ ಕೂಗಿ ನಿಲ್ಲಿಸಿದಳು.

ಆಟೋ ಓಡುತ್ತಿದ್ದರೂ ಅವಳಿಗೆ ಲಾವಣ್ಯಳದೇ ಚಿಂತೆ.

ಒಂದು ವಾರದಿಂದ ಆಕೆಯ ಭೇಟಿಯಾಗಿರಲಿಲ್ಲ. ಕಾಲೇಜಿಗೂ ಬಂದಿರ ಲಿಲ್ಲ....ಮೊದಲು ಎರಡು ದಿನ ಎಲ್ಲೋ ಓವರ್‌ಡೋಜ್ ಆಗಿ ಬಿದ್ದುಕೊಂಡಿರ ಬೇಕು. ನಾಳೆ ನಾಡಿದ್ದು ಬರಬಹುದು ಎಂದುಕೊಂಡು ಸುಮ್ಮನಾಗಿದ್ದಳು. ಒಂದು ವಾರ ಇದೇ ರೀತಿ ಕಳೆದಾಗ ಚಿಂತೆ ಆರಂಭವಾಯಿತು. ಆತ್ಮೀಯ ಗೆಳತಿ ಕಂಡಿಲ್ಲ ಎಂಬ ಕೊರಗಿಗಿಂತ ಹೆಚ್ಚಾಗಿ ಆಕೆಯಿಂದ ಮುಫತ್ತಾಗಿ ಸಿಗುತ್ತಿದ್ದ "ಚಿಟುಕಿ" ಬಂದಾಗಿದ್ದುದು ಪ್ರಮುಖ ಕಾರಣವಾಗಿತ್ತು. ಅವಳಿಂದ ಆಗೊಮ್ಮೆ ಈಗೊಮ್ಮೆ ದೊರೆಯುತ್ತಿದ್ದ "ಚಿಟುಕಿ... ಅವಳ ಕಣ್ಣು ತಪ್ಪಿಸಿ ಆಕೆ ಗಂಧರ್ವಲೋಕದಲ್ಲಿ ವಿಹರಿಸುತ್ತಿದ್ದಾಗ ಹಾರಿಸಿದ ಅನೇಕ "ಚಿಟುಕಿ" ಎಲ್ಲಾ ಕೂಡಿ ಹಾಕಿ ಪಲ್ಲವಿ ದಿನಕ್ಕೊಂದೋ ಎರಡೋ ಸೇವಿಸುತ್ತಿದ್ದಳು. ಮನೆಯಲ್ಲಿ ಸಹೋದರ ಅನೂಪನ ಹೆದರಿಕೆ ಬೇರೆ.

ಅವನಿಗೆ ಸಂಶಯ ಬಂದರೆ ?....ಎಂಬ ಭಯ....

ಹಾಗೂ ಹೀಗೂ ಒಂದು ವಾರ ಕಳೆಯುವಷ್ಟರಲ್ಲಿ ಸಾಕಾಗಿತ್ತು. ಈಗ ಉಳಿದದ್ದು ಅವಳ ಬಳಿ ಒಂದೇ ಒಂದು "ಚಿಟುಕಿ". ಐದನೇ ಪಿರಿಯಡ್ ನಡೆ ದಾಗ "ಡೋಜ್" ಬೇಕು ಅನಿಸಿ ಚಿಟುಕಿಯೊಂದಿಗೆ ಹೊರಗೆ ಬಂದಳು. ಒಬ್ಬ ರಾದ ಮೇಲೆ ಒಬ್ಬರಂತೆ ಪರಿಚಿತರು ಎದುರು ಬಂದಾಗ "ತುಂಬಾ ತಲೆ ನೋವು" ಎಂದು ನಾಟಕ ಮಾಡಿ ಮನೆಗೆ ಹೋಗುವ ನೆವ ಹೇಳಿ ಆಫೀಸಿನ

ಮುಂದೆ ಹಾಯ್ದು ಬಂದಳು. ಆಫೀಸ್ ಮುಂದೆ ಚಿಕ್ಕ ಕೈತೋಟ.... ಅಲ್ಲಿ ಮಲ್ಲಿಗೆ ಕಂಟಿಯ ಮರೆಯಲ್ಲಿ ಕುಳಿತು ಚಿಟಕಿ ಖಾಲಿ ಮಾಡುವ ಪ್ಲಾನು ಅವಳದು....

"ಅಲ್ಲಿ ವಿಧಿ ಇನ್ಸ್‌ಪೆಕ್ಟರ್ ರೂಪದಿಂದ ಕಾಡಬೇಕೆ ?"

ಆತ ಕೇಳಿದ ಪ್ರಶ್ನೆಗಳಿಂದ ಆತ ಬಹುಶಃ ಲಾವಣ್ಯಳನ್ನು ಹುಡುಕುತ್ತಿರ ಬಹುದು ಎಂಬ ಆತಂಕ ಬಲವಾದಾಗ ಕೈಲಿ ಹಿಡಿದ ಚಿಟಿಕೆಯೊಂದಿಗೇ ಆಕೆ ಹೊರಗೋಡಿದ್ದಳು. ಆಟೋದಲ್ಲಿ ಕುಳಿತು ಚಿಟಿಕೆ ಖಾಲಿ ಮಾಡಿ ಹಾಳೆಯನ್ನು ಹೊರಗೆ ಬಿಸಾಡಿದಳು. "ಹಾಯ್" ಎನಿಸಿತು....ಬದುಕು ಸುಂದರ ಎನಿಸಿತು....ಮನೆ ತಲುಪಿದ್ದಳು ಆಕೆ.

ತನ್ನ ಕೋಣೆಗೆ ಬಂದು ಹಾಸಿಗೆ ಮೇಲೆ ಉರುಳಿಕೊಂಡಳು.

ಸುಮಾರು ಎರಡು ಗಂಟೆ ಆಕೆ ನಿದ್ರಿಸಿರಬೇಕು.

ಮುಂದೆ ಎಚ್ಚರವಾಯಿತು. ಎದ್ದು ಬಾತ್‌ರೂಮಿಗೆ ಬಂದು ಕೈಕಾಲು ಮುಖ ತೊಳೆದುಕೊಂಡು ಅಡುಗೆ ಮನೆಗೆ ಬಂದಳು. ಅಮ್ಮ ಉಪ್ಪಿಟ್ಟು ಮಾಡಿ ಕಾಫಿಗೆ ನೀರು ಇಟ್ಟಿದ್ದಳು.

"ಬಾ....ಉಪ್ಪಿಟ್ಟು ಬಿಸಿಯಾಗಿದೆ....ಮೊದಲು ತಿಂದು ಬಿಡು....ದಣಿದು ಬಂದಂತೆ ಕಾಣುತ್ತೀಯೇ ?"

ಪ್ರೀತಿಯ ಮಳೆ ಕರೆಯುತ್ತಾ ಪ್ಲೇಟಿಗೆ ಉಪ್ಪಿಟ್ಟು ತೆಗೆದು ಮೇಲೆ ಒಂದು ಚಮಚ ತುಪ್ಪ ಸುರಿದು ಒಂದು ಉಪ್ಪಿನಕಾಯಿ ಹೋಳು ಅದರೊಂದಿಗೆ ಇಟ್ಟು ಕೈಗೆ ಕೊಟ್ಟಾಗ ಕಣ್ಣಲ್ಲಿ ನೀರು ಬಾರದಿರಲಿಲ್ಲ ಪಲ್ಲವಿಗೆ.

ಉಪ್ಪಿಟ್ಟಿನ ಪ್ಲೇಟು ಅರ್ಧ ಖಾಲಿಯಾಗಿತ್ತು....ಹೊರಗೆ ಅಕ್ಕಿ ಆರಿಸುತ್ತಿದ್ದ ತಾಯಿ ಸಂಜೆ ಪತ್ರಿಕೆ ಬರುತ್ತಲೂ ಕಣ್ಣಾಡಿಸಿದರು. ಒಳಪುಟ ದಲ್ಲಿ ಅಚ್ಚಾಗಿದ್ದ ಲಾವಣ್ಯಳ ಫೋಟೋ ನೋಡಿ ಗಾಬರಿಯಾದರು.... ಅದರೊಳಗಿದ್ದ ವಿಷಯ ಓದುತ್ತಿದ್ದಂತೆ ತಡೆದುಕೊಳ್ಳಲಾಗದೇ "ಪಲ್ಲವೀ.... ಪಲ್ಲವೀ" ಎಂದು ಕೂಗುತ್ತಾ ಪತ್ರಿಕೆಯೊಂದಿಗೇ ಅಡುಗೆ ಮನೆಗೆ ಧಾವಿಸಿ ಬಂದರು.

ಏನೋ ಅನಾಹುತವಾಯಿತು.

ಆ ಪೋಲೀಸ್ ಆಫೀಸರು ತನ್ನನ್ನು ಹುಡುಕಿಕೊಂಡು ಬಂದಿರಬೇಕು

ಎಂಬ ಯೋಚನೆ ಬರುತ್ತಿದ್ದಂತೆ ಉಪ್ಪಿಟ್ಟು ಗಂಟಲಲ್ಲಿ ಇಳಿಯಲಿಲ್ಲ.... ಒಳಗೋಡಿ ಬಂದರು ಅಮ್ಮ. "ಇಲ್ಲಿ ನೋಡೇ....ಲಾವಣ್ಯಳ ಫೋಟೋ ಬಂದಿದೆ....ಯಾರೋ ಅವಳಿಗೆ ಗುಂಡು ಹೊಡೆದಿದ್ದಾರಂತೆ... ಒಂದಲ್ಲ.... ಮೂರು .. ಪಾಪಿಗಳು....ಪಾಪ ಅವಳೇನು ಮಾಡಿದ್ದಳೋ.

ಭರ್‌ನೆ ಅವಳ ಕೈಯಿಂದ ಪತ್ರಿಕೆ ಕಸಿದುಕೊಂಡ ಪಲ್ಲವಿ ಸುದ್ದಿಯ ಮೇಲೆ ಕಣ್ಣಾಡಿಸಿದಳು .. ಅಳು ಉಕ್ಕಿಬಂದಿತು. ಪತ್ರಿಕೆಯನ್ನು ಎದೆಗೊತ್ತಿ ಕೊಂಡು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು.

ಅಮ್ಮನೇ ಸಮಾಧಾನ ಮಾಡಿ ಕಾಫಿ ಕುಡಿಸಿದಳು.

ಪಲ್ಲವಿಗೆ ಸಮಾಧಾನವಾಗಲಿಲ್ಲ.

ಲಾವಣ್ಯಳ ಕೋಣೆವರೆಗೂ ಹೋಗಿ ಬರಬೇಕೆಂದು ನಿಶ್ಚಯಿಸಿದಳು.

ಬಟ್ಟೆ ಬದಲಾಯಿಸಿ ತಾಯಿಗೆ ತನ್ನ ನಿರ್ಧಾರ ತಿಳಿಸಿದಾಗ "ಬೇಗ ಬಾ ತಾಯಿ" ಎಂದರು ಅಕ್ಕರೆಯಿಂದ. ಗೋಣು ಆಡಿಸಿ ಹೊರಬಂದಳು. ಸಾಯಂಕಾಲದ ವೇಳೆ ಆಟೋ ಹಿಡಿಯುವ ಬದಲು ನಡೆದೇ ಹೋದರಾಯಿ ತೆಂದುಕೊಂಡು ಅವಳ ರೂಮಿನೆಡೆ ಹೆಜ್ಜೆ ಹಾಕಿದಳು.

ಎಸ್.ಎಸ್.ಎಲ್.ಸಿ.ವರೆಗೂ ವಸತಿ ಶಾಲೆಯ ರೂಮಿನಲ್ಲಿದ್ದ ಲಾವಣ್ಯ ಮುಂದೆ ಕಾಲೇಜ್ ಸೇರುತ್ತಲೂ ಅಲ್ಲಿನ ಹಾಸ್ಟೆಲ್‌ನಲ್ಲಿ ರೂಮು ಮಾಡಿದಳು.... ಅಲ್ಲಿ ಸರಿಹೊಂದದ್ದರಿಂದ ಬೇರೆಡೆ ಖಾಸಗಿಯಾಗಿ ಮೂರು ಕೋಣೆಗಳ ಮನೆ ಯನ್ನೇ ಬಾಡಿಗೆ ತೆಗೆದುಕೊಂಡದ್ದು ಅವಳಿಗೆ ತಿಳಿದಿತ್ತು.

ಲಾವಣ್ಯಳ ಕೋಣೆಯ ಬೀಗ ಅವಳನ್ನು ಸ್ವಾಗತಿಸಿತು.

ಪ್ರಸಂಗ ಬಂದರೆ ಇರಲಿ ಎಂದು ಅವಳು ಕೊಟ್ಟಿದ್ದ ಡೂಪ್ಲಿಕೇಟ್ ಚಾವಿ ಯಿಂದ ಬೀಗ ತೆರೆದು ಒಳಗೆ ಅಡಿ ಇಟ್ಟು ದೀಪ ಉರಿಸಿದಳು. ರೂಮಿನ ಅಸ್ತವ್ಯಸ್ತ ವಾತಾವರಣ ನೋಡಿ ಆಕೆ ಎಂಟು ಹತ್ತು ದಿನಗಳಿಂದ ರೂಮಿಗೆ ಬಂದೇ ಇಲ್ಲವೆಂದು ಮನದಟ್ಟಾಯಿತು....ಮತ್ತೆಲ್ಲಿ ಹೋಗಿರಬಹುದು ! ನೆನಪು ಮಾಡಿಕೊಂಡಳು. ನಿರ್ಜನ ಪ್ರದೇಶದ ಮನೆ ನೆನಪಾಯಿತು .. ಆಕೆಯೇ ಹೇಳಿ ದಂತೆ ಅದನ್ನು ಹುಡುಕಿದರಾಯಿತು ಎಂದುಕೊಂಡು ಮರಳಿ ರೂಮಿಗೆ ಬೀಗ ಹಾಕಿ ಬೀದಿಗೆ ಬಂದಳು.

ಲಾವಣ್ಯ ಹೇಳಿದ ಮನೆ ಸಿಗಲು ಒಂದು ಗಂಟೆನೇ ಬೇಕಾಯಿತು, ಮನೆಗೆ

ಬೀಗ ಹಾಕಿರಲಿಲ್ಲ, ಸಮಾಧಾನವಾಯಿತು. ಬೆಲ್ ಮಾಡಿದಳು. ಬಾಗಿಲು ತೆರೆದವ ಇಮ್ರಾನ್. ಪಲ್ಲವಿಯನ್ನು ಎದುರು ಕಂಡು ಆತ ಗಾಬರಿಯಾದ.... ಪಲ್ಲವಿ ಕೂಡ ಇಮ್ರಾನ್‌ನ ಕೈಯಲ್ಲೂ ಪತ್ರಿಕೆ ಇದ್ದುದನ್ನು ನೋಡಿ ಅವನಿಗೂ ವಿಷಯ ತಿಳಿದಿದೆ ಎಂದು ಅರ್ಥವಾಯಿತು. ಅವಳಿಗಿಂತ ಮೊದಲೇ ಇಮ್ರಾನ್ ಗುಡುಗಿದ.

"ಇಲ್ಲಿಗೇಕೆ ಬಂದೆ ?"

"ಲಾವಣ್ಯಳನ್ನು ಹುಡುಕಿಕೊಂಡು ಬಂದೆ"

"ಇನ್ನೊಮ್ಮೆ ಇಲ್ಲಿಗೆ ಬರಬೇಡ, ಲಾವಣ್ಯಳ ಬಗ್ಗೆ ಎಲ್ಲೂ ಉಸಿರೆತ್ತ ಬೇಡ. ನನ್ನ ಮಾತು ಮೀರಿದರೆ ಮುಂದೆ ನೀನೇ ಪಶ್ಚಾತ್ತಾಪಪಡುತ್ತೀಯಾ.... ನಡೆ"

ಇಮ್ರಾನ್ ಗದರಿದಾಗ ಪಾತಾಳಕ್ಕಿಳಿದ ಪಲ್ಲವಿ ಬಿರುಗಾಳಿಯಂತೆ ಹೊರ ಗೋಡಿದಳು. ಅವಳ ಹಿಂದೆಯೇ ಬಂದು ಅವರಿಬ್ಬರ ಮಧ್ಯೆ ನಡೆದ ಮಾತು ಕೇಳುತ್ತ ನಿಂತಿದ್ದ ಅನೂಪನ ಕಡೆ ಆಕೆಯ ಲಕ್ಷ್ಯವೇ ಹೋಗಲಿಲ್ಲ.

ಪಲ್ಲವಿ ದುಗುಡ ತುಂಬಿದ ಹೃದಯದೊಂದಿಗೆ ಮುಖ್ಯ ಬೀದಿಗೆ ಬಂದಳು. ಆಟೋವೊಂದನ್ನು ನಿಲ್ಲಿಸಿ ಮನೆಯ ವಿಳಾಸ ತಿಳಿಸಿ ಸೀಟಿಗೆ ತಲೆ ಯಾನಿಸಿದಳು. ಬೇಡಬೇಡವೆಂದರೂ ಅವಳ ಕಣ್ಣೆದುರು ಲಾವಣ್ಯ ತೇಲಿ ಬರುತ್ತಿದ್ದಳು. ಅವಳ ರೂಪ, ನಡೆ, ನುಡಿ, ಚೆಲ್ಲಾಟ ಎಲ್ಲಾ ನೆನಪಾಗಿ ಆಕೆ ಬಿಕ್ಕಿದಳು.. ತಂದೆ ತಾಯಿಗಳಿಂದ ದೂರವಿದ್ದ ಆಕೆಗೆ ಪಲ್ಲವಿಯೇ ಒಂದು ದೃಷ್ಟಿಯಿಂದ ಬಂಧುವಾಗಿದ್ದಳು. ಲಾವಣ್ಯಳ ಒಂಟಿತನ ದೂರ ಮಾಡಿದವಳೂ ಅವಳೇ. ಲಾವಣ್ಯಳಿಗೆ ಹಣದ ಕೊರತೆಯಿರಲಿಲ್ಲ. ಅವಳಿಗೆ ಬೇಕಾಗಿದ್ದು ಪ್ರೀತಿ...ಮಮತೆ. ಅದು ಪಲ್ಲವಿ ಮನೆಯಲ್ಲಿ ಅವಳಿಗೆ ದೊರೆತಿತ್ತು. ಪಲ್ಲವಿ ಒಡಹುಟ್ಟಿದವಳಂತೆ ನಡೆದುಕೊಂಡರೆ, ಅಮ್ಮ ಅವಳ ಮೇಲೆ ಮಮತೆಯ ಮಳೆಗರೆದಿದ್ದರು. ಎಷ್ಟೋ ಸಾರಿ ಪಲ್ಲವಿಗೆ, ಲಾವಣ್ಯಳೇ ಹಣದ ಸಹಾಯ ಮಾಡಿದ್ದಳು. ಈಗೇನೋ ಅನೂಪ ದುಡಿಯುತ್ತಿದ್ದ. ಮೊದಲು ಕೆಲಸ ವಿಲ್ಲದೆ ಖಾಲಿ ತಿರುಗುತ್ತಿದ್ದಾಗ ಒಮ್ಮೊಮ್ಮೆ ಕುತ್ತಿಗೆಗೆ ಬರುತ್ತಿತ್ತು. ಅಂಥ ಪ್ರಸಂಗದಲ್ಲಿ ಲಾವಣ್ಯ ಮುಕ್ತ ಮನಸ್ಸಿನಿಂದ ಸಹಾಯ ಮಾಡಿದ್ದಳು. ಮಾಡಿದ ಸಹಾಯ ವಾಪಸ್ಸು ಪಡೆಯಲು ಆಕೆ ಎಂದೂ ಬಯಸಲಿಲ್ಲ....

ಹೀಗಿರುವಾಗ ಹುಣ್ಣಿಮೆಯ ಚಂದ್ರನಂತಿದ್ದ ಅವಳಿಗೆ ರಾಹು ಬಡಿದು ಕೊಂಡ. ಅಣ್ಣನೊಂದಿಗೆ ಮನೆಗೆ ಬರುತ್ತಿದ್ದ ಇಮ್ರಾನ್ ಅವಳನ್ನು ತನ್ನ ಬಲೆಯಲ್ಲಿ ಕೆಡವಿಕೊಂಡ. ಅಂದಿನಿಂದ ಅವಳ ಜೀವನದ ದಿಕ್ಕೇ ಬದಲಾಯಿತು. ಇಮ್ರಾನನ ಹಿಂದೆಯೇ ಆಕೆ ಓಡಾಡಲಾರಂಭಿಸಿದಳು. ತನ್ನ ಬಳಿಯಿದ್ದ ಹಣವನ್ನು ನೀರಿನಂತೆ ಖರ್ಚು ಮಾಡತೊಡಗಿದಳು. ಇಮ್ರಾನ್ ಬೇಕೆಂತಲೇ ಪಲ್ಲವಿಯನ್ನು ದೂರವಿಟ್ಟಿದ್ದ. ಪಲ್ಲವಿಯಿಂದಾಗಿ ಆತ ಅನೂಪನನ್ನು ಕಳೆದುಕೊಳ್ಳಲು ಸಿದ್ಧವಿರಲಿಲ್ಲ....ಅದರಂತೆ ಲಾವಣ್ಯಳಿಗೂ ಎಚ್ಚರಿಕೆ ನೀಡಿದ್ದ. ಆದರೂ ಲಾವಣ್ಯಳಿಂದ ಅದನ್ನು ನಡೆಸಲಾಗಲಿಲ್ಲ. ಗೆಳತಿಯಿಂದ ಆಕೆ ದೂರವಿರಲಾಗದೇ ಪಲ್ಲವಿಯನ್ನು ಹತ್ತಿರ ತೆಗೆದುಕೊಂಡಳು. ಆಗಾಗ ಸ್ಪೇಶಲ್ ಬೀಡಾ ಕೊಟ್ಟು ಅವಳನ್ನು ತನ್ನೆಡೆ ಎಳೆದುಕೊಂಡಳು. ಮೊದಮೊದಲು ಬೀಡಾದ ಬಗ್ಗೆ ಅಷ್ಟೊಂದು ಆಸಕ್ತಿ ತೋರಿಸದ ಪಲ್ಲವಿ ಮುಂದೆ ಅದರ ಹಿಂದೆ ಬೀಳತೊಡಗಿದಳು. ಆಗೊಮ್ಮೆ ಈಗೊಮ್ಮೆ ಬೂದುಬಣ್ಣದ ಪುಡಿ ಇರುವ ಸಣ್ಣ ಸಣ್ಣ ಪುಡಿಕೆ ಕೊಟ್ಟು ಅದನ್ನು ಹೇಗೆ ಸೇವಿಸಬೇಕು ಎಂಬುದನ್ನು ತೋರಿಸಿಕೊಟ್ಟಿದ್ದಳು. ಕ್ರಮೇಣ ಪಲ್ಲವಿ ಸಹ ಅವಳ ಹಾಗೆ 'ಡ್ರಗ್ಸ್'ಗೆ ಬಲಿಯಾದಳು.

ಅಂತರವಿಷ್ಟೇ....ಲಾವಣ್ಯ ಅದರ ದಾಸಾನುದಾಸಳಾಗಿ ಅದನ್ನು ಪಡೆಯಲು ಏನು ಮಾಡಲು ಸಿದ್ಧಳಾದಳು. ಪಲ್ಲವಿ ಹಾಗಾಗಲಿಲ್ಲ. ಅವಳಿಗೆ ಅಣ್ಣ ಅನೂಪ ಮತ್ತು ತಂದೆ ತಾಯಿಗಳ ಹೆದರಿಕೆ ಇತ್ತು. ಯಾರ ಹೆದರಿಕೇನೂ ಇಲ್ಲದ ಲಾವಣ್ಯ ಇಮ್ರಾನನ ಗುಲಾಮಳಾದಳು. ಒಮ್ಮೆ ಸಾಕಷ್ಟು ಡ್ರಗ್ಸ್ ಸೇವಿಸಿ ಸ್ಮೃತಿ ಕಳೆದುಕೊಂಡು ಏನೇನೋ ಬಡಬಡಿಸುತ್ತಿರುವಾಗ ಇಮ್ರಾನ್ ತನ್ನಂಥವರಿಗಾಗಿ ಮಾಡಿದ ಪ್ರತ್ಯೇಕ ಮನೆಯ ವಿಳಾಸ ಹೇಳಿದ್ದಳು. ಅಷ್ಟೇ....

ಅದಿಂದು ಉಪಯೋಗಕ್ಕೆ ಬಂದಿತ್ತು.

ಪಲ್ಲವಿ ಒಂದೇ ಸಮನೆ ಯೋಚಿಸುತ್ತಿದ್ದಳು. ಅವಳ ಪ್ರಾಣ ಸ್ನೇಹಿತೆ ಲಾವಣ್ಯ ದೂರದ ಕೊಹಿಮಾದ ಆಸ್ಪತ್ರೆಯೊಂದರಲ್ಲಿ ಸ್ಮೃತಿಯಿಲ್ಲದೆ ಬಿದ್ದುಕೊಂಡಿದ್ದಳು. ಯಾರೋ ಅವಳನ್ನು ಕೊಲ್ಲಲು ಪ್ರಯತ್ನಿಸಿದ್ದರು. ಆಕೆ ಅಲ್ಲಿಗೆ ಏಕೆ ಹೋದಳು ? ಹೇಗೆ ಹೋದಳು ? ನರ್ಸ್ ವೇಷ ಧರಿಸುವ

ಅವಶ್ಯಕತೆ ಏನಿತ್ತು ? ಮುಂತಾದ ಪ್ರಶ್ನೆಗಳಿಗೆ ಉತ್ತರ ದೊರೆಯದಿದ್ದರೂ ಒಂದು ಮಾತು ಮಾತ್ರ ಸ್ಪಷ್ಟವಾಗಿ ತಿಳಿದಿತ್ತು. ಆಕೆ ಅಪಾಯದಲ್ಲಿ ಸಿಲುಕಿ ಕೊಂಡಿದ್ದಾಳೆ. ಅವಳ ಸುತ್ತ ಗಂಡಾಂತರ ಪ್ರದಕ್ಷಿಣೆ ಸುತ್ತುತ್ತಾ ಇದೆ. ಯಾವಾಗ ಮತ್ತೊಮ್ಮೆ ದಾಳಿ ಮಾಡುತ್ತದೋ ತಿಳಿಯದು....

ಲಾವಣ್ಯ ಸಾಯಕೂಡದು....

ಆಕೆ ಬದುಕಬೇಕು ..

ಅವಳ ಜೀವನ ಬಂಗಾರವಾಗಬೇಕು....

ತನಗೆ ಹಲವಾರು ರೀತಿಯಿಂದ ಸಹಾಯಮಾಡಿದ ಅವಳನ್ನು ಹೇಗಾದರೂ ಮಾಡಿ ತಾನು ಉಳಿಸಿಕೊಳ್ಳಬೇಕು ... ಎಂಬ ನಿರ್ಧಾರಕ್ಕೆ ಪಲ್ಲವಿ ಬಂದಾಗ ಒಂದು ಬಗೆಯಿಂದ ಮನಕ್ಕೆ ಸಮಾಧಾನವಾಯಿತು. ಏನೋ ಪಡೆದ ಅನುಭವವಾಯಿತು. ಕಣ್ಣಂಚಿಗೆ ಬಂದಿದ್ದ ನೀರನ್ನು ಬರೆಸಿಕೊಂಡು ಎದುರು ದೃಷ್ಟಿಹರಿಸಿದಳು. ಆಟೋ ಪೇಟೆಯ ಮಧ್ಯ ಬಂದಿತ್ತು. ರಾತ್ರಿ ಬಹಳ ವಾಗಿದ್ದರಿಂದ ಮುಕ್ಕಾಲಿಗಿಂತ ಹೆಚ್ಚು ಅಂಗಡಿಗಳು ಮುಚ್ಚಿದ್ದವು. ತೆರೆದ ಒಂದೆರಡು ಅಂಗಡಿಗಳ ಮುಂದೆ ವಿಪರೀತ ಜನ ಸಂದಣಿ ಎಸ್.ಟಿ.ಡಿ. ಬೂಥ್ ಕಣ್ಣಿಗೆ ಬೀಳುತ್ತಿದ್ದಂತೆ ಆಕೆ ತಟಕ್‌ನೆ ನುಡಿದಳು.

"ಅರೆ ಭಾಯೀ....ಇಲ್ಲೇ ನಿಲ್ಲಿಸು"

ರಸ್ತೆ ಬದಿಗೆ ಆಟೋ ನಿಲ್ಲಿಸಿ ಹೊರಳಿದ ಆಟೋಡ್ರೈವರ್ ಅಚ್ಚರಿಯಿಂದ ಕೇಳಿದ.

"ಏಕೆ ಸಿಸ್ಟರ್....ಮನೆಯ ವಿಳಾಸ ಹೇಳಿದ್ದಿರಲ್ಲ"

"ಹೌದು. ಸ್ವಲ್ಪ ಫೋನು ಮಾಡಬೇಕಾಗಿತ್ತು....ಅದಕ್ಕೇ...."

"ಪರವಾಗಿಲ್ಲ....ನೀವು ಫೋನು ಮಾಡಿ....ನಾನು ಕಾಯುತ್ತೇನೆ.

"ಬೇಡ, ಬೇಡ ಸಮಯ ಬಹಳವಾಗುತ್ತಿದೆ. ಬಾಡಿಗೆ ತೆಗೆದುಕೊಂಡು ನೀನು ಹೋಗು."

"ಸರಿ....ನಿಮ್ಮಿಷ್ಟ"

ಕೆಳಗಿಳಿದ ಪಲ್ಲವಿ ಹತ್ತುರೂಪಾಯಿ ನೀಡಿ ಚೇಂಜಿಗಾಗಿ ಕಾಯದೆ ಎದುರಿಗೇ ಇದ್ದ ಎಸ್.ಟಿ.ಡಿ. ಬೂಥಿನೊಳಗೆ ಅಡಿಯಿಟ್ಟಳು... ಅವಳಿಗಿಂತ ಮೊದಲೇ ಬಂದಿದ್ದ ನಾಲ್ಕಾರು ಜನ ತಮ್ಮ ಸರದಿಗಾಗಿ ಕಾಯುತ್ತಿದ್ದರು.

ಪಲ್ಲವಿ ಪತ್ರಿಕೆಯಲ್ಲಿ ಕೊಟ್ಟ ಇನ್‌ಸ್ಪೆಕ್ಟರ್ ಡಲ್ಲಾನ ನಂಬರ್ ಬರೆಯಿಸಿ ತನ್ನ ಸರದಿಗಾಗಿ ಕಾಯುತ್ತ ಕುಳಿತಳು. ಸುಮಾರು ಹದಿನೈದು ನಿಮಿಷಗಳಲ್ಲಿ ಆಕೆಯ ಸರತಿ ಬಂದಿತಾದರೂ ಎರಡು ಮೂರು ಬಾರಿ ಪ್ರಯತ್ನಿಸಿದರೂ ನಂಬರ್ ಎಂಗೇಜ್ ತೋರಿಸಿಕೊಡತೊಡಗಿತು. ಮತ್ತೆ ಹತ್ತು ನಿಮಿಷ ಬಿಟ್ಟು ಯತ್ನಿಸಿದಾಗ ಗಂಟೆ ಬಾರಿಸುವುದು ಕೇಳಿಸತೊಡಗಿತು. ಒಂದು ಒಂದೇವೊಂದು ನಿಮಿಷದೊಳಗೆ ಯಾರೋ ರಿಸೀವರ್ ಎತ್ತಿ 'ಹಲೋ' ಎನ್ನುತ್ತಿದ್ದಂತೆ ಪಲ್ಲವಿ ಧಡಪಡಿಸುವ ಗುಂಡಿಗೆ ಒತ್ತಿ ಹಿಡಿದುಕೊಂಡು ಮಾತನಾಡಿದಳು.

"ಹಲೋ....ಇನ್‌ಸ್ಪೆಕ್ಟರ್ ಡಲ್ಲಾ ಇದಾರಾ ?

"ಹಾಂ....ನಾನೇ ಹೇಳಿ ಏನಾಗಬೇಕು"

ಪಲ್ಲವಿ ಪಟಪಟನೆ ಹೇಳಿ ಪತ್ರಿಕೆಯಲ್ಲಿ ಪ್ರಕಟವಾದವರ ಬಗ್ಗೆ ಮಾಹಿತಿ ಕೊಡುವುದಾಗಿ ತಿಳಿಸಿ. ತನ್ನ ಹೆಸರು ವಿಳಾಸ ಎಲ್ಲಾ ಹೇಳಿ ಮುಗಿಸಿದಳು.

"ಮಿಸ್ ಪಲ್ಲವಿ....ನಿಮ್ಮ ಸಹಾಯಕ್ಕೆ ನಾನು ತುಂಬಾ ಕೃತಜ್ಞ. ಲಾವಣ್ಯಳ ಕೇಸು ನಿಮ್ಮ ಊರಿನ ಇನ್‌ಸ್ಪೆಕ್ಟರ್ ಅವಿನಾಶ ನೋಡಿಕೊಳ್ಳುತ್ತಿದ್ದಾರೆ. ಅವರ ನಂಬರುಕೊಡುತ್ತೇನೆ. ಅವರಿಗೆ ಈ ವಿಷಯ ತಿಳಿಸುತ್ತೀರಾ".

"ಸಾರಿ... ಡಲ್ಲಾ ಇದು ನನ್ನಿಂದಾಗದು. ನನಗೆಕೋ ಪೊಲೀಸ್ ಠಾಣೆ ಅಂದರೆ ಭಯ"

"ಓಕೆ ಓಕೆ....ನಾನೇ ತಿಳಿಸುತ್ತೇನೆ. ನೀವು ಎಲ್ಲಿಂದ ಮಾತಾಡುತ್ತಿದ್ದೀರಿ ನಂಬರ್ ವಿಳಾಸ ಹೇಳಿ"

ರಿಸೀವರ್ ಪಕ್ಕಕ್ಕೆ ಸರಿಸಿ ಪಲ್ಲವಿ ಬೂಥಿನ ನಂಬರು ವಿಳಾಸ ಕೇಳಿಕೊಂಡಳು.

"ಡಲ್ಲಾ ನಾನು ಮಾರ್ಕೆಟನಲ್ಲಿಯ ರಾಧಾಕೃಷ್ಣ ಎಸ್.ಟಿ.ಡಿ. ಬೂಥಿನಿಂದ ಮಾತಾಡುತ್ತಿದ್ದೇನೆ....ಮುಂದೇನು ?"

"ನೀವು ದಯವಿಟ್ಟು ಕೇವಲ ಹದಿನೈದು ನಿಮಿಷ ಅಲ್ಲೇ ಇರಿ ಪ್ಲೀಜ್.

"ಸರಿ, ಅಂದ ಹಾಗೆ ಲಾವಣ್ಯ ಹೇಗಿದ್ದಾಳೆ ?"

"Still She is in Critical Condition Pallavi ಆದರೆ ನಿರಾಶರಾಗಬೇಡಿ. ನಿಮ್ಮಂಥವರ ಸಾಮಿಪ್ಯ....ಶುಭೇಚ್ಛೆ ಅವಳನ್ನು ಬೇಗ ಗುಣಪಡಿಸುತ್ತವೆ . ನಮಗಿನ್ನು Hope ಇದೆ... ಗುಡ್‌ನೈಟ್ ಪಲ್ಲವಿ. ಪ್ಲೀಜ್ ನೀವು ಅಲ್ಲೇ ಇರಿ"....

ಪಲ್ಲವಿ ರಿಸೀವರ್ ಕೆಳಗಿಳಿಸಿ ಬಿಲ್‌ನೋಡಿದಳು. ಪರ್ಸ್‌ನಿಂದ ಹಣ ತೆಗೆದುಕೊಡಲು ಮುಂದಾದಾಗ ಎದೆ ಧಕ್ ಎಂದಿತು. ಆಕೆ ಪರ್ಸ್ ಆಟೋದಲ್ಲಿಯೇ ಬಿಟ್ಟಿದ್ದಳು ಅಂತ ಕಾಣುತ್ತದೆ. ಅವನಿಗೆ ಹತ್ತು ರೂಪಾಯಿ ತೆಗೆದು ಇಳಿಯುವಾಗ ಪರ್ಸ್ ಅಲ್ಲೇ ಸೀಟ್‌ಮೇಲೇ ಮರೆತು ಕೆಳಗಿಳಿದಿದ್ದಳು.

"ಏನಾಯಿತು–ಮಿಸ್ ಪಲ್ಲವಿ"

ಗಾಬರಿಯಾಗಿ ಬೂಥ್ ಮಾಲಿಕನತ್ತ ನೋಡಿದಳು ಆಕೆ. ತನ್ನ ಹೆಸರು ಅವನಿಗೆ ಹೇಗೆ ತಿಳಿಯಿತು ಎಂಬ ಅಚ್ಚರಿ.

ಗಾಬರಿಯಾಗಬೇಡಿ....ಇದೀಗ ತಾನೇ ನೀವು ನಿಮ್ಮ ಹೆಸರು ಹೇಳಿರುವಿರಿ"

"ಹಾಂ... ಹಾಂ...."

"ಏನಾಯಿತು ಎಂದು ಕೇಳಿದೆ"

"ನನ್ನ ಪರ್ಸ್ ಕಾಣ್ತಾ ಇಲ್ಲ....ಆಟೋದಲ್ಲಿ ಬಿಟ್ಟಿರಬೇಕು."

"ಪರವಾಗಿಲ್ಲ... ಬಿಡಿ. ನಾನು ಅನೂಪನಿಂದ ಇಸಿದುಕೊಳ್ಳುತ್ತೇನೆ"

"ಆಂ....ಏನು ?"

"ಅರೆ....ನೀವು ಮತ್ತೆ ಗಾಬರಿಯಾದಿರಿ....ನಾನು ಮತ್ತು ಅನೂಪ ಕ್ಲಾಸ್‌ಮೇಟ್ಸ್.. ಎರಡು ಮೂರು ಬಾರಿ ನಾನು ನಿಮ್ಮ ಮನೆಗೆ ಬಂದಿದ್ದೇನೆ.. ನೀವೇ ಗುರುತು ಹಿಡಿದಿಲ್ಲ ಅಷ್ಟೇ."

ಬಿಲ್ಲು ಕೊಡದೇ ಹಾಗೆ ಮನೆಗೆ ಹೋಗಲು ದಾರಿಯಾದರೂ ಅಣ್ಣನ ಗೆಳೆಯನ ಮುಂದೆ ಎಲ್ಲಾ ವಿಷಯ ಬಯಲಾಯಿತಲ್ಲ ಎಂಬ ಭಯದಿಂದ ಮುದ್ದೆಯಾದಳು.

"ಮಿಸ್ಟರ್...."

"ರಾಧಾಕೃಷ್ಣ"

"ರಾಧಾಕೃಷ್ಣ ಅವರೆ ಬಿಲ್ಲು ನಾನೇ ತಂದುಕೊಡುತ್ತೇನೆ. ಅಣ್ಣನನ್ನು ಕೇಳಬೇಡಿ ...

"ಹಾಗೇ ಮಾಡಿ"

ಸ್ವಲ್ಪ ಸಮಾಧಾನವಾಯಿತು. ಅಲ್ಲಿದ್ದರೆ ಬೇರೆ ಪೀಡೆ ಎಲ್ಲಿ ಗಂಟು ಬೀಳುತ್ತದೋ ಎಂಬ ಹೆದರಿಕೆ....ಆದಷ್ಟು ಬೇಗ ಜಾಗ ಖಾಲಿಮಾಡಬೇಕೆಂದವಳ ಎದೆ ಧಕ್ ಎಂದಿತು. ರಾತ್ರಿ ಸಮಯ ಕೈಯಲ್ಲಿ ಹಣವಿಲ್ಲ....ಒಂಟಿಯಾಗಿ ರಾತ್ರಿ ಹೋಗುವಂತಿಲ್ಲ....ಏನು ಮಾಡುವುದು ? ಆಕೆಯಿನ್ನು ಯೋಚಿಸುತ್ತಿರುವಾಗಲೇ ಬೂಥ್ ಎದುರು ಜೀಪೊಂದು ಬಂದು ನಿಂತಿತು. ಅದರಿಂದ ಕೆಳಗಿಳಿದ ಇನ್‌ಸ್ಪೆಕ್ಟರ್ ಅವಿನಾಶ್ ಒಳಗಡಿಯಿಟ್ಟ ನೇರವಾಗಿ ರಾಧಾಕೃಷ್ಣ ಬಳಿ.

"ಮಿಸ್ಟರ್....ಇಲ್ಲಿ ಮಿಸ್ ಪಲ್ಲವಿ ಅಂದರೆ ಯಾರು ?"

"ಇವರೇ ಸರ್" ಪಟಕ್‌ನೆ ಹೇಳಿಬಿಟ್ಟ ರಾಧಾಕೃಷ್ಣ....ಬೇಡಿ ಎಂದು ಸನ್ನೆ ಮಾಡಲು ಅವಳಿಂದ ಆಗಲಿಲ್ಲ. ಅವಿನಾಶ್ ಪಲ್ಲವಿ ಕಡೆ ಹೊರಳಿದ.

"ನಮಸ್ಕಾರ ಪಲ್ಲವಿ ಅವರೆ....ನಾನು ಇನ್‌ಸ್ಪೆಕ್ಟರ್ ಅವಿನಾಶ್...."

"ಏನು ? ಇನ್‌ಸ್ಪೆಕ್ಟರ್ ಅವಿನಾಶ್ ?....ಬನ್ನಿ....ಬನ್ನಿ"

ತನ್ನ ಸೀಟಿನಿಂದ ಜಿಗಿದು ಎದ್ದು ನಿಂತ ರಾಧಾಕೃಷ್ಣ ಆಹ್ವಾನನೀಡಿದ.

"ಥ್ಯಾಂಕ್ಸ್....ಇನ್ನೊಂದು ಸಾರಿ....

"ನೋ ನೋ....ಸರ್....ನಿಮ್ಮಂಥ ಪ್ರಸಿದ್ಧ ವ್ಯಕ್ತಿ ಈ ಬಡವನ ಬೂಥ್‌ಗೆ ಬಂದು ಹಾಗೇ ತೆರಳಿದರೆ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತದೆ. ನಿಮಗೆ ಗೊತ್ತಿಲ್ಲ ಸರ್. ನಾನು ನಿಮ್ಮ ಜಬರ್ದಸ್ತಿ ಫ್ಯಾನ್ ಅಮಿತಾಬನಷ್ಟೇ ನೀವು ನನಗೆ ಪ್ರಿಯರು.

ವಿಧಿಯಿಲ್ಲದೆ ಅವಿನಾಶ ಕುಳಿತುಕೊಳ್ಳಬೇಕಾಯಿತು.

ಅವನ ಸೀಟಿನಲ್ಲಿ ಕೂಡದೇ ಬೇರೆಡೆ ಕುಳಿತ. ಅಷ್ಟರಲ್ಲಿ ಅಂಗಡಿಯಲ್ಲಿದ್ದ ಗಿರಾಕಿಗಳೆಲ್ಲ ಹೊರಟು ಹೋಗಿದ್ದರು. ರಾಧಾಕೃಷ್ಣನೇ ಅತಿಥಿಸತ್ಕಾರ ಮಾಡಲು ಹೊರಗೋಡಬೇಕಾಯಿತು. ಅವಿನಾಶ ಮತ್ತು ಪಲ್ಲವಿ ಇಬ್ಬರೇ ಉಳಿದರು.

"ಮಿಸ್ ಪಲ್ಲವಿ ಮೊದಲು ನಾನು ನಿಮ್ಮನ್ನು ಅಭಿನಂದಿಸುತ್ತೇನೆ,

ಇಂದಿನ ದಿನಗಳಲ್ಲಿ ಜನರು ಪೊಲೀಸರಿಗೆ ಸಹಕಾರ ನೀಡಲು ಮುಂದೆ ಬರುತ್ತಾ ಇಲ್ಲ"

"ಅದಕ್ಕೆ ಕಾರಣ ಜನರಲ್ಲ ಇನ್‌ಸ್ಪೆಕ್ಟರ್....ನಿಮ್ಮ ಇಲಾಖೆ"

"ಅಂದರೆ ಏನರ್ಥ ?"

"ಇಂದು ನಿಮ್ಮ ಇಲಾಖೆ ರಾಜಕಾರಣಿಗಳ ಕೈಬೊಂಬೆಯಾಗಿದೆ. ರಾಜಕಾರಣಿಗಳು ಗೂಂಡಾ, ಸ್ಮಗ್ಲರ್, ಭಯೋತ್ಪಾದಕರ ಕೈಗೊಂಬೆ ಯಾಗಿದ್ದಾರೆ. ಇದರಿಂದಾಗಿ ಸಮಾಜಕ್ಕೆ ಕಂಟಕಪ್ರಾಯರಾಗಿರುವ ಕಳ್ಳರು, ಕೊರಮರು, ದರೋಡೆಕೋರರು, ಕೊಲೆಗಡುಕರು, ರಾಜಕಾರಣಿಗಳ ರಾಜಾಶ್ರಯದಿಂದ ನಿಮ್ಮ ಇಲಾಖೆಯ ಸಹಾಯದಿಂದ ಖುಲ್ಲಾಖುಲ್ಲಾ ಅಪರಾಧ ಮಾಡುತ್ತ ತಿರುಗುತ್ತಿದ್ದಾರೆ. ಅವರ ವಿರುದ್ಧ ಧ್ವನಿಎತ್ತಿದರೆಂದರೆ ತಕ್ಕ ಶಾಸ್ತಿ ಅವರೇ ಮಾಡುತ್ತಾರೆ. ಧೈರ್ಯ ಮಾಡಿ ಠಾಣೆಗೆ ಬಂದು ಕಂಪ್ಲೇಟ್ ನೀಡಿದವರಿಗೆ ಆತಿಥ್ಯ ನಿಮ್ಮ ಇಲಾಖೆ ಮಾಡುತ್ತದೆ. ಅಂದ ಮೇಲೆ ನೀವೇ ಹೇಳಿ ಸಹಕಾರ ಹೇಗೆ ಸಿಕ್ಕೀತು ? 'ಮಿಸ್ ಪಲ್ಲವಿ ನಿಮ್ಮ ವಾದ ಸರಾಸರಿ ಸುಳ್ಳು ಎಂದು ನಾನು ತಳ್ಳುವದಿಲ್ಲ ಆದರೆ ಅದರಲ್ಲಿ ಸತ್ಯಾಂಶ ಕಡಿಮೆ ಎಂದು ನನ್ನ ಅಭಿಪ್ರಾಯ.

"ಅಂದರೆ ?"

"ನಿಮ್ಮ ಮಾತಿನಂತೆ ನಮ್ಮ ಇಲಾಖೆಯಲ್ಲಿರುವವರೆಲ್ಲರೂ ಭ್ರಷ್ಟರಲ್ಲ.... ಅಮಾಯಕ ಜನರನ್ನು ಹಿಂಸಿಸುವದಿಲ್ಲ"

"ನಾನಿದನ್ನು ನಂಬಲಾರೆ"

"ನಿಮ್ಮ ದೃಷ್ಟಿಯಲ್ಲಿ ಎಲ್ಲರೂ ಅವರೇ ಇದ್ದಾರಾ ?"

"ಹೌದು"

"ನಾನು ಅವರಲ್ಲಿ ಒಬ್ಬ ಅಂದಂತಾಯಿತು"

"ನೋ....ನೋ... ಆಫೀಸರ್....ನಿಮ್ಮ ಬಗ್ಗೆ ನಾನು ಕೇಳಿದ್ದೇನೆ. ನೀವು ಅಂಥವರಲ್ಲ"

"ಥ್ಯಾಂಕ್ ಗಾಡ್....ಮಿಸ್ ಪಲ್ಲವಿ ನಿಮ್ಮ ಕಣ್ಣಿಗೆ ನಾನೊಬ್ಬ

ಬಿದ್ದಿದ್ದೇನೆ. ಇನ್ನಿತರರು ಬಿದ್ದಿಲ್ಲ. ಹೀಗಾಗಿ ನೀವು ಎಲ್ಲರನ್ನೂ ಒಂದೇ ಗೆರೆಯಲ್ಲಿ ನಿಲ್ಲಿಸಿದ್ದೀರಿ"

"ಅದೊಂದೂ ನನಗೆ ತಿಳಿಯದು....ನಿಮ್ಮ ಇಲಾಖೆ ಬಗ್ಗೆ ಸಾಮಾನ್ಯ ಜನರ ಭಾವನೆ ಸರಿಯಾಗಿಲ್ಲ ಎಂದು ಮಾತ್ರ ಹೇಳಿದೆ"

"ಅದನ್ನು ನಾನು ಒಪ್ಪಿಕೊಳ್ಳುತ್ತೇನೆ....ಅದರ ಹೊಣೆ ಮಾತ್ರ ಅವರ ಮೇಲೆ ಹೇರಬೇಡಿ"

"ಪೊಲೀಸ್ ಇಲಾಖೆ ಸಮಾಜದ ಒಂದು ಮಹತ್ವದ ಅಂಗ ಆಫೀಸರ್. ಜನರು ತಮ್ಮ ಕಣ್ಣುಮುಚ್ಚಿ ಅವರನ್ನು ನಂಬುತ್ತಾರೆ. ತಮ್ಮ ಪ್ರಾಣ, ಆಸ್ತಿ ಜೀವನ ಎಲ್ಲಾ ಅವರಿಗೆ ಒಪ್ಪಿಸಿ ನಿಶ್ಚಿಂತೆಯಿಂದಿರುತ್ತಾರೆ. ಅವರ ರಕ್ಷಣೆ ನಿಮ್ಮ ಇಲಾಖೆಗೆ ಸೇರಿದ್ದಲ್ಲವೆ ?"

"ಖಂಡಿತವಾಗಿಯೂ ಹೌದು... ಈ ಇಲಾಖೆಯ ವ್ಯವಸ್ಥೆಗೆ ಗೆದ್ದಲು ಹಿಡಿದು ಸಂಪೂರ್ಣವಾಗಿ ಹಾಳಾಗಿ ಹೋಗಿದೆ ಮಿಸ್ ಪಲ್ಲವಿ. ಅದನ್ನು ಸುಧಾರಿಸಲು ನಿಮ್ಮಂಥವರು ಮುಂದೆ ಬರಬೇಕು. ಇಲಾಖೆಯ ದೋಷ ಎತ್ತಿ ತೋರಿಸಬೇಕು."

"ಅದೆಲ್ಲಾ ಆಗದ ಮಾತು ಬಿಡಿ."

"ನೀವೇ ಹೀಗೆಂದರೆ ಹೇಗೆ ?"

ಅಷ್ಟರಲ್ಲಿ ರಾಧಾಕೃಷ್ಣ ಒಬ್ಬ ಹುಡುಗನನ್ನು ಕರೆತಂದ. ಅವನ ಕೈಯಲ್ಲಿ ನಾಲ್ಕಾರು ಬಗೆಯ ತಿಂಡಿಗಳು....ಬಾಳೆಹಣ್ಣು... ಬಾದಾಮಿಹಾಲು. ಒಳ್ಳೆ ಪಾರ್ಟಿ ನೀಡಿಬಿಟ್ಟ. ದಾಕ್ಷಿಣ್ಯ ಮಾಡಿಕೊಳ್ಳದೇ ಅವಿನಾಶ ತೆಪ್ಪಗೆ ತಿಂದು ಮುಗಿಸಿದ. ಅವನೊಂದಿಗೆ ಪಲ್ಲವಿಗೂ ಔತಣ ದೊರೆಯಿತು.

ಪಲ್ಲವಿಯೊಂದಿಗೆ ಅವಿನಾಶನೂ ಹೊರಟು ನಿಂತ.

ರಾಧಾಕೃಷ್ಣ ಕೈಮುಗಿದು ತನ್ನ ಸಂತಸ ವ್ಯಕ್ತ ಪಡಿಸಿದ.

"ಮಿಸ್ ಪಲ್ಲವಿ... ನಿಮ್ಮ ಬಳಿ ಲಾವಣ್ಯಳ ಅಡ್ರೆಸ್, ಫೋನ್ ನಂ., ಅವಳ ತಂದೆ ತಾಯಿ ಮುಂತಾದವರ ಬಗ್ಗೆ ಮಾಹಿತಿ ಇದೆಯೇ ?"

ಪಲ್ಲವಿ ಉತ್ತರಿಸಲಿಲ್ಲ. ಯೋಚಿಸತೊಡಗಿದಳು.

"ನೋಡಿ ಪಲ್ಲವಿ ನಮ್ಮ ಇಲಾಖೆಗೆ ಸಹಕಾರ ನೀಡಲು ನೀವು ಒಪ್ಪಿಕೊಂಡಿದ್ದೀರಿ."

ಪಲ್ಲವಿಗೆ ಅವನ ಮಾತು ತಳ್ಳಿಹಾಕಲಾಗಲಿಲ್ಲ.

"ಇದೆ....ಇಲ್ಲಿಲ್ಲ ಮನೆಯಲ್ಲಿದೆ"

"ಗುಡ್....ದಯವಿಟ್ಟು ಕೊಡಿ ...ನಾನೇ ಬರುತ್ತೇನೆ"

'ನೀವಾ ?....ನಮ್ಮ ಮನೆಗೆ'

'ಏಕೆ ? ಏನಾಯ್ತು ?....ನಾನೇನು ಭೂತವೇ ಪ್ರೇತವೇ ?"

"ಹಾಗಲ್ಲ. ಹಾಗಲ್ಲ"

"ಮುಂದೆ ಮಾತು ಬೇಡ... ನಡೆಯಿರಿ"

ವಿಧಿಯಿಲ್ಲದೆ ಪಲ್ಲವಿ ಒಪ್ಪಿಕೊಂಡು ಅವನ ಜೊತೆಯೇ ಅವನ ಜೀಪಿನಲ್ಲಿ ಕುಳಿತುಕೊಂಡಳು. ಜೀಪಿನವರೆಗೂ ಬಂದ ರಾಧಾಕೃಷ್ಣ ವಿನಯದಿಂದ ನಮಸ್ಕರಿಸಿದ ಪಲ್ಲವಿಗೂ.

"ಮಿಸ್ ಪಲ್ಲವಿ .. ಫೋನ್ ಬಿಲ್ ಬಗ್ಗೆ ಚಿಂತಿಸಬೇಡಿ....ನಾನೆಲ್ಲ.... ನಾನೆಲ್ಲ"

ಅವನ ಮಾತು ಪೂರ್ತಿಯಾಗಿರಲಿಲ್ಲ.

ಆಟೊ ಬಂದು ನಿಂತಿತು. ಡ್ರೈವರ್ ಕೆಳಗಿಳಿದು ರಾಧಾಕೃಷ್ಣನ ಬಳಿ ಬಂದ.

ಅವನ ಕೈಯಲ್ಲಿ ಪಲ್ಲವಿ ಪರ್ಸ್.

"ಸರ್" ಅರ್ಧಗಂಟೆ ಹಿಂದೆ ನಿಮ್ಮಲ್ಲಿಗೆ....

"ಹಾಂ. ನನಗೆಲ್ಲಾ ಅರ್ಥವಾಯಿತು....ಇಲ್ಲಿದ್ದಾರೆ ನೋಡಿ"

ಡ್ರೈವರ್ ಪಲ್ಲವಿ ಕೈಗೆ ಪರ್ಸ್‌ಕೊಟ್ಟು ಕೈಮುಗಿದ. ಭಕ್ಷೀಸ್ ಕೊಡಲು ಮುಂದಾದರೂ ಇಸಿದುಕೊಳ್ಳದೇ ನಮಸ್ಕರಿಸಿ ಹೊರಟು ಹೋದ.

"ಪಾಪ ಪ್ರಾಮಾಣಿಕ ಆಟೋದವ."

"ಎಲ್ಲರೂ ಒಂದೇ ಬಗೆಯಲ್ಲಿರುವುದಿಲ್ಲ ಮಿಸ್ ಪಲ್ಲವಿ....ನಮ್ಮ ಇಲಾಖೆಯಂತೆ" ಅವನ ಮಾತಿನ ಅರ್ಥ ತಿಳಿದುಕೊಂಡ ಪಲ್ಲವಿ ನಸು ನಕ್ಕಳು.

ರಾಧಾಕೃಷ್ಣ ಅವರಿಂದ ಹಣ ಇಸಿದುಕೊಳ್ಳಲು ಸುತರಾಂ ಒಪ್ಪಲಿಲ್ಲ.

ಅವಿನಾಶನೊಂದಿಗೆ ಪಲ್ಲವಿ ಮನೆಗೆ ಬಂದಾಗ ರಾತ್ರಿ ಹನ್ನೊಂದು ಮೀರಿತ್ತು. ಅಮ್ಮ ಬಾಯಲ್ಲಿ ಅಕ್ಕಿಕಾಳು ಹಾಕಿಕೊಂಡು ಕುಳಿತಿದ್ದರು.

ಪಲ್ಲವಿ ಬರುತ್ತಲೇ ಚೆನ್ನಾಗಿ ಮಂಗಳಾರತಿ ಮಾಡಬೇಕೆಂದುಕೊಂಡವರು, ಆಕೆ ಸಧೃಡ ಸುಂದರ ಯುವಕನೊಂದಿಗೆ ಜೀಪಿನಿಂದಿಳಿಯುವುದನ್ನು ಕಂಡು ಎಲ್ಲಾ ಮರೆತು ತೆಪ್ಪಗೆ ನಿಂತುಕೊಂಡರು. ಪಲ್ಲವಿ ಅವಿನಾಶನ ಪರಿಚಯ ಮಾಡಿ ಕೊಟ್ಟಳು. ಅವಿನಾಶ ಅವರೊಂದಿಗೆ ಮೃದುವಾಗಿ ಮಾತನಾಡಿ ಅವರ ಸಹಾಯಬೇಡಿದ.

ಡೈರಿಯಿಂದ ಪಲ್ಲವಿ ದುಬಾಯಿಯಲ್ಲಿರುವ ಲಾವಣ್ಯಳ ತಂದೆ ವಿಳಾಸ ಫೋನ್ ನಂಬರ್ ಬರೆದುಕೊಟ್ಟಳು. ಅವಿನಾಶ ಅಷ್ಟಕ್ಕೇ ಬಿಡಲಿಲ್ಲ.

"ಪಲ್ಲವಿ ನಿಮಗೆ ಇನ್ನಷ್ಟು ತೊಂದರೆ ಕೊಡುತ್ತಿದ್ದೇನೆ. ನಾನು ಫೋನು ಮಾಡಿದರೆ ಅವರು ಗಾಬರಿಯಾಗುತ್ತಾರೆ. ಕಾರಣ ನೀವೇ ಫೋನು ಮಾಡಿ ಅವಳ ಆರೋಗ್ಯ ಸರಿಯಿಲ್ಲ ಅದಕ್ಕಾಗಿ ಕೂಡಲೇ ಹೊರಟು ಬರಲು ತಿಳಿಸಿ ಮಗಳ ಗೆಳತಿ ಎಂದು ತಿಳಿದ ಅವರು ಗಾಬರಿಯಾಗುವದಿಲ್ಲ"

ಪಲ್ಲವಿ ತಾಯಿಯೆಡೆ ನೋಡಿದಳು. ಅವರು ಮೌನ ಸಮ್ಮತಿ ಸೂಸಿದರು. ಮತ್ತೆ ಅವಿನಾಶನೊಂದಿಗೆ ರಾಧಾಕೃಷ್ಣನ ಬೀಧಿಗೆ ಬಂದರು. ಅವನಿಗಂತೂ ಆನಂದವೇ ಆನಂದ. ಸಂತಸದಿಂದ ಕುಣಿದಾಡಿದ.

ಅವಿನಾಶ ಹೇಳಿದಂತೆಯೇ ಆಯಿತು. ಲಾವಣ್ಯಳ ತಂದೆ ಮರುದಿನನೇ ಬರುವದಾಗಿ ತಿಳಿಸಿ ಲಾವಣ್ಯಳ ಬಗ್ಗೆ ಕಾಳಜಿ ತೆಗೆದುಕೊಳ್ಳುವಂತೆ ವಿನಂತಿಸಿ ಕೊಂಡರು. ಅವಿನಾಶ ಅವಳನ್ನು ಮನೆಯವರೆಗೆ ತಂದುಬಿಟ್ಟು ಮತ್ತೆ ವಂದನೆ ಸಲ್ಲಿಸಿ ಹೊರಟು ಹೋದ. ಒಂದೆರಡು ತುತ್ತು ಊಟ ಮಾಡಿದ ಶಾಸ್ತ್ರ ಮಾಡಿ ಪಲ್ಲವಿ ತನ್ನ ಕೋಣೆಗೆ ಬಂದಳು. ಓದಲು ಮನಸ್ಸಿರಲಿಲ್ಲ. ಬಟ್ಟೆಬದಲಿಸಲೇ ಬೇಜಾರು ಎನಿಸಿ ದೀಪ ಆರಿಸಿ ಹಾಸಿಗೆಯ ಮೇಲೆ ಅಡ್ಡಾದಳು.

ಅದೇ ಕ್ಷಣ ಮಂಚದಡಿಯಿಂದ ಬಂದ ವ್ಯಕ್ತಿಯೊಂದು ಗಬಕ್‌ನೆ ಅವಳ ಬಾಯಿ ಮುಚ್ಚಿ ಪಿಸು ಗುಟ್ಟಿತು "ಬಾಯಿಬಿಟ್ಟರೆ ಹುಷಾರ್"

# 15

ಪಲ್ಲವಿಯ ಉಸಿರುನಿಂತೇ ಹೋಯಿತು.

ತನ್ನ ರೂಮಿನಲ್ಲಿ ಬಂದು ತನ್ನ ಬಾಯಿ ಮುಚ್ಚಿದವರು ಯಾರಿರ ಬಹುದು? ಯಾವ ಆತಂಕ ಅವಳನ್ನು ಕಾಡುತ್ತಿತ್ತೋ ಅದು ಇಷ್ಟು ಬೇಗ ನಿಜವಾಗಬೇಕೆ?

ಲಾವಣ್ಯಳ ಬಗ್ಗೆ ಮರುಗಿ ಅವಳನ್ನು ಹುಡುಕಿಕೊಂಡು ಹೋಗಿ ಯಾಗಿತ್ತು. ಅಲ್ಲಿ ಶೈತಾನ್ ಇಮ್ರಾನನ ದರ್ಶನವೂ ಆಯಿತು. ಅದರೊಂದಿಗೆ ಬೆದರಿಕೆ. ಆತ ಮೊದಲೇ ರಾಕ್ಷಸ. ಈಗಂತೂ ಉಗ್ರರೂಪ ಧಾರಿಣ ಮಾಡಿದ್ದ. ಅವನಿಂದ ಓಡಿ ಮನೆ ಕಡೆ ಬರುವಾಗ ಅವಳ ಆತ್ಮ ಜಾಗೃತ ವಾಗಿತ್ತು. ಪರಿಣಾಮವಾಗಿ ಪೊಲೀಸ್ ಇಲಾಖೆಗೆ ಪರಿಚಯ ತಿಳಿಸಿದಳು. ಅವಿನಾಶ ಬಂದು ಅವಳಿಂದ ಸಹಾಯ ಪಡೆದಿದ್ದ. ಏನೋ ಸಮಾಧಾನ ತೃಪ್ತಿ ಅವಳಿಗೆ. ಕೊನೆಯ ಉಸಿರು ಬಿಡುತ್ತ ಎಲ್ಲೋ ಬಿದ್ದುಕೊಂಡಿರುವ ಅವಳಿಗೆ ತನ್ನ ಕೈಲಾದ ಸಹಾಯ ಮಾಡಿದೆನಲ್ಲ ಎಂದು....

ಆದರೆ ಇಲ್ಲಿ?....

ರೂಮಿಗೆ ಬರುತ್ತಲೂ ಆಕ್ರಮಣ ಮಾಡಿದವರು ಯಾರು?

ಅದೂ ಮನೆಯಲ್ಲಿ? ತನ್ನ ಬೆಡ್ ರೂಮಿನಲ್ಲಿ?

ಅವರು ಒಳಗೆ ಹೇಗೆ ಬಂದರು? ಯಾವಾಗ ಬಂದರು?

ಕೂಗಿಕೊಳ್ಳಬೇಕೆಂದರೆ ಬಾಯಿ ಭದ್ರವಾಗಿ ಮುಚ್ಚಿದ್ದಾರೆ. ಅದ ರೊಂದಿಗ ಬೆದರಿಕೆ ಬೇರೆ "ಬಾಯಿ ಬಿಟ್ಟರೆ ಹುಷಾರ್...." ಗಡಗಡ ನಡುಗಿ ಹೋದಳು ಪಲ್ಲವಿ. ನಿಧಾನವಾಗಿ ತುಸು ತುಸುವೆ ಬಾಯಿ ಬಿಗಿತ ಸಡಿಲಾಯಿತು.

"ಪಲ್ಲವಿ.... ಚೀರಿಕೊಳ್ಳಬೇಡ್ವೇ.... ನಾನು ಅನೂಪ.... ಅನೂ...."

ಪಲ್ಲವಿಯ ದೇಹ ಸರ್ರ್ ಎಂದು ತಣ್ಣಗಾಯಿತು ಆ ಮಾತು ಕೇಳಿ.

ಹೌದು ಅದು ಅನೂಪನ ಧ್ವನಿ.... ಅನೂಪನೇ ತನಗೆ ಈ ಗತಿ ತಂದನೆ? ಅಂದರೆ ಅಂದರೆ ಆತನಿಗೆಲ್ಲ ಗೊತ್ತಾಗಿದೆ ಎಂದಾಯಿತು. ಅಯ್ಯೋ ದೇವರೆ ಇನ್ನು ನನ್ನನ್ನು ಕಾಪಾಡುವವರು ಯಾರು?

ಪಲ್ಲವಿ ತತ್ತರಿಸಿ ಹೋದಳು.

"ಪಲ್ಲವಿ" ಇಮ್ರಾನ್ ನಿನಗೆ ಹೇಗೆ ಗೊತ್ತು?

"ಅಣ್ಣಾ ಅಣ್ಣಾ ..."

"ಮೆತ್ತಗೆ ಮಾತಾಡು.... ಆತ ಹೇಗೆ ಗೊತ್ತು?"

"ಅಣ್ಣ.... ಆತ ನಿನ್ನ ಗೆಳೆಯ.... ಇಲ್ಲಿ ಎರಡು ಮೂರು ಬಾರಿ....ನಿನ್ನ ಜೊತೆಗೆ ಬಂದಿದ್ದ"

"ಇಷ್ಟೇ ಪರಿಚಯವಾ?"

"ಹಾಂ"

ಹಾಗಿದ್ದರೆ ಅವನ ರಹಸ್ಯ ಕೊಠಡಿಗೆ ಏಕೆ ಹೋಗಿದ್ದೆ? ಅವನೇಕೆ ನಿನಗೆ ಗದರಿ ಕಳಿಸಿದ?"

ಎದೆ ಧಡ್ ಎಂದಿತು. ಇದು ಹೇಗೆ ತಿಳಿಯಿತು?

"ನನಗೆಲ್ಲಾ ಗೊತ್ತು.. ನಾನಲ್ಲೇ ಇದ್ದೆ.. ನೀ ಏಕೆ ಅಲ್ಲಿಗೆ ಹೋಗಿದ್ದೆ?"

"ಲಾವಣ್ಯಳನ್ನು ಹುಡುಕಲು"

"ಲಾವಣ್ಯ ಅಲ್ಲೇಕೆ.... ಸುಳ್ಳು ಬೊಗಳಬೇಡ"

ಇಲ್ಲಣ್ಣ ನಾನು ಸುಳ್ಳು ಹೇಳ್ತಾ ಇಲ್ಲ. ನಿಜವಾಗಿಯೂ ಲಾವಣ್ಯ ಆಗಾಗ ಅಲ್ಲಿಗೆ ಹೋಗಿ ಇಮ್ರಾನನ್ನು ಭೇಟಿಯಾಗುತ್ತಿದ್ದಳು."

"ಏನು ಲವ್ವಾ? ಇಬ್ಬರೂ ಪ್ರೀತಿಸುತ್ತಿದ್ದರಾ?"

"ಇಲ್ಲ"

"ಮತ್ತೆ ಮತ್ತೆ...."

"ಡ್ರಗ್ಸ್ ಸಲುವಾಗಿ"

ತಂಗಿ ಪಲ್ಲವಿ ಬಾಯಿಯಿಂದ 'ಡ್ರಗ್ಸ್' ಶಬ್ದ ಹೊರಬೀಳುತ್ತಿದ್ದಂತೆ ಅನೂಪ ತರಗೆಲೆಯಂತೆ ಕಂಪಿಸಿದ. ತನ್ನ ತಂಗಿ ಮುಗ್ದೆ.... ತಾನು ಮಾಡುತ್ತಿರುವ ಧಂಧೆ ಬಗ್ಗೆ ಅವಳಿಗೇನು ತಿಳಿಯದು ಎಂದುಕೊಂಡಿದ್ದ.... ಇಲ್ಲಿ?

"ಡ್ರಗ್ಸ್ ಚಟ ಯಾರು ಹಚ್ಚಿದರು?.... ಎಲ್ಲಿಂದ ಆರಂಭವಾಯಿತು?"

"ಇಮ್ರಾನನಿಂದ" ಆತನೇ ಲಾವಣ್ಯಳ ಸ್ನೇಹ ಮಾಡಿಕೊಂಡ. ನಿನ್ನ ಬೀಡಾ ಅಂಗಡಿಯಲ್ಲಿ ಸಿಗುವ ಸ್ಪೆಶಲ್ ಬೀಡಾ ತಂದು ಕೊಡುತ್ತಿದ್ದ. ಅದು ಮುಂದೆ.... ಮುಂದೆ...."

"ಅಯ್ಯೋ ದೇವರೆ.... ಅದು ವಿಷ. ವಿಷ ಪಲ್ಲವಿ.... ವಿಷ.... ಆ ಬೀಡಾ ನೀನೂ ನೀನೂ.... ನೀನು...." ಮುಂದವನ ಬಾಯಿಂದ ಮಾತು ಹೊರಡಲಿಲ್ಲ."

ಹೌದೆನ್ನುವಂತೆ ಆಕೆ ತಲೆಯಾಡಿಸಿ ನುಡಿದಳು.

"ನಿನ್ನ ಶಾಪಿನದೆಂದಾಗ ಖುಷಿಯಾಗುತ್ತಿತ್ತು. ಆ ಮೇಲೆ ತಿಳಿಯಿತು. ಅದರಲ್ಲಿ ಏನೋ ಇದೆಯೆಂದು....ಇಮ್ರಾನ್ ಅವಳನ್ನು ಎಳೆದು ಕೊಂಡ ... ಅವಳಿಂದ ಹಣ ಸುಲಿದ. ಲಕ್ಷ ಲಕ್ಷ ... ಅಣ್ಣಾ ಇಂದು ಲಾವಣ್ಯ ಭಿಕಾರಿ ಆಗಿದ್ದಾಳೆ.... ಸಾವಿರಾರು ರೂಪಾಯಿ ಸಾಲ ಮಾಡಿದ್ದಾಳೆ. ಅದರ ಚಿಂತೆ ನನಗಿಲ್ಲ. ಅವಳನ್ನು ಕೊಲ್ಲಲು ಯಾರೋ.... ಯಾರೋ...."

ಆಕೆ ರೋಧಿಸಲಾರಂಭಿಸಿದಳು.... ಅನೂಪ ಸಮಾಧಾನ ಮಾಡಿದ.

"ಹುಷ್.... ಮೆಲ್ಲನೆ ಮೆಲ್ಲನೆ ... ಕೇಳಿಲ್ಲಿ.... ಪಲ್ಲವಿ.... ಇದೆಲ್ಲಾ ನನ್ನಿಂದ ಆದದ್ದು. ಇಮ್ರಾನ್ ನನಗೂ ಮೋಸ ಮಾಡಿದ್ದಾನೆ.... ನನಗದು ತಿಳಿಯಲಿಲ್ಲ. ಈಗ ನನ್ನ ಮನೆಗೇ ಬೆಂಕಿ ಇಡುತ್ತಿದ್ದಾನೆ.... ನಾನಾತನನ್ನು ಬಿಡುವುದಿಲ್ಲ"

"ಬೇಡ ... ಬೇಡ ಅಣ್ಣಾ.... ಆತ ಮಹಾ ನೀಚ.... ಅಧಮ"

"ಅದೆಲ್ಲಾ ನಿನಗೆ ಬೇಡ.... ಹಾಂ.... ಇನ್ಸ್‌ಪೆಕ್ಟರ್ ಬಂದಿದ್ದನಲ್ಲ ಅವನ ಮುಂದೆ... "

"ಎಲ್ಲಾ ಹೇಳಿದ್ದೇನೆ"

"ಆಂ?"

"ಹೌದಣ್ಣ ಹೆದರಬೇಡ ... ಲಾವಣ್ಯಳ ಬಗ್ಗೆ ಹೇಳಿದ್ದೇನೆ. ಇಮ್ರಾನ್ ಆಗಲಿ ನೀನಾಗಲಿ ಇದರ ಹಿಂದೆ ಇರುವಿರೆಂದು ಹೇಳಿಲ್ಲ. ಅದನ್ನ ಮುಚ್ಚಿಟ್ಟಿದ್ದೇನೆ... "

ನಿರಾಳವಾಗಿ ಉಸಿರು ಬಿಟ್ಟ ಅನೂಪ.

ಒಂದು ಬಗೆಯಿಂದ ಸಮಾಧಾನವಾಗಿತ್ತು.... ಇಮ್ರಾನನ ರಹಸ್ಯ ಕೊಠಡಿಯಿಂದ ಒಂದು ಬಗೆಯ ನೆರಳಾಗಿ ಅನುಸರಿಸಿಕೊಂಡು ಬಂದಿದ್ದ ಆತ. ಎಲ್ಲವನ್ನು ಕಣ್ಣಾರೆ ಕಂಡಿದ್ದ. ಲಾಕಪ್‌ಗೆ ತಳ್ಳಿಸಿಕೊಂಡು, ಮೈಮುರಿ

ಯುವಂತೆ ಒದೆ ತಿಂದು. ಜೈಲು ಸೇರುವ ಕಲ್ಪನೆ ಸಹ ಮಾಡಿಕೊಂಡಿದ್ದ ಅಂತಹದೇನೂ ಆಗಿಲ್ಲ ಎಂದು ತಿಳಿದು ಹಾಯೆನಿಸಿತು.

"ಪಲ್ಲವಿ....ಈ ಸಮಾಚಾರ ನಿನ್ನಲ್ಲೇ ಇರಲಿ....ಮನೆಯಲ್ಲಿ ಯಾರಿಗೂ...."

"ತಿಳಿಯದಿರಲಿ....ಹೌದಲ್ಲವೋ...."

ಭಾರಿ ಕಂಠ ಕೇಳಿ ಬಂದು ಇಬ್ಬರೂ ತಲೆಎತ್ತಿ ಬಾಗಿಲೆಡೆ ನೋಡಿದರು. ಕತ್ತಲಲ್ಲಿ ನಿಂತ ಆಕೃತಿ. ಧ್ವನಿ ಮಾತ್ರ ತಾಯಿಯದು... ಒಂದೆರಡು ಸೆಕೆಂಡುಗಳಲ್ಲಿ ದೀಪ ಬೆಳಗಿತು. ಮುಚ್ಚಿದ ಬಾಗಿಲು ತೆರೆದು ಯಾವಾಗ ಅವರು ಬಂದು ನಿಂತರೋ....ಯಾವ ಮಾತು ಕೇಳಿದರೋ ತಿಳಿಯದು.

ಇಬ್ಬರೂ ಒಡೆದ ಕಣ್ಣುಗಳಿಂದ ಅವರತ್ತಲೇ ನೋಡುತ್ತಿದ್ದರು.

ಬಾಗಿಲು ಮುಚ್ಚಿ ಅವರ ಬಳಿ ಬಂದು ನಿಂತರು ಅವರು.

"ಅನೂಪ ಇದಲ್ಲಾ ಆದದ್ದು ನಿನ್ನಿಂದ....ನಾನೆಂದೋ ಈ ರೀತಿ ಆಗಬಹುದೆಂದು ಊಹಿಸಿದ್ದೆ. ನಿನ್ನ ಗೆಳೆಯ ನನಗಷ್ಟೂ ಹಿಡಿಸಿರಲಿಲ್ಲ. ನಿನ್ನ ಬಳಿ ಸಹ ಸದಾ ಹರಿಯುತ್ತಿರುವ ಹಣದ ಹೊಳೆ, ನನಗೆ ಅಂದೇ ಭಯವಾಗಿತ್ತು"

"ಅಮ್ಮಾ, ನಾನಾದರೂ ಏನು ಮಾಡಲಿ ? ಕೆಲಸ ಸಿಗಲಿಲ್ಲ. ಮನೆಯಲ್ಲಿ ತೊಂದರೆ"

"ನಮ್ಮ ತೊಂದರೆ ನೀಗಿಸಲು ನೀನು ಹಮಾಲಿ ಮಾಡಿದ್ದರೂ ಸಂತೋಷವಾಗುತ್ತಿತ್ತು ಮಗಾ. ಈ ಹರಾಮದ....ಕೆಟ್ಟ ದಾರಿಯ ಹಣ ತಂದು ಹಾಕಿ ನಮ್ಮನ್ನು ನೀನು ಕೆಡಿಸಿಬಿಟ್ಟೆ ನಿಮ್ಮ ತಂದೆ ಮರ್ಯಾದೆಗೆ ಅಂಜಿ ಜೀವನ ಮಾಡಿದವರು....ಗೌರವದಿಂದ ಬಾಳಿ ಬದುಕಿದವರು....ನಿನ್ನ ಈ ಕುಕರ್ಮದಿಂದಾಗಿ ಅವರೆಷ್ಟು ನೊಂದುಕೊಳ್ಳುತ್ತಾರೆ.. ಅವರ ಮೇಲೆ ಯಾವ ಪರಿಣಾಮವಾಗುತ್ತದೆ ಎಂಬ ಕಲ್ಪನೆ ನಿನಗಿದೆಯೆ ? ಅದೂ ಹೋಗಲಿ. ನಾವು ಮುಪ್ಪಿನವರು ಹಳೆಯ ಕೊರಡು, ಎಲ್ಲಾದರೂ....ಎಂದಾದರೂ ಬಿದ್ದು ಹೋಗುತ್ತೇವೆ....ಆದರೆ... ಆದರೆ....ನಿನ್ನ ತಂಗಿ....ಪಲ್ಲವಿ....ಒಬ್ಬಳೇ ತಂಗಿ ನಿನಗೆ ... ನಿನ್ನ ಈ ಕೆಟ್ಟ ಗಳಿಕೆಯಿಂದ ಅವಳ ಜೀವನ ಸುಗಮವಾಗುವುದೆ ?....ನೀನೇ ಹೇಳು

"ಅಮ್ಮಾ, ಅಮ್ಮಾ ನನಗೆ ಇವೆಲ್ಲಾ ಆಗ ಅರ್ಥವಾಗಲಿಲ್ಲ. ಬಡತನದ ಬೇಗೆಯಲ್ಲಿ ಬೆಂದ ನನಗೆ ಬೇಗ ಆದಷ್ಟು ಬೇಗ ಸಾಕಷ್ಟು ಹಣ ಗಳಿಸಬೇಕು. ನೀವೆಲ್ಲ ಸುಖವಾಗಿರಬೇಕು ಎಂದಿಷ್ಟೇ ಬಯಸಿದೆ....ಅದನ್ನು ಪಡೆಯಲು ಈ ದಾರಿ ನಾನು ತುಳಿದೆ. ನನ್ನ ಕ್ಷಮಿಸಮ್ಮಾ...."

"ಈಗ ಅದರಿಂದೇನಾಗಬೇಕು ಅನೂಪ....ಎಲ್ಲಾ ಅನರ್ಥವಾಗಿ ಹೋಗಿದೆ"

"ಮುಂದಾಗುವುದನ್ನು ತಡೆಯುತ್ತೇನೆ ಅಮ್ಮಾ....ಇಂದಿನಿಂದ ಈ ದಂಧೆ ಬಿಟ್ಟುಬಿಡುತ್ತೇನೆ"

"ಅಣ್ಣಾ....ಅಣ್ಣಾ ಇದರ ಪರಿಣಾಮ ಏನಾಗುತ್ತದೆ ಎಂದು ಯೋಚಿಸಿರುವೆಯಾ ?"

"ಆದದ್ದಾಗಲಿ ಪಲ್ಲವಿ"

"ಇಮ್ರಾನ್ ಇಮ್ರಾನ್ ಮಹಾ ಅಪಾಯಕಾರಿ ಮನುಷ್ಯ"

"ಅವನ ಚಿಂತೆ ಬೇಡ ನಿನಗೆ....ಅವನೆಲ್ಲ ರಹಸ್ಯ ನನಗೆ ತಿಳಿದಿದೆ. ಅವನಿಂದ ನನಗೇನೂ ಅಪಾಯವಿಲ್ಲ...."

"ಆತ ಯಾವುದಕ್ಕೂ ಹೇಸುವವನಲ್ಲ....ನನಗನಿಸುವ ಮಟ್ಟಿಗೆ ಲಾವಣ್ಯಳನ್ನು...."

"ಅದನ್ನೆಲ್ಲ ಮರೆತು ಬಿಡು. ಇಂದಿನಿಂದ....ನಾನು ಹೊಸ ಮನುಷ್ಯ"

ಅವನ ಮಾತು ಕೇಳುತ್ತಿದ್ದಂತೆ ಮುದಿ ತಾಯಿಯ ಕಣ್ಣುಗಳಲ್ಲಿ ನೀರು ಕಾರಂಜಿಯಂತೆ ಪುಟಿಯಿತು. ಅನೂಪನನ್ನು ಎದೆಗೊತ್ತಿಕೊಂಡು ಹರಸಿದರು.

"ಅನೂಪ....ನೀನು ಈಗಾಗಲೇ ಉಪ್ಪು ತಿಂದು ಬಿಟ್ಟಿದ್ದೀಯಾ.... ಅದಕ್ಕಾಗಿ ನೀರು ಕುಡಿಯಲೇ ಬೇಕು....ಬೇರೆ ದಾರಿಯಿಲ್ಲ. ಹುಷಾರಿಯಿಂದಿರು....ಕೆಟ್ಟ ಮಾರ್ಗದಲ್ಲಿ ನಡೆಯುವಾಗ ತೊಂದರೆ ಕಡಿಮೆ.. ಕೆಟ್ಟ ಮಾರ್ಗ ಬಿಟ್ಟು ಒಳ್ಳೆಯ ದಾರಿಯಲ್ಲಿ ನಡೆಯುವ ನಿರ್ಧಾರ ಮಾಡಿದಾಗ ಮಾತ್ರ ಜೀವನ ಭಯಾನಕವಾಗುತ್ತದೆ"

"ನಾನು ಎಲ್ಲಾ ಎದುರಿಸಲು ಸಿದ್ಧನಾಗಿರುವೆ ಅಮ್ಮಾ....ನನಗೆ ನನಗೆ ನಿಮ್ಮದೇ ಚಿಂತೆ"

"ನಾವೂ ಅನುಭವಿಸಬೇಕು ಮಗ....ನೀನು ತಂದು ಹಾಕಿದ್ದನ್ನು ತಿಂದಿ

ದ್ದೇವೆ ನೋಡು, ನಮ್ಮ ಮಗ ಹಿಡಿಹಿಡಿ ನೋಟುಗಳನ್ನು ತಂದು ಕೊಟ್ಟಾಗ ಆನಂದದಿಂದ ತೆಗೆದುಕೊಂಡಿದ್ದೇವೆ. ಇಷ್ಟು ಹಣ ಎಲ್ಲಿಂದ ಬಂತು ? ಆತ ಎಲ್ಲಿಂದ ತಂದ ? ಯಾವ ಮಾರ್ಗದಿಂದ ಬಂದಿತು ? ಯಾವುದನ್ನು ವಿಚಾರಿ ಸದೇ ಕಣ್ಣು ಮುಚ್ಚಿಕೊಂಡು ಪಾಪದ ಅನ್ನ ಉಂಡಿದ್ದೇವೆ. ಅದೆಲ್ಲಾ ಕರಗಲು... ನಾಶವಾಗಲು....ಒಂದಿಷ್ಟು ಶಿಕ್ಷೆ ಅನುಭವಿಸಲೇಬೇಕು."

"ಅಮ್ಮಾ...." ಅವರ ಎರಡೂ ಕೈಹಿಡಿದು ಬಿಕ್ಕಿ ಬಿಕ್ಕಿ ಅತ್ತ ಅನೂಪ.

ತಲೆಯ ಮೇಲೆ ಕೈಯಾಡಿಸಿ ಸಮಾಧಾನ ಮಾಡಿದ ಅವರು ಎದ್ದು ಮೆಲ್ಲನೆ ಹೊರನಡೆದರು. ಕೆಲಕಾಲ ಮೌನವಾಗಿ ಕುಳಿತು ಪಲ್ಲವಿಯನ್ನೇ ದಿಟ್ಟಿಸಿದ ಅನೂಪ ತಾನೂ ಸಹ ಮೇಲೆದ್ದು ಪಲ್ಲವಿಯ ಮೈದಡವಿ.... ಸಮಾಧಾನ ಹೇಳಿ ಕೋಣೆಯಿಂದ ಹೊರ ಹೆಜ್ಜೆ ಹಾಕಿದ.

"ಅಣ್ಣಾ"

ಹೊರಳಿ ನಿಂತ ಅನೂಪ....ತಂಗಿಯತ್ತ ನೋಡಿದ.

"ನನ್ನಾಣೆ ಅಣ್ಣ .. ತಪ್ಪಿ....ಅಂಥಿಂಥ ದಾರಿ ಹಿಡಿಯಬೇಡ...."

"ಇಲ್ಲ ಪಲ್ಲವಿ....ಆ ರೀತಿ ಮಾಡಿ ನಿಮ್ಮ ತಲೆ ಮೇಲೆ ಕಲ್ಲು ಹಾಕಲಾರೆ"

ಆತ ಹೊರಟುಹೋಗಿ ಎಷ್ಟೋ ಹೊತ್ತಾದರೂ ಹಾಗೇ ಕುಳಿತಿದ್ದ ಪಲ್ಲವಿ ಎದ್ದು ದೀಪವಾರಿಸಿ ಹಾಸಿಗೆಗೆ ಬಂದಳು....ಎರಡು ಮೂರು ನಿಮಿಷ ಗಳಲ್ಲಿ ಆಕೆಗೆ ಗಪ್ಪನೆ ನಿದ್ದೆ ಬಂದಿತು....ಅದೆಂಥ ನಿದ್ದೆ ? ದೀರ್ಘವಾದ ಸುಖ ಕರವಾದ ನಿದ್ದೆ....

ಅನೂಪ ಮನೆಯಿಂದ ಹೊರಬಂದಾಗ ಒಂದು ಗಂಟೆ.

ವಿಪರೀತ ಚಳಿ....ಬೆಚ್ಚಗೆ ಮಲಗಿಕೊಳ್ಳುವ ಸಮಯ....ಯಾವುದನ್ನು ಆತ ಯೋಚಿಸದೇ ಗಾಡಿಯೊಂದಿಗೆ ಪಾನ ದುಕಾನ್‌ಗೆ ಬಂದ....ಅಲ್ಲಿದ್ದ ಎಲ್ಲಾ ಮಾಲನ್ನು ಕಟ್ಟಿ ಪ್ಯಾಕ್ ಮಾಡಿದ, ಮುಚ್ಚಿ ಇಟ್ಟಿದ್ದ ಹಣ ಒಂದೆಡೆ ಸಂಗ್ರಹಿಸಿದ... ಬೇರೆ ಬೇರೆ ಹೆಸರಿನಲ್ಲಿಟ್ಟ ಹಣದ ಕಾಗದ ಪತ್ರ....ಪಾಸ್ ಬುಕ್ ಎಲ್ಲಾ ಒಂದೆಡೆ ಸೇರಿಸಿದ....ಒಂದೈದು ನಿಮಿಷ ಶಾಂತವಾಗಿ ಕುಳಿತು ಮುಂದೇನು ಮಾಡಬೇಕೆಂದು ಯೋಚಿಸಿದ. ಗೆಳೆಯ ಕಿಶೋರನ ನೆನಪಾ ಯಿತು. ಕಿಶೋರ ಅವನ ಸಹಪಾಠಿ. ಎಸ್.ಎಸ್.ಎಲ್.ಸಿ.ವರೆಗೆ ಅವನ ಜೊತೆಯಿದ್ದ. ಅವನಿಗಿಂತಲೂ ಕಡುಬಡವ, ಕಾಲೇಜಿನಲ್ಲಿ ಓದುತ್ತಿದ್ದ....

ಇತ್ತೀತ್ತಲಾಗಿ ಅನೂಪ ಅವನಿಗೆ ತುಂಬಾ ಸಹಾಯ ಮಾಡಿದ್ದ. ತಾನೇ ಅವನಿಗೇ ಓದಲು ಎಂದು ಒಂದು ಕೊಠಡಿ ಕೊಡಿಸಿದ್ದ....ಎರಡು ದಿನಗಳ ಹಿಂದೆ ಕಿಶೋರನ ಪರೀಕ್ಷೆಗಳು ಮುಗಿದಿದ್ದವು. ರೂಮು ಖಾಲಿ ಮಾಡಿ ಬೀಗದ ಕೈಕೊಟ್ಟು ಹೋಗಿದ್ದ. ಅವನ ಕೊಠಡಿ ಸುರಕ್ಷಿತವಾದ ಸ್ಥಳ ಎನಿಸಿತು. ಎಲ್ಲಾ ಮಾಲು ಅಲ್ಲೇ ಇಟ್ಟು ತಾನೂ ಸಹ ಅಲ್ಲಿರುವುದೇ ವಾಸಿ ಎಂದು ನಿರ್ಧರಿಸಿದ.

ಎಲ್ಲಾ ಮಾಲು ಸಾಗಿಸಲು ವಾಹನದ ಅವಶ್ಯಕತೆ ಬಿತ್ತು. ಕನಿಷ್ಟ ಪಕ್ಷ ಹತ್ತು ಹದಿನೈದ ಲಕ್ಷರೂಪಾಯಿಗಳ ಮಾಲು. ಇದು ಇಮ್ರಾನನ ಬಳಿ ಇದ್ದ ಮಾಲಿನ ಐದು ಭಾಗ ಮಾತ್ರ. ಆದರೂ ಇಷ್ಟೇ ಪೆಟ್ಟು ಅವನಿಗೆ ಬಿಸಿ ಮುಟ್ಟಿಸುತ್ತದೆ. ಅದೂ ಅಲ್ಲದೇ ಅವನ ಏಜೆಂಟ್ ಅನೂಪ....ಅವನೇ ಎದುರಾದರೆ ಗೋಡೌನಿನಲ್ಲಿದ್ದ ಮಾಲು ಹೊರಗೆ ಬರುವುದೆಂತು ? ಅದು ಕೊಳೆತು ಹೋಗಬೇಕೇ ? ಇದನ್ನೆಲ್ಲ ಯೋಚಿಸಿದ ಅನೂಪ ವಾಹನಕ್ಕಾಗಿ ತಲೆ ಕೆಡಿಸಿಕೊಳ್ಳತೊಡಗಿದ. ತಟಕ್ಕನೆ ನೆನಪಾಯಿತು ಅರವಿಂದನ ಮೆಟೆಡೋರ್. ಅರವಿಂದ ಪತ್ರಿಕೆಯೊಂದರ ಏಜನ್ಸಿ ಹಿಡಿದಿದ್ದ. ಪ್ರತಿದಿವಸ ಪತ್ರಿಕೆಯನ್ನು ಹೇರಿಕೊಂಡು ಗಂಗಾವತಿಗೆ ಮುಟ್ಟಿಸಬೇಕು ಇಷ್ಟೇ. ದಿನವಿಡೀ ಬೇಕಾದ್ದು ಮಾಡಿಕೊಂಡರೂ ಯಾರ ತಂಟೆ ಇಲ್ಲ. ಒಂದೇ ಒಂದು ಕಂಡಿಶನ್, ವೆಹಿಕಲ್ ಪತ್ರಿಕೆ ಕಾರ್ಯಾಲಯದ ಮುಂದೆ ನಾಲ್ಕು ಗಂಟೆಗೆ ನಿಂತಿರಬೇಕು ಅಷ್ಟೇ. ಸಮಯ ನೋಡಿದ ಎರಡೂವರೆಗೆ ಸಮೀಪಿಸಿತ್ತು. ಒಂದು ಗಂಟೆಯಲ್ಲಿ ಮಾಲನ್ನು ಕಿಶೋರನ ಕೋಣೆಗೆ ತಲುಪಿಸಿ ಬರಲು ಸಾಧ್ಯವಿತ್ತು .. ಸರಸರನೆ ಸಿದ್ಧನಾದ.

ಅರವಿಂದ ಮಲಗಿಕೊಂಡಿದ್ದ. ಡ್ರೈವರ್ ಬಂದಿರಲಿಲ್ಲ. ಬರುವಂತೆಯೂ ಇರಲಿಲ್ಲ. ಅದಕ್ಕಾಗಿ ಅವನೇ ಗಂಗಾವತಿಗೆ ಹೋಗುವವನಿದ್ದ. ಹೀಗಾಗಿ ಆತ ಮಲಗಿಕೊಂಡಿದ್ದ....ಅನೂಪ ಅವನ ಪ್ರಾಣಕ್ಕೆ ಹತ್ತಿರಾದುದರಿಂದ ಅರವಿಂದನ ತಂಗಿ ಅವನನ್ನು ಎಬ್ಬಿಸಿದಳು. ಸಮಯಕ್ಕೆ ಮೊದಲೇ ಏಕೆ ಎಬ್ಬಿಸಿದೆ ಎಂದು ಸಿಟ್ಟು ಮಾಡಿದ ಅರವಿಂದ....ತಂಗಿಯ ಬಾಯಿಂದ ಅನೂಪನ ಹೆಸರು ಕೇಳುತ್ತಲೂ ಹೊರಗೋಡಿದ. ಮೊದಲೆಂದು ನಿಮಿತ ಉಭಯ ಕುಶಲ ಸಮಾಚಾರ ಮಾತಾಡಿದರು. ಅನೂಪ ವಿಷಯಕ್ಕೆ ಬಂದ.

"ಅರವಿಂದ ಒಂದು ಗಂಟೆಯ ಮಟ್ಟಿಗೆ ನಿನ್ನ ಮೆಟೆಡೋರ್ ಬೇಕಾಗಿತ್ತು.... ಅರ್ಜಂಟ್"

"ನೊ... ಆಗೋದಿಲ್ಲ"

"ಲೋ ಕತ್ತೆ....ಗಾಡಿ ಬೇಕಾಗಿದ್ದು ನನಗೇ, ನಾನೇ ಡ್ರೈವ್ ಮಾಡುತ್ತೇನೆ"

"ಅದು ಸರಿ.... ಆದರೆ"

"ನನಗೆ ಗೊತ್ತು....ನಾಲ್ಕು ಗಂಟೆಗೆ ಸರಿಯಾಗಿ ಗಾಡಿ ಪತ್ರಿಕೆ ಆಫೀಸ್ ಮುಂದಿರಬೇಕು"

"ಹೌದು"

"ಚಿಂತಿಸಬೇಡ, ನೀನು ಬಟ್ಟೆ ತೊಟ್ಟುಕೊಂಡು....ಪತ್ರಿಕಾ ಕಚೇರಿಗೆ ಬಾ, ನಾನು ಗಾಡಿಯೊಂದಿಗೆ ಅಲ್ಲಿಗೆ ಬರುತ್ತೇನೆ"

ಅರವಿಂದ ಒಪ್ಪಿಕೊಂಡು ಗಾಡಿ ಕೀ ಕೊಟ್ಟ. ಥ್ಯಾಂಕ್ಸ್ ಹೇಳಿ ಹೊರ ಬಂದ ಅನೂಪನ ಸಮಸ್ಯೆ ಪರಿಹಾರವಾಗಿತ್ತು.

ಕೆಲಸ ನಿಗದಿತ ಸಮಯದಲ್ಲಿ ಮುಗಿಯಿತು. ಅನೂಪ ಗಾಡಿ ತೆಗೆದು ಕೊಂಡು ಪತ್ರಿಕಾ ಕಚೇರಿಗೆ ಬಂದ. ಗಾಡಿ ನೋಡುತ್ತಲೂ ಅರವಿಂದನ ಮುಖ ಅರಳಿತು.

"ಏಕೆ....ಗಾಬರಿಯಾಗಿತ್ತೇ ?"

"ಅನೂಪ....ನಿನ್ನ ಗೆಳೆಯ ನಾನು....ನಿನ್ನ ಮೇಲೆ ಅಪನಂಬಿಕೆಯಿಲ್ಲ.... ಪತ್ರಿಕೆಯವರು ಕೇಳಬೇಕಲ್ಲ ? ಗಾಡಿ ಬರದಿದ್ದರೆ ಬೇರೆ ವ್ಯವಸ್ಥೆ ಮಾಡುತ್ತಾರೆ ಹಾಗಾದರೆ ಮುಂದೆ ನನ್ನ ಪರಿಸ್ಥಿತಿ ?"

"ಸಾರಿ ಯಾರ್"

"ಅದೆಲ್ಲಾ ಏಕೆ ಹತ್ತು ಹದಿನೈದು ನಿಮಿಷ ಮೊದಲೇ ತಂದಿದ್ದೆಯಲ್ಲ.... ಬಾ ಇಲ್ಲೇ ಒಂದು ಕಪ್ ಚಹ ಕುಡಿಯೋಣ"

ಕ್ಯಾಂಟೀನನಲ್ಲಿ ಚಹ ಕುಡಿದು ಹೊರಬಂದ ಅನೂಪ. ಆಟೋ ಇರಲಿಲ್ಲ. ಹಾಗೇ ನಡೆಯುತ್ತ ಬಂದು ಮನೆ ಸೇರಿ ನಿದ್ದೆ ಹೋದ. ಬೆಳಿಗ್ಗೆ ಏಳು ಗಂಟೆಗೆ ಅಮ್ಮ ಬಂದು ಎಬ್ಬಿಸಿದಾಗ....ಇಂದು ರಜೆ ಹಾಯಾಗಿ ಮಲಗಿ ಕೊಳ್ಳುತ್ತೇನೆ" ಎಂದ. ತಾಯಿ ಒತ್ತಾಯಿಸಲಿಲ್ಲ. ರಾತ್ರಿ ಮಾತಾಡಿದ್ದೇ

ಸಾಕಾಗಿ ಹಾಗೇ ಅವರು ಹಿಂತಿರುಗಿದರು. ಹತ್ತು ಗಂಟೆಗೆ ಪಕ್ಕದ ಮನೆಯ ಹುಡುಗಿ ಕರೆಯಲು ಬಂದಳು. ಇಮ್ರಾನ್ ಫೋನು ಮಾಡಿದ್ದಾನೆ ಅಂತ.... ಮೈಗೆ ಹುಷಾರಿಲ್ಲ ಎಂದು ಮರಳಿ ಕಳಿಸಿ....ಮರುಕ್ಷಣ ಅರೆಬಾಪರೆ....ಎಂದು ಕೊಳ್ಳುತ್ತ ಎದ್ದು ಕುಳಿತ. ಹುಷಾರಿಲ್ಲ ಅಂದ ತಕ್ಷಣ ಬಂದು ಬಿಡುತ್ತಾನೆ.... ಏನು ಮಾಡುವುದು ? ಅವಸರದಿಂದ ದೈನಂದಿನ ಕೆಲಸ ಮುಗಿಸಿಕೊಂಡು ಹೊರನಡೆದ.

ಅಂದು ಪೂರ್ಣ ಒಂದು ದಿನ ಆರಾಮಾಗಿ ಕಳೆದ. ಎಷ್ಟು ಆರಾಮಾಗಿ ಆತ ಕಳೆದನೆಂದರೆ....ಇಷ್ಟು ದಿನಗಳಲ್ಲಿ ಎಂದೂ ಆತ ಇಷ್ಟು ಪ್ರಫುಲ್ಲತೆ ಅನುಭವಿಸಿರಲಿಲ್ಲ....ಮೊದಲು ಹೊಟ್ಟೆ ತುಂಬ ತಿಂಡಿ ತಿಂದ ಆತ ಬೆಳಗಾವಿಗೆ ಹೊರಟು ನಿಂತ. ದಿನವೆಲ್ಲಾ ಎರಡು ಪಿಕ್ಚರ್ ನೋಡಿ ಕಳೆದ ಸಂಜೆ ಸ್ನೇಹಿತ ನಿರುವದು ನೆನಪಾಗಿ ಅವರನ್ನು ಹುಡುಕಿಕೊಂಡು ಬೆಳಕವಾಡಿಗೆ ಬಂದ. ರಾತ್ರಿ ಸಹ ಅಲ್ಲೇ ಇದ್ದು ಮುಂಜಾನೆ ಹತ್ತು ಗಂಟೆಗೆ ಬಸ್ ಹಿಡಿದು ಸಾಯಂಕಾಲ ಊರಿಗೆ ಬಂದ. ಮನೆ ಮುಟ್ಟುತ್ತಲೂ ಗಾಬರಿಯಾದ ತಾಯಿ ಒಂದೇ ಉಸುರಿನಲ್ಲಿ ವರದಿ ಒಪ್ಪಿಸಿದಳು. ಇಮ್ರಾನ್ ಕನಿಷ್ಟ ಹತ್ತು ಬಾರಿ ಬಂದಿದ್ದ. ಏಳೆಂಟು ಭಾರಿ ಯಾರ್‍ಯಾರನ್ನೋ ಕಳಿಸಿದ್ದ. ಐದಾರು ಬಾರಿ ಫೋನು ಮಾಡಿದ್ದ. ಆತ ಬಹಳ ಸಿಟ್ಟಿಗೆದ್ದಂತಿದ್ದ. ಅನೂಪ ಮಂದಹಾಸ ಬೀರಿ ರೂಮು ಸೇರಿ ಬಾಗಿಲು ಮುಚ್ಚಿಕೊಂಡ.

ಮುಂಜಾನೆಯು ಆತ ಬೇಗ ಏಳಲಿಲ್ಲ....ಮಧ್ಯಾಹ್ನದವರೆಗೂ ಮಲಗೇ ಇದ್ದು ಅನಂತರ ಎದ್ದು ಸ್ನಾನ ಮಾಡಿದ. ಊಟ ಮಾಡಿ ಟಿ.ವಿ. ನೋಡುತ್ತ ಕುಳಿತ. ರಾತ್ರಿ ಊಟ ಮಾಡಿ ಮಲಗಿಕೊಂಡ.

ಆಚ್ಚರಿಯ ಸಂಗತಿ ಎಂದರೆ ಪೂರಾ ದಿವಸ ಇಮ್ರಾನ್‌ನಿಂದ ಒಂದು ಬಾರಿಯೂ ಫೋನು ಬರಲಿಲ್ಲ . ಕರೆಯಲು ಯಾರೂ ಬರಲಿಲ್ಲ. ಸ್ವತಃ ಅವನೂ ಅತ್ತ ಕಾಲಿಡಲಿಲ್ಲ. ಅನೂಪ ಊರಲ್ಲೇ ಇಲ್ಲವೆಂದಾತ ಊಹಿಸಿರ ಬೇಕು. ಅದೇನೇ ಇರಲಿ, ಸರ್ವದೃಷ್ಟಿಯಿಂದಲೂ ಅನೂಪ ವಿಶ್ರಾಂತಿ ಪಡೆದು ಮುಂದೆ ಬರುವುದನ್ನು ಎದುರಿಸಲು ಸನ್ನದ್ಧನಾದ. ನಸುಕು ಐದು ಗಂಟೆಗೆ ಮೊದಲೇ ಎದ್ದು ಸ್ನಾನ ಮಾಡಿ ರೂಮು ಬಿಟ್ಟ. ಕಿಶೋರನ ಕೋಣೆಗೆ ಬಂದ. ಅವನ ಮಾಲು ಸುರಕ್ಷಿತವಾಗಿತ್ತು. ಅದಕ್ಕೊಂದು ಗತಿ

ಕಾಣಿಸಬೇಕಾಗಿತ್ತು ಕೈಯಲ್ಲಿ ದುಡ್ಡು ಬಂದರೆ ಅದೊಂದು ಬಗೆದು ಶಕ್ತಿ ಬರುತ್ತದೆ... ಏನಾದರೂ ವ್ಯವಸ್ಥೆ ಮಾಡಬೇಕೆಂದುಕೊಳ್ಳುತ್ತಾ ಅಂದು ಪಾನಶಾಪ್ ತೆಗೆದು ಕುಳಿತ.

ಅವನಿಗೆ ಇಮ್ರಾನನ ನಿರೀಕ್ಷೆ ಇತ್ತು.

ಸಮಯ ಕಳೆಯತೊಡಗಿತು. ಪಾನಬೀಡಾ ಅಂಗಡಿ ಬಾಗಿಲು ತೆರೆದಿದ್ದನ್ನು ಕಂಡು ಮೂರು ದಿನಗಳಿಂದ ಕಂಗಾಲಾದವರ ದಂಡೇ ದೌಡಾಯಿಸಿತು. ಪ್ರತಿಯೊಬ್ಬರೂ ಸಿಲ್ವರ್ ಬ್ರ್ಯಾಂಡ್ ಸ್ಪೇಷಲ್ ಪಾನ ಕೇಳುವವರೇ ಪ್ರತಿಯೊಬ್ಬರಿಗೂ ಇಲ್ಲ....ಇಲ್ಲ....ಸಾದಾ ಪಾನಿದೆ ಮಸಾಲಾ ಪಾನಿದೆ-ಕಲ್ಕತ್ತಾ ಪಾನಿದೆ ಎಂದು ಹೇಳುತ್ತ ಕುಳಿತ. ಕಂಗಾಲಾದ ಅವರು ಒಮ್ಮೆಯಂತೂ ಹೊಡೆದಾಟಕ್ಕೆ ಸಿದ್ಧರಾದರು. ಇದೇ ಅನೂಪನಿಗೆ ಬೇಕಾದದ್ದು. ಒಂದಿಬ್ಬರ ಜೊತೆ ಸ್ವತಃ ತಾನೇ ಕಾಲು ಕೆರೆದು ಜಗಳ ತೆಗೆದ. ಗಲಾಟೆಯಾಯಿತು. ಠಾಣೆಯವರೆಗೂ ಕಂಪ್ಲೇಟ್ ಹೋದಾಗ ಅಲ್ಲಿದ್ದ ಸಾಹೇಬರು ಗಾಬರಿಯಾದರು. ಗಾಂಧೀಚೌಕದಲ್ಲಿರುವ ಅನೂಪ ಕುಳಿತುಕೊಳ್ಳುವ ಪಾನಬೀಡಾ ಅಂಗಡಿ ಇಮ್ರಾನನಿಗೆ ಸಂಬಂಧಪಟ್ಟದ್ದೆಂದು ತಿಳಿದಿದ್ದು, ಅವರು ಸ್ವತಃ ತಾವೇ ಜೀಪಿನಲ್ಲಿ ಬಂದು ಸಾಹೇಬರು ಅನೂಪನೊಂದಿಗೆ ಮಾತಾಡಿದರು. ಪ್ರತಿ ತಿಂಗಳು ಮಾಮೂಲು ಪಡೆಯುವ ಕುಳ ಅವರು. ಅವರ ಮುಂದೆ ಅನೂಪ ಎಲ್ಲಾ ತಿಳಿಸಿ ಹೇಳಿ ಅಂಗಡಿಯಲ್ಲಿ ಮಾಲಿಲ್ಲ ಏನು ಮಾಡುವದು ? ಇಲ್ಲ ಅಂದರೆ ಕೇಳ್ತಾ ಇಲ್ಲ. ಎಂದು ಹೇಳಿದ.

ಸಾಹೇಬರು ಬೆರಗಾದರು .. ಸಲಹೆ ನೀಡಿದರು.

ಈ ಜನ ಸುಮ್ಮನಿರುವುದಿಲ್ಲ ಬೇಡಿದಷ್ಟು ಹಣ ಕೊಡಲು ಸಿದ್ಧ.... ಮಾಲೇ ಇಲ್ಲ ಅಂದ ಮೇಲೆ ಏನು ಮಾಡಲುಸಾಧ್ಯ....ಅದಕ್ಕಾಗಿ ಅಂಗಡಿ ಬಾಗಿಲು ಹಾಕಿಬಿಡು ನಾನು ಇಮ್ರಾನನಿಗೆ ಈ ಸುದ್ದಿ ಮುಟ್ಟಿಸುತ್ತೇನೆ.

ಅನೂಪನಿಗೂ ಇದೇ ಬೇಕಾಗಿತ್ತು. ತಡಮಾಡದೇ ಅಂಗಡಿ ಮುಚ್ಚಿ ಬೇಗ ಬಡಿದು ಸನಿಹದಲ್ಲಿದ್ದ ಥೇಟರ್ ನುಗ್ಗಿದ. ಪಿಕ್ಚರ್ ಯಾವದಿದೆ ಎಂದು ನೋಡಲೇ ಇಲ್ಲ. ಬಾಲ್ಕನಿ ಟಿಕೆಟ್ ತೆಗೆದು ಕೊನೆಯ ಸೀಟನಲ್ಲಿ ತಲೆ ಒಗೆದು

ಕಾಲು ಚೆಲ್ಲಿ ಅಡ್ಡಾದ....ಎರಡು ಎರಡೂವರೆ ಗಂಟೆ ನಿದ್ದೆ. ಪಿಕ್ಚರ್ ಮುಗಿದ ಮೇಲೆ ಗೇಟ್ ಕೀಪರ್ ಬಂದು ಎಬ್ಬಿಸಿದಾಗ ಹೊರಬಂದ.

ಹೊರಗೆಲ್ಲಾ ಒಂದು ಸುದ್ದಿ....ಸಾಯಂಕಾಲ ಎಂಟು ಹತ್ತು ಮಂದಿ ಪಾನ ಅಂಗಡಿ ಬಾಗಿಲು ಮುರಿದು ಒಳಗೆಲ್ಲಾ ತಡಕಾಡಿದರು. ಅದನ್ನು ಆತ ನಿರೀಕ್ಷಿಸಿದ್ದ ಆನಂದದಿಂದ ಸಿಳ್ಳು ಹಾಕುತ್ತ ಕಂಪ್ಲೇಂಟು ಮಾಡಲು ಠಾಣೆ ಎದುರು ಬಂದ. ಆಲ್ಲಿ ಅವನಿಗಿಂತ ಮೊದಲೇ ಬಂದು ಕಾಯುತ್ತಿದ್ದ....ಕೆರಳಿದ ಸರ್ಪವಾಗಿದ್ದ ಇಮ್ರಾನ್....

## 16

ಪಲ್ಲವಿಯಿಂದ ಫೋನು ಬಂದ ಮರುದಿನವೇ ಭಾರತಕ್ಕೆ ಹೊರಡಲು ಜಗಪತಿರಾಯರು ಬಹಳ ಪ್ರಯತ್ನಿಸಿದರು. ಫ್ಲೈಟಿನಲ್ಲಿ ಸೀಟು ಸಿಗಲೇ ಇಲ್ಲ. ಹೀಗಾಗಿ ಎರಡು ದಿನ ಬಿಟ್ಟು ಮೂರನೇ ದಿವಸ ಅವರು ಭಾರತ ತಲುಪಿದರು. ಟ್ಯಾಕ್ಸಿ ಮಾಡಿಕೊಂಡು ಮೊದಲು ನೇರವಾಗಿ ಹೆಂಡತಿ ಬಳಿ ಬಂದರು. ದೇವರಪೂಜೆ ಅತಿಥಿ ಸತ್ಕಾರಗಳಲ್ಲಿ ನಿರತರಾಗಿದ್ದ ಜಾನಕಿಬಾಯಿ ತಮ್ಮೆದುರು ನಿಂತ ಸಾಕ್ಷಾತ್ ಪತಿದೇವರನ್ನು ಕಂಡು ಅವಾಕ್ಕಾದರು. ಇದೊಂದು ಅನಿರೀಕ್ಷಿತ ಘಟನೆ. ಏನೇ ಆದರೂ ದುಬಾಯಿ ಬಿಟ್ಟು ಬರುವುದಿಲ್ಲ. ಹೇರಳವಾಗಿ ಹಣ ಗಳಿಸಿ ಇಲ್ಲೇ ಇದ್ದುಬಿಡುತ್ತೇನೆ ಎಂದಿದ್ದ ಪತಿ ಹೇಳದೇ ಕೇಳದೇ ಧುತ್ತೆಂದು ಎದುರಿಗೇ ಪ್ರತ್ಯಕ್ಷವಾದರೆ ಆಗುವ ಸಂತೋಷವೇನೆಂದು ಹೇಳುವುದು ?

ಕಣ್ತುಂಬ ನೀರು ತಂದುಕೊಂಡು ಆನಂದಭಾಷ್ಪ ಸುರಿಸಿದ ಜಾನಕಿಬಾಯಿ ಪತಿಯ ಪಾದ ಮುಟ್ಟಿ ನಮಸ್ಕರಿಸಿದಾಗ ಜಗಪತಿರಾಯರೂ ಪುಲಕಿತರಾದರು. ಅದೆಂಥ ಆನಂದ ದುಃಖದ ಸಮಯದಲ್ಲೂ ಅವರು ಪುಲಕಿತರಾದರು. ಹನ್ನೊಂದು ವರ್ಷಗಳ ನಂತರ ಅವರು ಭಾರತಕ್ಕೆ ವಾಪಸಾಗಿದ್ದರು....ಒಳಗೆ ಬಂದ ಅವರು ಪತ್ನಿಯ ಮಡಿಲಿಗೆ ತಮ್ಮನ್ನು ತಾವು ಅರ್ಪಿಸಿಕೊಂಡರು.

ಲಾವಣ್ಯಳ ಸಮಾಚಾರ ಹೇಳಲೇ ಇಲ್ಲ. ಸಾಯಂಕಾಲವಾದಾಗ ಜಾನಕಿಬಾಯಿಯವರ ಎಲ್ಲಾ ಆವೇಶ ಇಳಿದಿತ್ತು.

"ಜಾನಕೀ"

ಪತಿಯ ಬಾಯಿಯಿಂದ ಬಂದ ನುಡಿಗೆ ಅವರ ಮೈ ಜುಂ ಎಂದಿತು. ಅದೆಂಥ ಪ್ರೀತಿಯ ಕರೆ. ಕಣ್ಣೆತ್ತಿ ಅವರತ್ತ ನೋಡಿದಳು....ಸ್ವಪ್ನದಲ್ಲಿರುವವರಂತೆ ...

"ಲಾವಣ್ಯಳ ಆರೋಗ್ಯ ಸರಿಯಿಲ್ಲ .. ಅವಳ ಗೆಳತಿಯಿಂದ ಫೋನು ಬಂದಿದೆ"

"ಆಂ ಏನಾಗಿದೆ ?" ಲಾವಣ್ಯಗೆ ಏನಾಗಿದೆ ?

ಪತ್ನಿರೂಪ ಮಾಯವಾಗಿ ತಾಯಿಯ ವಾತ್ಸಲ್ಯ ಸೆಲೆಯೊಡೆಯಿತು.

"ನನಗೂ ಗೊತ್ತಿಲ್ಲ....ಅವಳ ಗೆಳತಿ ಪಲ್ಲವಿ ಫೋನು ಮಾಡಿದ್ದಳು. ಮೊದಲು ಅವಳ ಬಳಿ ಹೋಗೋಣ ...ಅಲ್ಲಿ ಹೋದ ಮೇಲೆಯೇ ನಮಗೆ ವಿಷಯ ತಿಳಿಯುವುದು."

ಜಾನಕಿಬಾಯಿ ಸಿದ್ಧರಾದರು.

ಅತ್ತೆಯವರ ಮುಂದೆಯೂ ಇದೇ ಶಂಖವನ್ನು ಊದಿದರು ಜಗಪತಿರಾಯರು. ಮೊಮ್ಮಗಳ ಬಗ್ಗೆ ಕಳವಳಗೊಂಡ ಮುದಿಜೀವ ಮೊಮ್ಮಗಳನ್ನು ನೋಡಲು ಮುಂದಾದಾಗ ಜಗಪತಿರಾಯರು ಅಲ್ಲಿಂದ ಟ್ಯಾಕ್ಸಿ ಹಿಡಿದರು.... ಪಲ್ಲವಿ ಬಳಿ ಬಂದು ಅವರು ಸೇರಿದಾಗ ರಾತ್ರಿ ಹತ್ತುಗಂಟೆ ಸಮೀಪಿಸಿತ್ತು.

ಲಾವಣ್ಯಳ ತಂದೆತಾಯಿಯರನ್ನು ಪಲ್ಲವಿ ನೋಡಿಯೇ ಇರಲಿಲ್ಲ. ಹೀಗಾಗಿ ಮೊದಲು ಅವರು ಯಾರೆಂದು ತಿಳಿಯದೇ ತೊಳಲಾಡಿದಳು. ಅವರ ಬಾಯಿಯಿಂದಲೇ ಲಾವಣ್ಯಳ ತಂದೆತಾಯಿ ಎಂದು ಬಂದಾಗ ಪರಿಚಯ ಸಿಕ್ಕು ಮರುಕ್ಷಣ ಧರೆಗಿಳಿದಳು.

ಅವರಿಗೆ ಏನು ಅಂತ ಹೇಳುವುದು ?

ಅವರ ಮುಂದೆ ತಿಂಡಿ....ಕಾಫಿ ಬಟ್ಟಲು ಇರಿಸಿ ಪಕ್ಕದ ಮನೆಗೆ ಓಡಿದಳು. ಅವಿನಾಶನಿಗೆ ಫೋನು ಮಾಡಿದಳು. ಅವಳ ಅದೃಷ್ಟ. ಆತ ಠಾಣೆಯಲ್ಲಿದ್ದ ತಕ್ಷಣ ಹೊರಟು ಬರುವುದಾಗಿ ತಿಳಿಸಿದಾಗ ಪಲ್ಲವಿ ಅವರ ವಿಚಾರಣೆ ನಮ್ಮ ಮನೆಯಲ್ಲಿ ಆಗುವುದು ಬೇಡ. ಬೇರೆ ಎಲ್ಲಾದರೂ ಆಗಲಿ ಎಂದು ವಿನಂತಿಸಿ

ಕೊಂಡಾಗ ಒಪ್ಪಿದ ಅವಿನಾಶ್. ಸರ್ಕಿಟ್ ಹೌಸಿನಲ್ಲಿ ರೂಮು ಮಾಡುವುದಾಗಿ ಹೇಳಿ ರಿಸೀವರ್ ಇರಿಸಿದ. ಆತ ಬರಲು ಅರ್ಧಗಂಟೆ ಬೇಕಾಯಿತು....ತಾನು ಲಾವಣ್ಯಳ ಪ್ರೊಫೆಸರ್ ಎಂದು ಬುರುಡೆ ಉರುಳಿಸಿ ಜಗಪತಿರಾಯರನ್ನು ಜಾನಕಿ ಅಮ್ಮನನ್ನು ತನ್ನ ಜೊತೆ ಸರ್ಕಿಟ್ ಹೌಸಿನಲ್ಲಿದ್ದ ರೂಮಿಗೆ ಕರೆತಂದ. ....ಪಲ್ಲವಿ ಅವರ ಜೊತೆಯೇ ಇದ್ದಳು.

ಅಲ್ಲಿ ಬಂದ ಮೇಲೆ ರಹಸ್ಯ ಬಯಲು ಮಾಡಿದ.

ತಾನು ಪ್ರೊಫೆಸರ್ ಅಲ್ಲ. ಪೊಲೀಸ್ ಇನ್‌ಸ್ಪೆಕ್ಟರ್ ಅವಿನಾಶ್ ಎಂದು....

ಜಗಪತಿರಾಯರ ಎದೆಯೊಡೆಯಿತು. ಅನಿಷ್ಟ ಘಟನೆ ಜರುಗಿದೆ ಎಂದು ಊಹಿಸಿದರು.

ಅವಿನಾಶ್ ಯಾವ ವಿಷಯವನ್ನು ಮುಚ್ಚಿಡಲಿಲ್ಲ. ಎಲ್ಲವನ್ನೂ ಕೇಳುತ್ತಿದ್ದಂತೆ ಜಾನಕಿಬಾಯಿಯವರು ಎದೆ ಬಡಿದುಕೊಂಡು ಅಳಲಾರಂಭಿಸಿದರು.. ಕೂಡಲೇ ಲಾವಣ್ಯ ಇದ್ದಲ್ಲಿ ತಮ್ಮನ್ನು ಕರೆದೊಯ್ಯಲು ಹಟ ಹಿಡಿದರು. ಜಗಪತಿರಾಯರು ಅವರನ್ನು ಸಮಾಧಾನ ಪಡಿಸಲು ಪ್ರಯತ್ನಿಸಿ ಸೋಲೊಪ್ಪಿಕೊಂಡರು. ಅವಿನಾಶನೊಂದಿಗೆ ಮಾತು ಮುಗಿದ ಮೇಲೆ ವಿಳಂಬ ಮಾಡದೇ ಲಾವಣ್ಯಳ ಬಳಿ ಕರೆದೊಯ್ಯುತ್ತೇನೆ ಎಂದು ಮಾತು ನೀಡಿದ ಮೇಲೆಯೇ ಅವರು ಶಾಂತರಾದದ್ದು. ಹೆಚ್ಚುಕಡಿಮೆ ಅರ್ಧಗಂಟೆ ಅವಿನಾಶ್ ಅವರೊಂದಿಗೆ ಮಾತನಾಡಿದ ಲಾವಣ್ಯಳ ಬಗ್ಗೆ ಯಾವುದೇ ರೀತಿಯ ಗ್ಯಾನಿಪ್‌ಗಳಿಲ್ಲ....ಯಾರೊಂದಿಗೂ ಆಕೆ ಬೆರೆತಿಲ್ಲ. ವೈರತ್ವವಂತೂ ಇಲ್ಲವೇ ಇಲ್ಲ. ಆಕೆ ಬರೆದ ಪತ್ರಗಳಲ್ಲಿ ಸಂಶಯಪಡುವಂಥ ಯಾವ ವಿಷಯಗಳನ್ನು ಬರೆದಿಲ್ಲ. ಡ್ರಗ್ಸ್ ಸೇವಿಸುವ ಬಗ್ಗೆ ತಮಗೆ ತಿಳಿದೇ ಇಲ್ಲವೆಂದವರು ಸ್ಪಷ್ಟವಾಗಿ ತಿಳಿಸಿದರು. ಅವರು ಹೇಳುತ್ತಿರುವುದೆಲ್ಲ ಸತ್ಯವೆಂದು ಅವಿನಾಶನಿಗೆ ಮನದಟ್ಟಾಯಿತು. ಆತ ಒಂದು ನಿರ್ಧಾರಕ್ಕೆ ಬಂದ. ಲಾವಣ್ಯಳಿಗೆ ಸಂಬಂಧಿಸಿದ ಕೊಂಡಿ ಕೊಹಿಮಾದಲ್ಲಿಲ್ಲ. ಇಲ್ಲೇ ಇದೆ. ಪಾಂಡುರಂಗನ ಸಲುವಾಗಿ ಅವಳನ್ನು ಕೊಹಿಮಾಕ್ಕೆ ಕಳಿಸಲಾಗಿತ್ತು. ಅದಕ್ಕೆ ಕಾರಣ ಆಕೆಗೆ ಪಾಂಡುಂಗನ ಪರಿಚಯ ಮೊದಲೇ ಇರಬೇಕು. ತನ್ನ ಮುಂದಿನ ವಿಚಾರಣೆ

ಇಲ್ಲಿಂದಲೇ....ಅವಳ ಕಾಲೇಜು. ಅವಳ ಗೆಳತಿಯರು ರೂಮಿನ ಸುತ್ತಮುತ್ತಲು ಜನರು ಇವರೇ ಈ ವಿಷಯದಲ್ಲಿ ಸಹಾಯ ನೀಡಬಲ್ಲರು ಎಂದು ನಿರ್ಧಾರಕ್ಕೆ ಬಂದ.

ಜಗಪತಿರಾಯರನ್ನು ಹಿಡಿದಿಟ್ಟುಕೊಳ್ಳುವುದರಿಂದ ಯಾವ ಲಾಭವೂ ಇಲ್ಲವೆಂದು ಮನವರಿಕೆಯಾಗುತ್ತಿದ್ದಂತೆ ಕೊಹಿಮಾಕ್ಕೆ ಅವರನ್ನು ಕಳಿಸಿಕೊಟ್ಟ. ಡಲ್ಲಾ ಹೆಸರಿನಲ್ಲಿ ಪತ್ರವೊಂದನ್ನು ಬರೆದು ಅವರ ಕೈಯಲ್ಲಿ ಕೊಟ್ಟ. ಹನಿದುಂಬಿದ ಕಣ್ಣುಗಳಿಂದ ಜಗಪತಿರಾಯರು ಪಲ್ಲವಿ ತಲೆ ನೇವರಿಸಿ ನುಡಿದರು. "ಮಗಳೆ ನೀನು ಲಾವಣ್ಯಳ ಗೆಳತಿ ಅಂದ ಮೇಲೆ ನನಗೂ ಮಗಳಾದೆ. ಅವಳ ಬಗ್ಗೆ ತಿಳಿಸಿ ನಮಗೆ ದೊಡ್ಡ ಉಪಕಾರ ಮಾಡಿರುವಿ. ಕೊನೆಯ ಪಕ್ಷ ಅವಳ ಅಂತಿಮ ಸಮಯದಲ್ಲಾದರೂ ನಾವು ಹತ್ತಿರವಿರುವಂತಾಯಿತು. ನಿನಗೆ ದೇವರು ಒಳ್ಳೆಯದು ಮಾಡಲಿ...."

ಗದ್ಗದ ಕಂಠದಲ್ಲಿ ಬಿಕ್ಕುತ್ತ ಅವರು ನುಡಿದಾಗ ಪಲ್ಲವಿ ನೀರು ನೀರಾದಳು. ಅವಳ ಆತ್ಮ ಅವಳ ಮನಸ್ಸು ಅವಳನ್ನು ಧಿಕ್ಕರಿಸತೊಡಗಿತು. ಲಾವಣ್ಯಳ ಉಪಕಾರ ಚೀರಿ ಚೀರಿ ಅವಳನ್ನು ಎಚ್ಚರಿಸತೊಡಗಿತು. ತಾನು ಅವಿನಾಶನ ಮುಂದೆ ಏನೂ ಹೇಳಿಲ್ಲ. ಎಲ್ಲಾ ವಿಷಯ ಮುಚ್ಚಿಟ್ಟಿದ್ದೇನೆ.... ಒಂದೂ ಬಿಡದೇ ವಿಸ್ತಾರವಾಗಿ ತಿಳಿಸಿ ಬಿಡಬೇಕೆಂದು ನಿರ್ಧರಿಸಿಳು. ಮರುಕ್ಷಣ ಅಣ್ಣ ಅನೂಪನ ನೆನಪಾಯಿತು. ಇದರಲ್ಲಿ ಅವನು ಭಾಗೀದಾರ. ಅವನ ತಲೆಗೆ ಬರುತ್ತದಲ್ಲ. ಪೊಲೀಸರು ಹಿಡಿದುಕೊಂಡು ಹೋದರೆ ಮುಂದೆ ಗತಿಯೇನು ? ಮುಪ್ಪಿನ ತಂದೆ ತಾಯಿಗಳಿಗೆ ಆಸರೆ ಯಾರು ? ತನ್ನ ಮದುವೆ ಮಾಡಿ ಗಂಡನ ಮನೆಗೆ ಕಳಿಸುವವರು ಯಾರು ?....

ಇಬ್ಬಗೆಯಲ್ಲಿ ಸಿಲುಕಿ ನಂತರ ಪಲ್ಲವಿ ಕೊನೆಗೆ ಅವಿನಾಶನ ಮುಂದೆ ಸದ್ಯಕ್ಕೆ ಏನೂ ಹೇಳಬಾರದೆಂಬ ನಿರ್ಧಾರಕ್ಕೆ ಬಂದಳು. ಮನಸ್ಸು ಹಗುರವಾಯಿತು... ಅವಿನಾಶ ಅವಳನ್ನೇ ದಿಟ್ಟಿಸುತ್ತಿದ್ದ. ಅವಳ ಮುಖದ ಮೇಲೆ ಮೂಡುತ್ತಿರುವ ಕ್ಷಣಕ್ಷಣಕ್ಕೂ ಬದಲಾಗುತ್ತಿರುವ ಲಕ್ಷಣಗಳನ್ನು ಗಮನಿಸುತ್ತಿದ್ದ. ಮನದ ಮೂಲೆಯಲ್ಲಿ ಅವಳ ಬಗ್ಗೆ ಸಂಶಯ ಮೂಡಿತು. ಲಾವಣ್ಯಳ ಆಪ್ತಗೆಳತಿ ಪಲ್ಲವಿ. ಅವಳೆಲ್ಲ ವಿಷಯಗಳು ಇವಳಿಗೆ ಗೊತ್ತಿರಲೇ ಬೇಕು.

"ಪಲ್ಲವಿ"

"ಆಂ?" ಬೆಚ್ಚಿದ ಆಕೆ ಒಮ್ಮೆಲೆ ತಲೆ ಎತ್ತಿದಳು.

"ಹೂಂ. ಲ್ಯಾವಣ್ಯಳ ಬಗ್ಗೆ ನಿನಗೇನು ಗೊತ್ತಿದೆ ಎಲ್ಲಾ ಫಟಾಫಟ್ ಹೇಳು. ಒಂದೂ ಬಿಡದೇ"....

ಈಗಾಗಲೇ ನಾನು ತಮ್ಮ ಮುಂದೆ ಎಲ್ಲಾ ಕೇಳಿದ್ದೇನಲ್ಲ.

"ನಿಜ"

"ಮತ್ತೇನಿದೆ ಸರ್ ಕೇಳಲು?"

ಪಲ್ಲವಿ ಮಾತಿಗೆ ಅವಿನಾಶ ಅರ್ಥಪೂರ್ಣವಾಗಿ ನಕ್ಕು ಹೇಳಿದ.

"ಪಲ್ಲವಿ ನೀನಿನ್ನು ಚಿಕ್ಕವಳು ... ನನ್ನ ಮಾತಿನ ಅರ್ಥ ನಿನಗೇ ಆಗಲು ಇನ್ನೂ ಸ್ವಲ್ಪ ಸಮಯ ಬೇಕು"

ಪಲ್ಲವಿ ಪಿಳಪಿಳ ಕಣ್ಣು ಬಿಟ್ಟಳು ಅಷ್ಟೇ.

"ಒಬ್ಬ ವ್ಯಕ್ತಿ ತಾನು ಹೇಳಿದ್ದನ್ನು ಕನಿಷ್ಠ ಮೂರುಬಾರಿ ಬದಲಿಸುತ್ತಾನೆ ಠಾಣೆಯಲ್ಲಿ. ಕಂಪ್ಲೇಂಟ್ ಕೊಡುವ ಮುಂದೆ ಒಂದು, ವಿಚಾರಣೆ ಕಾಲದಲ್ಲಿ ಎರಡು. ಕೊನೆಗೆ ಮೂರನೇ ಬಾರಿ ನ್ಯಾಯಾಲಯದಲ್ಲಿ ಈ ಮೂರು ಸ್ಥಾನಗಳಲ್ಲಿ ಒಂದೇ ವ್ಯಕ್ತಿಯಿದ್ದರೂ ಸಹ ಅವನ ಹೇಳಿಕೆಗಳು ಮೂರು ಬಗೆಯಾಗಿರುತ್ತದೆ. ಕೆಲವೊಂದು ಬಾರಿ ಇನ್ನು ಹೆಚ್ಚು ಬಾರಿ ಆತ ನನ್ನ ಮಾತನ್ನು ಬದಲಾಯಿಸುತ್ತಾನೆ. ಈಗ ನೀನೇ ಹೇಳು. ಇಂಥವರನ್ನು ಕಟ್ಟಿಕೊಂಡು ನಾವು ಯಾವ ರೀತಿ ನಮ್ಮ ಕರ್ತವ್ಯ ನಿರ್ವಹಿಸಬೇಕು? ಹೇಗೆ ಇಂಥವರನ್ನು ನಂಬಬೇಕು?"

ಅವಿನಾಶನ ಮಾತಿನಲ್ಲಿಯೇ ಸತ್ಯಾಂಶ ಕಂಡುಕೊಂಡಳು ಪಲ್ಲವಿ.

ಒಂದು ನಿಮಿಷ ಬಿಟ್ಟು ಅವಿನಾಶ ಮತ್ತೆ ಕೇಳಿದ.

"ಈಗಲಾದರೂ ಹೇಳು. ಲಾವಣ್ಯಳ ಬಗ್ಗೆ ನಿನಗೇನು ತಿಳಿದಿದೆ? ನೀನು ಮೊದಲು ಹೇಳಿದ್ದು ಸುಳ್ಳು ಎಂದು ನಾನು ಹೇಳುವುದಿಲ್ಲ ...ಅದು ಅರ್ಧಸತ್ಯ....ಇನ್ನರ್ಧ ಸತ್ಯ ಇದೆ. ಅದಿನ್ನೂ ನಿನ್ನ ಬಾಯಿಯಿಂದ ಹೊರ ಬಂದಿಲ್ಲ.... ಅದನ್ನು ಹೊರ ಹಾಕು ಎಂದೆ.

ಪಲ್ಲವಿ ಮಾತನಾಡಲಿಲ್ಲ.

ಸರಿ ನಿನ್ನಿಷ್ಟ ಒತ್ತಾಯಿಸಲಾರೆ.... ಒಂದು ಮಾತು ಮಾತ್ರ ನೆನಪಿಡು,

ನಿನ್ನ ಮೌನ ಯಾರಿಗೂ ಒಳ್ಳೆಯದು ಮಾಡುವುದಿಲ್ಲ. ಏನಾದರೂ ಅನಿಷ್ಟ ಘಟಿಸಿದಾಗಲೇ ನೀನು ಬಾಯಿ ಬಿಡುತ್ತೀಯಾ.... ಅಷ್ಟರಲ್ಲಿ ಅನರ್ಥ ಘಟಿಸಿ ಹೋಗಿರುತ್ತದೆ....

ಅವಿನಾಶ್ ಕ್ಯಾಪ್ ಧರಿಸಿ ಹೊರಬಂದ.

ರಾತ್ರಿ ಒಂಭತ್ತಕ್ಕೆ ಸಮೀಪಿಸಿತ್ತು. ಠಾಣೆಗೆ ಹೋಗಿ ಕಾಗದ ಪತ್ರ ನೋಡಿ ಮನೆಗೆ ತೆರಳಿದರಾಯಿತು ಎಂದುಕೊಂಡವ ಮಧ್ಯದಾರಿಯಲ್ಲೇ ಜೀಪನ್ನು ಎಸ್. ಪಿ. ತಾರಾನಾಥರ ಮನೆಯತ್ತ ಹೊರಳಿಸಿದ. ಎಸ್. ಪಿ. ಸಾಹೇಬರು ತಮ್ಮ ಕೋಣೆಯಲ್ಲಿದ್ದರು. ಸೆಂಟ್ರಿಯಿಂದ ಒಳಗೆ ಹೇಳಿ ಕಳಿಸಿದ. ತಕ್ಷಣ ಒಳಗೆ ಬರಲು ಸೂಚನೆ ಬಂದಿತು.... ಒಳಗಡಿಯಿಟ್ಟು ಸೆಲ್ಯೂಟ್ ನೀಡಿ ಅವರ ಸೂಚನೆಯಂತೆ ಎದುರಿದ್ದ ಕುರ್ಚಿಯಲ್ಲಿ ಆಸೀನನಾದ. ಏನು ವಿಷಯ ಎಂದು ಕೇಳುವಂತೆ ಅವರತ್ತ ನೋಡಿದರು ತಾರಾನಾಥ್....

"ಸರ್ ದುಬಾಯಿಯಿಂದ ಲಾವಣ್ಯಳ ತಂದೆ ಬಂದಿದ್ದಾರೆ. ಜೊತೆಯಲ್ಲಿ ಅವಳ ತಾಯಿ ಸಹ ಇದ್ದಾರೆ... "

"ಹಾಂ.... ಲಾವಣ್ಯ ಅಂದರೆ ನರ್ಸ್ ತಾನೆ?"

"ಹಾಂ ಅವಳೇ ಸರ್" ಅವಿನಾಶ ತನ್ನ ವಿಚಾರಣೆ ಬಗ್ಗೆ ವಿವರ ನೀಡ ತೊಡಗಿದ.

"ಅವರೊಂದಿಗೆ ನಾನು ವಿಚಾರಿಸಿದೆ. ಪಾಪ, ಅವರಿಗೇನೂ ತಿಳಿಯದು. ದುಡ್ಡು ಮಾಡಬೇಕೆಂಬ ಆಶೆಯಿಂದ ದುಬಾಯಿಗೆ ಹೋಗಿ ಅಲ್ಲೇ ಸೆಟ್ಲ್ ಅವರು. ಮಗಳು ಹೆಂಡತಿ ಇಲ್ಲೇ ಉಳಿದರು. ಹೆಂಡತಿ ಹಳ್ಳಿಯಲ್ಲಿ ಉಳಿದರೆ ಮಗಳು ಕಾಲೇಜು ಹಾಸ್ಟೆಲ್ ಸೇರಿದಳು"

ನೋಡಿ ಏನಾಗಿದೆ ನಮ್ಮ ಸಂಸ್ಕೃತಿಗೆ.... ಹಣದ ಹಿಂದೆ ಓಡುತ್ತಿದ್ದಾರೆ. ಮನೆ ಮಠ ಹೆಂಡತಿ ಮಕ್ಕಳನ್ನು ಬಿಟ್ಟು ಹಣ ಗಳಿಸುತ್ತಾರೆ, ಆದರೆ ಸಂಸಾರದ ಸ್ವಾಸ್ಥ್ಯ ಕೆಡಿಸಿಕೊಳ್ಳುತ್ತಾರೆ.... ಜಗಪತಿರಾಯರದೇ ಉದಾಹರಣೆ ತೆಗೆದು ಕೊಳ್ಳಿ ಹಣವನ್ನು ಹೇರಳವಾಗಿ ಗಳಿಸಿದರು.... ಹೆಂಡತಿ ಮಗಳನ್ನು ಕಳೆದು ಕೊಂಡರು. ತಾವು ಗಳಿಸುವ ಹಣ ತಮ್ಮ ಮಗಳಿಗೆ ವಿಷವಾಗಿ ಪರಿಣಮಿಸುತ್ತ ದೆಂದು ಅವರು ಭಾವಿಸಿರಲಿಲ್ಲ"

"ನಿಜ ಸರ್.... ಇದು ಯಥಾರ್ಥ" ಗೊತ್ತಿದ್ದು ಗೊತ್ತಿದ್ದು ರಾತ್ರಿ

ಕಂಡ ಬಾವಿಗೆ ಹಗಲು ಬೀಳುತ್ತಿದ್ದಾರಲ್ಲ ಸರ್.... ದಿನನಿತ್ಯ ಭಾರತದ ನೂರಾರು ಜನ ದುಬಾಯಿಗೋ.... ಸ್ಟೇಟ್‌ಗೋ ಹೋಗುತ್ತಿದ್ದಾರೆ."

"ಇದು ಜೀವನ ಬದುಕಲು ದಾರಿ ಬೇಕಲ್ಲ"

ಅವಿನಾಶ್ ತಾರಾನಾಥರತ್ತ ನೋಡಿದ ಅಚ್ಚರಿಯಿಂದ.... ಅವರು ಮುಗುಳ್ನಕ್ಕರು.

ಅನುಭವದ ಮೂಸೆಯಿಂದ ಬಂದ ಮಾತುಗಳವು. ಚೊಕ್ಕಚಿನ್ನ ದಂತಹವು.

"ಅವಿನಾಶ್ ಪಲ್ಲವಿಯನ್ನು ಅಲುಗಾಡಿಸಬೇಕು. ಆಕೆಗೆ ಎಲ್ಲಾ ಗೊತ್ತಿದೆ.

"ನನಗೂ ಆ ಸಂಶಯವಿದೆ ಸರ್.... ಆದರೆ ಆಕೆ ಗುಟ್ಟು ಬಿಟ್ಟು ಕೊಡುತ್ತಿಲ್ಲ.

"ಅದಕ್ಕೆ ಕಾರಣವಿರಬೇಕು. ಅವಳ ಬಾಯಿಯಿಂದ ರಹಸ್ಯ ಹೊರಬೀಳ ದಂತೆ ವ್ಯವಸ್ಥೆ ಮಾಡಿರಬಹುದು ಅಥವಾ ಯಾವುದೋ ಭಯಾನಕ ಭವಿಷ್ಯದ ಕಲ್ಪನೆ ಮಾಡಿಕೊಂಡ ಆಕೆ ತಾನೇ ತನ್ನ ತುಟಿಗಳನ್ನು ಹೊಲಿದುಕೊಂಡಿರ ಬೇಕು.... ಅವಳ ಬಾಯಿ ಬಿಡಿಸುವುದು ನಿನ್ನ ಕೆಲಸ"

"ಓ. ಕೆ. ಸರ್"

"ಎನಿಥಿಂಗ್ ಮೋರ್"

"ನೋ ಸರ್"

"ಸೋ ಗುಡ್‌ಲಕ್...."

ಹೊರಡಲು ಅವರು ಆದೇಶ ನೀಡಿದ್ದರು. ಸ್ಪಷ್ಟವಾಗಿ ಹೇಳದಿದ್ದರೂ ಸ್ಪಷ್ಟವಾಗಿತ್ತು.... ಆದೇಶ.

ಅವರಿಗೆ ವಂದಿಸಿದ ಅವಿನಾಶ್ ಹೊರಗೆ ಬಂದ. ಅವನ ತಲೆಯಲ್ಲಿ ತಾರಾನಾಥರ ಮಾತುಗಳು ಪ್ರತಿಧ್ವನಿಸುತ್ತಿದ್ದವು. ಪಲ್ಲವಿ ಬಾಯಿ ಬಿಡದಿರಲು ಏನು ಕಾರಣವಿರಬಹುದು? ಲಾವಣ್ಯ ಪ್ರಾಣ ಸ್ನೇಹಿತೆ. ಆಕೆ ಸಂಕಟದಲ್ಲಿರು ವುದನ್ನು ಗಮನಿಸಿದ ಆಕೆ ತಾವಾಗಿಯೇ ಪೊಲೀಸ್ ಇಲಾಖೆ ಸಂಪರ್ಕಿಸಿದ್ದಾಳೆ. ಇದರಿಂದ ಆಕೆಗೆ ಲಾವಣ್ಯ ಜೀವ ಪ್ರಿಯವೆನಿಸಿದೆ. ಆದರೆ.... ಆದರೆ.... ತನ್ನ ಪ್ರಿಯ ಜೀವದ ಮೇಲೆ ಆಪತ್ತಿನ ಕಾರ್ಮೋಡ ಕವಿಯುವಂತೆ ಮಾಡಿದವರ

ಬಗ್ಗೆ ಏಕೆ ಬಾಯಿ ಬಿಡುತ್ತಿಲ್ಲ. ಅವಳಿಗೆ ಯಾರಿಂದ ಅಪಾಯವಿದೆ.... ಗಾಡಿ ನಡೆಸುತ್ತ ಆತ ಯೋಚಿಸತೊಡಗಿದ.

ಪಲ್ಲವಿ ಮನೆಯಲ್ಲಿರುವವರು ಅಣ್ಣ ಅನೂಪ, ತಾಯಿ ತಂದೆ.... ಅನೂಪನ ಒಂದು ಪಾನ್‌ಬೀಡಾ ಅಂಗಡಿಯಿದೆ. ತುಂಬಾ ಚೆನ್ನಾಗಿ ನಡೆಯುತ್ತಿದೆ. ಸಾವಿರಾರು ರೂಪಾಯಿಗಳ ವ್ಯಾಪಾರವಾಗುತ್ತಿದೆ ಎಂದಾತ ಕೇಳಿದ್ದ.... ಪ್ರತಿದಿನ ಸಾವಿರಾರು ರೂಪಾಯಿ.... ವಿದ್ಯುತ್ ಅಲೆಯೊಂದು ಹರಿದು ಹೋದ ಅನುಭವವಾಯಿತು ಅವಿನಾಶನಿಗೆ. ಗಾಡಿಯನ್ನು ರಸ್ತೆಯ ಪಕ್ಕಕ್ಕೆ ಮರದಡಿ ನಿಲ್ಲಿಸಿದ.... ಆಳವಾಗಿ ಆಲೋಚಿಸತೊಡಗಿದ.

ಒಂದು ಮಾಮೂಲಿ ಪಾನ ಅಂಗಡಿಯಿಂದ ಪ್ರತಿನಿತ್ಯ ಸಾವಿರಾರು ರೂಪಾಯಿಗಳ ಲಾಭ .. ದಿನನಿತ್ಯ ಸಾವಿರಾರು ರೂಪಾಯಿ ... ಹೇಗೆ? .. ಹೇಗೆ? ಒಂದು ಮಾಮೂಲಿ ಪಾನಬೀಡಾ ಅಂಗಡಿಯಿಂದ ಸಾವಿರಾರು ರೂಪಾಯಿ....

ನಿಧಾನವಾಗಿ ರಹಸ್ಯದ ಪರದೆ ಸರಿಯಲಾರಂಭಿಸಿತು.

ಅನುಪನ ಪಾನಬೀಡಾ ಅಂಗಡಿಯಲ್ಲಿದೆ ರಹಸ್ಯ.... ಆ ರಹಸ್ಯ ಹೊರಗೆಡವಿದರೆ ಖಂಡಿತವಾಗಿ ಲಾವಣ್ಯಳ ಬಾಯಿ ಬಿಡಿಸಲು ಸುಲಭವಾದೀತು.... ಇಲ್ಲಿಂದಲೇ ಲಾವಣ್ಯಳ ಕೇಸಿನ ಪರಿಶೋಧನೆ ಮುಂದುವರೆಸಲು ಆತ ನಿಶ್ಚಯಿಸಿದ. ತನ್ನ ಠಾಣೆಗೆ ಹೊರಡುವ ವಿಚಾರ ಕೈಬಿಟ್ಟು ಅನೂಪನ ಪಾನಬೀಡಾ ಅಂಗಡಿಯತ್ತ ಗಾಡಿ ಹೊರಡಿಸಿದ. ಗಾಂಧಿಚೌಕಿಗೆ ಬರುತ್ತಲೂ ಅಲ್ಲಲ್ಲಿ ಎರಡೆರಡು ಮೂರು ಮೂರು ಜನರಂತೆ ನಿಂತು ಗುಂಪಾಗಿ ಮಾತಾಡುತ್ತಿದ್ದ ಜನ ಪೊಲೀಸ್ ಇನ್ಸ್‌ಪೆಕ್ಟರ' ಅವಿನಾಶನನ್ನು ನೋಡುತ್ತಿದ್ದಂತೆ ಅವರ ನಾಲಿಗೆಗೆ ಲಕ್ವಾ ಹೊಡೆದಂತಾಯಿತು. ಹತ್ತಿರದಲ್ಲಿದ್ದ ಒಂದಿಬ್ಬರತ್ತ ಸನ್ನೆ ಮಾಡಿ ಕರೆದ. ಅವರು ಕೈಕಾಲುಗಳಲ್ಲಿ ನಡುಕ ಆರಂಭವಾಯಿತು. ಹೆದರುತ್ತ ಹೆದರುತ್ತ ಅವನ ಬಳಿ ಬಂದರು.

"ಅನುಪನ ಪಾನಬೀಡಾ ಅಂಗಡಿ ಯಾವುದು"

ಅವರಲ್ಲೊಬ್ಬ ಬೆರಳುಮಾಡಿ ಅಂಗಡಿಯೆಡೆ ತೋರಿಸಿದ. ಧ್ವನಿ ಅವನ ಬಾಯಿಂದ ಬರಲಿಲ್ಲ. ಅತ್ತ ಕಣ್ಣು ಹೊರಳಿಸುತ್ತಲು ಅವಿನಾಶ ಬೆಚ್ಚಿ

ಬಿದ್ದ.... ಅಂಗಡಿ ಬಾಗಿಲು ಮುರಿದು ಒಂದೆಡೆ" ಬಿದ್ದಿತ್ತು. ಎಷ್ಟೋ ಸಾಮಾನುಗಳು ಬೀದಿಗೆ ಬಂದು ಬಿದ್ದಿದ್ದವು.

"ಇದೆಲ್ಲಾ ಏನು?"

"ಗೊತ್ತಿಲ್ಲ ಸಾಹೇಬರೆ.... ಸಂಜೆ ಯಾರೋ ಬಂದು ಈ ಕೆಲಸ ಮಾಡಿ ಹೋದರು.

"ಅನುಪ ಇರಲಿಲ್ಲವೆ?"

"ಇಲ್ಲ.... ಆತ ಆಮೇಲೆ ಬಂದ"

"ಈಗ ಅವರೆಲ್ಲಿ"

"ಬಹುಶಃ ಕಂಪ್ಲೇಟು ಕೊಡಲು ಠಾಣೆಗೆ ಹೋಗಿರಬೇಕು ಸರ್. ಆತ ಹೋಗಿ ತುಂಬಾ ಹೊತ್ತಾಯಿತು...."

"ಇಮ್ರಾನ್ ಇಲ್ಲಿ ಬಂದಿದ್ದನೆ?"

"ಇಲ್ಲ"

"ಇದು ಅವನ ಅಂಗಡಿಯಲ್ಲವೇ?"

"ಅಲ್ಲ ಸರ್.... ಇದು ಅನುಪಮನ"

ಮುಂದೆ ಮಾತು ಬೆಳಸುವ ಗೋಜಿಗೆ ಹೋಗಲಿಲ್ಲ ಅವಿನಾಶ್....

ಗಾಂಧೀಚೌಕ ಠಾಣೆಯತ್ತ ನಡೆದ.... ಠಾಣೆಯೆದುರು ಗಾಡಿ ನಿಲ್ಲಿಸುತ್ತಿದ್ದಂತೆ ಒಂದು ಕ್ಷಣ ಬೆಚ್ಚಿದ. ಠಾಣೆ ಮುಂದೆ ವಿಪರೀತ ಜನ. ಪೊಲೀಸ್ ಸಿಬ್ಬಂದಿ ಸಹ ಸ್ತಬ್ಧರಾಗಿ ನಿಂತಿದ್ದರು. ತಮ್ಮ ಉಚ್ಚ ಅಧಿಕಾರಿ ತಮ್ಮೆದುರೇ ಗಾಡಿಯಿಳಿದು ತಮ್ಮತ್ತ ಬರುತ್ತಿದ್ದಾನೆಂಬ ಕಲ್ಪನೆ ಸಹ ಇರಲಿಲ್ಲ ಅವರಿಗೆ.... ಅವರನ್ನು ಸರಿಸುತ್ತ ಒಳಗಡಿಯಿಟ್ಟ. ಒಳಗಡೆ ಯುದ್ಧ ಸಿಡಿದಿತ್ತು.

ಇಬ್ಬರು ತರುಣರ ಮಧ್ಯೆ....ಅವರಿಬ್ಬರೂ ಹಸಿದ ತೋಳಗಳಂತೆ ಒಬ್ಬರ ಮೇಲೆ ಒಬ್ಬರು ಬಿದ್ದು ಹರಿದು ತಿನ್ನಲು ಹರಿಹಾಯುತ್ತಿದ್ದರು. ಅವರಿಬ್ಬರನ್ನು ತಡೆಯುವ ಧೈರ್ಯ ಸಹ ಯಾರಲ್ಲಿಯೂ ಇದ್ದಂತೆ ಕಾಣಲಿಲ್ಲ. ನೋಡ ನೋಡುತ್ತಿದ್ದಂತೆ ಒಬ್ಬ ತರುಣನ ಕೈಯಲ್ಲಿ ಚೂರಿ ಕಾಣಿಸಿಕೊಂಡಿತು. ಆತ ಗಾಯಗೊಂಡ ಹುಲಿಯಂತೆ ಗುಡುಗಿದ.

"ಅನೂಪ.... ಬೀದಿಯಲ್ಲಿ ಬಿದ್ದವನನ್ನು ತಂದು ಸಿಂಹಾಸನದ ಮೇಲೆ ತಂದು ಕೂಡಿಸಿದ್ದಕ್ಕೆ ಚೆನ್ನಾಗಿ ಪ್ರತ್ಯುಪಕಾರ ಮಾಡಿದೆ.... ನಿನ್ನ ಬಿಡುವುದಿಲ್ಲ."

"ಬಾಯಿ ಮುಚ್ಚು ಇಮ್ರಾನ್. ನನಗೆ ಉಪಕಾರ ಮಾಡುವ ಸೋಗಿನಲ್ಲಿ ನಿನ್ನಂಥ ನೀಚ ಕೆಲಸ ಮಾಡುತ್ತ ಬಂದಯೆಂದು ನಿನ್ನಿಂದಾಗಿಯೇ ನಾನು ಅಧಃಪತನಕ್ಕಿಳಿದೆ. ನೀನು ನೀಡಿದ ವಿಷವನ್ನೇ ಅಮೃತವೆಂದು ಕುಡಿದೆ. ನಿನ್ನ ನಾ ಬಿಡಲಾರೆ...."

ಮತ್ತೆ ಇಬ್ಬರೂ ಒಬ್ಬರ ಮೇಲೆ ಒಬ್ಬರು ಬಿದ್ದರು.

ಇಮ್ರಾನನ ಕೈಯಲ್ಲ ಚೂರಿ.... ಅನೂಪ ಖಾಲಿ ಕೈಯಲ್ಲಿದ್ದ.

ಒಂದೇ ಒಂದು ನಿಮಿಷದಲ್ಲಿ ಇಮ್ರಾನನ ಕೈಯಲ್ಲಿದ್ದ ಚೂರಿ ಗಾಳಿಯಲ್ಲಿ ಹಾರಿತು. ಒಂದೆರಡು ಸೆಕೆಂಡು ಮಿಂಚು ಹೊಡೆದಂತಾಯಿತು. ಲೈಟಿನ ಬೆಳಕಿನಲ್ಲಿ ಚೂರಿ ಫಳಫಳ ಹೊಳೆದು ಕೋರೈಸಿತು. ಅನೂಪ ಚೀರಿ ಕೊಂಡ.... ಚೂರಿ ಅವನ ರೆಟ್ಟೆ ಸವರಿಕೊಂಡು ಹೋಗಿತ್ತು. ಅನುಪ ಚೀರಿಕೊಂಡ ಗಂಟಲು ಹರಿಯುವಂತೆ.

ಇಮ್ರಾನ್ ಗಾಬರಿಯಾಗಿ ಒಮ್ಮೆ ಅನುಪನತ್ತ ಒಮ್ಮೆ ಕೈಯಲ್ಲಿದ್ದ ಚೂರಿಯತ್ತ ನೋಡಿದ ಚೂರಿಯಿಂದ ಹನಿಹನಿಯಾಗಿ ರಕ್ತ ಒಸರುತ್ತಿದ್ದಂತೆ ಚೂರಿಯನ್ನೆಸೆದು ಆತ ಎದುರು ನಿಂತವರನ್ನು ದೂಡುತ್ತಾ ಹೊರಗೋಡಿದ. ಇನ್ನೊಂದು ಕಡೆಯಿಂದ ಅನೂಪ ನರಳುತ್ತ ಚೀರುತ್ತ ಏಳುತ್ತ ಪಲಾಯನ ಮಾಡಿದ.

ಅವಿನಾಶ ಸಹ ಅವನ ಹಿಂದೆಯೇ ಧಾವಿಸಿದ.

ಇಮ್ರಾನ್ ಯಾವ ಕಡೆಗೆ ಹೋದ ಎಂಬುದು ತಿಳಿಯಲಿಲ್ಲ. ಅವನ ಮನೆ, ವಿಳಾಸ ಯಾವುದರ ಬಗ್ಗೆಯು ಅವಿನಾಶ ಅರಿತಿರಲಿಲ್ಲ. ಅವನ ಹಿಂದೆ ಬೀಳುವುದರ ಬದಲು ಅನೂಪನನ್ನು ಹುಡುಕಿಕೊಂಡು ಹೋಗುವುದೇ ಸೂಕ್ತ ಎಂದು ಭಾವಿಸಿದ. ಅನೂಪನ ಅಂಗಡಿಯಂತೂ ನಾಶವಾಗಿ ಹೋಗಿತ್ತು. ಇಮ್ರಾನ್ ನಿಂದಾಗಿ ಆತ ಗಾಯಗೊಂಡಿದ್ದ. ಜೀವಕ್ಕೆ ಅಪಾಯವಿತ್ತು. ಆತ ಹೋದರೆ ಯಾವುದಾದರೂ ಆಸ್ಪತ್ರೆಗೆ ಇಲ್ಲವೆ ಮನೆಗೆ.

ದಾರಿಯಲ್ಲ ಕಣ್ಣಿಗೆ ಬಿದ್ದ ಆಸ್ಪತ್ರೆ ಹೊಕ್ಕು ರಸ್ತೆಯಲ್ಲಿ ನಡೆದ. ಎಲ್ಲಿಯೂ ಅನೂಪನ ಸುಳಿವು ಸಿಗಲಿಲ್ಲ. ಇನ್ನು ಉಳಿದದ್ದು ಮನೆ, ಆತ ಇರಲೇಬೇಕಲ್ಲ.

ಮನೆ ಮುಂದೆ ಗಾಡಿ ನಿಲ್ಲಿಸುತ್ತಿದ್ದಂತೆ ಒಂದೆರಡು ಕಡೆ ರಕ್ತದ ಹನಿಗಳು

ಬಿದ್ದಿದ್ದು ಕಂಡು ಅವನ ತುಟಿಗಳು ಗೋಲವಾದವು. ಅವನ ಬೇಟಿ ಮನೆಯಲ್ಲೇ ಇತ್ತು. ಮುಚ್ಚಿದ ಬಾಗಿಲು ಬಾರಿಸಿದ. ಎಷ್ಟೋ ಹೊತ್ತಿನ ನಂತರ ಅನೂಪನ ತಾಯಿ ಬಾಗಿಲು ತೆರೆದರು. ಅವರೊಂದಿಗೆ ಒಂದೂ ಮಾತು ಆಡದೆ ನೇರವಾಗಿ ಪಲ್ಲವಿ ಬೆಡ್‌ರೂಂಗೆ ಬಂದ ಅವಿನಾಶ. ಬಾಗಿಲಿಗೇ ನಿಂತಿದ್ದಳು. ಪಲ್ಲವಿ ಮುಖ ಮೇಣದಂತೆ ಬಿಳುಚಿಕೊಂಡಿತ್ತು. ಕಣ್ಣಲ್ಲಿ ನೀರು ತುಳುಕಾಡುತ್ತಿತ್ತು. ಅವಿನಾಶನತ್ತ ನೋಡುತ್ತ ದುಃಖದ ಕಟ್ಟೆಯೊಡೆದು ಆಕೆ ಅಳಲಾರಂಭಿಸಿದಳು. ಅವಿನಾಶ ಅವಳ ಬೆನ್ನು ಸವರಿ ತಲೆನೇವರಿಸಿ ಸಮಾಧಾನ ಮಾಡಿ ಕೇಳಿದ.... "ಪಲ್ಲವಿ....ಹೇಳು ಅನೂಪ ಎಲ್ಲಿ ?"

# 11

ಕಣ್ಣೀರ ಕೋಡಿ ಹರಿಸುತ್ತ ಬಿಕ್ಕಿ ಬಿಕ್ಕಿ ಅಳುತ್ತಿದ್ದ ಪಲ್ಲವಿಯ ಬಾಯಿಯಿಂದ ಮಾತು ಹೊರಡುತ್ತಿಲ್ಲ. ದುಃಖದಿಂದಾಗಿ ಅವಳ ಗಂಟಲು ಬಿಗಿಯುತ್ತಿತ್ತು. ಅವಿನಾಶ ಅವಳ ನೆತ್ತಿ....ಬೆನ್ನು ನೇವರಿಸಿ ಸಮಾಧಾನ ಮಾಡುತ್ತ ತಿಳಿ ಹೇಳಿದ.

"ಪಲ್ಲವಿ ಕೆಟ್ಟ ಕಾರ್ಯಗಳ ಪರಿಣಾಮ ಯಾವಾಗಲೂ ಕೆಟ್ಟದ್ದೇ ಆಗಿರುತ್ತದೆ....ಜಾಲಿಯ ಗಿಡ ನೆಟ್ಟು ಮಾವಿನ ಹಣ್ಣು ಬೇಕೆಂದರೆ ಅದು ಸಾಧ್ಯವೆ ? ಅದರಂತೆ ಅನೂಪ ಆತ ನಿನ್ನ ಅಣ್ಣನಿರಬಹುದು. ತಪ್ಪುಗಾರನಾಗಿದ್ದಾನೆ ಸಮಾಜದ ದೃಷ್ಟಿಯಲ್ಲಿ ಆತ ಅಪರಾಧಿ....ಅವನಿಗೆ ಶಿಕ್ಷೆ ಆಗಲೇಬೇಕು. ಅವನಿಂದ ಯಾರಾದರೂ ಕೆಟ್ಟ ಕೆಲಸ ಮಾಡಿಸುತ್ತಿದ್ದಾರೋ ಅಥವಾ ಅವನೇ ಸ್ವಯಂಪ್ರೇರಣೆಯಿಂದ ತಪ್ಪುದಾರಿಯಲ್ಲಿ ಸಾಗುತ್ತಿದ್ದಾನೋ ತಿಳಿಯದು. ಒಂದು ಮಾತಂತೂ ಸ್ಪಷ್ಟವಾಗಿದೆ. ಇಮ್ರಾನ್ ಅವನ ವೈರಿಯಾಗಿದ್ದಾನೆ. ಇಮ್ರಾನ್ ಎಂಥವ ಅನ್ನುವದು ಪೊಲೀಸ್ ಇಲಾಖೆಗೆ ತಿಳಿದ ವಿಷಯ. ಅವನಿಗೆ ಮೋಸ ಮಾಡಿ ನಿನ್ನಣ್ಣ ಅನೂಪ ತಿರುಗುತ್ತಿದ್ದಾನೆ. ಅದು ನಮಗೆ ತಿಳಿದರೆ ನಾವು ಅವನ ರಕ್ಷಣೆ ಖಂಡಿತ ಮಾಡುತ್ತೇವೆ. ಒಂದು.... ಏನೆಂಬುದು ನಮಗೆ ಮೊದಲೇ ತಿಳಿಯಬೇಕು....ಅವರ ಬದಲು ಒಂದು ವೇಳೆ

ಇಮ್ರಾನನ ಕೈಗೇ ಆತ ಸಿಕ್ಕಿಕೊಂಡರೆ ಏನಾಗುತ್ತದೋ ಹೇಳಲಿಕ್ಕಾಗದು. ನಾವು ಅವನ ರಕ್ಷಣೆಯನ್ನು ಮಾಡಲಾರೆವು....

"ಅಯ್ಯೋ....ಹಾಗೆನ್ನಬೇಡಿ....ನನ್ನಣ್ಣನ ರಕ್ಷಣೆ ಮಾಡಿ....ಇಮ್ರಾನ್ ಮಹಾನೀಚ."

"ಅದು ನನಗೆ ಗೊತ್ತು."

"ಅವನೇ ನನ್ನಣ್ಣನನ್ನು ಅಡ್ಡದಾರಿಗೆಳೆದವನು"

"ಅದು ನಿಜವಾಗಿದ್ದರೆ ಮೊದಲು ಅನೂಪನೆಲ್ಲಿ ಎಂದು ಹೇಳು ಅವನಿಗೆ ಗಾಯವಾಗಿದೆ ಉಪಚಾರದ ಅವಶ್ಯಕತೆಯಿದೆ. ನಂತರ ಎಲ್ಲಾ ವಿಷಯ ನನ್ನ ಮುಂದೆ ಹೇಳುವಿಯಂತೆ"

ಮೌನವಾಗಿ ತಲೆಯಾಡಿಸಿದ ಪಲ್ಲವಿ ಮೇಲೆದ್ದು ಒಳನಡೆದಳು.

ಅವಿನಾಶ ಅವಳನ್ನು ಹಿಂಬಾಲಿಸಿದ.

ಕಾಟಿನ ಮೇಲೆ ಒಂದೆಡೆ ಮುದ್ದೆಯಾಗಿ ಕುಳಿತಿದ್ದ ಅನೂಪ ಬೇಡಿ ಕೊಂಡ.

"ನಾನೇನೂ ಮಾಡಿಲ್ಲ....ನನ್ನದೇನೂ ತಪ್ಪಿಲ್ಲ"

"ಅದು ಗೊತ್ತಿದೆ ಅನೂಪ ಅದಕ್ಕೆಂದೇ ನಿನ್ನನ್ನು ಹುಡುಕಿಕೊಂಡು ಬಂದಿರುವೆ....ನನ್ನ ಮಾತು ಕೇಳು ನಿನ್ನ ಒಳಿತಿಗಾಗಿಯೇ ಹೇಳುತ್ತಿರುವೆ.... ನನ್ನ ಜೊತೆಗೆ ಬಾ...."

"ಅಣ್ಣಾ ...ಅವರು ಹೇಳಿದಂತೆ ಕೇಳು ಇದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ" ಬಾಗಿಲಿಗೆ ಬಂದು ನಿಂತ ಅಮ್ಮ ಅನೂಪನತ್ತ ನೋಡಿ ಹೇಳಿದರು.

"ನಾನು ನಿನಗೆ ಮೊದಲೆ ಹೇಳಿದ್ದೆ....ಪಾಪದ ಹಣ....ಪಾಪದ ಬುತ್ತಿ ಬಹಳ ದಿನ ನಡೆಯಲಾರದು ಎಂದು....ನಿನ್ನ ಕರ್ಮಗಳಿಗೆ ತಕ್ಕ ಶಿಕ್ಷೆ ಅನುಭವಿಸಿ ಬಾ....ಮುಂದಿನ ಜೀವನವಾದರೂ ಸುಖದಿಂದ ಸಾಗೀತು.

ಅನೂಪನಿಗೆ ಎರಡನೇ ದಾರಿ ಇರಲಿಲ್ಲ. ಅದರೊಂದಿಗೆ ತನ್ನ ತಪ್ಪಿನ ಅರಿವೂ ಆಗಿತ್ತು. ಹೀಗಾಗಿ ತೆಪ್ಪಗೆ ಮೇಲೆದ್ದ....ಅವಿನಾಶನನ್ನ ಹಿಂಬಾಲಿಸಿದ.

"ಪಲ್ಲವೀ....ನೀನೂ ಬಾ" ಆತ್ಮೀಯತೆಯಿಂದ ಕರೆದ ಅವಿನಾಶ... ಅವನ ಧ್ವನಿಯಲ್ಲಿ ದರ್ಪವಿರಲಿಲ್ಲ. ಕಾಠಿಣ್ಯವಿರಲಿಲ್ಲ. ಇನ್ಸ್‌ಪೆಕ್ಟರನ ಬದಲು ಓರ್ವ ಹಿರಿಯನ ಮೃದುತ್ವ ಅದರಲ್ಲಿತ್ತು."

"ಪಲ್ಲವಿ ಹೋಗು" ತಾಯಿ ಒಪ್ಪಿಗೆ ನೀಡಿದರು.

ಅವಿನಾಶನ ಜೀಪು ಮೊದಲು ಸರಕಾರಿ ಆಸ್ಪತ್ರೆಯೆದುರು ನಿಂತಿತು. "ನಾನು ಬರುವವರೆಗೆ ನೀವು ಇಲ್ಲೇ ಇರಿ" ಎಂದು ಹೇಳಿ ಒಳಗೆ ಹೋದ ಅವಿನಾಶ ಹತ್ತು ಹದಿನೈದು ನಿಮಿಷಗಳಲ್ಲಿ ಬಂದ. ಜೊತೆಯಲ್ಲಿ ಸ್ಟ್ರೆಚರ್.... ಇಬ್ಬರು ಅದರಲ್ಲಿ ಅನೂಪನನ್ನು ಮಲಗಿಸಿ ಎತ್ತಿ ಒಳಗೆ ಒಯ್ದರು... ಪಲ್ಲವಿ ಅವಿನಾಶ ಅವರ ಹಿಂದೆ ಸಾಗಿದರು.

ಅರ್ಧಗಂಟೆ ಕಳೆಯುವಷ್ಟರಲ್ಲಿ ಅನೂಪನಿಗೆ ಚಿಕಿತ್ಸೆ ದೊರಕಿತು. ಗಾಯ ತೊಳೆದು ಮದ್ದು ಸವರಿ ಪಟ್ಟಿ ಹಾಕಿದ ಡಾಕ್ಟರ್ ಹೊರಬಂದು ಅವಿನಾಶನತ್ತ ಹೊರಳಿ ಗಾಯ ಆಳವಾಗಿಲ್ಲ. ಆದರೂ ಎರಡು ಮೂರು ದಿವಸ ಆಸ್ಪತ್ರೆಯಲ್ಲಿರುವದು ವಾಸಿ ಎಂದನು. ಅವಿನಾಶ ಒಪ್ಪಿ ತಲೆಯಾಡಿಸಿದ. ಪೋಲೀಸ್ ಕಸ್ಟಡಿಯಲ್ಲಿ ಅನೂಪನನ್ನು ಸ್ಪೇಷಲ್ ರೂಮಿಗೆ ಸೇರಿಸಿದರು. ಠಾಣೆಗೆ ಫೋನು ಮಾಡಿ ಇಬ್ಬರು ಕಾನ್‌ಸ್ಟೇಬಲ್‌ರನ್ನು ಕರೆಸಿದ ಅವಿನಾಶ. ಒಬ್ಬನ ಡ್ಯೂಟಿ ಆಸ್ಪತ್ರೆ ಹೊರಗೆ. ಇನ್ನೊಬ್ಬ ಅನೂಪನ ರೂಮಿನ ಬಾಗಿಲಿಗೆ. ಇದೆಲ್ಲವನ್ನು ಪಲ್ಲವಿ ಗಮನಿಸಿದಳು. ಅನೂಪನಿಗೆ ಇನ್ನು ಭಯವಿಲ್ಲ ಎನಿಸಿತು. ಅವಿನಾಶನ ಬಗ್ಗೆ ಮೆಚ್ಚುಗೆ ಮೂಡಿತು.

"ನನಗೆ ಗೊತ್ತು ಪಲ್ಲವಿ .. ನೀನೀಗ ಎಲ್ಲವನ್ನು ಸವಿಸ್ತಾರವಾಗಿ ಹೇಳಲು ಸಿದ್ಧವಾಗಿದ್ದೀಯಾ ಅಂತ....ಅದಕ್ಕೂ ಮೊದಲು ನನಗೆ ಹಸಿವೆಯಾಗಿದೆ. ನಿನಗೂ ಆಗಿರಲು ಸಾಕು....ಅನೂಪ ಸಹ ಏನು ತಿಂದಿರಲಿಕ್ಕಿಲ್ಲ. ಮೊದಲು "ಪೇಟ್ ಪೂಜೆ" ಮಾಡಿಕೊಳ್ಳೋಣ ನಂತರ ಮಿಕ್ಕಿದ ವಿಷಯ.

ಪಲ್ಲವಿ ಕಣ್ಣುಗಳಲ್ಲಿ ನೀರು ಕಾಣಿಸಿತು.

ಪೋಲೀಸ್ ಅಧಿಕಾರಿಗಳೆಂದರೆ ದುಷ್ಟರು....ಕರುಣೆಯಿಲ್ಲದವರು ನೀಚರು ಎಂದು ತಿಳಿದಿದ್ದ ಅವಳಿಗೆ ಹೊಸ ರೂಪದ ಪೋಲೀಸ್ ಅಧಿಕಾರಿಯ ಪರಿಚಯವಾಗಿತ್ತು. ಎಲ್ಲಾ ಪೋಲೀಸ್ ಅಧಿಕಾರಿಗಳು ಒಂದೇ

ಬಗೆಯಾಗಿರುವುದಿಲ್ಲ ಎಂದು ತಿಳಿಯಿತು..." ದೇವರೇ ಎಲ್ಲಾ ಪೊಲೀಸ್ ಅಧಿಕಾರಿಗಳು ಅವಿನಾಶನಂತೇ ಇರಬಾರದೆ ? ಎಂದುಕೊಂಡಳು ಮನದಲ್ಲಿ.

ರಾತ್ರಿ ಹನ್ನೊಂದು ಸಮೀಪಿಸಿತು.

ಅವಿನಾಶನ ಅಪ್ಪಣೆ ಮೇರೆಗೆ ಮೂರು ಜನರಿಗೆ ಅಲ್ಲಿಯೇ ಊಟ ಬಂದಿತು.

"ಸಂಕೋಚವಿಲ್ಲದೆ ಊಟ ಮಾಡಿ....ಹೊಟ್ಟೆ ತುಂಬ" ಅವಿನಾಶ ನಗುತ್ತ ಹೇಳಿದ. ಅನೂಪ ಕೃತಜ್ಞತೆಯಿಂದ ಅವಿನಾಶನೆಡೆ ನೋಡಿ ನುಡಿದ "ನಾನು ತಪ್ಪು ಮಾಡಿದೆ ಸರ್....ಮೊದಲೇ ನಿಮ್ಮ ಬಳಿ ಬರಬೇಕಾಗಿತ್ತು."

"ಮತ್ತೇಕೆ ಬರಲಿಲ್ಲ ?"

"ಬಂದರೆ ದೊರಕುವ ಯಮಹಿಂಸೆ ನೆನೆದು ಭಯವಾಯಿತು"

"ಯಮಹಿಂಸೆಯ ಭಯವಾದರೆ ಇಂಥ ಕೆಲಸವನ್ನೇಕೆ ಮಾಡಬೇಕು ?"

ಅನೂಪನ ಬಾಯಿಯಿಂದ ಮಾತು ಹೊರಡಲಿಲ್ಲ. ಅವಿನಾಶ ಮುಗುಳ್ನಕ್ಕ.

"ನೀನು ಸಭ್ಯ....ನಿನ್ನಂತೆ ಎಲ್ಲರೂ ಸಭ್ಯರಿರುವುದಿಲ್ಲ ಅನೂಪ....ನೀನು ಬಡವ. ಸುಸಂಸ್ಕೃತ ಮನೆತನದಿಂದ ಬಂದವನು. ಹೀಗಾಗಿ ನಿನಗೆ ನಿನ್ನ ತಪ್ಪಿನ ಅರಿವು ಬೇಗ ಆಗಿದೆ....ಪಶ್ಚಾತ್ತಾಪದ ಅನುಭವವಾದ ನೀನು ನಿನ್ನೆಲ್ಲ ತಪ್ಪು ಒಪ್ಪಿಕೊಳ್ಳಲು ಮುಂದೆ ಬಂದಿರುವೆ....ಆದರೆ ಒಂದು ಮಾತು ನೆನಪಿಡು....ಎಲ್ಲ ಅಪರಾಧಿಗಳೂ ನಿನ್ನಂತೆಯೇ ಇರುವುದಿಲ್ಲ....ಅವರಿಗೆ ಯಮಹಿಂಸೆ ನೀಡದಿದ್ದರೆ ನಡೆಯಲಾರದು....ಅವರನ್ನು ಮೆತ್ತಗೆ ಮಾಡಿದ ಮೇಲೆಯೇ ಸರಿ ದಾರಿಗೆ ತರಬೇಕಾಗುತ್ತದೆ. ಒಂದು ಪಕ್ಷ ಹಾಗೆ ಮಾಡದಿದ್ದರೆ ಅವರೇ ನಮ್ಮನ್ನು ಮೆತ್ತಗೆ ಮಾಡುತ್ತಾರೆ....ತಿಳಿಯಿತಾ ?

ಅನೂಪ ತಲೆಕೆಳಗೆ ಹಾಕಿದ.

"ಹೂಂ....ಊಟ ಮಾಡಿ....ಎಲ್ಲಾ ಆರಿ ಹೋಗುತ್ತಿದೆ" ಒತ್ತಾಯದ ಅಪ್ಯಾಯಮಾನವಾದ ಆದೇಶ....ಪಲ್ಲವಿ ಎದ್ದು ಕೈ ತೊಳೆದು ಬಂದಳು. ಅನೂಪ ಸಹ....

ಮೂವರೂ ಊಟ ಮಾಡಿ ಕೈತೊಳೆದುಕೊಂಡು ಬಂದರು....

ಅವಿನಾಶನತ್ತ ನೋಡಿದ ಪಲ್ಲವಿ ಹೇಳಲಾರಂಭಿಸಿದಳು. ಒಂದೂ ವಿಷಯ ಬಿಡದೆ.

ಹದಿನೈದು ಇಪ್ಪತ್ತು ನಿಮಿಷಗಳ ಕಾಲ ಹೇಳುತ್ತಿದ್ದ ಅವಳ ಮಾತುಗಳನ್ನು ಶಾಂತವಾಗಿ ಕೇಳುತ್ತಿದ್ದ ಅನೂಪ ಅವಳ ಮಾತು ಮುಗಿಯುತ್ತಿದ್ದಂತೆ ವಿಷದ ಪೂತ್ಕಾರ ಹೊರತೆಗೆದು ನುಡಿದ.

"ಪಲ್ಲವಿ ನಾನವನನ್ನು ಜೀವಂತ ಬಿಡುವುದಿಲ್ಲ....ನಾನವನನ್ನು ಬಿಡುವುದಿಲ್ಲ"

"ಏಕೆ ? ಏಕೆ ?"

"ನನ್ನನ್ನು ಹಾಳು ಮಾಡುವುದಲ್ಲದೆ ನಿನ್ನನ್ನು....ನಿನ್ನನ್ನು....ಮತ್ತೆ.... ಮತ್ತೆ"

ಆತ ದುಃಖ ತಾಳಲಾರದೇ ಅಳತೊಡಗಿದ....ಪಲ್ಲವಿ ಸಮಾಧಾನ ಮಾಡಿದಳು.

"ನೀನು ಪಾಪದ ದಾರಿಯಲ್ಲಿ ಸಾಗುವ ಮುನ್ನ ಇದರ ಬಗ್ಗೆ ಯೋಚಿಸ ಬೇಕಾಗಿತ್ತು. ಈಗ ಸಮಯ ಮೀರಿ ಹೋಗಿದೆ"

"ನನಗಿದರ ಬಗ್ಗೆ ಕಲ್ಪನೆ ಬರಲಿಲ್ಲ"

"ಅನೂಪ ನೀನೇನೂ ಹಸುಗೂಸಲ್ಲ ಈ ಮಾತು ಹೇಳಲು ಇಪ್ಪತ್ತಾರು ವರ್ಷಗಳ ಯುವಕ. ನಿನಗೆ ಮೋಸ ಮಾಡಿ ಪುಸಲಾಯಿಸಿ ದಾರಿ ತಪ್ಪಿಸಲಾರರು. ಒಂದು ಪಾನ ಬೀಡಾಕ್ಕೆ ಐವತ್ತು....ನೂರು ರೂಪಾಯಿ ಎಂದು ತಿಳಿದಾಗಲೇ ನೀನದರ ಬಗ್ಗೆ ತಿಳಿದುಕೊಂಡಿರುವೆ ಈಗದರ ಬಗ್ಗೆ ಅನಭಿಜ್ಞತೆ ವ್ಯಕ್ತಪಡಿಸುವದು ಸಾಧ್ಯವಿಲ್ಲ."

ಅನೂಪ ಮುಂದೆ ಮಾತನಾಡಲಿಲ್ಲ....ಮೌನವಾಗಿ ನೆಲದಲ್ಲಿ ಮುಖ ಮುಚ್ಚಿ ಹುದುಗಿಸಿದ. ಅವಿನಾಶ ಪಲ್ಲವಿಯೆಡೆ ಪ್ರಶಂಶಾತ್ಮಕ-ದೃಷ್ಟಿ ಬೀರಿ ಅನೂಪನತ್ತ ಹೊರಳಿದ.

"ಅನೂಪ ನಿನಗೆ ನಿನ್ನ ಕಾಯಕದ ಅರಿವಿಲ್ಲ. ನೂರಾರು ಸಾವಿರಾರು ಯುವಕ ಯುವತಿಯರನ್ನು ನೀನು ನರಕದ ದಾರಿಗೆ ತಳ್ಳಿರುವೆ. ಅವರ ತಂದೆ ತಾಯಿಗಳು ತಮ್ಮ ಮಕ್ಕಳ ಬಗ್ಗೆ ಕಟ್ಟಿಕೊಂಡಿದ್ದ ಸುಂದರ ಕನಸುಗಳನ್ನು ಭಗ್ನಗೊಳಿಸಿರುವೆ. ಲಾವಣ್ಯಳಂತೆ ಎಷ್ಟೋ ಹುಡುಗಿಯರು ಬೀದಿಗೆ

ಬಂದಿದ್ದಾರೆ. ಒಂದು ಮಾತಿನ ಬಗ್ಗೆ ಯೋಚಿಸು....ಒಂದು ವೇಳೆ.... ಲಾವಣ್ಯಳ ಬದಲು ನಿನ್ನ ತಂಗಿ ಪಲ್ಲವಿಯ ಮೇಲೆ ಈ ರೀತಿ.

"ಸ್ಟಾಪ್....ಸ್ಟಾಪ್ ಇನ್ಸ್‌ಪೆಕ್ಟರ್....ಮುಂದೆ ಮಾತನಾಡಬೇಡಿ ನನಗೆ ಕೇಳುವ ಧೈರ್ಯವಿಲ್ಲ. ನಾನು ಮಾಡಿದ ಪಾಪಕಾರ್ಯದ ಬಗ್ಗೆ ನನಗೆ ಪಶ್ಚಾತ್ತಾಪವಾಗಿದೆ"

"ಕೇವಲ ಪಶ್ಚಾತ್ತಾಪದಿಂದ ಮನಸ್ಸು ಶುದ್ಧವಾಗಲಾರದು ಅನೂಪ. ಅದಕ್ಕಾಗಿ ತ್ಯಾಗ ಅಥವಾ ಬಲಿದಾನಕ್ಕೂ ಸಿದ್ಧರಾಗಬೇಕಾಗುತ್ತದೆ.

"ಹೇಳಿ ನಾನು ಯಾವ ಬಲಿದಾನಕ್ಕೆ ಸಿದ್ಧವಾಗಲಿ ?"

"ಕೇವಲ ಪೊಲೀಸ್ ಪರ ಸಾಕ್ಷಿಯಾಗಿ ಸಾಕು....ನಿನ್ನ ಬಳಿ ಅವನ ಬಗ್ಗೆ ಏನೇನು ವಿಷಯ ಇದೆಯೋ ಅದನ್ನೆಲ್ಲ ತಿಳಿಸು....

"ಆದರೆ .. ಆದರೆ...."

"ಹೆದರಬೇಡ, ಏನು ಹೇಳು"

"ಅವನ ಹಿಂದೆ ಬಹಳ ಜನರಿದ್ದಾರೆ .. ಕಾಶ್ಮೀರ ವಿದ್ರೋಹಿ ಗುಂಪಿನ ಪರಿಚಯವಿದೆ ಎಂದಾತ ಹೇಳುತ್ತಿದ್ದ....ಅದೂ ಅಲ್ಲದೇ ದೇಶದ ಬೇರೆ ಬೇರೆ ಭಾಗಗಳಲ್ಲಿ ಅವನ ಜನರಿದ್ದಾರೆ.

"ಅದರ ಚಿಂತೆ ನಿನಗೆ ಬೇಡ ನಮಗಿರಲಿ"

"ಆದರೂ ನನಗೆ ಹೆದರಿಕೆ"

"ನಿನಗೆ ರಕ್ಷಣೆ ಕೊಡುವ ಜವಾಬ್ದಾರಿ ನನ್ನದು....ನೀನಷ್ಟೆ ಅಲ್ಲ....ನಿನ್ನ ಪೂರ್ತಿ ಕುಟುಂಬದ ರಕ್ಷಣೆ ಸಹ"

"ಮತ್ತೆ....ಮತ್ತೆ...."

"ಹೇಳು....ಮತ್ತೇನು ?"

"ಮತ್ತೆ....ಮತ್ತೆ" ಅನೂಪ ಸಂಕೋಚದಿಂದ ಪಲ್ಲವಿಯೆಡೆ ನೋಡಿದ.

"ಅಣ್ಣಾ ಸಂಕೋಚ ಬೇಡ" ಸ್ಪಷ್ಟವಾಗಿ ಹೇಳು"

"ಲಾವಣ್ಯಳ ರಕ್ಷಣೆ ಬಗ್ಗೆ....ನನಗೆ ಚಿಂತೆ"

ಪಲ್ಲವಿಯ ಜೊತೆ ಅವಿನಾಶ ಸಹ ಬೆಚ್ಚಿಬಿದ್ದ....ಏನಿದು ಆಶ್ಚರ್ಯ ?

ಹಣದ ಆಮಿಷಕ್ಕೆ ಲಾವಣ್ಯಳನ್ನು ಪತನದ ಮಾರ್ಗಕ್ಕೆಳೆದಿದ್ದ ಕಟುಕರ ಗುಂಪಿನ ಒಬ್ಬನಿಂದ ಅವಳ ಬಗ್ಗೆ ಅನುಕಂಪದ ನುಡಿ.

ಮರುಕ್ಷಣ ಅವಿನಾಶನ ತುಟಿಗಳ ಮೇಲೆ ಮಂದ ಮುಗುಳುನಗೆ ಮೂಡಿತು.

"ಅನೂಪ, ನೀನು ಲಾವಣ್ಯಳನ್ನು ಪ್ರೀತಿಸುತ್ತೀಯಾ ?"

ನೇರವಾಗಿ ಕೇಳಿದ ಅವಿನಾಶ್. ಅನೂಪ ತಲೆಯೆತ್ತಿ ಅವನೆಡೆ ನೋಡಿ ನುಡಿದ.

"ಹೌದು, ಮೊದಲಿನಿಂದಲೂ ಆಕೆಯನ್ನು ಪ್ರೀತಿಸುತ್ತಿರುವೆ. ಆಕೆ ಶ್ರೀಮಂತಳು ಅವಳ ತಂದೆ ಸಾಕಷ್ಟು ಗಳಿಸಿದ್ದಾನೆ. ನನ್ನಂಥ ಬಡವನಿಗೆ ಹೇಗೆ ಮಗಳನ್ನು ಕೊಟ್ಟಾನು ? ಎಂಬ ಶಂಕೆ ಕಾಡುತ್ತಿತ್ತು ? ಹೇಗಾದರೂ ಮಾಡಿ ಸಿರಿವಂತನಾಗಬೇಕು ಅವಳನ್ನು ಪಡೆಯಬೇಕೆಂಬ ಛಲದಿಂದ ಈ ದಾರಿಗಿಳಿದೆ"

ಪಲ್ಲವಿ ದಂಗಾಗಿ ಕುಳಿತಳು. ಅಣ್ಣ ಅನೂಪ ತನ್ನ ಸ್ನೇಹಿತೆ ಲಾವಣ್ಯಳನ್ನು ಪ್ರೀತಿಸಿ ಅವಳಿಗಾಗಿ ಈ ಮಾರ್ಗ ತುಳಿದಿದ್ದಾನೆ. ಅವಳಿಗೆ ಅತೀವ ಆನಂದವಾಯಿತು. ಈ ಮೊದಲು ಅವನ ಬಗೆಗಿದ್ದ ತಿರಸ್ಕಾರ ದ್ವೇಷ ಎಲ್ಲಾ ಮಾಯವಾದವು.

"ಅಣ್ಣಾ....ನೀನು ನಿಜ ಹೇಳುತ್ತಿರುವೆಯಾ ?"

"ಪಲ್ಲವಿ... ನಾನು ಹೇಳುತ್ತಿರುವುದು ನಿಜ....ಬೇಕಾದರೆ ನೀನು ನಂಬು ಅಥವಾ...."

"ಇಲ್ಲಣ್ಣ....ನಾನು ನಂಬುತ್ತೇವೆ....ಆದರೆ....ಆದರೆ... ಲಾವಣ್ಯ....

"ಏನಾಯಿತು ? ಏನಾಯಿತು ಲಾವಣ್ಯಳಿಗೆ ?"

"ಇಮ್ರಾನ್ ಅವಳನ್ನು ಹಾಳು ಮಾಡಿದ್ದಾನೆ....ಅವಳ ವಿಡಿಯೋ ಫೋಟೋಗ್ರಾಫಿ ಎಲ್ಲಾ ಅವನ ಬಳಿ ಇದೆ.. ಹೀಗಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾನೆ."

"ಅದರ ಚಿಂತೆ ಬಿಡು ಪಲ್ಲವಿ...ಇಂದಿನಿಂದ ಇಮ್ರಾನನ ವಿನಾಶ ಆರಂಭ. ನಾನಾತನನ್ನು ನರಕದಲ್ಲಿದ್ದರೂ ಬೆನ್ನಟ್ಟಿ ಬೇಟೆಯಾಡುವೆ.... ಆಮೇಲೆ ಲಾವಣ್ಯಳನ್ನು ಮದುವೆಯಾಗುವೆ...."

ಅವಿನಾಶನ ಕಣ್ಣುಗಳಲ್ಲಿ ಮೆಚ್ಚುಗೆ ಮೂಡಿತು.

"ಅನೂಪ್ ನಾನು ತಿಳಿದಷ್ಟು ನೀನು ಪಾಪದ ದಾರಿಯಲ್ಲಿ ಸಾಗಿಲ್ಲ. ನಿನ್ನ ಆತ್ಮ ಇನ್ನು ಸತ್ತಿಲ್ಲ. ಭಾವನೆಗಳು ಜೀವಂತವಾಗಿವೆ. ನನಗೆ ನಿಮ್ಮ ವಿಚಾರ ಮೆಚ್ಚುಗೆಯಾಯಿತು. ಲಾವಣ್ಯಳಿಗೆ ನೀವು ಪತಿಯಾದರೆ ಅವಳಿಗಾದ ಅನ್ಯಾಯಕ್ಕೆ ತಕ್ಕ ಪರಿಹಾರ ನೀಡಿದಂತಾಗುತ್ತದೆ. ಇನ್ನುಳಿದದ್ದು ಇಮ್ರಾನ್ ವಿಷಯ, ಅದು....ನನಗಿರಲಿ....ನೀವು ಶುರು ಮಾಡಿ ಸಾಕು....

ಮುಂದೆ ಅನೂಪ ಟೇಪ್‌ನಂತೆ ಶುರು ಮಾಡಿದ ಇಮ್ರಾನ್‌ನ ಬಗ್ಗೆ ಆತ ತಿಳಿದಿರುವ ಎಲ್ಲಾ ವಿಷಯ ಹೇಳಿದ. ಅವನ ಮಾಲು ಇಡುವ ಮಳಿಗೆ, ಏಜೆಂಟರು....ಅಂಗಡಿ ಎಲ್ಲಾ ಪಟ್ಟಿಕೊಟ್ಟ. ತನ್ನ ಬಳಿಯಿದ್ದ ಮಾಲಿನ ಬಗ್ಗೆ ಮಾತ್ರ ಆತ ತುಟಿ ಎರಡು ಮಾಡಲಿಲ್ಲ

ಎಲ್ಲವನ್ನು ತಿಳಿದುಕೊಂಡ ಅವಿನಾಶ ಮೇಲೆದ್ದ.

"ಗುಡ್ ಇಂದಿನಿಂದ ನೀನು ನಿಶ್ಚಿಂತ ಪುರುಷ....ಕೇವಲ ಮೂರು ನಾಲ್ಕು ದಿನಗಳಲ್ಲಿ ನಾನು ಇಮ್ರಾನನ್ನು ಮುಗಿಸುತ್ತೇನೆ ...ಹಾಂ, ನೀನು ಮಾತ್ರ ನುಡಿದಂತೆ ನಡೆಯಬೇಕು."

"ಇನ್ಸ್‌ಪೆಕ್ಟರ್ ನಾನೆಂದೂ ಸರಕಾರಿ ಸಾಕ್ಷಿಯಾಗಲು ಹಿಂಜರಿಯಲಾರೆ"

"ಸಾಕ್ಷಿ ಹೇಳಲು ಹಿಂಜರಿದರೂ ನಾನು ನಿನ್ನನ್ನು ಕ್ಷಮಿಸುತ್ತೇನೆ"

"ಮತ್ತೆ ?"

"ಎಲ್ಲಾ ಪರಿಹಾರವಾದ ಮೇಲೆ ಲಾವಣ್ಯಳಿಗೆ ಹೊಸ ಜನ್ಮ ನೀಡದಿದ್ದರೆ ಮಾತ್ರ ನಾನು ನಿನ್ನನ್ನು ಕ್ಷಮಿಸುವುದಿಲ್ಲ... ನೆನಪಿರಲಿ"

"ಇನ್ಸ್‌ಪೆಕ್ಟರ್....ಅವಳು ನನ್ನ ಆದರ್ಶವಾಗಿದ್ದಾಳೆ....ಬೇಕೆಂದರೆ ಇಂದೇ ನಾನವಳ ಜೊತೆ....

"ನೋ....ನೋ....ಅದರ ಅವಶ್ಯಕತೆಯಿಲ್ಲ....ಪಲ್ಲವಿ ನೀನು ನನ್ನ ಜೊತೆ ಬರುವೆಯಾ ?"

"ಎಲ್ಲಿಗೆ"

"ಕೊಹಿಮಾಕ್ಕೆ....ಲಾವಣ್ಯಳ ಬಳಿಗೆ"

"ಸರಿ ಬರುವೆ....ಮನೆಯಲ್ಲಿ...."

"ಹಾಂ. ನಡೆ....ಹೇಳಿ ಹೊರಡೋಣ,

ಮತ್ತೊಮ್ಮೆ ಅನೂಪನಿಗೆ ಧೈರ್ಯ ಹೇಳಿ ಹೊರಗಡೆಯಿದ್ದ ಪೊಲೀಸ್ ಗಾರ್ಡ್‌ಗಳಿಗೆ ಎಚ್ಚರಿಕೆ ಕೊಟ್ಟು ಪಲ್ಲವಿಯೊಂದಿಗೆ ಅವಿನಾಶ ಹೊರ ಬಂದ.

ಪಲ್ಲವಿಯ ತಂದೆ ತಾಯಿ ಅವಳನ್ನು ಕಳಿಸಿಕೊಡಲು ಮೊದಮೊದಲು ಒಪ್ಪಲಿಲ್ಲವಾದರೂ, ಅನೂಪ ಲಾವಣ್ಯಳನ್ನು ಮದುವೆಯಾಗಬಯಸಿದ್ದಾನೆ ಎಂಬ ವಿಷಯ ತಿಳಿದಾಗ ಸೊಸೆಯ ಸಲುವಾಗಿ ಒಪ್ಪಿಕೊಂಡರು.

ಅವಿನಾಶ ಪಲ್ಲವಿಯೊಂದಿಗೆ ಊರು ಬಿಟ್ಟಾಗ ರಾತ್ರಿ ಎರಡು ಗಂಟೆ.

ಕೊಹಿಮಾ ತಲುಪಿದಾಗ ನಸುಕು ಆರು ಗಂಟೆ.

ಪೊಲೀಸ್ ಗೆಸ್ಟ್ ಹೌಸಿಗೆ ಬಂದು ಮೊದಲು ಇಬ್ಬರೂ ಫ್ರೆಶ್ ಆದರೂ, ತಿಂಡಿ ತಿಂದು ಆಸ್ಪತ್ರೆಗೆ ಬಂದಾಗ ಎಂಟು ಗಂಟೆಯಾಗಿತ್ತು. ಲಾವಣ್ಯಳನ್ನು ಕಾಣುವ ಮೊದಲು ಡಲ್ಲಾ ಬಳಿ ಬಂದರು. ಡಲ್ಲಾ ಸಂಪೂರ್ಣ ಗುಣ ಹೊಂದಿದ್ದರು. ಗಾಯ ಮಾಯ ತೊಡಗಿತ್ತು....ಹಾಕಿದ್ದ ಹೊಲಿಗೆ ಬಿಚ್ಚಿದರೆ ಆಯಿತು....ಅವಿನಾಶ ಅವರೊಂದಿಗೆ ಮಾತನಾಡುತ್ತ ಎಲ್ಲಾ ವಿಷಯ ತಿಳಿಸಿದ. ತನ್ನ ಮೇಲೆ ಆಕ್ರಮಣ ಮಾಡಿಕೊಲ್ಲಲು ಯತ್ನಿಸಿದ ನರ್ಸಿನ ಹೆಸರು ಲಾವಣ್ಯ ಎಂದು ತಿಳಿಯಲು ಅವಳ ಸಂಪೂರ್ಣ ಚರಿತ್ರೆ ತಿಳಿದದ್ದು ಅವರಿಗೆ ಆನಂದ ಉಂಟು ಮಾಡಿತು. ಅವಳ ಕತೆ ಕೇಳಿ ಅವಳ ಮೇಲೆ ದಯೆಯೇ ಹುಟ್ಟಿತು.

"ಡಲ್ಲಾ... ಶವದ ಅಪಹರಣವಾಗಿತ್ತಲ್ಲ....ಅದರ ಬಗ್ಗೆ ವಿಷಯ ವೇನಾದರೂ ತಿಳಿಯಿತೇ ?"

"ಹಾಂ ಏನೋ ಸುಳಿವು ಸಿಕ್ಕಿದೆಯಂತೆ ಡಿಸೋಜಾನನ್ನು ವಿಚಾರಿಸಿ....

"ಸರಿ... ನಾನು ವಿಚಾರಿಸುತ್ತೇನೆ"

ಪಲ್ಲವಿಯೊಂದಿಗೆ ಹೊರ ಬಂದ ಅವಿನಾಶ ನೇರವಾಗಿ ಲಾವಣ್ಯಳ ಬಳಿ ಬಂದ. ಅವಳಿಗೆ ಸ್ಮೃತಿ ಬಂದಿತ್ತು. ತಂದೆ ತಾಯಿಗಳೊಂದಿಗೆ ಮಾತನಾಡುತ್ತಿರುವಾಗಲೇ ಪಲ್ಲವಿಯೊಂದಿಗೆ ಅವಿನಾಶ ಬಂದ ಲಾವಣ್ಯಳತ್ತ ಧಾವಿಸಿದಳು ಪಲ್ಲವಿ. ಗೆಳತಿಯರಿಬ್ಬರೂ ಒಬ್ಬರನ್ನು ಒಬ್ಬರು ಹಿಡಿದು ದುಃಖಿಸಿದರು.

ಲಾವಣ್ಯಳ ತಂದೆಯನ್ನು ಹೊರಗೆ ಕರೆ ತಂದ ಅವಿನಾಶ ಅವರಿಗೆ ಸಂಪೂರ್ಣ ವಿಷಯ ತಿಳಿಸಿದನು. ಅವರು ಧರೆಗಿಳಿದು ಹೋದರು. ಅವಿನಾಶ "ನೀವು ನಿಮ್ಮ ಮಗಳ ಬಗ್ಗೆ ವ್ಯಾಕುಲರಾಗಬೇಡಿ. ಅವಳು ಖಂಡಿತ ಗುಣವಾಗುತ್ತಾಳೆ. ಗುಣವಾಗುತ್ತಲೂ ಮದುವೆ ಮಾಡುವಿರಂತೆ ನಾನಾಗಲೇ ಅವಳಿಗೆ ಅನುರೂಪನಾದ ವರನನ್ನು ಹುಡುಕಿರುವೆ"

ಆನಂದ ಆಶ್ಚರ್ಯಗಳಿಂದ ಅವಿನಾಶನೆಡೆ ಅವರು ನೋಡಿ ಕೇಳಿದರು "ಯಾರವನು ?"

"ಅನೂಪ....ಪಲ್ಲವಿ ಅಣ್ಣ....ಸುಂದರ....ವಿದ್ಯಾವಂತ....ಯುವಕ, ಆದರೆ"

"ಆದರೇನು ?"

"ಸಿರಿವಂತಿಕೆಯಲ್ಲಿ ನಿಮಗೆ ಅನುರೂಪನಲ್ಲ"

"ಅದರ ಬಗ್ಗೆ ನಿಮಗೇಕೆ ಚಿಂತೆ ನನ್ನೆಲ್ಲ ಹಣ ಅವನಿಗೇ ಅಲ್ಲವೆ ?"

ಅವಿನಾಶನ ಮುಖ ಕಮಲದಂತೆ ಅರಳಿತು.

ಪಲ್ಲವಿಯನ್ನು ಅಲ್ಲಿಯೇ ಬಿಟ್ಟು ಅವಿನಾಶ ಲಾವಣ್ಯಳ ತಂದೆಯೊಂದಿಗೆ ಇಮ್ರಾನ್‌ನ ಮನೆಗೆ ಬಂದ. ಇಮ್ರಾನ್ ಮನೆಯಿಂದ ಅವನ ತಂದೆ ಹೊರಗೆ ಬಂದವರು ಲಾವಣ್ಯಳ ತಂದೆಯತ್ತ ನೋಡಿ ಅವಾಕ್ಕಾಗಿ ನಿಂತು.... "ಅರೆ.... ಅರೆ....ಏನು ?" ಉದ್ಗಾರ ಹೊರಟಿತು ಅವರಿಂದ.

# 18

ಒಂದು ಕ್ಷಣ ಪಿಳಿ ಪಿಳಿ ನೋಡಿದರು ಜಗಪತಿರಾಯರು ತನ್ನೆದುರು ನಿಂತ ವ್ಯಕ್ತಿಯನ್ನು. ಅವರ ಮುಖದ ಮೇಲೆ ಅಚ್ಚರಿಯ ಗೆರೆಗಳು ಮೂಡಿ ಸಂತಸದ ಛಾಯೆ ಹರಡಿತು.

"ಅರೆ ಮಿಯಾ ಅಲ್ತಾಫ....ನೀನು....ಇಲ್ಲಿ ?" ಅವರು ಉದ್ಗರಿಸಿದರು.

"ಹಾಂ....ಭಾಯಿ ಜಗಪತಿ.... ಇದು....ನನ್ನದೇ ಮನೆ...."

ಅಪ್ಪಿಕೊಳ್ಳಲು ಮುಂದಾಗಿದ್ದ ಜಗಪತಿರಾಯರು ಹಾವು ಮೆಟ್ಟಿದವರಂತೆ ಒಂದು ಹೆಜ್ಜೆ ಹಿಂದೆ ಸರಿದು ಕೇಳಿದರು.

"ಅಂದರೆ....ಅಂದರೆ....ನೀನು ಇಮ್ರಾನನ...."

"ಹಾಂ, ಇಮ್ರಾನ್ ನನ್ನ ಮಗ ...ಅರೆ....ನಿನಗೆ ಹೇಗೆ ಗೊತ್ತು ?"

ಹತ್ತಾರು ವರ್ಷಗಳ ನಂತರ ಕೂಡಿದ ಗೆಳೆಯನ ಬಗ್ಗೆ ತುಂಬಾ ಮಾತ ನಾಡಬೇಕು ಎಂದುಕೊಂಡಿದ್ದ ಆನಂದ ಜರ್‍ರನೇ ಇಳಿಯಿತು. ಅಲ್ತಾಫ್ ಹುಸೇನ ಸಾಹೇಬರು ಆಂತಕಗೊಂಡು ಕೇಳಿದರು.

"ಅರೆ....ಜಗಪತಿ ಏನಾಯಿತು ಹೇಳು ?"

"ದೇವತಾ ಪುರುಷನ ಹೊಟ್ಟೆಯಲ್ಲಿ ಶೈತಾನ್ ಹೇಗೆ ಹುಟ್ಟಿದ ಎಂದು ನನಗೆ ಆಶ್ಚರ್ಯವಾಗಿದೆ"

"ಯಾರು....ಯಾರು ಶೈತಾನ ?"

"ಬೇರೆ ಯಾರು ಅಲ್ಲ ...ನಿನ್ನ ಮಗ ಇಮ್ರಾನ್"

"ಹಾಯ್ ಅಲ್ಲಾ ...ನಾರೀಕಂಠದಿಂದ ಹೊರಟ ದುಃಖದ ಉದ್ಗಾರಕ್ಕೆ ಬೆಚ್ಚಿ ಹಿಂದೆ ನೋಡಿದರೆ ಮಮತಾಜ ಬಾನು ಬೇಗಂ ನಿಂತಿದ್ದರು .. ಅವರೆಡೆ ನೋಡಿ ಜಗಪತಿರಾಯರು ಕೈ ಮುಗಿದರು."

"ನಮಸ್ತೆ ಭಾಭೀಜೀ.

"ಅರೆ, ಜಗಪತಿಭಾಯಿ....ನೀವು ಯಾವಾಗ ಬಂದಿರಿ ? ಬನ್ನಿ ಒಳಗೆ ..."

"ಒಳಗೆ ಬರುತ್ತೇನೆ....ಭಾಭಿ....ಆದರೆ ಶೈತಾನ ಇರುವ ಈ ಮನೆಯಲ್ಲಿ ನಾನು ಒಂದು ಹನಿ ನೀರು ಸಹ ಕುಡಿಯುವದಿಲ್ಲ...."

"ಇಲ್ಲಿ ಶೈತಾನ ಇದ್ದಾನೆಯೇ ? ಜಗಪತಿ ಏನು ನಿನ್ನ ಮಾತು ?"

"ಹೌದು ಭಾಯಿ... ಶೈತಾನ ಇದ್ದಾನೆ.. ಅಂಥಿಂತ ಶೈತಾನ ಅಲ್ಲ. ಭಾರತ ದೇಶದ ಸುಂದರ ಕನಸನ್ನು ಕರಾಳ ಕನಸನ್ನಾಗಿಸುವ ಶೈತಾನ ಈ ಮನೆಯಲ್ಲಿದ್ದಾನೆ. ನಿನ್ನಂಥ ಸಾವಿರಾರು ಜನರು ಬಲಿದಾನ ಮಾಡಿ ಗಳಿಸಿದ ಈ ದೇಶದ ಸ್ವಾತಂತ್ರ್ಯ ಹರಣ ಮಾಡಲು ಸಿದ್ಧನಾದ ಶೈತಾನ ಈ ಮನೆಯಲ್ಲಿದ್ದಾನೆ"

"ಹೌದು ? ಯಾರಾತ ?"

"ನಿನ್ನ ಮಗ ಇಮ್ರಾನ್"

"ಮಾ ಮೇರೆ ಖುದಾ....ಯೆ ಕ್ಯಾ ಸುನ್ ರೆಹಾಹೂ ಮೈ ?

ಎದೆ ಹಿಡಿದುಕೊಂಡು ಕೆಳಗೆ ಕುಸಿದರು ಮಮತಾಜ್ ಬೇಗಂ. ಅವರತ್ತ ಧಾವಿಸಿದ ಅವಿನಾಶ ಅವರನ್ನು ಎತ್ತಿ ಒಳಗೊಯ್ದು ಸೋಪಾದ ಮೇಲೆ ಮಲಗಿಸಿದ. ಮೈಮೇಲಿನ ಬಟ್ಟೆ ಸಡಿಲಿಸಿ ಫ್ಯಾನ್ ಚಾಲು ಮಾಡಿದ. ಐದಾರು ನಿಮಿಷಗಳಲ್ಲಿ ಅವರು ಸುಧಾರಿಸಿಕೊಂಡರು....

ಈ ಅವಧಿಯಲ್ಲಿ ಅಲ್ತಾಫ ಹುಸೇನ ಸಾಹೇಬರು ಇನ್ಸ್ಪೆಕ್ಟರ್ ಅವಿನಾಶನನ್ನು ಗಮನಿಸಿದರು. ಯಾವುದೋ ಅನಿಷ್ಟ ಕಾದಿದೆ ಎಂಬ ಸಂದೇಹ ಮೂಡಿತು.

"ಜಗಪತಿ....ಇದೇನು....ಪೊಲೀಸ್‌ರನ್ನು ಕರೆತಂದಿರುವೆಯಲ್ಲ ?"

"ಇಲ್ಲ ಅಲ್ತಾಫ್....ನಾನವರನ್ನು ಕರೆ ತಂದಿಲ್ಲ. ಅವರೇ ದುಬಾಯಿಯಿಂದ ನನ್ನ ಕರೆಸಿದ್ದಾರೆ"

"ನನಗೊಂದು ತಿಳಿಯುತ್ತಿಲ್ಲ"

"ಕುಳಿತುಕೊ....ನಿಧಾನವಾಗಿ ಒಂದೊಂದೇ ತಿಳಿಯುತ್ತದೆ.

ಮನದಲ್ಲಿ ನೂರಾರು ಅಶಂಕೆಗಳು ಹುಟ್ಟಿಕೊಳ್ಳುತ್ತಿದ್ದಂತೆ ಕುಳಿತುಕೊಂಡರು. ಅಲ್ತಾಫ್ ಹುಸೇನ ಸಾಹೇಬರು ಪತ್ನಿಯ ಬಳಿ. ಮೊದಲು ಜಗಪತಿರಾಯ ನಂತರ ಇನ್ಸ್ಪೆಕ್ಟರ್ ಅವಿನಾಶ ಇಮ್ರಾನನ ಕತೆ ಒಂದೊಂದಾಗಿ ಬಿಡಿಸಿ ಹೇಳುತ್ತಾ ಹೋದಂತೆ ಅವರ ಕಣ್ಣೆದುರು ಕತ್ತಲೆ ಕವಿಯಲಾರಂಭಿಸಿತು. ತಮ್ಮ ಏಕ ಮಾತ್ರ ಸಂತಾನ ದೇಶದ್ರೋಹಿ ಆದನಲ್ಲ ಎಂಬ ಕೊರಗಿನೊಂದಿಗೆ ಯಾವ ದೇಶದ ಸಲುವಾಗಿ ತಾವು ತೋಪಿನ ಬಾಯಿಗೂ ಎದೆಯೊಡಿದ್ದರೋ ಅದೇ ದೇಶಕ್ಕೆ ದ್ರೋಹ ಬಗೆದನಲ್ಲ ಎಂಬ ನೋವು.

ತಮ್ಮ ಮಾತು ಮುಗಿಸುತ್ತ ಹೇಳಿದ ಅವಿನಾಶ.

"ಸಾಹೇಬರೆ....ತಾವು ಕೇಳಿದ ಪ್ರತಿಯೊಂದು ವಿಷಯವೂ ಸತ್ಯ ಅದಕ್ಕೆ ಬೇಕಾದ ಪುರಾವೆ ಎಲ್ಲಾ ನಮ್ಮ ಬಳಿ ಇವೆ....ಲಾವಣ್ಯಾಳ ಗೆಳತಿ ಪಲ್ಲವಿ.... ಪಲ್ಲವಿ ಅಣ್ಣ ಅನೂಪ, ನಿಮ್ಮ ಮಗ ಇಮ್ರಾನಿನ ಸ್ನೇಹಿತ.... ಇದೇ ಅನೂಪ ಕೆಲ ತಿಂಗಳು ನಿಮ್ಮ ಊದುಬತ್ತಿ ಕಾರ್ಖಾನೆಯಲ್ಲಿ ಕೆಲಸ ಮಾಡಿದ್ದಾನೆ.

"ನನಗೆ ಗೊತ್ತು ಅನೂಪ....ತುಂಬಾ ಒಳ್ಳೆಯ ಹುಡುಗ ...ಪರಿಶ್ರಮಿ.... ಪ್ರಾಮಾಣಿಕ....

"ಅವನೇ ನಿಮ್ಮ ಮಗನ ಜೊತೆಗಾರ....ಈಗ ಆಸ್ಪತ್ರೆಯಲ್ಲಿದ್ದಾನೆ. ನನ್ನೆದುರೇ ಠಾಣೆಯಲ್ಲಿ ಹತ್ತಾರು ಪೊಲೀಸರ ಸಮಕ್ಷಮ ಅನೂಪನಿಗೆ ಚೂರಿಯಿಂದ ಇರಿದು ಪರಾರಿಯಾಗಿದ್ದಾನೆ."

ಅವನನ್ನು ಹುಡುಕುತ್ತ ಬಂದಿದ್ದೇವೆ.

"ಆತ ಮನೆಯಲ್ಲಿಲ್ಲ....ತಾವು ಇಚ್ಛಿಸಿದರೆ "ತಲಾಶಿ" ತೆಗೆದುಕೊಳ್ಳಬಹುದು." ಅದರ ಅವಶ್ಯಕತೆಯಿಲ್ಲ ಸಾಹೇಬರೆ. ನನ್ನ ಬಗ್ಗೆ ನಿಮಗೆ ತಿಳಿದಿರಲಿಕ್ಕಿಲ್ಲ. ನಿಮ್ಮ ಬಗ್ಗೆ ನನಗೆ ಸಂಪೂರ್ಣ ತಿಳುವಳಿಕೆ ಇದೆ. ಕಟ್ಟಾ ದೇಶಭಕ್ತರು ನೀವು. ಅಪ್ಪಟ ಸ್ವಾತಂತ್ರ್ಯ ಯೋಧರು ನೀವು....ಯಾವ ಆಶೆ ಆ ಮಿಷಗಳಿಗೂ ಒಳಗಾಗದ ಕರ್ಮಠ ವ್ಯಕ್ತಿ ನೀವು. ಮನಸ್ಸು ಮಾಡಿದ್ದರೆ ಕೇಂದ್ರ ಸರ್ಕಾರದಲ್ಲಿ ಸಚಿವರಾಗಿ ಮೆರೆಯಬಹುದಿತ್ತು. ದೇಶಭಕ್ತಿಯನ್ನು ಮಾರಿಕೊಳ್ಳಬಾರದೆಂಬ ಒಂದೇ ಒಂದು ಉದ್ದೇಶದಿಂದ ಅಧಿಕಾರ ಕುರ್ಚಿಗಳತ್ತ ಕಣ್ಣೆತ್ತಿ ಸಹ ನೋಡಲಿಲ್ಲ. ತಾವಾಗಿಯೇ ಮನೆಯವರೆಗೂ ಬಂದಿದ್ದ ಹುದ್ದೆಯನ್ನು ನಿರಾಕರಿಸಿದಿರಿ. ಅಷ್ಟೇ ಅಲ್ಲ ಸ್ವಾತಂತ್ರ್ಯ ಯೋಧರಿಗೆ ದೊರೆಯುತ್ತಿರುವ ಪಿಂಚಣಿ ಸಹ ನೀವು ಪಡೆಯಲಿಲ್ಲ.

"ಸಾಕು....ಸಾಕು....ಇನ್ಸ್‌ಪೆಕ್ಟರ್....ಸಾಹೇಬರೆ....ನನ್ನ ಇಂಥ ಸೇವೆಗೆ ದೊರೆತದ್ದು ಏನು ?

ಭಾರತದ ಜನತೆ ನನ್ನ ಹೆಸರನ್ನು ಗೌರವದಿಂದ ನಾಲಿಗೆ ಮೇಲೆ ತರುತ್ತಿರುವಾಗ ನನ್ನ ಮಗ ನನ್ನ ಹೆಸರಷ್ಟೆ ಅಲ್ಲ ನನ್ನನ್ನು....ನನ್ನ ಮನೆತನದ ಕುಲಗೌರವವನ್ನು ಹರಾಜು ಹಾಕಿದನಲ್ಲ....ಇನ್ನೇನಾಗಬೇಕು ?

"ಇದರಲ್ಲಿ ನಿಮ್ಮ ತಪ್ಪಿಲ್ಲ ಸಾಹೇಬರೆ, ಅವನ ಸಂಗಾತಿ ಫಲವಿದು, ಯಾರೊ ಅವನ ತಲೆಕೆಡಿಸಿದ್ದಾರೆ. ಕಾಶ್ಮೀರದಲ್ಲಿ ಕೆಲಸ ಮಾಡುತ್ತಿರುವ ವಿದ್ರೋಹಿಗಳ ಸ್ನೇಹ ಅವನಿಗಾಗಿದೆ....ಅವರು ಅವನ ಬ್ರೈನ್ ವಾಶ್ ಮಾಡಿದ್ದಾರೆ....ನಾವೆಲ್ಲ ಅವನ ತಪ್ಪು ಕಲ್ಪನೆ ದೂರ ಮಾಡುತ್ತೇವೆ....ಆತ ನಮ್ಮ ಕೈಗೆ ಸಿಕ್ಕರೆ."

"ಸಿಕ್ಕರೆ....ಸಿಕ್ಕರೆ ಹಾಗೆ ಬಿಡುತ್ತೀರಾ ?"

ಪ್ರಶ್ನೆ ಕೇಳಿದ ಮುಮತಾಜ ಭಾನು ಬೇಗಂರತ್ತ ಅವಿನಾಶ ಕನಿಕರದಿಂದ ನೋಡಿದ.

"ಅದು ಹೇಗೆ ಸಾಧ್ಯ ? ಬಾಯಿ ಸಾಹೇಬ ನೀವೆ ಹೇಳಿ....ಆತ ಮಾಡಿದ ಈ ಎಲ್ಲ ಕೃತ್ಯಗಳು ಸಾಧುವಾದವುಗಳೇ ? ಭಾರತದಲ್ಲಿ ವಾಸಿಸುವ ಭಾರತದ ಪ್ರಜೆಯಾಗಿ ಮಾಡುವಂಥ ಕೆಲಸಗಳೇ ? ಅದಕ್ಕಾಗಿ ಶಿಕ್ಷೆ ಅನುಭವಿಸಲೇಬೇಕು.

ಹಾಂ....ಆತ ತಪ್ಪೊಪ್ಪಿಕೊಂಡರೆ ಶಿಕ್ಷೆ ಕಡಿಮೆಯಾಗಬಹುದು ...

ಕರಳು ಕೊರೆದಂತಾಗಿ ಬೇಗಂ ಬಿಕ್ಕ ತೊಡಗಿದಾಗ ಸಾಹೇಬರು ಸಂತೈಸಿದರು.

"ಬೇಗಂ... ಯಾವ ಜನ್ಮದಲ್ಲಿ ನಾವು ಪಾಪ ಮಾಡಿದ್ದೇವೊ ಏನೋ ಖುದಾ ಈಗ ಅದಕ್ಕೆ ಶಿಕ್ಷೆ ನೀಡುತ್ತಿದ್ದಾನೆ....ಎದೆ ಗಟ್ಟಿ ಮಾಡಿಕೊ....ಪಾಲಿಗೆ ಬಂದದ್ದನ್ನು ಅನುಭವಿಸಲೇ ಬೇಕು"

ಒಂದೆರಡು ನಿಮಿಷ ಮೌನ ಆವರಿಸಿತು.

ಅಲ್ತಾಫ ಹುಸೇನರೇ ಮಾತನಾಡಿದರು.

"ಲಾವಣ್ಯ"

"ಮಾಶಾ ಅಲ್ಲಾ... ತುಂಬಾ ಚೆನ್ನಾಗಿದೆ....ಅವಳು ಹೇಗಿದ್ದಾಳೆ ?"

"ಜೀವಕ್ಕೆ ಅಪಾಯವಿಲ್ಲ....ಇನ್ನೂ ಬೇಹೋಶ್ ಇದ್ದಾಳೆ.

"ಅವಳಿಗೂ ನಿನ್ನ ಮಗ ಇಮ್ರಾನನೇ ಗುಂಡು...."

"ಅದರ ಬಗ್ಗೆ ನಮಗಿನ್ನೂ ಖಚಿತವಾಗಿ ಏನೂ ತಿಳಿದಿಲ್ಲ ಸಾಹೇಬರೆ....

ಮಧ್ಯೆಪ್ರವೇಶಿಸಿದ ಅವಿನಾಶ ಉತ್ತರಿಸಿದ ..

ಲಾವಣ್ಯಳ ಅಧಃಪತನಕ್ಕೆ ಇಮ್ರಾನನೇ ಕಾರಣ....ಅವಳಿಗಾಗಿಯೇ ಇಮ್ರಾನ್ ಪ್ರತ್ಯೇಕ ಕೊಠಡಿ ಮಾಡಿದ್ದ....ಅವಳ ಬಳಿ ಇದ್ದ ಸುಮಾರು ಎರಡು ಮೂರು ಲಕ್ಷ ರೂಪಾಯಿ ಚಿನ್ನ ಮುಂತಾದವುಗಳನ್ನೆಲ್ಲ ಆತ ಕೊಳ್ಳೆ ಹೊಡೆದಿದ್ದಾನೆ. ಅವಳಿಗೆ ಡ್ರಗ್ಸ್‌ನ ಚಟ ಅಂಟಿಸಿದವನು ಅವನೇ....ಈಗಾಕೆ ಶೀತಲಕೋಳಿಯಾಗುವ ಹಂತದಲ್ಲಿದ್ದಾಳೆ....ಅವಳ ಇಂದಿನ ಸ್ಥಿತಿಗೇ ಖಂಡಿತ ವಾಗಿ ಅವನೇ ಕಾರಣ"

"ಶೀತಲಕೋಳಿ" ಅಂದರೇನು ?

"ಇದಕ್ಕೆ ಕೋಲ್ಡ್‌ಟರ್ಕಿ ಎಂದು ಕರೆಯುತ್ತಾರೆ. ಡ್ರಗ್ಸ್ ಚಟ ಅಂಟಿಸಿಕೊಂಡವರ ಕೊನೆಯ ಕ್ಷಣಗಳೇ ಶೀತಲಕೋಳಿ ...ಹಿಮದ ಮಧ್ಯೆ ಕೋಳಿ ಮರಿ ಬಿಟ್ಟರೆ .. ಅದರ ಸ್ಥಿತಿ ಹೇಗಾಗುವನೋ ಹಾಗಾಗುತ್ತಾನೆ. ಕೋಳಿ....ಅವನ ದೇಹ ಬಿಲ್ಲಿನಂತೆ ಮಣಿಯುತ್ತದೆ. ಸೆಟೆಯುತ್ತದೆ. ಉಸಿರು ಸಿಲುಕುತ್ತದೆ .. ಕಣ್ಣು ಮೂಗುಗಳಲ್ಲಿ ಒಂದೇ ಸಮನೆ ನೀರು ಸುರಿಯ ತೊಡಗುತ್ತಿದೆ. ಈ ಹಂತದಲ್ಲಿ ಆತ ಏನು ಬೇಕಾದರೂ ಮಾಡಬಲ್ಲ.

"ಓ ದೇವರೆ....ಇದು....ಇದು ಶೈತಾನನ ರೂಪ"

"ಹೌದು ಸಾಹೇಬರೆ ಶೀತಲಕೋಳಿ ಹಂತಕ್ಕೆ ತಲುಪಿದವ ಶೈತಾನನಿಗೆ ಕಡಿಮೆಯಲ್ಲ ಲಾವಣ್ಯ ಆ ಹಂತ ತಲುಪಿದ್ದಳು. ಅವಳನ್ನು ಉಳಿಸಿ ಕೊಳ್ಳಲು ನಾವು ಸೆಣಸುತ್ತಿದ್ದೇವೆ. ಆಕೆ ಪಾಂಡುರಂಗ ಎಂಬುವನನ್ನು ಕೊಲ್ಲಲು ಹೋಗಿ ಇನ್ಸ್‌ಪೆಕ್ಟರ್ ಡಲ್ಲಾನ ಮೇಲೆ ಆಕ್ರಮಣ ಮಾಡಿದ್ದಳು. ಅವಳನ್ನು ಹಿಡಿದೊಯ್ಯುವಲ್ಲಿ ಅವಳ ಮೇಲೆ ಗುಂಡಿನ ಮಳೆ ಕರೆದ ವ್ಯಕ್ತಿ ಓಡಿ ಹೋದ. ಆತ ಇಮ್ರಾನ್ ಇರಬಹುದೆಂಬ ಸಂಶಯ ಅಷ್ಟೆ."

ನೆಲಕ್ಕೆ ಕುಸಿದರು ಅಲ್ತಾಫ ಸಾಹೇಬರು.

ಅವರ ಮುಗ ಅವರ ಕೈಯಿಂದ ಸರಿದು ಹೋಗಿದ್ದ....

ಅವಿನಾಶ ಜಗಪತಿರಾಯರತ್ತ ನೋಡಿ ಸಂಜ್ಞೆ ಮಾಡಿದ....ಅರದರ್ಥ ತಿಳಿದುಕೊಂಡ ಅವರು ಮೇಲೆದ್ದರು. ಇಬ್ಬರ ಕಡೆಗೂ ಸಾಹೇಬರು ಆರ್ತರಾಗಿ ನೋಡಿದರು.

"ನಿಮ್ಮನ್ನು ತಡೆದು ಊಟ ಮಾಡಿಕೊಂಡು ಹೋಗಿ ಎಂದು ಹೇಳಲೂ ಸಹ ನಾನು ಅಯೋಗ್ಯನಾಗಿದ್ದೇನೆ ...ಪಾಪಿಯಾಗಿದ್ದೇನೆ. ನನ್ನನ್ನು ಕ್ಷಮಿಸಿ"

"ಅವರ ಕೈಗಳನ್ನು ಗಟ್ಟಿಯಾಗಿ ಹಿಡಿದು ಭೋರೆಂದು ಅತ್ತರು ಜಗಪತಿರಾಯರು.

"ಅಲ್ತಾಫ್....ಇಪ್ಪತ್ತು ಇಪ್ಪತ್ತೈದು ವರ್ಷಗಳ ನಂತರ ನಮ್ಮ ಭೇಟಿಯಾಯಿತು.

ಅದೂ ಎಂಥ ಪರಿಸ್ಥಿತಿಯಲ್ಲಿ....ನನಗಂತೂ ಜೀವವೇ ಬೇಸರವಾಗಿದೆ ಏನು ಮಾಡಬೇಕೆಂಬುದು ತಿಳಿಯದಾಗಿದೆ....

ಮುಮತಾಜ್ ಬಾನು ಕಂಗಾಲಾಗಿ ನೆಲ ಹಿಡಿದಿದ್ದರು. ಅವರತ್ತ ನೋಡುತ್ತಿದ್ದಂತೆ ಜಗಪತಿರಾಯರ ಕರಳು ಹಿಂಡಿದಂತಾಯಿತು. ಎರಡೂ ಕೈ ಮುಗಿದರು. ಕಣ್ತುಂಬ ನೀರು ತಂದುಕೊಂಡ ಬೇಗಂ ಆರ್ತನಾದಗೈದರು.

"ಭಾಯಿಜಾನ್... ಖುದಾ ನಮ್ಮನ್ನೆಂದೂ ಮಾಫ್ ಮಾಡೋದಿಲ್ಲ. ತಂಗಿ ಮನೆಗೆ ಬಂದ ನಿಮಗೆ ಹೊಟ್ಟೆ ತುಂಬ ಊಟ ಹಾಕಲಿಲ್ಲ. ಬಾಯಿ ತುಂಬ ನಾಲ್ಕು ಮಾತು ಆಡಲಿಲ್ಲ. ನಮ್ಮ ಬೇಟಾನಿಂದಾಗಿ ನಿಮಗೆ ಜಹರ ಕೊಟ್ಟೆವು. ನೀನು ನಮ್ಮನ್ನು ಮಾಫ್ ಮಾಡಬೇಕು....

"ಭಾಭಿ ಹಾಗನ್ನಬೇಡಿ. ಇದು ದೈವ ಲಿಖಿತ....ದೇವರೇ ಮಾಡಿದ್ದು... ಎಲ್ಲಾ ಮರೆತು ಬಿಡಿ"

ಎದೆಯ ಮೇಲೆ ಬಂಡೆಗಲ್ಲು ಹೇರಿಕೊಂಡು ಹೊರಬಂದರು ಜಗಪತಿರಾಯರು. ಅವಿನಾಶ್ ಬೇಕೆಂತಲೆ ಹಿಂದುಳಿದ. ಅಲ್ತಾಫ್ ಹುಸೇನಸಾಹೇಬರು ಅದನ್ನರಿತುಕೊಂಡರು.

"ಆಫೀಸರ್....ನಾನೊಬ್ಬ ಈ ದೇಶದ ನಮ್ರ ಸೇವಕ. ನನಗೆ ಜನ್ಮ ನೀಡಿ ಸಕಲ ಸುಖಭೋಗ ನೀಡಿದ ಭಾರತ ದೇಶಕ್ಕೆ ನನ್ನ ದೇಹದಲ್ಲಿ ಹನಿ ರಕ್ತ ಇರುವವರೆಗೂ ಕೃತಜ್ಞನಾಗಿರುತ್ತೇನೆ. ಎಂದೂ ದ್ರೋಹ ಬಗೆಯುವುದಿಲ್ಲ"

"ಸಾಹೇಬರೆ ನಿಮ್ಮಂಥವರ ಮೇಲೆ ಸಂಶಯಪಟ್ಟರೆ ಆ ಭಗವಂತ ನನ್ನನ್ನು ಎಂದೂ ಕ್ಷಮಿಸೋದಿಲ್ಲ ...ನನ್ನ ವಿನಂತಿ ಬೇರೆಯೇ ಆಗಿದೆ"

"ಅದು ನನಗೆ ಗೊತ್ತು ಆಫೀಸರ್ ನೀವು ನನ್ನ ಶೈತಾನ್ ಬೇಟಾ ಇಮ್ರಾನನ ಬಗ್ಗೆ ಹೇಳುವವರಿದ್ದೀರಿ. ಚಿಂತಿಸಬೇಡಿ. ಆತ ಮನೆಗೆ ಬರುತ್ತಲೇ ನಿಮಗೆ ಫೋನು ಮಾಡುತ್ತೇವೆ. ನೀವು ಬರುವವರೆಗೂ ಅವನನ್ನು ತಡೆ ಹಿಡಿಯುತ್ತೇನೆ. ಒಂದು ವೇಳೆ ಆತ ಓಡಿ ಹೋಗಲು ಯತ್ನಿಸಿದರೆ ನಾನೇ ನನ್ನ ಕೈಯಿಂದ.

"ಬೇಡಿ ದಯವಿಟ್ಟು ಆ ರೀತಿ ಮಾಡಬೇಡಿ....ನಿಮ್ಮ ಪವಿತ್ರವಾದ ಹಸ್ತಗಳು ಇವು. ಭಾರತ ದೇಶದ ಧ್ವಜ ಹಿಡಿದ ಕೈಗಳಿವು. ಇಂಥ ಕೈಗಳು ಜೀವ ತೆಗೆಯಬಾರದು... ನಾವಿನ್ನು ಬರುತ್ತೇನೆ"

ಭಾರವಾದ ಹೃದಯದೊಂದಿಗೆ ಅವಿನಾಶ್ ಹೊರಗೆ ನಡೆಯುತ್ತಿದ್ದಂತೆ. ಅಲ್ತಾಫ್ ಹುಸೇನ ಸಾಹೇಬರು ಪತ್ನಿಯತ್ತ ನೋಡಿದರು. ಅರಳಿಯಂತೆ ಬಿಳುಚಿಕೊಂಡಿದ್ದ ಬೇಗಂ ಅವರೆಡೆ ಕೈ ಬಾಚಿದರು. ಸಾಹೇಬರು ಅವಳ ಎದೆಯ ಮೇಲೆ ಒರಗಿ ಹಸಿಗೂಸಿನಂತೆ ಬಿಕ್ಕಿ ಬಿಕ್ಕಿ ಅಳುತ್ತಿದ್ದಂತೆ ಬೇಗಂರ ಮೃದುವಾದ ಹಸ್ತಗಳು ಅವರ ತಲೆ ಮೇಲೆ ಹರಿದಾಡಿ ಸಮಾಧಾನಪಡಿಸ ತೊಡಗಿದವು. ಸಾಹೇಬರು ಸಮಾಧಾನ ಹೊಂದಿ ಮೂಕರಾಗಿ ಪತ್ನಿಯತ್ತ ನೋಡುತ್ತಿರುವಾಗಲೇ ಬಿರುಗಾಳಿಯಂತೆ ಯಾರೋ ಒಳಗೆ ಬಂದಂತಾಯಿತು. ಹೌಹಾರಿ ಇಬ್ಬರು ಬಾಗಲತ್ತ ದೃಷ್ಟಿ ಹರಿಸುತ್ತಿದ್ದಂತೆ ಒಳಗೆ ಬಂದಿದ್ದ ಇಮ್ರಾನ ಪಟಾರನೆ ಬಾಗಿಲು ಮುಚ್ಚಿ ಅದಕ್ಕೆ ಬೆನ್ನೂ ಅನಿಸಿ ನಿಂತುಕೊಂಡ. ಆತನ ಕಣ್ಣುಗಳು ಮುಚ್ಚಿಕೊಂಡಿದ್ದವು.

ವೇಗವಾಗಿ ಉಸಿರಾಡಿಸುತ್ತಿದ್ದ....ಬಹುಶಃ ಆತ ತುಂಬಾ ದೂರದಿಂದ ಓಡುತ್ತ ಬಂದಿರಬೇಕು....ಒಂದೆರಡು ನಿಮಿಷ ಹಾಗೇ ನಿಂತಿದ್ದ. ಉಸಿರು ತೆಗೆದುಕೊಂಡ ಆತ ನಿಧಾನವಾಗಿ ಕಣ್ಣು ತೆರೆದಾಗ ಎದುರಿಗೆ ನಿಂತಿದ್ದರು ಅಬ್ಬಾಜಾನ್....ಅವರ ಹಿಂದೆ ಅಮ್ಮಿ....

"ಅಬ್ಬಾ"

ಅವನ ಮಾತು ಪೂರ್ತಿಯಾಗಿರಲಿಲ್ಲ....ಎರಡೂ ಕೆನ್ನೆಯ ಮೇಲೆ ಪಟಪಟನೆ ನಾಲ್ಕಾರು ಪೆಟ್ಟುಕೊಟ್ಟು ಅಬ್ಬರಿಸಿದರು ಸಾಹೇಬರು.

"ಖಬರ್‌ದಾರ್....ನಿನ್ನ ನಾಪಾಕ್ ನಾಲಿಗೆ ಮೇಲೆ ನನ್ನ ಹೆಸರು ತರಬೇಡ....ನೀನು ನನ್ನ ಮಗನಲ್ಲ....ನೀನು ಶೈತಾನ್....ಶೈತಾನ್."

"ಅಬ್ಬಾಜಾನ್....ನೀವು...."

ಫಟೀರ್....ಫಟೀರ್....ಮತ್ತೆ ಕೆನ್ನೆಗೆ ಬಾರಿಸಿದರು ಅಲ್ತಾಫ ಹುಸೇನ ಸಾಹೇಬರು. ಕಂಗಾಲಾದ ಇಮ್ರಾನ್ ತಾಯಿಯತ್ತ ನೋಡಿದ ಕೆನ್ನೆ ಮೇಲೆ ಕೈಯಾಡಿಸುತ್ತಾ....

"ಅಮ್ಮಿ....ಅಮ್ಮಿಜಾನ್...."

"ಖಬರ್ದಾರ್ ಶೈತಾನ್....ನಿನ್ನ ಗಂಧೀ ಜಬಾನ್ ಮೇಲೆ ಅಮ್ಮಿ ಎಂಬ ಪವಿತ್ರ ಹೆಸರು ತರಬೇಡ.... ನೀನು....ನೀನು ಇನ್ಸಾನ್ ಅಲ್ಲ ...

ನೀನು....ಶೈತಾನ್....ಶೈತಾನ್ ಒಂದೆರಡು ಕ್ಷಣ ತಬ್ಬಾಬಾಗಿ ನಿಂತಿದ್ದ ಇಮ್ರಾನ್ ತಡವರಿಸಿ ಕೇಳಿದ.

"ನೀವು ಹೀಗೇಕೆ ಮಾಡುತ್ತಿದ್ದೀರಿ ?.... ನಾನೇನು ಮಾಡಿರುವೆ ?.... ಕೊಲೆಯೆ ?... ದರೋಡೆಯೇ ?

"ನೀನು ಕೊಲೆ ಮಾಡಿದ್ದರೂ ನಾವು ಚಿಂತಿಸುವುದಿಲ್ಲ....ದರೋಡೆ ಮಾಡಿದ್ದರೂ ಉಫ್ ಎಂದು ಉಸಿರು ಬಿಡುತ್ತಿದ್ದಿಲ್ಲ....ನೀನು ಅವೆಲ್ಲವನ್ನು ಮೀರಿಸಿ ನೀಚ ಕೆಲಸ ಮಾಡಿರುವೆ.

"ಗಂದಾ ಕೆಲಸ ಮಾಡಿರುವೆ....ಅಲ್ಲಾನನ್ನು ಕೆರಳಿಸಿರುವೆ....ನಮ್ಮ ಮನಸ್ಸನ್ನು ನೀನು ಒಡೆದು ಚೂರು ಚೂರು ಮಾಡಿರುವೆ"

"ಸಾಕು....ಸಾಕು ಮಾಡಿ....ನನ್ನಿಂದ ಅಂಥ ಅಪರಾಧ ಏನಾಗಿದೆ ? ಏನಾಗಿದೆ ಹೇಳಿ.

"ಒಂದಾಗಿದ್ದರೆ ಹೇಳಬಹುದಿತ್ತು"

"ಒಂದು ಹೇಳಿ ಸಾಕು"

"ಲಾವಣ್ಯ....ಲಾವಣ್ಯ"

ಬರಸಿಡಿಲೊಂದು ಎರಗಿದಂತಾಯಿತು ಇಮ್ರಾನನ ತಲೆಯ ಮೇಲೆ. ಲಾವಣ್ಯ ಬಗ್ಗೆ ಇವರಿಗೆ ಹೇಗೆ ತಿಳಿಯಿತೆಂದು ?

"ಏಕೆ ?....ಸಿಡಿಲು ಬಡಿಯಿತೇ ನಿನಗೆ ?" ಇನ್ನು ಮುಂದೆ ಕೇಳು. ನೀನು....ನೀನು ನಿನ್ನ ಸ್ನೇಹಿತನಿಗೆ ಅಂದ್ರೆ...ಅನೂಪನಿಗೆ ಚೂರಿಯಿಂದ ಇರಿದು ಓಡಿ ಹೋದದ್ದು. ನೀನು ಮಾಡುತ್ತಿರುವ ಪಾಪದ ದಂಧೆ ಬಗ್ಗೆಯೂ ತಿಳಿದಿದೆ"

"ಕಾಲ್ಕೆಳಗಿನ ಭೂಮಿ ಕುಸಿದಂತಾಯಿತು ಇಮ್ರಾನನಿಗೆ....ಪಿಳಿಪಿಳಿ ಕಣ್ಣು ಬಿಡುತ್ತ ನಿಂತಿದ್ದ....ಬೇಗಂ ಮುಂದೆ ಬಂದರು. ಎಷ್ಟೆಂದರೂ ತಾಯಿ ಅಲ್ಲವೆ ?... ಕರಳು ಕೇಳಬೇಕಲ್ಲ ?"

"ಬೇಟಾ....ಎಲ್ಲಾ ಕಬೂಲ್ ಆಗಿ ಮಾಫಿ ಮಾಂಗೋ....ಅಲ್ಲಾ ಕರುಣೆ ತೋರಿಸುತ್ತಾನೆ....

"ಅಂದ್ರೆ....ಅಂದ್ರೆ....ನಾನು"

"ಹಾಂ ಬೇಟಾ ಪೊಲೀಸ್‌ಗೆ ಹೋಗಿ ಸುಪುರ್ದ್‌ಕರೊ ನಾವೆಲ್ಲಾ ನೋಡಿಕೊಂಡು ನಿನಗೆ ಕಡಿಮೆ ಶಿಕ್ಷೆ ಆಗುವಂತೆ ನೋಡಿಕೊಳ್ಳುತ್ತೇವೆ ...?"

"ನಹೀ.... ನಹೀ ಅಮ್ಮಿಜಾನ್....ನನ್ನಿಂದಾಗದು...."

"ನೀನು ನಾವು ಹೇಳಿದಂತೆ ಕೇಳಲೇಬೇಕು ಬೇಟಾ....ಈಗಾಗಲೇ ನಮ್ಮನ್ನು ಬಹಳ ಕಾಡಿಸಿದ್ದಿ.... ಹಿಂಸೆ ಕೊಟ್ಟಿರುವೆ. ನಿನ್ನ ಕಾರ್ಯದಿಂದ ಖುದಾ ಸಹಿತ ಸಿಟ್ಟಾಗಿದ್ದಾನೆ. ಎಲ್ಲಾ ಒಪ್ಪಿಕೊಂಡು ಕ್ಷಮೆ ಕೇಳು, ಮುಂದಿನ ಜೀವನವಾದರೂ ಸುಖವಾಗಿ ಕಳೆಯುತ್ತದೆ.

"ಇಲ್ಲ ಅಬ್ಬಾಜಾನ್... ನನ್ನಿಂದ ಆಗದ ಕೆಲಸವಿದು"

"ಅಚ್ಛಾ ಬೇಟೆ... ಹಾಗಾದ್ರೆ ನಾನೇ ಪೊಲೀಸ್‌ಗೆ ಫೋನ್ ಮಾಡಿ ಹೇಳ್ತೇನೆ"

"ನೀನು ಹೋಗೋದು ಬೇಡ ಅವರೇ ಬರಲಿ"

ಅಲ್ತಾಫ್ ಹುಸೇನ್ ಸಾಹೇಬರು ಫೋನಿನತ್ತ ನಡೆಯುತ್ತಿದ್ದಂತೆ ಇಮ್ರಾನ್ ಗುಡುಗಿದ.

"ಅಬ್ಬಾಜಾನ್ ಅಲ್ಲೇ ನಿಲ್ಲಿ" ಅವನ ಕೈಯಲ್ಲಿ ಪಿಸ್ತೂಲು ಕಾಣಿಸಿಕೊಂಡಿತು.

# 19

ರಾತ್ರಿ ಶಾಂತಿಯಿಂದ ಕಳೆಯಿತು.

ಅನೂಪ ಸಮಾಧಾನದಿಂದ ನಿಶ್ಚಿಂತೆಯ ನಿದ್ದೆ ಮಾಡಿದ. ಅವನ ಮನಸ್ಸು ಹಗುರಾಗಿತ್ತು. ಹೃದಯ ಭಾರ ಕಳೆದುಕೊಂಡಿತ್ತು. ತಪ್ಪೊಪ್ಪಿಕೊಂಡಿದ್ದಕ್ಕೆ ಏನೋ ಒಂದು ಬಗೆಯ ತೃಪ್ತಿಯ ಭಾವ ಮೊಳಕೆಯೊಡೆದಿತ್ತು. ತಾನು ಅಪರಾಧಿಯಾಗಿದ್ದರೂ ಶಿಕ್ಷೆ ಅನುಭವಿಸಿ ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಭಾವನೆ ಒಡಮೂಡಿತ್ತು.

ಅದಕ್ಕಾಗಿಯೇ ಆತ ಸೊಗಸಾಗಿ ನಿದ್ದೆ ಮಾಡಿ ಎದ್ದಿದ್ದ. ಆಸ್ಪತ್ರೆಯ ಕೊಠಡಿಯಲ್ಲಿಯೇ ಇದ್ದ ಬಾಥ್‌ರೂಮ್ ಸೇರಿ ಪ್ರಾತರ್ವಿಧಿ ತೀರಿಸಿಕೊಂಡ

ಹೊರಬಂದ. ಬಾಗಿಲು ಬಾರಿಸುತ್ತಲೂ ಹೊರಗಿದ್ದ ಸೆಂಟ್ರಿ ಬಾಗಿಲು ತೆರೆದ.... ಅವನಿಗಿಂತ ಮೊದಲೇ ಕೇಳಿದ.

"ಚಹಾ ತರಲೇ ?"

"ಹಾಂ" ಚುಟುಕಾಗಿ ಅನೂಪ ಉತ್ತರಿಸುತ್ತಿದ್ದಂತೆ ಆತ ಮತ್ತೆ ಬಾಗಿಲು ಮುಚ್ಚಿಕೊಂಡ ...ಅನೂಪ ಪುನಃ ಬೆಡ್‌ಗೆ ಬಂದು ದಿಂಬಿಗೆ ತಲೆಯಾನಿಸಿದ. ಐದು ನಿಮಿಷಗಳಲ್ಲಿ ಚಹ ತಂದಿಟ್ಟ ಸೆಂಟ್ರಿ....ಆತ ಪೂರ್ತಿ ಕುಡಿಯುವವರೆಗೂ ನಿಂತಿದ್ದು....ಕಪ್ಪು ಖಾಲಿಯಾಗುತ್ತಿದ್ದಂತೆ ಮುಂದೆ ಬಂದ ಎತ್ತಿಕೊಳ್ಳಲು.

"ಹವಾಲ್ದಾರ್ ಸಾಬ್" ಅನೂಪ ಮೆಲುವಾಗಿ ನುಡಿದ.

"ಏನು ?"

"ನನಗೊಂದು ಸಹಾಯ ಮಾಡುವೆಯಾ ?"

"ಗಾಬರಿಯಾಗಿ ಆತ ಅವನೆಡೆ ನೋಡುತ್ತಿದ್ದಂತೆ ಮೆಲುವಾಗಿ ನಕ್ಕ ಅನೂಪ ಗಾಬರಿಯಾಗಬೇಡಿ....ನನಗೆ ಓಡಿ ಹೋಗಲು ಸಹಾಯ ಮಾಡಿ ಎಂದೇನೂ ನಾನು ಕೇಳುವುದಿಲ್ಲ... ಓಡಿ ಹೋಗಲು ನನಗೆ ಮನಸ್ಸೂ ಇಲ್ಲ....

"ಮತ್ತೆ ...ಮತ್ತೇನಾಗಬೇಕು ?"

"ನಾನೊಂದು ಫೋನು ಮಾಡಬೇಕು ಅಷ್ಟೇ....?"

"ಫೋನು ಇಲ್ಲಿ ಇಲ್ಲ"

"ಫೋನು ಇಲ್ಲ....ಅದರ ಪ್ಲಗ್ ಇದೆ....ನೀವು ಇನ್‌ಸ್ಟ್ರೂಮೆಂಟ್ ತಂದರೆ ಸಾಕು....ನಾನೊಂದು ಕಡೆ ಫೋನು ಮಾಡುತ್ತೇನೆ....ಅಷ್ಟೇ....ಮತ್ತೆ ಅದನ್ನು ಒಯ್ಯಬಹುದು"

ಹವಾಲ್ದಾರ ಯೋಚನಾ ಮಗ್ನನಾದ. ಅನೂಪನ ಬೇಡಿಕೆ ಅನುಚಿತ ವಾಗಿರಲಿಲ್ಲ. ಅದರಲ್ಲಿ ಯಾವ ಅಪಾಯವೂ ಇರಲಿಲ್ಲ. ಆದರೂ ಆತ ಯೋಚಿಸತೊಡಗಿದ.

"ಯೋಚಿಸಿ ಹವಾಲ್ದಾರ ಸಾಹೇಬರೆ....ಇಷ್ಟು ಸಣ್ಣ ಸಹಾಯ ಮಾಡಿ ದರೆ ನಾನು ನಿಮಗೆ ಒಂದು ಸಾವಿರ ರೂಪಾಯಿ ಕೊಡುತ್ತೇನೆ"

ಬೆಚ್ಚಿಬಿದ್ದ ಹವಾಲ್ದಾರ ...ಒಂದು ಸಾವಿರ ರೂಪಾಯಿ ಇಷ್ಟು ಸಣ್ಣ ಕೆಲಸಕ್ಕೆ....ಬಾಯಿಯಲ್ಲಿ ನೀರೂರಿತು. ಹೊಸ ಸೀರೆ ಉಟ್ಟುಕೊಂಡು ನಗು

ನಗುತ್ತ ಬಂದ ಹೆಂಡತಿ ಅಪ್ಪಿಕೊಂಡು ಮುದ್ದಿಸಿದಂತಾಯಿತು. ಯಾವ ಮಾತು ಆಡದೆ ಸರಕ್‌ನೆ ಕಪ್ಪು ಎತ್ತಿಕೊಂಡು ಹೊರನಡೆದ.

ಅನೂಪನ ಮುಖದ ಮೇಲೆ ಮಂದಹಾಸ ಮಿನುಗಿತು.

ತನ್ನ ಬಾಣ ಗುರಿ ನಾಟಿದೆ ಎಂಬ ವಿಶ್ವಾಸ ಮೂಡಿತು.

ಅವನ ಊಹೆಯಂತೆ ಹತ್ತೇ ನಿಮಿಷಗಳಲ್ಲಿ ಹವಾಲ್ದಾರ ಬಂದ. ಪಿನ್ ಚುಚ್ಚಿ ರಿಸೀವರ್ ಅವನೆಡೆ ಚಾಚಿ ಹೇಳಿದ.

"ಐದು ನಿಮಿಷ ಬಿಟ್ಟು ಬರುತ್ತೇನೆ ಅಷ್ಟರಲ್ಲಿ"

"ಓ.ಕೆ.....ಓ.ಕೆ.....ಚಿಂತಿಸಬೇಡಿ"

ಹವಾಲ್ದಾರ ಹೊರಗೆ ಕಾಲಿಡುತ್ತಿದ್ದಂತೆ ಅನೂಪ ನಂಬರ್ ಜೋಡಿಸಿದ. ಅತ್ತ ಕಡೆಯಿಂದ ಗಡಸು ಕಂಠ ಕೇಳಿಸಿತು "ಹಲೋ"

"ಹಲೋ....ಅನೀಸ್....ನಾನು ಅನೂಪ ಮಾತಾಡ್ತಿರೋದು"

"ಅನೂಪ್....ನೀನು ಎಲ್ಲಿಂದ ?"

"ಆಸ್ಪತ್ರೆಯಿಂದ"

"ಮತ್ತೆ....ಮತ್ತೆ....ನಿನ್ನೆ....ಠಾಣೆಯಲ್ಲಿ"

"ಅದೊಂದು ದೊಡ್ಡ ಕತೆ.. ಫೋನಿನಲ್ಲಿ ಬೇಡ... ಹಾಂ. ನನ್ನ ಬಳಿ ಮಾಲಿದೆ... ಹದಿನೈದು ಲಕ್ಷದ್ದು"

"ಆಂ ? ಹದಿನೈದು ಲಕ್ಷದ್ದೇ"

"ಹಾಂ ಅವನ್ನು ನಿನಗೆಂದು ಹತ್ತು ಲಕ್ಷಕ್ಕೆ ಕೊಡಲು ಸಿದ್ಧ....ಬೇಕಾ ?"

"ಹತ್ತು ಲಕ್ಷ ?"

"ಯೋಚಿಸಬೇಡ... ಫಸ್ಟ್ ಕ್ಲಾಸ್ ಮಾಲು....ನಿನಗೆ ಬೇಡವಾದರೆ ನಾನು...."

"ನೋ....ನೋ....ನನಗೆ ಬೇಕು....ಮಾಲು ಎಲ್ಲಿದೆ ?"

"ನನ್ನ ಬಳಿ... ನೀನು ಹಣ ರೆಡಿ ಮಾಡಿಕೊಂಡು ನಮ್ಮ ಮನೆಗೆ ಹೋಗು"

"ಏಕೆ ?"

"ಪೂರ್ತಿ ಮಾತು ಕೇಳು....ನಿನ್ನ ಜೊತೆ ನನ್ನ ತಾಯಿಯನ್ನು ಕರೆದು ಕೊಂಡು ಬಾ"

"ನನಗೆ ನಿನ್ನ ತಾಯಿಯ ಪರಿಚಯವಿಲ್ಲ"

"ಡೋಂಟವರಿ....ಅವರೆಲ್ಲ ಗುರುತಿಸುತ್ತಾರೆ"

"ಸರಿ"

"ಹಾಂ, ನೀನು ಹನ್ನೆರಡು ಗಂಟೆಯೊಳಗೆ ಬರಬೇಕು. ಬರದಿದ್ರೆ ನಾನು...."

"ನಾ ಬರುತ್ತೇನೆ"

"ಗುಡ್....ಹತ್ತು ಲಕ್ಷದೊಂದಿಗೆ"

ರಿಸೀವರ ಕೆಳಗಿಟ್ಟ ಅನೂಪ.. ಒಂದು ನಿಮಿಷ ಬಿಟ್ಟು ತನ್ನ ಪಕ್ಕದ ಮನೆಗೆ ಫೋನು ಮಾಡಿ ಅಮ್ಮನನ್ನು ಕರೆಯುವಂತೆ ವಿನಂತಿಸಿಕೊಂಡ. ಅವರು ಲೈನ್‌ಗೆ ಬರುತ್ತಿದ್ದಂತೆ ಮೆಲುವಾಗಿ ವಿಷಯ ತಿಳಿಸಿ ಅನೀಸ್ ಕರೆಯಲು ಬರುತ್ತಲೂ ಅವನೊಂದಿಗೆ ಬರಲು ಹೇಳಿ ರಿಸೀವರ್ ಕೆಳಗಿಟ್ಟ.

ಐದು ನಿಮಿಷಗಳಲ್ಲಿ ಹವಾಲ್ದಾರ ಒಳಗೆ ಬಂದ. ಫೋನು ಪಿನ್ ಕಿತ್ತು ತನ್ನ ಜೊತೆ ಇನ್‌ಸ್ಟ್ರುಮೆಂಟ್ ಒಯ್ಯುತ್ತಿದ್ದಂತೆ ಅನೂಪ ತಡೆದ.

"ಹವಾಲ್ದಾರ ಸಾಬ್"

"ಮತ್ತೇನು ?"

"ಮತ್ತೇನೂ ಇಲ್ಲ....ನಿಮ್ಮ ಸಾವಿರ ರೂಪಾಯಿ"

"ಹಾಂ ಬೇಗ ಕೊಡಿ"

"ಹನ್ನೆರಡು ಗಂಟೆಗೆ ಕೊಡುತ್ತೇನೆ... ನಮ್ಮ ತಾಯಿ ಬರುತ್ತಾರೆ, ಅವರ ಜೊತೆ ನನ್ನ ಸ್ನೇಹಿತ ಅವರನ್ನು ಒಳಗೆ ಬಿಡಿ. ಅವರು ಹಣ ತರುತ್ತಾರೆ"

"ಅಂ ?" ಗಾಬರಿಯಾದ ಹವಾಲ್ದಾರ.

"ಡೋಂಟವರಿ... ಅದಕ್ಕಾಗಿ ಬೇರೆ ಸಾವಿರ ಕೊಡುವೆ"

ಅವಾಕ್ಕಾದ ಹವಾಲ್ದಾರ...ಮತ್ತೊಂದು ಸಾವಿರ....ಅವರ ಮಕ್ಕಳು ಹೊಸ ಬಟ್ಟೆಯುಟ್ಟು ಬ್ರೇಕ್ ಡ್ಯಾನ್ಸ್ ಮಾಡುತ್ತಿರುವಂತೆ ಕನಸು ಕಾಣುತ್ತ ಆತ ಹೊರನಡೆದ.

ಸರಿಯಾಗಿ ಹನ್ನೆರಡು ಗಂಟೆಗೆ ಅನೀಸ ಹಾಜರಾದ....ಅವನ ಜೊತೆಯಲ್ಲಿ ಅನೂಪನ ತಾಯಿ....ಹವಾಲ್ದಾರ ಹಾಗೇ ನಿಂತಿದ್ದ....ಅವರೆದುರು.

"ಹವಾಲ್ದಾರ ಸಾಬ್....ಪ್ಲೀಜ್ ಹತ್ತು ನಿಮಿಷ"

ಎರಡು ಸಾವಿರ ರೂಪಾಯಿ....ಹವಾಲ್ದಾರ ಮೆತ್ತಗೆ ಜಾರಿಕೊಂಡ.

"ಹಣ ತಂದಿರುವೆಯಾ...."

"ಹಾಂ....ಮಾಲು ಎಲ್ಲಿದೆ ?"

ಜನಿವಾರದಲ್ಲಿದ್ದ ಬೀಗದ ಕೈ ತೆಗೆದು ಅವನ ಮುಂದಿರಿಸಿದ. ಅನೀಸ್ ಹಣದ ಬ್ಯಾಗು ಅವನ ಬಳಿ ಸರಿಸಿ ಎದ್ದು ನಿಂತ.

"ನನ್ನ ರೂಮು ನೀನು ನೋಡಿರುವೆ....ಇದು ರೂಮಿನ ಬೀಗದ ಕೈ ತೆಗೆದುಕೊ"

"ಪೊಲೀಸರ ಘೋಟಾಲಾ ಏನಾದರೂ"

"ನೋ... ನೋ....ಇದರ ಬಗ್ಗೆ ಯಾರಿಗೂ ವಾಸನೆ ಬಡಿದಿಲ್ಲ"

"ಗುಡ್"

"ಆದರೆ ಒಂದು ಮಾತು"

"ಏನದು ?"

"ಮಾಲು ನಿನ್ನ ಕೈಗೆ ಬಂದ ಮೇಲೆ ನಿನ್ನ ಜವಾಬ್ದಾರಿ....ನನ್ನದಲ್ಲ"

"ಸರಿ"

ಅನೀಸ್ ಹೊರಟುಹೋದ....ಬ್ಯಾಗಿನಿಂದ ಎರಡು ಸಾವಿರ ರೂಪಾಯಿ ತೆಗೆದ ಅನೂಪ. ಅವನ ಪ್ರತಿಯೊಂದು ಚಟುವಟಿಕೆ ಗಮನಿಸುತ್ತಿದ್ದ ತಾಯಿ ಕಡೆ ನೋಡಿದ.

"ಅಮ್ಮಾ. ಇದು ನನ್ನ ಹಣ....ದುಡಿದ ಹಣ....ನನಗೆ ಕಡಿಮೆ ಕಡಿಮೆ ಅಂದರೂ ಎರಡು ವರ್ಷ ಶಿಕ್ಷೆಯಾಗುತ್ತದೆ. ಅಲ್ಲಿಯವರೆಗೂ ಮನೆ ನಡೆಯ ಬೇಕು...."

ಪಲ್ಲವಿ ಮದುವೆ ಮಾಡಬೇಕು....ಅದಕ್ಕೆಲ್ಲ ಹಣ ಬೇಡವೆ ?....ಅಲ್ಲದೆ ಲಾವಣ್ಯ ಸಹ ನಿಮ್ಮೊಂದಿಗೆ ಇರುತ್ತಾಳೆ. ನಾನು ಜೈಲಿನಿಂದ ಬರುವವರೆಗೆ ಅವಳನ್ನು ನೋಡಿಕೊಳ್ಳುವ ಜವಾಬ್ದಾರಿ ನಿಮ್ಮ ಮೇಲೆ ಅದಕ್ಕಾಗಿ"

"ಸಾಕು....ಸಾಕು ನನಗೆಲ್ಲ ಅರ್ಥವಾಗುತ್ತಿದೆ...."

"ಹಾಗಾದರೆ ಈ ಬ್ಯಾಗು ನಿನ್ನ ಜೊತೆಗಿರಲಿ....ಇದರಲ್ಲಿ ಹತ್ತು ಲಕ್ಷವಿದೆ"

"ಆಂ ? ಹತ್ತು ಲಕ್ಷ ?"

"ಎರಡು ಸಾವಿರ ಕಡಿಮೆ .. ಅಮ್ಮಾ ಇದು ನನ್ನ ಪೂರ್ತಿ ಜೀವನದ ದುಡಿಮೆ ಮುಂದೆ ಜೈಲಿನಿಂದ ಬಂದ ನಂತರ ಏನಾಗುತ್ತದೋ ನನಗೆ ತಿಳಿಯದು. ಅದಕ್ಕಾಗಿ ಇದು....ಇದು...." ಅನೂಪನನ್ನು ಅಪ್ಪಿಕೊಂಡು ಅತ್ತರು ಅಮ್ಮ ಅನಂತರ ಮೆಲ್ಲನೆ ಎದ್ದು ಬ್ಯಾಗಿನೊಂದಿಗೆ ಕೋಣೆಯಿಂದ ಹೊರ ನಡೆದರು. ಅವರು ಹೋಗುತ್ತಿದ್ದಂತೆ ಹವಾಲ್ದಾರ ಒಳಗೆ ಬಂದ. ಎರಡು ಸಾವಿರ ರೂಪಾಯಿ ಅವನ ಜೇಬು ಸೇರಿದವು. ಮುಖ ಕಮಲದಂತೆ ಅರಳಿತು....

"ಥ್ಯಾಂಕ್ಸ್ ಹವಾಲ್ದಾರ್ ಸಾಹೇಬ್"

ಅನೂಪನ ಮಾತಿಗೆ ಹಿ....ಹಿ....ಎಂದು ನಕ್ಕು ಉತ್ತರಿಸದೆ ಹೊರ ಗೋಡಿದ.

ಅರ್ಧಗಂಟೆ ಕಳೆಯುವಷ್ಟರಲ್ಲಿ ಬಾಗಿಲ ಮೇಲೆ ಮೆಲ್ಲನೆ ಬಾರಿಸಿ ಒಳ ಬಂದ ಅವಿನಾಶ....ಅನೂಪ ಎದ್ದು ನಿಂತು ಅವನಿಗೆ ವಂದಿಸಿದ.

"ಹಾಯ್ ಅನೂಪ....ರಾತ್ರಿ ಹೇಗೆ ಕಳೆಯಿತು ?"

"ಜೀವನದಲ್ಲಿ ಮೊದಲ ಬಾರಿ ಹಾಯಾಗಿ ನಿದ್ದೆ ಮಾಡಿದೆ ಸರ್...."

"ಗುಡ್....ನಮಗೆ ಇಮ್ರಾನ್ ಸಿಕ್ಕಿಲ್ಲ. ಮನೆಗೂ ಹೋಗಿದ್ದೆ? ಪಾಪ....ಅವನ ತಂದೆ ತಾಯಿ ದುಃಖ ಕಂಡು ಕರಳು ಚುರ್ರ್ ಎಂದಿತು.

"ಅವರಿಬ್ಬರೂ ದೇವರಂಥ ಮನುಷ್ಯರು....ಅವನೇ ಶೈತಾನ್"

"ಹಾಂ, ಅಂದ ಹಾಗೆ ನೀನು ಹೇಳಿದ ಕಡೆಗೆಲ್ಲ ರೈಡ್ ಮಾಡಲಾಗಿದೆ. ಅವನ ಎಲ್ಲಾ ಅಡ್ಡೆ ಬಂದ್ ಮಾಡಿ ಸೀಜ್ ಮಾಡಿದ್ದೇವೆ. ಶಹರದ ಸುತ್ತಲು ಭದ್ರ ಪೊಲೀಸ್ ಕಾವಲಿದೆ....ಇಂದಿನ ಸಂಜೆ ಪತ್ರಿಕೆಯಲ್ಲಿ ಅವನ ಫೋಟೋ ಸಹ ಪ್ರಕಟವಾಗುತ್ತಿದೆ. ನಾಳೆ ಬೆಳಿಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಕೂಡ. ಅವನ ಎಲ್ಲಾ ದಾರಿ ಬಂದ್ ಮಾಡಿದ್ದೇನೆ....ಬಹಳವೆಂದರೆ ಒಂದು ದಿನ ಆತ ತಪ್ಪಿಸಿ ಕೊಂಡಿರಬಹುದು ಅಷ್ಟೇ....

"ಸರ್ ಇನ್ನೊಂದು ವಿಷಯ ತಿಳಿಸಲು ಮರೆತೆ"

ಅವಿನಾಶ್ ಹುಬ್ಬೇರಿಸಿ ಅನೂಪನೆಡೆ ನೋಡಿದ ಏನು ಎಂಬಂತೆ.

"ಇಮ್ರಾನನ ಸ್ನೇಹಿತನೊಬ್ಬನಿದ್ದಾನೆ ಅನೀಸ್ ಅಂತ. ಅವನ ತಂದೆ ರಿಟಾಯರ್ಡ್ ಎಸ್.ಪಿ. ಈಗವರು ಜೀವಂತವಾಗಿಲ್ಲ. ಅನೀಸ್ ಎಂಟು

ತಿಂಗಳಿಂದ ಇಮ್ರಾನನ ಸ್ನೇಹ ಕಳೆದುಕೊಂಡಿದ್ದಾನೆ... ಸ್ವತಂತ್ರವಾಗಿ ಡ್ರಗ್ಸ್ ಬಿಸಿನೆಸ್ ಮಾಡುತ್ತಿದ್ದಾನೆ. ಇಂದು ನಾಲ್ಕು ಗಂಟೆಗೆ ಅವನ ಬಳಿ ಸುಮಾರು ಹತ್ತು ಲಕ್ಷದ ಡ್ರಗ್ಸ್ ಬರುವುದಿದೆ"

"ಪೂರ್ತಿ ವಿಳಾಸ ಹೇಳು"

ಅನೂಪನ ಬಾಯಿಯಿಂದ ಮಾತು ಹೊರಬೀಳುತ್ತಿದ್ದಂತೆ ಮನಸ್ಸಿನಲ್ಲಿ ಟೇಪ್ ಮಾಡಿಕೊಂಡ ಅವಿನಾಶ್ ಕೋಟಿನ ಒಳಜೇಬಿಗೆ ಕೈಹಾಕಿ ವೈಯರ್ ಲೆಸ್ ಫೋನ್ ಹೊರತೆಗೆದ. ಕಂಟ್ರೋಲ್ ರೂಮಿಗೆ ಫೋನು ಮಾಡಿ ಅನೀಸ್‌ನ ವಿಳಾಸ ಹೇಳಿ ಮಾಲು ಸಹಿತ ಅರೆಸ್ಟ್ ಮಾಡುವಂತೆ ಆದೇಶ ನೀಡಿದಾಗ ಅನೂಪನ ಮುಖದ ಮೇಲೆ ವಿಚಿತ್ರ ನಗು ಮಿಂಚಿ ಮಾಯವಾಯಿತು

"ಲಾವಣ್ಯ ಹೇಗಿದ್ದಾಳೆ ಸರ್"

"ಓಹ್....ಚೆನ್ನಾಗಿದ್ದಾಳೆ. ಮಾತನಾಡಲು ಆರಂಭಿಸಿದ್ದಾಳೆ"

"ಇಮ್ರಾನನ ಬಗ್ಗೆ ವಿಚಾರಿಸಿದಿರಾ ?"

"ಇಲ್ಲ. ಅವಳು ಪ್ರಾಣಾಪಾಯದಿಂದ ಪಾರಾಗಿದ್ದಾಳೆ. ಆದರೂ ಅಪಾಯವಿದೆ ಎಂದು ಡಾಕ್ಟರರ ಅಭಿಪ್ರಾಯ. ಅದಕ್ಕಾಗಿ ಇನ್ನು ವಿಚಾರಿಸಿಲ್ಲ. ಒಂದೆರಡು ದಿವಸ ಬಿಟ್ಟು ಅವಳನ್ನು ಪ್ರಶ್ನಿಸುತ್ತೇನೆ."

"ಅಷ್ಟರಲ್ಲಿ ಇಮ್ರಾನ್ ಏನಾದರೂ"

"ಸಾಧ್ಯವಿಲ್ಲ . ಈಗಾಗಲೇ ಇಮ್ರಾನನ ಸಮಾಧಿ ರೆಡಿಯಾಗಿದೆ. ಬೋನಿನಲ್ಲಿ ಸಿಕ್ಕ ಮಿಕನಂತಾಗಿದ್ದಾನೆ ಆತ...."

"ಬೋನಿನಲ್ಲಿ ಸಿಕ್ಕ ಮಿಕ ತುಂಬಾ ಅಪಾಯಕಾರಿ ಸರ್"

"ಅದು ನನಗೆ ಗೊತ್ತು....ನೀನು ಚಿಂತಿಸಬೇಡ....ನಾನೆಲ್ಲ ...

"ಟೆಂಟ್....ಟೆಂಟ್" ಅವಿನಾಶನ ಜೇಬಿನಿಂದ ವೈಯರ್‌ಲೆಸ್ ಫೋನು ಸಂಜ್ಞೆ ನೀಡಿತು . ಅವಿನಾಶ್ ಟೆಲಿಫೋನ್ ಹೊರತೆಗೆದು ಗುಂಡಿ ಅದುಮಿದ.

"ನಾನು ಸರ್ ಡಿಸೋಜಾ"

"ಏನು ವಿಷಯ"

"ಆಸ್ಪತ್ರೆಯಲ್ಲಿದ್ದ ಶವದ ಅಪಹರಣದ ಬಗ್ಗೆ ವಿಷಯ ಸರ್, ನೀವು

ಕೂಡಲೇ ಹೊರಟು ಬನ್ನಿ. ಇಲ್ಲಿ ಬಂದ ಮೇಲೆ ವಿವರವಾಗಿ ಹೇಳುತ್ತೇನೆ"

"ಗುಡ್ ನಾಳೆ ಬೆಳಿಗ್ಗೆ ನಾನು ಅಲ್ಲಿರುತ್ತೇನೆ....ಆಯಿತಾ ?"

"ಓ.ಕೆ. ಸರ್...."

ಅವಿನಾಶ್ ಮೇಲೆದ್ದ....ಅವನಿಗೆ ಬಹಳ ಕೆಲಸವಿದ್ದವು. ಅನೂಪನಿಗೆ ಮತ್ತೊಮ್ಮೆ ಧೈರ್ಯ ಹೇಳಿ ಹೊರಬಂದ. ಅವಿನಾಶ್ ನೇರವಾಗಿ ಠಾಣೆಗೆ ಬಂದ. ಕಂಟ್ರೋಲ್ ರೂಮಿಗೆ ಫೋನ್ ಮಾಡಿದ. ಅನೀಸ್‌ನನ್ನು ಆಗಲೇ ಬಂಧಿಸಿ ಅವನಿಂದ ಹತ್ತು ಲಕ್ಷ ಬೆಲೆಬಾಳುವ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದೆ ಎಂದು ಉತ್ತರ ಬಂದಿತು. ಸಮಾಧಾನದ ಉಸಿರು ಬಿಟ್ಟ. ಒಂದೆರಡು ಗಂಟೆ ಇಮ್ರಾನನ ಕೇಸಿನ ವಿಷಯಗಳಿಗೆ ಸಂಬಂಧಿಸಿದ ಕಾಗದ ಪತ್ರ ಸಿದ್ಧಪಡಿಸಿದ. ಅಷ್ಟರಲ್ಲಿ ಸಂಜೆ ಪತ್ರಿಕೆಗಳು ಬಂದಿದ್ದವು.

ಸಂಜೆ ಪತ್ರಿಕೆಗಳಲ್ಲಿ ಇಮ್ರಾನನ ಫೋಟೋ ಪ್ರಕಟವಾಗಿದ್ದವು. ಆತನ ಸುಳಿವು ನೀಡಿದವರಿಗೆ ಇಪ್ಪತ್ತೈದು ಸಾವಿರ ರೂಪಾಯಿ, ಹಿಡಿದು ಕೊಟ್ಟವರಿಗೆ ಒಂದು ಲಕ್ಷ ರೂಪಾಯಿ ಬಹುಮಾನ ಸಾರಲಾಗಿತ್ತು. ಅವಿನಾಶ್ ಬಲವಾದ ಬಲೆ ಬೀಸಿದ್ದ ಅವನ ಸುತ್ತ....

ಅವಿನಾಶ ಕೊಹಿಮಾದ ಕಡೆ ಹೊರಟಾಗ ರಾತ್ರಿ ಹನ್ನೆರಡು ಸಮೀಪಿಸಿತ್ತು. ನಸುಕಿನ ಐದು ಗಂಟೆಗೆ ಆತ ಕೊಹಿಮಾದ ಪೋಲೀಸ್ ಗೆಸ್ಟ್ ಹೌಸ್‌ನಲ್ಲಿದ್ದ. ಎರಡು ಗಂಟೆ ರೆಸ್ಟ್ ತೆಗೆದುಕೊಂಡು ಎಂಟು ಹೊಡೆಯುವುದರೊಳಗೆ ಡಿಸೋಜಾ ಮನೆಯ ಮುಂದೆ ಗಾಡಿಯಿಂದಿಳಿದ. ಬಹುಶಃ ಡಿಸೋಜಾ ಅವನ ನಿರೀಕ್ಷೆಯಲ್ಲಿರಬೇಕು. ಬಾಗಿಲು ತೆರೆದು ಹೊರಗೆ ಬಂದು ವಂದಿಸಿ ಒಳಗೆ ಕರೆದೊಯ್ದು ಕಾಫಿ ಸೇವಿಸಿದ ನಂತರ ಆತ ಹೇಳಿದ.

"ಐದು ನಿಮಿಷಗಳಲ್ಲಿ ಪ್ರಸಾದ ಬಾಬು ಬರುತ್ತಾರೆ....ನಾನಾಗಲೇ ಫೋನು ಮಾಡಿದ್ದೇನೆ."

"ಯಾರು ಪ್ರಸಾದಬಾಬು"

"ನಾನಂದು ಹೇಳಿದೆನಲ್ಲ ಸರ್....ಆಸ್ಪತ್ರೆಯಲ್ಲಿದ್ದ ಶವ ಯಾರದೆಂದು ತಿಳಿದಿಲ್ಲ. ಕೆಲವು ದಿನಗಳ ಹಿಂದೆ ಯಾರೋ ಆಸ್ಪತ್ರೆಗೆ ತಂದು ಸೇರಿಸಿ ಹೋಗಿದ್ದರು...."

"ಹಾ....ಹಾ....ಡಲ್ಲಾ ಹೇಳಿದ ಶವ ಮಾಯವಾಗಿತ್ತಲ್ಲ"

"ಅದೇ ಪಾಂಡುರಂಗನ ಶವವೆಂದೇ ತಿಳಿದು ಕೆಳಗೆ ಬೇಸ್‌ಮೆಂಟ್‌ನಲ್ಲಿದ್ದ ಶವದ ಮೇಲೆ ಲಾವಣ್ಯ ಚೂರಿಯಿಂದ ಇರಿದಿದ್ದಳಲ್ಲ"

"ಹಾ....ಹಾ....ಏನಾಯಿತು ?"

"ಆ ಅಪರಿಚಿತನನ್ನು ಆಸ್ಪತ್ರೆಗೆ ಸೇರಿಸಿದ್ದುದೇ ಪ್ರಸಾದಬಾಬು. ಕೊಹಿಮಾದ ಅತ್ಯಂತ ಪ್ರತಿಷ್ಠಿತ ಉದ್ಯಮಿಗಳು ಅವರೇ ನಿನ್ನೆ ಫೋನು ಮಾಡಿ ನನಗೆ ವಿಷಯ ತಿಳಿಸಿದರು. ಮಿಕ್ಕಿದ್ದು ನೀವು ಬಂದ ಮೇಲೆ ಎಂದು ಹೇಳಿದರು."

ಅಷ್ಟರಲ್ಲಿ ಹೊರಗಡೆ ಕಾರೊಂದು ಬಂದು ನಿಂತ ಸಪ್ಪಳವಾಯಿತು.

ಒಳಗಡೆ ಬಂದರು ಪ್ರಸಾದಬಾಬು ಐವತ್ತೈದು ಅರವತ್ತು ವರ್ಷಗಳ ಗೌರವ ವರ್ಣದ ಸಭ್ಯ ಗೃಹಸ್ಥರು....ಇಬ್ಬರಿಗೂ ವಂದಿಸಿ ಕುಳಿತುಕೊಂಡ.

"ದಯವಿಟ್ಟು ನನ್ನ ಕ್ಷಮಿಸಿ, ನಾನು ಪತ್ರಿಕೆಗಳಲ್ಲಿ ಎಲ್ಲಾ ವಿಷಯ ಓದಿ ಬಂದಿರುವೆ. ಮೊದಲೆ ಬಂದಿದ್ದರೆ ತಮಗೆ ಇಷ್ಟು ತೊಂದರೆ ಆಗುತ್ತಿರಲಿಲ್ಲವೇನೋ"

ಅದೆಲ್ಲ ಮರೆತು ಬಿಡಿ ಬಾಬೂಜಿ ವಿಷಯ ಹೇಳಿ"

"ಎಂಟು ದಿನಗಳ ಹಿಂದಿನ ಘಟನೆಯಿದು... ನಾನು ಕಾರಿನಲ್ಲಿ ಬರುತ್ತಿದ್ದೆ....ರಾತ್ರಿ ಹನ್ನೆರಡು ಮೀರಿ ಹೋಗಿತ್ತು. ಐದಾರು ಜನ ಒಬ್ಬನನ್ನು ಥಳಿಸುತ್ತಿದ್ದರು. ನಾನು ನೋಡುತ್ತಿದ್ದಂತೆ ಇಬ್ಬರು ಅವನನ್ನು ಚೂರಿಯಿಂದ ತಿವಿದರು. ಆತ ನೆಲಕ್ಕೆ ಬೀಳುತ್ತಿದ್ದಂತೆ ನನ್ನ ಕಾರಿನ ಬೆಳಕು ಅವರ ಮೇಲೆ ಬಿದ್ದಿತು. ಅವರು ಓಡಿ ಹೋದರು. ನನಗೆ ಅವನನ್ನು ರಸ್ತೆಯಲ್ಲಿಯೇ ಸಾಯಲು ಬಿಡುವ ಮನಸ್ಸಾಗಲಿಲ್ಲ ...ಎತ್ತಿ ತಂದು ಆಸ್ಪತ್ರೆಗೆ ಸೇರಿಸಲು ಓಡಿ ಬಂದೆ."

"ಒಂದು ವಿಷಯ ನಿರ್ಧಾರವಾಯಿತು. ಒಂದು ಮಾತಿಗೆ ಉತ್ತರ ಕೊಡಿ. ಒಮ್ಮಿಂದೊಮ್ಮೆಲೆ ನಿಮ್ಮ ಈ ಬದಲಾವಣೆಗೆ ಕಾರಣವೇನು ?"

ಪ್ರಸಾದಬಾಬು ಜೇಬಿಗೆ ಕೈ ಹಾಕಿ ಒಂದು ಕಾರ್ಡ್ ತೆಗೆದು ಅವನ ಕೈಗೆ ನೀಡಿದರು.. .ಅದೊಂದು ಐಡಂಟಿ ಕಾರ್ಡ್.

"ನಾನಾತನನ್ನು ಎತ್ತಿ ತರುವಾಗ ಯಾವಾಗಲೋ ನನ್ನ ಜೇಬಿಗೆ ಈ ಕಾರ್ಡ್ ಇರಿಸಿದ್ದನಾತ, ಮನೆಗೆ ಹೋಗಿ ನಾನು ರಕ್ತದ ಕಲೆಗಳಿಂದ ತುಂಬಿದ್ದ

ಶರ್ಟ್ ಮುದ್ದೆ ಮಾಡಿ ಇಟ್ಟಿದ್ದೆ. ನಿನ್ನೆ ಅದನ್ನು ಸುಡಬೇಕೆಂದು ಹೊರ ತೆಗೆದಾಗ ಸಿಕ್ಕಿತು. ಅದನ್ನು ನೋಡುತ್ತಲೆ ನನ್ನ ತಪ್ಪಿನ ಅರಿವಾಯಿತು. ಅದಕ್ಕಾಗಿ"

"ಅವರು ಮುಂದೆ ಮಾತನಾಡಲಿಲ್ಲ ಅವಿನಾಶ ಕಾರ್ಡ್ ನೋಡಿ ಬೆಚ್ಚಿಬಿದ್ದ. ಕೇಂದ್ರ ಗುಪ್ತಚಾರ ಪಡೆಯ ಸೀನಿಯರ್ ಇನ್ಸ್‌ಪೆಕ್ಟರ್ ಚಂದ್ರಕಾಂತನ ಪರಿಚಯದ ಕಾರ್ಡ್ ಹಾಗಾದರೆ....ಹಾಗಾದರೆ"

ವಿಷಯ ಗಂಭೀರವಾಗಿತ್ತು. ಅಷ್ಟರಲ್ಲಿ ಟೀಪಾಯ್ ಮೇಲಿದ್ದ ಪತ್ರಿಕೆ ಕಡೆ ನೋಡಿ ಪ್ರಸಾದಬಾಬು ಅರಚಿದರು.

"ಇವನೇ ಇವನೇ ಅಂದು ರಾತ್ರಿ ಈ ವ್ಯಕ್ತಿಯನ್ನು...." ಅವಿನಾಶ್ ಪತ್ರಿಕೆಯತ್ತ ನೋಡಿದ. ಅದು ಇಮ್ರಾನನ ಫೋಟೊ....

# 20

ಇಮ್ರಾನ ಪಿಸ್ತೂಲಿನ ಬಾಯಿಯನ್ನು ಅಲ್ತಾಫ ಹುಸೇನರ ಕಡೆ ಹೊರಳಿಸಿದ.

"ಶಹಬ್ಬಾಶ್ ಬೇಟೆ.... ಇಂದು ನನ್ನ ಜನ್ಮ ಸಾರ್ಥಕವಾಯಿತು" ಸಾಹೇಬರು ಉದ್ಗರಿಸಿದರು. ಮಮ್ತಾಜಬಾನು ಬೇಗಂರಿಗೆ ತಮ್ಮ ಕಣ್ಣು ತಾವೇ ನಂಬದಂತಾಯಿತು. ಹತ್ತಾರು ದರ್ಗಾಗಳಿಗೆ ಭೇಟಿಕೊಟ್ಟು ಪೂಜೆ ಸಲ್ಲಿಸಿ ಚಾದರಹಾಸಿ ಬೇಡಿಕೊಂಡ ಮೇಲೆ ಅಲ್ಲಾನ ಕೃಪೆಯಿಂದ ಹುಟ್ಟಿದ ಏಕಮಾತ್ರ ಪುತ್ರ.... ತಂದೆ ತಾಯಿಗಳ ರಕ್ತದಲ್ಲಿ ಮಿಂದು ಮುದ್ದೆಯಾದ ಮಾಂಸದ ಮುದ್ದೆ.... ಪ್ರೀತಿಯ ಕಂದ.... ತಂದೆಯೆಡೆ ಪಿಸ್ತೂಲ್ ತೋರಿಸುವು ದೆಂದರೆ....

"ಇಮ್ರಾನ್ ಬೇಟೆ...." ಕರಳು ಕತ್ತರಿಸುವಂತೆ ಅರಚಿ ಧಾವಿಸಿದರು ಅವರು "ಇದೇನು ಮಾಡುತ್ತಿರುವೆ.... ಅವರು ನಿನ್ನ ಅಬ್ಬಾ.... ತಂದೆ...."

"ಅಮ್ಮಿಜಾನ್....ಅಬ್ಬಾಗೆ ಹೇಳು. ಹಾಗಾದರೆ ನನ್ನ ದಾರಿಗೆ ಅಡ್ಡ ಬರಬಾರದೆಂದು"

"ಬೇಟಾ.... ನೀನು ಸರಿದಾರಿಯಲ್ಲಿ ಸಾಗುತ್ತಿದ್ದರೆ ಅವರೆಂದೂ ಅಡ್ಡಿ ಯಾಗುತ್ತಿರಲಿಲ್ಲ ನೀನು ಹಿಡಿದ ಮಾರ್ಗ ನ್ಯಾಯವಾದುದಲ್ಲ.... ಅದಕ್ಕಾಗಿ

"ಅಮ್ಮಿ ನನಗೆ ಉಪದೇಶ ಬೇಕಾಗಿಲ್ಲ...."

"ಅಂದರೆ?"

"ಅಂದರೆ. ಯಾವುದು ಸರಿ ಯಾವುದು ತಪ್ಪು ಎಂಬ ಕಲ್ಪನೆ ನನಗಿದೆ"

"ಇಲ್ಲ ಬೇಟಾ ಅಷ್ಟು ಬುದ್ಧಿ ನಿನಗಿದ್ದರೆ ಕಳ್ಳಿಯ ರಸವನ್ನು ಹಾಲೆಂದು ನೀನು ಕುಡಿಯುತ್ತಿರಲಿಲ್ಲ...."

"ಅದು ನಿಮ್ಮ ಕಣ್ಣಿಗೆ ಕಳ್ಳಿಯ ಹಾಲಾಗಿರಬಹುದು.... ನನಗೆ ಶುದ್ಧ ಹಾಲು"

"ಆ ಶುದ್ಧ ಹಾಲು ನಿನಗೇ ಮುಬಾರಕ"

"ಸರಿ ಹಾಗಾದರೆ ನನ್ನ ದಾರಿಗೆ ನನ್ನನ್ನು ಬಿಟ್ಟು ಬಿಡಿ"

"ಅದು ಹೇಗೆ ಸಾಧ್ಯ ಬೇಟೆ?"

"ಬಿಡದಿದ್ದರೆ ಅನಾಹುತವಾಗುತ್ತದೆ ಅಮ್ಮಿಜಾನ್...."

ಮಗನ ಬಾಯಿಯಿಂದ ಬಂದ ಮುದ್ದಿನ ಮಾತು ಕೇಳಿ ಎದೆಯೊಡೆಯಿತು, ಮಮ್ತಾಜಬಾನುವಿಗೆ.... ಒಡೆದ ಕಣ್ಣುಗಳಿಂದ ಪತಿಯೆಡೆ ನೋಡಿದರು. ಅಲ್ತಾಫ ಹುಸೇನ ಸಾಹೇಬರ ಮುಖದ ಮೇಲೆ ಸತ್ತ ನಗೆ ಸುಳಿಯಿತು.

"ಬೇಗಮ್.... ನಮ್ಮ ಮಗ ತುಂಬಾ ದೊಡ್ಡವನಾಗಿದ್ದಾನೆ ಈಗ ಅವನ ಕೈ ಹಿಡಿದು ನಾವು ನಡೆಸುವಂತಿಲ್ಲ"

"ಹೌದು ಅಬ್ಬಾಜಾನ್.... ಅದರಂತೆ ಆಟಿಗೆಯ ಪಿಸ್ತೂಲ್ ಸಹ ಕೊಡುವಂತಿಲ್ಲ"

"ಇಲ್ಲ ಬೇಟಾ.... ನೀನು ಚಿಕ್ಕವನಾಗಿದ್ದಾಗ ನಾವೆಂದೂ ನಿನಗೆ ಆಟಿಗೆ ಎಂದೂ ಪಿಸ್ತೂಲ್ ಕೊಟ್ಟಿಲ್ಲ.... ಆದರೂ ಅದರ ಕರಿನೆರಳು ನಿನ್ನ ಮೇಲೆ ಹೇಗೆ ಬಿದ್ದಿತೋ ಅಲ್ಲಾಗೇ ಗೊತ್ತು!"

ಕರೆಕ್ಟ್ ಅಬ್ಬಾಜಾನ್ ಆ ಅಲ್ಲಾನೆ ನನ್ನ ಕೈಯಲ್ಲಿ ಇದನ್ನು ಕೊಟ್ಟಿದ್ದಾನೆ."

"ತಪ್ಪು ಬೇಟೆ ಅಲ್ಲಾ ಎಂದೂ ಹಿಂಸೆಯ ಮಾರ್ಗ ಹಿಡಿಯಲು ಹೇಳಲ್ಲ. ಮತ್ತೊಬ್ಬರಿಗಾಗಿ ನಿನ್ನ ಜೀವ ಕೊಟ್ಟು ಮುಕ್ತಿ ಪಡೆ ಅಂದಿದ್ದಾನೆ. ಅದೇ ಮಾತನ್ನು ಪೈಗಂಬರ ಸಾಹೇಬರೂ ಸಾಕ್ಷಾತ್ ನಡೆಸಿ ತೋರಿಸಿದ್ದಾರೆ."

"ಅದೆಲ್ಲಾ ಹಿಂದಿನ ಮಾತು ಅಬ್ಬಾಜಾನ್.... ಅದರಲ್ಲಿ ನನಗೆ ನಂಬಿಕೆಯಿಲ್ಲ...."

"ಹಾಗಾದರೆ ಬಂದೂಕು ಹಿಡಿಯುವುದರಲ್ಲಿ ನಿನಗೆ ನಂಬಿಕೆಯಿಲ್ಲ. ಹಾಗಾದರೆ ಬಂದೂಕು ಹಿಡಿಯುವುದರಲ್ಲಿ ನಿನಗೆ ನಂಬಿಕೆಯಿದೆಯೇ?" ಪಾಪವೆಂಬುದನ್ನು ಅರಿಯದ ಜನರನ್ನು ಕೊಲ್ಲುವುದರಲ್ಲಿ ನಿನಗೆ ಪ್ರೀತಿಯಿದಯೇ.... ದೇಶದ ಬೆನ್ನೆಲುಬಾಗಿ ನಿಂತ ಮುಂದಿನ ಭಾವೀ ಪೀಳಿಗೆಯನ್ನು ಮಾದಕ ಪದಾರ್ಥಗಳ ದಾಸರನ್ನಾಗಿ ಮಾಡುವುದರಲ್ಲಿ ನಂಬಿಕೆಯಿದೆಯೇ?

"ಇದನ್ನು ನಾನಾಗಿ ಮಾಡುತ್ತಿಲ್ಲ ಡ್ಯಾಡೀ ಅವರಾಗಿ ಪಡೆಯುತ್ತಿದ್ದಾರೆ. ನಾನೊಬ್ಬ ವ್ಯಾಪಾರಿ....

ನೀನು ಕೇವಲ ವ್ಯಾಪಾರಿಯಲ್ಲ.... ನೀನು ಮೃತ್ಯುವನ್ನು ಮಾರುವ ಮೃತ್ಯುವಿನ ವ್ಯಾಪಾರಿ"

"ಅದು ಅವರ ಅದೃಷ್ಟ... ನಾನೆಂದೂ ಅವರ ಮನೆಯ ಬಾಗಿಲಿಗೆ ಹೋಗಿ ಇದನ್ನು ನಾನು ಮಾರುತ್ತಿದ್ದೇನೆ ತೆಗೆದುಕೊಳ್ಳಿ ಎಂದು ಬೇಡಿಕೊಳ್ಳುವುದಿಲ್ಲವಲ್ಲ. ಅವರೇ ನನ್ನ ಬಾಗಿಲವರೆಗೂ ಬಂದು ಹಿಡಿಹಿಡಿ ನೋಟು ಹಿಡಿದು ಕೊಡುಕೊಡು ಅಂದಾಗ ವ್ಯಾಪಾರಿಯಾದ ನಾನು ಹೇಗೆ "ಇಲ್ಲ" ಎಂದು ಹೇಳಲು ಸಾಧ್ಯ?"

"ಅವರು ನಿನ್ನ ತನಕ ಬರುವಂತೆ ಮಾಡಿದವನೂ ನೀನೇ ಅಲ್ಲವೇ?"

"ಅಂದರೇನು?"

"ಮೊದಲು ಪುಕ್ಕಟೆಯಾಗಿ ಅವರಿಗೆ ನೀಡಿ ಸವಿ ಹಚ್ಚಿದವರು ಯಾರು? ಅದರ ಬಗ್ಗೆ ನೂರೆಂಟು ಕಟ್ಟುಕತೆ ಕಟ್ಟಿ ಸುಖದ ಕಲ್ಪನೆ ನೀಡಿದವರಾರು? ರೇಶಿಮೆಯ ನಯವಾದ ಬಲೆ ಹೆಣೆದು ನಂತರ ಅವರಿಂದ ಹಣ ಸುಲಿದು ಭಿಕ್ಷುಕರನ್ನಾಗಿ ಮಾಡಿ ಸಾವಿನ ಮುಂದೆ ತಂದು ನಿಲ್ಲಿಸಿದವರು ಯಾರು?"

"ನಾನಂತೂ ಖಂಡಿತ ಅಲ್ಲ"

"ಖಂಡಿತವಾಗಿಯೂ ನೀನೇ.... ನೀನೇ ಆ ಶೈತಾನ್....

"ಅಬ್ಬಾಜಾನ್...."

"ಜೋರಾಗಿ ಅರಚಬೇಡ, ಗಂಟಲು ನರ ಹರಿದು ಹೋದೀತು!

ನನಗೆಲ್ಲಾ ತಿಳಿದಿದೆ.... ಲಾವಣ್ಯಳ ಹಿಂದೆ ಬಿದ್ದು ಅವಳಿಗೆ ಚಟ ಹಚ್ಚಿದವ ರಾರು?"

"ಅಬ್ಬಾಜಾನ್"

"ಹೇಳು ಬೇಟೆ . ಅವಳ ಐದಾರು ಲಕ್ಷ ರೂಪಾಯಿ ಹಾಳು ಮಾಡಿ ಸಾಲದ ಹೊರೆಯಲ್ಲಿ ಮುಳುಗಿಸಿದವರಾರು? ಅವಳ ಶೀಲಹರಣ ಮಾಡಿ ಬ್ಲೂಫಿಲ್ಮ್ ತಯಾರಿಸಿ ಬ್ಲಾಕ್‌ಮೇಲ್ ಮಾಡಿದವರಾರು? ಪಾಂಡುರಂಗನ ಮೇಲೆ ಕೊಲೆ ಮಾಡಲು ಪ್ರೇರೇಪಿಸಿ ಆಕೆಯನ್ನು ಗುಂಡಿನಿಂದ ಗಾಯ ಗೊಳಿಸಿ.... ಮೃತ್ಯುವಿನ ಮುಖಕ್ಕೆ ದೂಡಿದವರಾರು ...ಹೇಳು"

"ಇದೆಲ್ಲಾ....ನಿಮಗೆ ಹೇಗೆ ಗೊತ್ತು ?"

"ಬೇಟೆ .. ಲಾವಣ್ಯ ಬೇರೆ ಯಾರೂ ಅಲ್ಲ....ನನ್ನ ಪ್ರೀತಿ ಪಾತ್ರ ಮಿತ್ರನ ಮಗಳು. ಅವಳ ತಂದೆ ನಿನ್ನನ್ನು ಎತ್ತಿ ಆಡಿಸಿ ನಿನ್ನ ಬಾಯಿಗೆ ಹಾಲು ಹೊಯ್ದರು. ಹಾಲು ನೀಡಿದವರ ಬಾಳನ್ನು ವಿಷಯವನ್ನಾಗಿ ಮಾಡಿದ ಮಹಾತ್ಮ ನೀನು...."

"ಡ್ಯಾಡಿ....ಇದು ನನಗೆ ಗೊತ್ತಿರಲಿಲ್ಲ"

"ಗೊತ್ತಿದ್ದರೆ ಏನು ಮಾಡುತ್ತಿದ್ದೆ ?....ಅವಳ ಪಾದ ತೊಳೆದು ಪೂಜೆ ಮಾಡುತ್ತಿದ್ದೆ ಏನು ?"

ಇಮ್ರಾನನಿಂದ ಉತ್ತರ ಬರಲಿಲ್ಲ.

"ಹೇಳು ಬೇಟೆ ಇಷ್ಟೊತ್ತಿನವರೆಗೂ ಹಾರಾಡಿದೆಯಲ್ಲ....ಹೇಳು ಪವಿತ್ರ ಇಸ್ಲಾಂ ಧರ್ಮ ಇದನ್ನು ಮಾಡು ಎಂದು ಹೇಳಿದೆಯೆ ? ಅಲ್ಲಾನ ಕೃಪೆ ಎಂದೆಯಲ್ಲ ಆ ಅಲ್ಲಾ ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾನೆಯೇ ?...."

"ಅಬ್ಬಾಜಾನ್....ತಿಳಿಯದೇ ಆದ ಅಪರಾಧವಿದು"

"ಸರಿ ನಿನ್ನ ಮಾತು ಒಪ್ಪಿಕೊಳ್ಳುತ್ತೇವೆ....ನಿನ್ನ ಗೆಳೆಯ ಅನೂಪ ಇದ್ದಾನಲ್ಲ ಆತನನ್ನು ನನ್ನ ಫ್ಯಾಕ್ಟರಿಯ ಕೆಲಸಕ್ಕೆ ಹಚ್ಚಿದವ ನೀನೇ. ಅವನನ್ನು ಕೆಲಸದಿಂದ ಬಿಡಿಸಿ ಒಯ್ದು ಈ ವಿಷ ಮಾರುವ ಕೆಲಸಕ್ಕೆ ಹಚ್ಚಿದೆಯಲ್ಲ.... ಅವನ ತಂಗಿಯನ್ನು ಪಾಪದ ದಾರಿಗೆ ಎಳೆದೆಯಲ್ಲ....

ಇದೂ ಸಹ ನಿನಗೆ ತಿಳಿಯದೇ ಆಗಿದೆಯೇ ?

"ಅಬ್ಬಾಜಾನ್ ...ವ್ಯರ್ಥ ಮಾತು ಆಡಬೇಡಿ....ನಮ್ಮನ್ನು ತುಳಿದು ನಮ್ಮ ನಾಶ ಮಾಡಲು ಯತ್ನಿಸುತ್ತಿರುವವರ ಬಗ್ಗೆ ಅನುಕಂಪದ ಮಾತು ಸರಿಯಲ್ಲ."

"ನಿನ್ನ ಕಣ್ಣಿಗೆ ಪಾಪದ ಪೊರೆ ಬಂದಿದೆ ಬೇಟೆ ಈ ದೇಶದಲ್ಲಿ ನಾವು ಎಷ್ಟು ಸುರಕ್ಷಿತವಾಗಿದ್ದೇವೆ ಎಂಬ ಕಲ್ಪನೆ ನಿನಗಿಲ್ಲ ...ನೀನು ನಂಬಿದ ದೇಶ, ಯಾವ ದೇಶದ ಸಲುವಾಗಿ ನೀನು ಇದನ್ನೆಲ್ಲ ಮಾಡುತ್ತಿರುವೆಯೋ ಆ ದೇಶ ಇಂದು ಹೊತ್ತಿ ಉರಿಯುತ್ತಿದೆ. ಪರಸ್ಪರ ಕಚ್ಚಾಡಿ ಸಾಯುತ್ತಿದ್ದಾರೆ. ಅಲ್ಲಿ ನೀನಿದ್ದರೆ ಏನಾಗುತ್ತಿತ್ತು ಸ್ವಲ್ಪ ಯೋಚಿಸು. ಇದು ಮಹಾನ್ ದೇಶ.... ಸ್ವಾತಂತ್ರ್ಯ ನಂತರ ಇಬ್ಭಾಗವಾದಾಗ ಹಿಂದುರಾಷ್ಟ್ರ ಎಂದು ಸಾರಿದ್ದರೆ ಇಂದು ನಾವ್ಯಾರೂ ಇಲ್ಲಿ ಇರುತ್ತಿರಲಿಲ್ಲ. ನಮ್ಮೆಲ್ಲರಿಗೂ ಆಶ್ರಯಕೊಟ್ಟ ದೇಶವಿದು.. ನಮ್ಮನ್ನು ಸಾಕಿ ಬೆಳೆಸಿದ ದೇಶ. ನಮ್ಮ ಬಾಂಧವರು ಈ ದೇಶದ ರಾಷ್ಟ್ರಪತಿಗಳಾಗಿ ಮೆರೆದಿದ್ದಾರೆ. ಸಚಿವರಾಗಿದ್ದಾರೆ. ರಾಜ್ಯ ಪಾಲರಾಗಿದ್ದಾರೆ. ನಮಗೆಲ್ಲಾ ರೀತಿಯ ಸೌಲಭ್ಯ ರಕ್ಷಣೆ ನಮಗಿದೆ. ಇಷ್ಟೆಲ್ಲ ಇದ್ದು ನೀವು ಈ ರೀತಿ ಮಾಡುವುದು ಸರಿಯಲ್ಲ. ಯಾವ ದೇಶದಲ್ಲಿ ಹುಟ್ಟಿ ಅಲ್ಲಿಯ ಅನ್ನ ತಿಂದು, ನೀರು ಕುಡಿದು, ಗಾಳಿ ಸೇವಿಸಿ ಬದುಕಿ ಇರುವೆಯೆಲ್ಲ ಅದೇ ದೇಶಕ್ಕೆ ಅನ್ಯಾಯ ಮಾಡುವುದು ಪಶುಗಳಿಂದಲೇ ಆಗದ ಕೆಲಸ.... ಬೇಟೆ. ನೀನು ಹಿಡಿದ ದಾರಿ ತಪ್ಪು ಸರಿಯಾಗಿ ಅರ್ಥ ಮಾಡಿಕೊಂಡು ಈಗಲಾದರೂ ಮರಳಿ ಬಾ....ಜೀವನ ಸುಧಾರಿಸಿಕೊ....

"ಅದೆಂದಿಗೂ ಸಾಧ್ಯವಿಲ್ಲ. ಅಬ್ಬಾ ಜಾನ್ ನಾನು ಮುಂದಿಟ್ಟ ಹೆಜ್ಜೆ ಹಿಂದಿಡಲಾರೆ ನಾನು ಪ್ರಮಾಣ ಮಾಡಿದ್ದೇನೆ."

"ನಾನೂ ಪ್ರಮಾಣ ಮಾಡಿದ್ದೇನೆ ಈ ದೇಶದ ಗೌರವ... ರಕ್ಷಣೆಗಾಗಿ ನನ್ನ ಪ್ರಾಣ ಕೊಡುತ್ತೇನೆಂದು ಮಾತು ಕೊಟ್ಟಿದ್ದೇನೆ... "

"ಸರಿ ಹಾಗಾದರೆ ನೀವು ನಿಮ್ಮ ಮಾತು ನಡೆಸಿ ನಾನು ನನ್ನ ಮಾತಿನಂತೆ ನಡೆಯುವೆ....ಒಬ್ಬರ ದಾರಿಗೆ ಒಬ್ಬರು ಅಡ್ಡಿಯಾಗ ಬಾರದು....

"ನನ್ನ ದಾರಿಗೆ ನೀನು ಅಡ್ಡಿಯಾಗಿರುವೆ ಇಮ್ರಾನ್"

"ನನ್ನ ದಾರಿಗೆ ನೀನು ಅಡ್ಡಿ ಯಾಗಿರುವೆ ಅಲ್ತಾಫ ಹುಸೇನ್...."

"ಫಳೀರ್" ಎಂದು ಕೆನ್ನೆಗೆ ಬಾರಿಸಿದರು ಮಮತಾಜಬಾನು ಬೇಗಂ.

"ನಾಲಾಯಕ್ ಜನ್ಮ ಕೊಟ್ಟ ತಂದೆಯನ್ನು ಒಂಟಿ ಹೆಸರಿನಿಂದ ಕರೆಯುತ್ತಿರುವೆಯಾ ?....ಶೈತಾನ್....ಭಾರತದ ರಾಷ್ಟ್ರಪತಿ ಸಹ ಎಂದೂ ಈ ರೀತಿ ಅವಮಾನ ಮಾಡಿಲ್ಲ....ಸ್ವಂತ ಮಗನಾದ ನೀನು...."

"ಅಮ್ಮೀ...."

ಕಣ್ಣುಗಳಲ್ಲಿ ಕಿಡಿಕಾರುತ್ತ ಅರಚಿದ ಇಮ್ರಾನ್.

"ಇದು ಅತಿಯಾಯಿತು... ನನ್ನಿಂದ ಸಹಿಸಲು ಸಾಧ್ಯವಿಲ್ಲ...."

"ಇದು ನಿನ್ನ ಮನೆಯಲ್ಲ .. ನೆನಪಿಡು... ಅಲ್ಲದೆ ನಿನ್ನಂಥ ಶೈತಾನರಿಗೆ ಇಲ್ಲಿ ಸ್ಥಾನವಿಲ್ಲ. ನಡೆಯಾಚೆ....ನಾಯೀ...."

"ಅಬ್ಬಾ ಜಾನ್"

"ಬಾಯಿ ಮುಚ್ಚು" ಇನ್ನೊಂದು ಸಾರಿ ನಿನ್ನ ಹೊಲಸು ನಾಲಿಗೆಯಿಂದ ಆ ಪವಿತ್ರವಾದ ಹೆಸರನ್ನು ಉಚ್ಚರಿಸಬೇಡ"

"ಯೋಚನೆ ಮಾಡಿ ಮಾತನಾಡಿ....ನಾನೊಬ್ಬನೇ ನಿಮ್ಮ ಮಗ.... ನಿಮಗೆ ನೀರು ಬಿಡುವವನೂ ನಾನೇ....ನಿಮ್ಮ ಜನಾಜಾಕ್ಕೆ ಹೆಗಲು ಸಹ ನಾನೇ...."

"ಬೇಕಾಗಿಲ್ಲ....ನಿನ್ನಂಥ ನೀಚ ಮಗನಿಂದ ಈ ಸೇವೆ ತೆಗೆದುಕೊಂಡರೆ ನನ್ನನ್ನು ಎಂದೆಂದೂ ಖುದಾ ಕ್ಷಮಿಸುವುದಿಲ್ಲ .. ನೆನಪಿಡು ಇಮ್ರಾನ್ ನನಗೆ ನೀನು ಒಬ್ಬನೇ ಮಗನೆಂದು ತಿಳಿಯಬೇಡ. ಈ ದೇಶದಲ್ಲಿಯ ಪ್ರತಿಯೊಬ್ಬರೂ ನನಗೆ ಮಕ್ಕಳೇ... ಅವರಲ್ಲಿ ಯಾರಾದರೊಬ್ಬರು ನೀರು ಬಿಟ್ಟರೆ ಸಾಕು... ನಾಲ್ಕು ಜನ ಹೆಗಲು ಕೊಟ್ಟರೆ ಸಾಕು... ನನಗೆ ಸ್ವರ್ಗ ಸಿಗುತ್ತದೆ."

"ಈ ದೇಶ ನಿಮಗೇನು ಮಾಡಿದೆ ಅಂತ ನೀವು ಈ ರೀತಿ ವರ್ತಿಸುತ್ತಿದ್ದೀರೋ ನಾನರಿಯೆ"

"ಈ ದೇಶ ನನಗೆ ಸ್ವರ್ಗಸಮಾನ....ಕುರಾನದಷ್ಟೇ ಪವಿತ್ರ. ಜಗತ್ತಿನಲ್ಲಿ ನಾನು ಅತ್ಯಂತ ಪ್ರೀತಿಸುವ ವಸ್ತುಗಳೆಂದರೆ ಎರಡೇ ಎರಡು. ಒಂದು ಕುರಾನ್... ಎರಡನೆಯದು ಜನ್ಮ ನೀಡಿದ ಈ ಭೂಮಿ....ಈ ನಾಡು....ಈ ದೇಶ. ಇಮ್ರಾನ್....ಈ ದೇಶದ ಮಹಾನತೆ ನೀನರಿತಿಲ್ಲ....ಹಿಂದು

ಮುಸ್ಲಿಮರು ಇಲ್ಲಿ ಒಂದೇ ತಟ್ಟೆಯಲ್ಲಿ ಉಂಡು ಬೆಳೆದಿದ್ದಾರೆ. ಇಬ್ಬರೂ ಈ ದೇಶಕ್ಕಾಗಿ ತಮ್ಮ ತಮ್ಮ ರಕ್ತವನ್ನು ನೀರಿನಂತೆ ಹರಿಸಿದ್ದಾರೆ.

"ಅದಕ್ಕಾಗಿಯೇ ನಮ್ಮನ್ನು ದೇಶದಿಂದ ಹೊರ ಹಾಕಿದರು."

"ಇದು ನಿನ್ನ ತಪ್ಪು ಕಲ್ಪನೆ. ಅವರೆಂದೂ ನಮ್ಮನ್ನು ಹೊರ ಹಾಕಿಲ್ಲ: ನಮ್ಮಲ್ಲಿಯ ಕೆಲವರು ಹೊರ ಹೋಗಲು ಹಟ ಹಿಡಿದು ಈ ಮಹಾನ್ ದೇಶವನ್ನು ಒಡೆದು ಎರಡು ಹೋಳು ಮಾಡಿದರು. ಇಲ್ಲಿಯಿರಲು ಇಷ್ಟವಿಲ್ಲದವರು ಹೊರಟು ಹೋದರು. ಇದೇ ಜನ್ನತ ಎಂದರಿತವರು ಇಲ್ಲೇ ಉಳಿದುಕೊಂಡರು. ಅವರಲ್ಲಿ ನಾನು ಒಬ್ಬ.. ಇಮ್ರಾನ್....ಒಡೆದು ಹೋದವರೆಷ್ಟು ಸುಖದಿಂದ ಇದ್ದಾರೆ ಎಂಬುದನ್ನು ಕಣ್ತೆರೆದು ನೋಡು.... ಇಲ್ಲಿದ್ದ ನಿನ್ನ ಬಾಂಧವರನ್ನು ನೋಡಿ ಆಮೇಲೆ ಹೇಳು. ಇದರಲ್ಲಿ ಯಾರು ಸುಖಿಗಳು ಅಂತ....ತಮ್ಮತನ ತ್ಯಾಗ ಮಾಡಿ ನಮ್ಮನ್ನು ಬೆಳೆಸಿದ್ದಾರೆ. ಇಲ್ಲಿಯವರು ಅವರಿಗೆ ಅನ್ಯಾಯ ಮಾಡುವುದು ಸರಿಯಲ್ಲ..ಒಡೆದು ಆಳುವವರ ಮಾತು ನಂಬಬೇಡ. ತಾವಂತೂ ಹಾಳಾಗಿದ್ದಾರೆ. ಸುಖ.... ಶಾಂತಿಗಳ ಬೀಡಾದ ಭಾರತವನ್ನು ಹಾಳು ಮಾಡಬೇಕು ಅಂತ ಸಂಚು ಹೂಡಿದವರ ಸಕ್ಕರೆ ಮಾತಿಗೆ ಕಿವಿಕೊಡಬೇಡ. ಚೆನ್ನಾಗಿ ಯೋಚನೆ ಮಾಡಿ ನೋಡು. ನಿನ್ನ ತಪ್ಪಿನ ಅರಿವು ನಿನಗಾಗುತ್ತದೆ...."

"ಚೆನ್ನಾಗಿ ಆಗಿದೆ....ನಾನೇನು ತಪ್ಪು ಮಾಡಿದೆ ಎಂದೂ ತಿಳಿದಿದೆ. ಆ ತಪ್ಪನ್ನು ಸರಿಪಡಿಸಿಕೊಳ್ಳಲು ಹೊರಟ ನನ್ನನ್ನು ತಡೆಯಬೇಡ"

"ನನ್ನ ದೇಹದಲ್ಲಿ ಹನಿರಕ್ತ ಇರುವವರೆಗೂ ನಾನು ನಿನ್ನನ್ನು ತಡೆಯುವೆ"

"ನಿಮ್ಮ ಮಗನನ್ನು ತಡೆಯುವಿರಾ ನೀವು ?"

"ಹಾಂ"

ಇಮ್ರಾನ್ ಪಿಸ್ತೂಲಿನ ಬಾಯಿಯನ್ನು ಅಲ್ತಾಫ ಹುಸೇನರ ಎದೆಗೆ ಒತ್ತಿ ಹಿಡಿದು ಅಬ್ಬರಿಸಿ ಕೇಳಿದ.

"ಈಗ ಹೇಳಿ....ಈಗಲೂ ತಡೆಯುತ್ತೀರಾ ?"

ಅಲ್ತಾಫ ಹುಸೇನರ ಮುಖದ ಮೇಲೆ ಮಂದಹಾಸ ಮಿನುಗಿತು.

"ಮೂರ್ಖ ಬ್ರಿಟಿಷರ ತೋಫಿಗೇ ಹೆದರದ ಗಂಡೆದೆ ಇದು .. ನಿನ್ನ ಈ ಪಿಸ್ತೂಲಿಗೆ ಹೆದರುವುದೇ ?"

"ಅಬ್ಬಾ...."

"ಬಾಯಿ ಮುಚ್ಚು....ಮೊದಲೇ ಹೇಳಿರುವೆ....ನಿನ್ನ ಬಾಯಿಯಲ್ಲಿ ಪವಿತ್ರವಾದ ಹೆಸರು ಬರಬಾರದೆಂದು .. ಹೂಂ....ಧೈರ್ಯವಿದ್ದರೆ ಗುಂಡು ಹಾರಿಸು ನನ್ನೆದೆಯನ್ನು ಸೀಳಲಿ ಗುಂಡುಗಳು. ಎದೆಯಿಂದ ಹರಿದ ರಕ್ತದಿಂದ ಭಾರತ ಮಾತೆಗೆ ಅಭಿಷೇಕ ಮಾಡಿ ಹೆಮ್ಮೆಯಿಂದ ನಾನು ಕಣ್ಣು ಮುಚ್ಚುತ್ತೇನೆ... ಹೂಂ....

ಇಮ್ರಾನ್ ಕೋಪದಿಂದ ಕರಕರ ಹಲ್ಲು ಕಡಿದ....

ಜನ್ಮ ನೀಡಿದ ತಂದೆಯೇ ಶತೃವಾಗಿ ಎದುರು ನಿಂತಿದ್ದ.

ಅವನನ್ನು ದಾರಿಯಿಂದ ಸರಿಸದೇ ಮುಂದಡಿ ಇಡುವಂತಿರಲಿಲ್ಲ. ಅದರೊಂದಿಗೆ ಪೊಲೀಸರು ಬೇರೆ ಅವನ ಹಿಂದೆ ಬಿದ್ದಿದ್ದರು. ಅವರಿಗೆ ವಾಸನೆ ಬಡಿಯುವ ಮೊದಲೇ ಅಲ್ಲಿಂದ ಕೆಲಸ ಮಾಡಿಕೊಂಡು ಪಾರಾಗ ಬೇಕಾಗಿತ್ತು.

"ಕೊನೆಯ ಬಾರಿ ಹೇಳುತ್ತೇನೆ....ನನ್ನ ದಾರಿಯಿಂದ ಸರಿಯಿರಿ. ನನ್ನ ಬಳಿ ಹೆಚ್ಚು ಸಮಯವಿಲ್ಲ"

"ನಾನು ಜೀವಿಸಿರುವವರೆಗೂ ನಿನ್ನನ್ನು ಒಂದು ಹೆಜ್ಜೆ ಮುಂದೆ ಬಿಡಲಾರೆ"

"ಹೀಗೋ" ಹಾಗಾದರೆ ಅನುಭವಿಸಿ....

ಇಮ್ರಾನ್ ಕುದುರೆ ಅದಮುವ ಮೊದಲೇ ಮಮತಾಜಬಾನುಬೇಗಂ ಚೀರುತ್ತ ಅವನೆದುರು ಬಂದು ನಿಂತರು.

"ಇಮ್ರಾನ್ ಶೈತಾನಕ್ಕೆ ದೋಸ್ತ್....ನಿನ್ನ ಅಬ್ಬಾನನ್ನು ಕೊಲ್ಲಲು ಮುಂದಾದೆಯಾ ? . ಎಂಥ ಕಟುಕ ನೀನು."

"ಅಮ್ಮಿಜಾನ್...."

"ಬಾಯಿ ಮೇಲೆ ಚಪ್ಪಲಿಯಿಂದ ಹೊಡೆಯುತ್ತೇನೆ....ಹುಷಾರ್....ನಿನ್ನ ಬಾಯಿಯಲ್ಲಿ ಈ ಶಬ್ದ ಬರಕೂಡದು....ನಿನ್ನ ಅಬ್ಬಾನನ್ನು ಕೊಲ್ಲುವ ಮೊದಲು ನನ್ನ ಹೆಣ ದಾಟಿ ಹೋಗಬೇಕು ನೀನು. ತಿಳಿಯಿತೆ ?

"ನಾನು ನಿನ್ನ ಎದೆ ಹಾಲು ಕುಡಿದು ಬೆಳೆದಿದ್ದೇನೆ. ಆ ಪಾಪ ಮಾಡಲಾರೆ....

"ಎಲ್ಲರಿಗೂ ತನ್ನ ಪ್ರೀತಿ ಮಮತೆ ಸತ್ಯ ಪ್ರೇಮ ಅಹಿಂಸೆಗಳ ಅಮೃತ ಸುರಿಸಿದ ಈ ದೇಶಕ್ಕೆ ದ್ರೋಹ ಬಗೆಯುವ ನಿನಗೆ ನಾನು ಯಾವ ಗಿಡದ ತೊಪ್ಪಲು ಇಮ್ರಾನ್....ಹೂಂ... "

"ಒಳ್ಳೆ ಮಾತಿನಿಂದ ದಾರಿಯಿಂದ ಸರಿಯಿರಿ.... !"

ಜೋರಾಗಿ ಪರಚಿದ ಇಮ್ರಾನ್....ಮುಮತಾಜಬಾನು ಅವರ ಕೈ ಹಿಡಿದು ದೂರ ಎಳೆದೊಗೆದ.. ಈಗ ಅವನೆದುರು ಎದೆಯೊಡ್ಡಿ ನಿಂತಿದ್ದರು ಅಲ್ತಾಫ್ ಹುಸೇನ್ ಸಾಹೇಬರು. ಅವರ ಕಣ್ಣುಗಳಲ್ಲಿ ವಿಚಿತ್ರ ಜ್ಯೋತಿ ಮಿನುಗುತ್ತಿತ್ತು....ಮುಖದ ಮೇಲೆ ಅಪೂರ್ವ ಕಾಂತಿ. ಪಿಸ್ತೂಲಿನ ಮುಖ ಅವನೆಡೆ ಹೊರಳಿತು....ಕುದುರೆ ಅದಮುತ್ತಲು ಢಂಢಂ ಎಂದು ಸಿಡಿದವು ಎರಡು ಗುಂಡುಗಳು....

# 21

ಎದೆ ಹಿಡಿದುಕೊಂಡ ಅಲ್ತಾಫಹುಸೇನ ಸಾಹೇಬರು "ಯಾ ಅಲ್ಲಾ" ಎಂದು ನರಳಿದರು. ಅವರ ಕೈ ಬೆರಳುಗಳ ಮಧ್ಯದಿಂದ ಬುಳುಬುಳನೆ ಬಿಸಿಬಿಸಿ ನೆತ್ತರು ಹರಿದು ಕೆಳಗೆ ಬೀಳುತ್ತಿದ್ದಂತೆ ಅದನ್ನು ತಮ್ಮೆರಡು ಕೈಗಳ ಬೊಗಸೆಯಲ್ಲಿ ಹಿಡಿದು ಮೇಲೆತ್ತಿ. ಕೆಳಗಡೆ ಸುರಿದು ಅರ್ಘ್ಯ ನೀಡಿದರು ಅಲ್ತಾಫ್ ಹುಸೇನರು "ಮೇರಿ, ಮಾ....ಭಾರತ ಮಾತಾ....ಮೇರಾ ಅಂತಿಮ ಪ್ರಣಾಮ್ ಸ್ವೀಕಾರ್ ಕರೋ ಮಾ....ಮೇರಾ ಬೇಟಾ ನಾದಾನ ಹೈ....ವಹಿ ರಾಸ್ತಾ ಭೂಲ ಗಯಾ ಹೈ....ಭಟಕಗಯಾ ಹೈ..ಉಸೆ ಮಾಫ ಕರೋ ಮಾ..." ಭಾರತ ಮಾತೆಗೆ ವಂದಿಸುತ್ತ ಮಗನ ಪರವಾಗಿ ಕ್ಷಮೆ ಬೇಡಿದ ಅವರು ಹಾಗೇ ನೆಲಕ್ಕೆ ಕುಸಿದರು. ಮೊಣಕಾಲುಗಳನ್ನು ನೆಲಕ್ಕೆ ಊರಿ ಮೇಲೆ ಆಗಸದತ್ತ ನೋಡುತ್ತ ಎರಡೂ ಕೈ ಮುಂದೆ ಒಡ್ಡಿ ಪ್ರಾರ್ಥಿಸತೊಡಗಿದರು. ಅವರ ಬಾಯಿಯಿಂದ ಕುರಾನಿನ ವಾಕ್ಯಗಳು ಪುಂಖಾನುಪುಂಖವಾಗಿ ಹೊರ

ಬರಲಾರಂಭಿಸಿದವು. ಮುಖದ ಮೇಲೆ ವೇದನೆಯ ಲವಲೇಶವೂ ಇರಲಿಲ್ಲ. ಅದರ ಬದಲಾಗಿ ಒಂದು ಬಗೆಯ ಬೆಳ್ಳನೆಯ ಬೆಳಕು ಹರಡಿತ್ತು. ಅವರ ಎರಡೂ ಕಣ್ಣುಗಳು ಪ್ರಕಾಶಮಾನವಾಗಿ ಬೆಳಗುತ್ತಿದ್ದವು....

ಅವರೆದುರು ನಿಂತಿದ್ದ ಇಮ್ರಾನ್ ಹತಪ್ರದನಾಗಿದ್ದ. ಒಂದು ಬಾರಿ ತನ್ನ ಕೈಲಿದ್ದ ಪಿಸ್ತೂಲಿನತ್ತ ನೋಡಿದರೆ ಮತ್ತೊಮ್ಮೆ ಅಬ್ಬಾಜಾನ್ ಕಡೆ ದಿಟ್ಟಿಸುತ್ತಿದ್ದ. ಎದೆಯಿಂದಿಳಿದ ರಕ್ತ ಮೊಣಕಾಲು ತೋಯಿಸಿ ಕೆಳಗೆ ನಿಧಾನವಾಗಿ ಒಂದೆಡೆ ಕೂಡತೊಡಗಿತ್ತು. ಅಲ್ತಾಫ ಹುಸೇನಸಾಹೇಬರು ಕಿಂಚಿತ್ತೂ ವಿಚಲಿತರಾಗಲಿಲ್ಲ. ಅತ್ಯಂತ ಭಕ್ತಿಯಿಂದ ಪರವಶರಾಗಿ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಅವರ ಕಂಠದಿಂದ ಬರುತ್ತಿದ್ದ ಗಟ್ಟಿಯಾದ ವಾಣಿಗೆ ಮೂರ್ಛೆ ತಪ್ಪಿಬಿದ್ದಿದ್ದ ಮುಮ್ತಾಜಬಾನು ಬೇಗಂ ಎಚ್ಚೆತ್ತು ಎದ್ದು ಕುಳಿತರು. ಅವರ ದೃಷ್ಟಿ ಪ್ರಾರ್ಥನೆ ಸಲ್ಲಿಸುತ್ತಿದ್ದ ಪತಿಯೆಡೆ ಹೊರಳುತ್ತಿದ್ದಂತೆ ತಲೆತುಂಬಾ ಸೆರಗು ಹೊದ್ದ ಅವರೂ ಅವರೊಂದಿಗೆ ಪ್ರಾರ್ಥನೆಯಲ್ಲಿ ಮುಂದಾದರು....

'ಆಮೀನ್' ಎನ್ನುತ್ತ ಮುಖದ ತುಂಬೆಲ್ಲ ಎರಡೂ ಹಸ್ತಗಳನ್ನು ಸವರಿ ತುಟಿಗೆ ತಂದು ಚುಂಬಿಸಿದರು. ಅಲ್ತಾಫಹುಸೇನ್ ಸಾಹೇಬರು ಅಲ್ಲಿಯವರೆಗೂ ವೇದನೆಯ ಲವಲೇಶವೂ ಇರದ ಅವರ ದೇಹದಲ್ಲಿ ಒಮ್ಮೆಲೆ ನೋವಿನ ಅಲೆಎದ್ದು 'ಹಾ .. ಖುದಾ' ಎಂದು ನರಳಿದಾಗ ಗಾಬರಿಯಾದ ಬೇಗಂ ಅವರೆಡೆ ಭಯವಿಹ್ವಲರಾಗಿ ನೋಡುತ್ತಿದ್ದಂತೆ ಕೆಂಪುರಕ್ತದಿಂದ ತೊಯ್ದು ಅವರ ಎದೆ ಮೊಣಕಾಲು ಕಣ್ಣಿಗೆ ಗೋಚರಿಸಿ ಚೀತ್ಕರಿಸುತ್ತಾ ಅವರೆಡೆ ಧಾವಿಸಿದರು. ಅವರ ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯ ತೊಡಗಿತು.

"ಅರೆ ಏನಾಯಿತು ?....ಏನಾಯಿತು ನಿಮಗೆ ?"

"ಗಾಬರಿಯಾಗಬೇಡಿ ಬೇಗಂ....ಬ್ರಿಟಿಷರಿಂದ ಕೊಡಲಾಗದ ಶಿಕ್ಷೆ ನಿನ್ನ ಮಗ ನನಗೆ ಕೊಟ್ಟ....ಅಂಗ್ರೇಜರ ತೋಫಿಗೂ ಸೀಳದ ಎದೆಯನ್ನು ಎರಡೇ ಗುಂಡುಗಳಿಂದ ಸೀಳಿದ ಬಹಾದ್ದೂರ ಬೇಟಾ ನಮ್ಮ ಮಗ...."

ಅಶ್ರುತುಂಬಿದ ಕಣ್ಣುಗಳನ್ನೆತ್ತಿ ಇಮ್ರಾಮನ ಕಡೆ ನೋಡಿದರು ಮುಮ್ತಾಜ ಬಾನು....ಆ ಕಣ್ಣುಗಳಲ್ಲಿ ಅಡಗಿದ ಹರಿತವಾದ ದೃಷ್ಟಿ

ಎದುರಿಸಲಾಗದೇ ತತ್ತರಿಸಿದ ಇಮ್ರಾನ್ ಮುಖ ಕೆಳಗೆ ಹಾಕಿದ....ಅವನ ಕೈಯಿಂದ ಜಾರಿದ ಪಿಸ್ತೂಲ್ ಧರೆಗೆ ಜರುಗಿತು.

"ಶಹಬ್ಬಾಶ್ ಬೇಟ ತಾಯಿ ಹಾಲಿನ ಋಣ ತೀರಿಸಿದೆ...."

"ಬೇಗಂ ಅವನಿಗೆ ಏನೂ ಅನ್ನಬೇಡ....ಅಂದು ಪಾಪ ತಂದುಕೊಳ್ಳ ಬೇಡ"

ಬೇಗಂ ಅಲ್ತಾಫಹುಸೇನ ಸಾಹೇಬರನ್ನು ಬಾಚಿ ತಮ್ಮೆದೆಗೆ ಒತ್ತಿ ಕೊಂಡರು. ಅವರ ಬಾಯಿಯಿಂದ ಅಸ್ಪಷ್ಟವಾಗಿ ಕುರಾನಿನ ವಾಣಿ ಹೊರಡುತ್ತಿದ್ದಂತೆ ಒಡೆದ ಕಣ್ಣುಗಳಿಂದ ಮಗ ಇಮ್ರಾನನತ್ತ ನೋಡಿದರು· ಅದೇ ಅವರ ಕೊನೆಯ ದೃಷ್ಟಿಯಾಯಿತು. ಅವರ ತಲೆ ಬೇಗಂಳ ಹೆಗಲ ಮೇಲೆ ಒರಗುತ್ತಿದ್ದಂತೆ ಹೃದಯ ಒಡೆದು ಹೋಗುವಂತೆ ಆರ್ತರಾಗಿ ಚೀರಿಕೊಂಡರು ಬೇಗಂ....

ಅದೇ ಕ್ಷಣ ಹೊರಗಡೆ ಪೊಲೀಸ್ ಗಾಡಿ ಸೈರನ್ ಕೇಳಿ ಬರುತ್ತಿದ್ದಂತೆ ಬೆಚ್ಚಿಬಿದ್ದ ಇಮ್ರಾನ್ ಹಿತ್ತಲ ಬಾಗಿಲಿಂದ ಓಡಿದ. ಅವನನ್ನು ತಡೆಯಲು ಮುಂದಾಗಲಿಲ್ಲ ಮಮ್ತಾಜಬಾನು ಬೇಗಂ. ಅವರ ದೇಹದಲ್ಲಿ ಎಳ್ಳಷ್ಟೂ ಶಕ್ತಿಯಿರಲಿಲ್ಲ.

ಎರಡು ಮೂರು ನಿಮಿಷಗಳಲ್ಲಿ ಒಳಗೆ ಧಾವಿಸಿದ ಪೊಲೀಸ್ ಆಫೀಸರ್ ಅವರ ಸಿಬ್ಬಂದಿ ಒಳಗಿದ್ದ ದೃಶ್ಯ ಕಂಡು ಅಲ್ಲೇ ತಟಸ್ಥರಾಗಿ ನಿಂತುಬಿಟ್ಟರು. ತಲೆಯ ಮೇಲಿದ್ದ ಹ್ಯಾಟು ಕೈಗೆ ತೆಗೆದುಕೊಂಡ ಪಿ.ಎಸ್.ಐ ಸೆಲ್ಯೂಟ್ ನೀಡಿ ಸಾಹೇಬರಿಗೆ ಗೌರವ ಸಲ್ಲಿಸಿದ. ಮರುಕ್ಷಣ ಅವನ ಗಂಟಲು ಕಟ್ಟಿ ಬಂದು ಭೋರೆಂದು ಅಳತೊಡಗಿದ....

ಒಂದು ಗಂಟೆ ಕಳೆಯುವಷ್ಟರಲ್ಲಿ ಅಲ್ತಾಫ್ ಹುಸೇನರ ಸಾವಿನ ಸುದ್ದಿ ಎಲ್ಲೆಡೆ ವ್ಯಾಪಿಸಿ ಒಂದು ಬಗೆಯ ಭಯಾನಕ ವಾತಾವರಣ ಹುಟ್ಟಿಸಿತು. ಸಿಡಿಲೆರಗಿದಂತಾದ ಜನ ಆಕ್ರಂದನ ಮಾಡುತ್ತಾ ಅವರ ಮನೆಯತ್ತ ಧಾವಿಸತೊಡಗಿದರು....ಪೇಟೆಯಲ್ಲಿದ್ದ ಎಲ್ಲಾ ಅಂಗಡಿಕಾರರು ಸ್ವಯಂ ಪ್ರೇರಣೆಯಿಂದ ತಾವೇ ಮುಂದಾಗಿ ಧಡಧಡನೆ ಅಂಗಡಿಗಳ ಬಾಗಿಲು ಮುಚ್ಚಿದರು....ಜಾತಿ ಮತ ಎಂಬುದಿಲ್ಲದೆ ಎಲ್ಲ ಜಾತಿಯವರೂ ಒಂದಾಗಿ

ಆರ್ತನಾದ ಮಾಡುತ್ತ ಅಲ್ತಾಫ ಹುಸೇನ ಸಾಹೇಬರ ಮನೆಯತ್ತ ಧಾವಿಸ ತೊಡಗಿದರು.

ಎರಡು ಮೂರು ಗಂಟೆ ನಂತರ ಹೆಲಿಕಾಪ್ಟರ್ ಮೂಲಕ ಧಾವಿಸಿ ಬಂದ ಮುಖ್ಯಮಂತ್ರಿಗಳಿಗೆ ನೆರೆದ ಹತ್ತಾರು ಸಾವಿರ ಜನರನ್ನು ಸರಿಸಿ ಒಳಗೆ ಬರಲು ಅರ್ಧಗಂಟೆಯೇ ಹಿಡಿಯಿತು. ಖಾಜೀ ಸಾಹೇಬರು ತಮ್ಮೊಂದಿಗೆ ಅನೇಕರ ಸಹಾಯ ತೆಗೆದುಕೊಂಡು ಅಲ್ತಾಫಹುಸೇನ ಸಾಹೇಬರ ಶವವನ್ನು ಜನರ ದರ್ಶನಕ್ಕೆ ಅಣಿಗೊಳಿಸಿದ್ದರು....ಸುತ್ತಲೂ ಉರಿಯುತ್ತಿದ್ದ ನೂರಾರು ಊದು ಬತ್ತಿಗಳ ಸುಗಂಧ ಎಲ್ಲೆಡೆ ಪಸರಿಸಿತ್ತು.

ಉಚ್ಚ ಪೊಲೀಸ್ ಅಧಿಕಾರಿ ಮುಖ್ಯಮಂತ್ರಿಗಳನ್ನು ಗೌರವದಿಂದ ಕರೆತಂದ. ಅವರ ಆಗಮನದಿಂದ ಎಲ್ಲೆಡೆ ಶೋಕದ ವಾತಾವರಣ ಉಂಟಾಯಿತು. ಮಮತಾಜ ಬಾನುಬೇಗಮ್ ಕಣ್ಣಿನಲ್ಲಿ ಮಾತ್ರ ನೀರು ಕಾಣಿಸಲಿಲ್ಲ. ಅದೆಂದೋ ಬತ್ತಿ ಹೋಗಿತ್ತು. ಅಲ್ತಾಫಹುಸೇನರಿಗೆ ಅಂತಿಮ ಗೌರವ ಸಲ್ಲಿಸಿದ ನಂತರ ಮುಖ್ಯಮಂತ್ರಿಗಳು ಬೇಗಂ ಬಳಿ ಬಂದು ಸಮಾಧಾನದ ಮಾತು ಆಡಿದಾಗ ಮಮ್ತಾಜಬಾನು ಒಂದೇ ಮಾತು ಆಡಿದರು.

"ನನ್ನ ಪತಿ ಹುತಾತ್ಮರಾಗಿದ್ದಾರೆ. ಭಾರತದೇಶದ ಯುವ ಜನಾಂಗದ ಒಳಿತಾಗಿ ತಮ್ಮ ಪ್ರಾಣ ಅರ್ಪಿಸಿದ್ದಾರೆ. ದೇಶದ ಭದ್ರತೆ ಮತ್ತು ರಕ್ಷಣೆಗಾಗಿ ಹೋರಾಡಿ ಪ್ರಾಣಾರ್ಪಣೆಗೈದಿದ್ದಾರೆ. ಅವರ ಬಗ್ಗೆ ನನಗೆ ದುಃಖವಿಲ್ಲ..ಗೌರವ ವಿದೆ....ಹೆಮ್ಮೆಯಿದೆ"

ಮುಖ್ಯಮಂತ್ರಿಗಳು ಗದ್ಗದಿತರಾಗಿ ತಮ್ಮೆರಡೂ ಕೈಗಳನ್ನು ಜೋಡಿಸಿ ವಂದಿಸುತ್ತ ಮೇಲೆದ್ದರು....

ಒಂದು ಹಗಲು ಒಂದು ರಾತ್ರಿ ಜನ ಬಂದು ಸಾಹೇಬರ ಕೊನೆ ದರ್ಶನ ತೆಗೆದುಕೊಂಡರು. ಮರುದಿನ ಮುಂಜಾನೆ ಸರಕಾರೀ ಸಕಲ ಮರ್ಯಾದೆಯೊಂದಿಗೆ ಅವರ ಅಂತಿಮ ಸಂಸ್ಕಾರ ಮಾಡಲಾಯಿತು....ಎಲ್ಲಾ ಕೆಲಸ ಮುಗಿಸಿದ ಬಂಧುಮಿತ್ರರು ಬೇಗಂಸಾಹೇಬರಿಗೆ ಸಾಂತ್ವನ ಹೇಳಿ ತಮ್ಮ ತಮ್ಮ ಊರಿನತ್ತ ಮನೆಗಳತ್ತ ಮರಳಿದಾಗ ಅದೇ ತಾನೇ ಸೂರ್ಯ ಮುಳುಗುತ್ತಿದ್ದ....

ಈಗ ಬೇಗಂ ಬಾನು ಒಬ್ಬರೇ ತೂಗುಮಂಚದ ಮೇಲೆ ಕುಳಿತು

ಗಂಭೀರವಾಗಿ ಯೋಚಿಸುತ್ತಿದ್ದರು. ಅವರೆದುರು ಗೋಡೆಗೆ ಕೊಂದಿಸಿ ಇಟ್ಟ ಮೇಜಿನ ಮೇಲೆ ಅಲ್ತಾಫಹುಸೇನ ಸಾಹೇಬರ ಭವ್ಯವಾದ ಫೋಟೋ ಇರಿಸಿ ಮಾಲೆಯಿಂದ ಅಲಂಕರಿಸಲಾಗಿತ್ತು. ಸುಗಂಧಿತ ಊದುಬತ್ತಿಗಳು ಉರಿಯುತ್ತಿದ್ದವು....

ಇನ್‌ಸ್ಪೆಕ್ಟರ್ ಅವಿನಾಶ್ ಒಳಗೆ ಪ್ರವೇಶಿಸಿದ.

ಆತ ಶೋಕತಪ್ತನಾಗಿದ್ದ. ಅಲ್ತಾಫ್ ಹುಸೇನ ಸಾಹೇಬರ ವ್ಯಕ್ತಿತ್ವ ದಿಂದ ಪ್ರಭಾವಿತರಾಗಿದ್ದ ಅವನಿಗೆ ಅವರು ಇಷ್ಟು ಬೇಗ ವಿಧಿವಶರಾಗಬಹು ದೆಂಬ ಕಲ್ಪನ ಸಹ ಇರಲಿಲ್ಲ. ಸ್ವಂತ ಮಗನಿಂದಲೇ ಅವರು ಹತರಾಗ ಬೇಕೆಂದರೆ ಎಂಥ ದುರ್ದೈವ ...

ಮೊದಲು ಅಲ್ತಾಫಹುಸೇನ ಸಾಹೇಬರ ಫೋಟೋದ ಮುಂದೆ ನಿಂತು ಮೌನ ಪ್ರಾರ್ಥನೆ ಸಲ್ಲಿಸಿದ ಮೇಲೆ ಬೇಗಂಬಾನುವಿನತ್ತ ಬಂದು ಮೌನವಾಗಿ ನಿಂತುಕೊಂಡ....ಅವನತ್ತ ತಲೆಎತ್ತಿ ನೋಡಿದರು ಬೇಗಂ.

"ನನಗೆ ಅವರ ಮರಣದಿಂದ ಖೇದವಾಗಿಲ್ಲ....ಮರಣಕ್ಕೆ ಕಾರಣರಾದ ವರ ಬಗ್ಗೆ ಖೇದವಿದೆ"

"ವಿಷಯ ತಿಳಿಯಿತು ಬೇಗಂ ಸಾಹೇಬಾ.... ಅದಕ್ಕಾಗಿ ಓಡಿ ಬಂದೆ...."

"ಅಲ್ಲಿಯ ಕೆಲಸ ನೋಡಿಕೊಳ್ಳಿ ಇನ್‌ಸ್ಪೆಕ್ಟರ್ ಇಲ್ಲಿಯ ಜವಾಬ್ದಾರಿ ನನಗಿರಲಿ. ಅವಿನಾಶ್ ಅಚ್ಚರಿಯಿಂದ ಅವರೆಡೆ ನೋಡಿದ."

"ಹಾಂ ಇಲ್ಲಿಯ ಜವಾಬ್ದಾರಿ ನನಗಿರಲಿ. ಇಮ್ರಾನ್ ಇಂದಲ್ಲ ನಾಳೆ ಇಲ್ಲಿ ಬಂದೇ ಬರುತ್ತಾನೆ" ಅವನನ್ನು ನಾನು ವಿಚಾರಿಸಿಕೊಳ್ಳುತ್ತೇನೆ"

"ಆತ ಬರುತ್ತಾನೆ ಎಂಬ ವಿಶ್ವಾಸ ನಿಮಗಿದೆಯೇ?"

"ವಿಶ್ವಾಸವಲ್ಲ ಇನ್‌ಸ್ಪೆಕ್ಟರೇ ನಂಬಿಕೆಯಿದೆ"

"ಅದೆಂತು ಹೇಳುವಿರಿ?"

ಅದು ತಾಯಿ ಮಗುವಿನ ಮಧ್ಯದ ರಹಸ್ಯ ಹೇಳಲಾಗದು. ಮುಖದ ಮೇಲೆ ವಿಷಾದದ ಛಾಯೆ ಹರಡಿತು.

ಅವಿನಾಶ ಮುಂಥೆ ಮಾತು ಬೆಳೆಸಲಿಲ್ಲ. ಅದರಿಂದ ಯಾವ

ಪ್ರಯೋಜನವಿಲ್ಲವೆಂದು ತಿಳಿದಿತ್ತು.... ಮೆಲ್ಲನೆ ಅವರಿಗೆ ವಂದಿಸಿ ಬಾಗಿಲತ್ತ ನಡೆದಾಗ ಬೇಗಂಬಾನು ಅವರ ವಾಣಿ ಅವನನ್ನು ತಡೆಯಿತು.

"ಇನ್‌ಸ್ಪೆಕ್ಟರ್ ತಮ್ಮಿಂದ ಒಂದು ಉಪಕಾರವಾಗಬೇಕು"

"ಹೇಳಿ ಬೇಗಂ ಸಾಹೆಬಾ" ಹೊರಳಿ ನಿಂತು ಕೇಳಿದ ಅವಿನಾಶ.

"ಪೊಲೀಸ್ ಕಾವಲು ತೆಗೆದು ಬಿಡಿ"

"ಆಂ... ಏನೆಂದಿರಿ?"

"ಪೊಲೀಸ್ ಕಾವಲು ತೆಗೆದುಬಿಡಿ ಆಂದರೆ ಇಮ್ರಾನ್ ನನ್ನ ಬಳಿ ಬೇಗ ಬರುತ್ತಾನೆ. ಕಾವಲಿದ್ದರೆ ವಿಳಂಬವಾಗಬಹುದು"

ಅವರ ಮಾತಿನಲ್ಲಿ ಸತ್ಯವಿತ್ತು. ಒಪ್ಪಿಕೊಂಡ ಅವಿನಾಶ

ನಿಧಾನವಾಗಿ ರಾತ್ರಿ ತನ್ನ ಬಲೆ ಬೀಸತೊಡಗಿತು.

ಬಂಗಲೆಯ ದೀಪಗಳು ಆರಿ ಕತ್ತಲೆ ಆವರಿಸತೊಡಗಿತು

ಮುಮ್ತಾಜಬಾನು ಬೇಗಂ ಮಲಗಿಕೊಂಡಿದ್ದರೂ ಅವರ ಕಣ್ಣುಗಳು ಮಾತ್ರ ಮುಚ್ಚಿರಲಿಲ್ಲ.... ತೆರೆದೇ ಇದ್ದವು. ಅವರ ದೃಷ್ಟಿ ಕಿಟಕಿಯೆಡೆ ಇದ್ದರೆ ಕಿವಿಗಳು ಯಾವುದೋ ಸಪ್ಪಳ ಆಲಿಸಲು ಕಾತರಗೊಂಡಿದ್ದವು.

ಸಮಯ ಕಳೆಯತೊಡಗಿತು.

ನಸುಕಿನ ನಾಲ್ಕು ಗಂಟೆ ಸಮೀಪಿಸಿತು ...

ದೂರ ಎಲ್ಲೋ ಕೋಳಿಕೂಗಿತು....

ಬೇಗಂ ಸಾಹೇಬಾ ಸಟಕ್‌ನೆ ಎದ್ದು ಕುಳಿತರು. ಅವರು ಕಾಯುತ್ತಿದ್ದ ಸಮಯ ಸಮೀಪಿಸಿದಂತಾಯಿತು ಕಿಟಕಿ ಬಳಿ ಸದ್ದು. ನಂತರ ಅದು ನಿಧಾನವಾಗಿ ತೆರೆದುಕೊಂಡಿತು. ಒಳಗೆ ನೆಗೆಯಿತು ಒಂದು ವ್ಯಕ್ತಿ....

ಬೇಗಂ ಸಾಹೇಬಾ ತಟಕ್‌ನೆ ದೀಪ ಬೆಳಗಿಸಿದರು.

ಎದುರಿಗೇ ನಿಂತಿದ್ದ ತಲೆತಗ್ಗಿಸಿಕೊಂಡು ಇಮ್ರಾನ್....

"ಇಮ್ರಾನ್.... ಮೇರೆ ಬೇಟೆ" ಆರ್ತನಾದಗೈದರು ಬೇಗಂ ಸಾಹೇಬಾ.

"ಅಮ್ಮೀ.... ಅಮ್ಮೀ ಗಂಟಲು ಬಿಗಿದು ಬಂದ ಇಮ್ರಾನ್ ಅವರೆಡೆ ಧಾವಿಸಿದ. ಮಗನನ್ನು ತಬ್ಬಿಕೊಂಡು ಗಳಗಳ ಅತ್ತರು ಬೇಗಂ"

"ಇಮ್ರಾನ್ ಬೇಟೆ ನೀನು ಬರಬಾರದಿತ್ತು. ಇಲ್ಲಿ ಎಂಥ ಅಪಾಯ ಏದೆ ಗೊತ್ತಿಲ್ಲವೆ?"

"ಗೊತ್ತಿತ್ತು ಅಮ್ಮಿ... ನಿಮ್ಮನ್ನು ನೋಡಬೇಕೆಂಬ ಆಶೆಯಿಂದ ಓಡಿ ಬಂದೆ"

"ಹೆಚ್ಚು ಸಮಯ ಕಳೆಯಬೇಡ. ಮೊದಲು ಇಲ್ಲಿಂದ ಪಾರಾಗೋಣ?

"ಅಂದರೆ.... ಅಂದರೆ"

ನಾನೂ ನಿನ್ನ ಜೊತೆ ಬರುವೆ ಬೇಟಾ.... ನೀನೆಲ್ಲೋ ಅಲ್ಲೇ ನಾನು"

"ಅಮ್ಮಿ ನೀನೆಷ್ಟು ಒಳ್ಳೆಯವಳು"

"ಮಾತು ಸಾಕು.... ಸಮಯವಿಲ್ಲ"

"ಅಮ್ಮಿ ಈಗೆರಡು ತಿಂಗಳ ಹಿಂದೆ ನಿಮ್ಮ ಕೈಗೆ ಒಂದು ಬೀಗದ ಕೈ ಕೊಟ್ಟಿದ್ದೆ ಅದನ್ನು ಕೊಡಿ"

ನಡುವಿನಲ್ಲಿ ಸಿಕ್ಕಿಸಿಕೊಂಡಿದ್ದ ಬೆಳ್ಳಿ ಗೊಂಚಲು ಅವನೆಡೆ ಚಾಚಿದರು.

ಅದನ್ನೂ ತೆಗೆದುಕೊಂಡ ಇಮ್ರಾನ್.

"ಇಲ್ಲಿ ಏನನ್ನು ಬಿಡಬೇಡ ಎಲ್ಲಾ ತೆಗೆದುಕೊ"

"ಆಯಿತು ಅಮ್ಮಿ"

ಅರ್ಧಗಂಟೆಯಲ್ಲಿ ಎರಡು ಸೂಟ್‌ಕೇಸು ಒಂದು ಬ್ರೀಫ್‌ಕೇಸುಗಳ ಜೊತೆ ಇಮ್ರಾನ್ ಬಂದಾಗ ಎದುರು ಕೈಯಲ್ಲಿ ಪಿಸ್ತೂಲ್ ಹಿಡಿದು ನಿಂತಿದ್ದ ತಾಯಿಯನ್ನು ಕಂಡು ದಂಗಾದ....

"ಬಾ ಬೇಟೆ.... ತಾಯಿಯ ಆಶೀರ್ವಾದ ತೆಗೆದುಕೊ"

"ಅಮ್ಮಿ ನೀವು ಪಿಸ್ತೂಲ್"

"ಏಕೆ ನಾನು ಪಿಸ್ತೂಲು ಹಿಡಿಯಬಾರದೆ? ಇದು ಯಾವ ಪಿಸ್ತೂಲು ಎಂದು ಚೆನ್ನಾಗಿ ನೋಡು.... ನಿನ್ನ ತಂದೆಯನ್ನು ಬಲಿ ತೆಗೆದುಕೊಂಡ ನಿನ್ನ ಪಿಸ್ತೂಲು ಇದು.... ಇದು ಅತೃಪ್ತವಾಗಿದೆ. ನಿನ್ನ ಬಲಿಕೊಟ್ಟು ಸಮಾಧಾನ ಪಡಿಸುವೆ."

"ಅಮ್ಮಿ ಜಾನ್ ನೀವು?....ನಿಮ್ಮ ಮಗನ ಬಲಿ ಪಡೆಯುವಿರಾ?"

"ನನ್ನ ಪತಿಗೆ ದೇಶವೇ ದೇವರಾಗಿತ್ತು, ನನಗೆ ಪತಿಯೇ ದೇವರಾಗಿ

ದ್ದರು. ನೀನು ನನ್ನ ದೇಶ ಮತ್ತು ದೇವರು ಎರಡನ್ನೂ ನಾಶ ಮಾಡಿದ ರಾಕ್ಷಸ. ಅಂದ ಮೇಲೆ ಬಲಿ ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ. ನಿನ್ನನ್ನು ಪೊಲೀಸರಿಗೆ ಒಪ್ಪಿಸಿ ಸರಿಯಾದ ಶಿಕ್ಷೆಯಾಗುವಂತೆ ಮಾಡುತ್ತೇನೆ. ನನ್ನ ಪತಿಯ ಆತ್ಮಕ್ಕಾದರೂ ಶಾಂತಿ ಸಿಗುತ್ತದೆ."

ತಾಯಿಯ ಮುಖದಿಂದ ಬಂದ ಮಾತು ಕೇಳಿ ಜೋರಾಗಿ ನಕ್ಕುಬಿಟ್ಟ.

ಇಮ್ರಾನ್ ನಕ್ಕು ನಕ್ಕು ಅವನ ಕಣ್ಣಲ್ಲಿ ನೀರು ಬಂದವು.

"ಪರವಾಗಿಲ್ಲ ಅಮ್ಮಿ ನೀನು ಚೆನ್ನಾಗಿ ತಮಾಷೆ ಮಾಡುತ್ತಿ"

"ಇದು ಸಮಾಷೆಯಲ್ಲ ಸತ್ಯವಾದದ್ದು"

"ಹಾಗಿದ್ದರೆ ಅರ್ಧಗಂಟೆ ಮೊದಲು ಇಲ್ಲಿಂದ ಓಡಿ ಹೋಗೋಣ ಎಂದು ಏಕೆ ಹೇಳಿದೆ. ಬೀಗದ ಕೈ ನೀನಾಗಿಯೇ ಏಕೆ ಕೊಟ್ಟೆ"

"ಅದು ನನ್ನ ತಂತ್ರ ನಿನ್ನನ್ನು ಬಲೆಗೆ ಕೆಡವಬೇಕಾಗಿತ್ತು"

"ಬಲೆ?" ಎಂಥ ಬಲೆ?

"ನಿನ್ನ ಬಳಿಯಿದ್ದ ಹಣ ಕಾಗದಪತ್ರ, ರಹಸ್ಯ ಒಪ್ಪಂದಗಳು ನೀನು ಯಾರ ಯಾರ ಜೊತೆ ಕೆಲಸ ಮಾಡುತ್ತಿ, ಇದಾವುದೂ ನನಗೆ ತಿಳಿದಿರಲಿಲ್ಲ. ಅದಕ್ಕಾಗಿ ಆ ರೀತಿ ನಾಟಕವಾಡಿದೆ. ಈಗ ನೋಡು ನಿನ್ನ ಬಳಿ ಎಲ್ಲಾ ಇವೆ"

"ನನ್ನ ಜೀವ ಹೋದರೂ ಇವನ್ನು ನಿನಗೆ ಒಪ್ಪಿಸಲಾರೆ"

ನಿನ್ನ ಜೀವ ತೆಗೆಯಲು ನಾನು ಸಿದ್ಧ.

"ಹೀಗೋ ನೀನು ಹೆತ್ತ ನಿನ್ನ ಮುದ್ದಿನ ಕರಳುಕುಡಿಯನ್ನು ಕೊಲ್ಲುವ ಧೈರ್ಯ ನಿನಗಿದ್ದರೆ.... ಗುಂಡು ಹಾರಿಸಿ ನನ್ನನ್ನು ಕೊಲ್ಲು.... ನೋಡೋಣ ..

ಅಪಹಾಸ್ಯ ಮಾಡಿ ಎರಡು ಸೂಟ್‌ಕೇಸು ಮತ್ತು ಬ್ರೀಫ್‌ಕೇಸ್‌ನೊಂದಿಗೆ ಎರಡು ಹೆಜ್ಜೆ ಇಮ್ರಾನ್ ಮುಂದೆ ಇಟ್ಟಿರಲಿಲ್ಲ. ಮುಮ್ತಾಜಬಾನು ಬೇಗಂ ಕೈಯಲ್ಲಿದ್ದ ಪಿಸ್ತೂಲು ಎರಡು ಬಾರಿ ಬೆಂಕಿಯುಗುಳಿತು....

# 22

"ಹೌದು....ಹೌದು....ಇವನೇ ಇವನೇ ಇಮ್ರಾನನ ಫೋಟೋದತ್ತ ದಿಟ್ಟಿಸಿದ ಪ್ರಸಾದಬಾಬು ಮತ್ತೊಮ್ಮೆ ನುಡಿದಾಗ ಕೇಂದ್ರ ಗುಪ್ತಚಾರ ಪಡೆಯ ಸೀನಿಯರ್ ಇನ್‌ಸ್ಪೆಕ್ಟರ್ ಚಂದ್ರಕಾಂತನ ಕೊಲೆಯ ಚಿತ್ರ ಅವಿನಾಶನ ಕಣ್ಣಮುಂದೆ ನಿಚ್ಚಳವಾಗಿ ಮೂಡಿತು.

"ಪ್ರಸಾದಬಾಬು ಇವನ ಜೊತೆ ಮತ್ತೆ ಯಾರು ಯಾರು ಇದ್ದರು ? ಸ್ವಲ್ಪ ಯೋಚಿಸಿಕೊಳ್ಳಿ ಡಿಸೋಜಾ ಕೇಳಿದ ಪ್ರಸಾದಬಾಬುವಿಗೆ, ಒಂದೆರಡು ನಿಮಿಷ ಯೋಚಿಸಿದರು ಅವರು.

"ಹಾಂ....ಹೇಳಬಹುದು ಮಿಸ್ಟರ್ ಡಿಸೋಜಾ....ಅವರು ಐದಾರು ಜನರಿದ್ದರು. ಬಹುತೇಕ ಜನರ ಬೆನ್ನು ನನ್ನ ಕಡೆಗಿತ್ತು. ಕಾರಿನ ಬೆಳಕಿನಲ್ಲಿ ಅವರು ಒಂದೇ ಏಟಿಗೆ ಅಲ್ಲಿಂದ ಕಂಬಿಕಿತ್ತರು. ಇಬ್ಬರು ಮಾತ್ರ ನನ್ನೆಡೆನೋಡಿದ್ದು. ಅವರಲ್ಲಿ ಒಬ್ಬ ಈತ. ಈತನ ಕೈಯಲ್ಲಿದ್ದ ಚಾಕುವಿನಿಂದ ರಕ್ತ ಜಿನುಗುತ್ತಿತ್ತು."

"ಗುಡ್ ಪ್ರಸಾದಬಾಬು" ದಯವಿಟ್ಟು ಇನ್ನೊಬ್ಬನ ಬಗ್ಗೆ ಹೇಳಿ"

ಪ್ರಸಾದಬಾಬು ಉತ್ತರಿಸುವ ಮೊದಲೇ ಅವಿನಾಶ ಮಧ್ಯೆ ಪ್ರವೇಶಿಸಿದ.

"ಸ್ವಲ್ಪ ನಿಲ್ಲಿ ಪ್ರಸಾದಬಾಬು"

"ಏಕೆ ? ಏನಾಯಿತು ? ಡಿಸೋಜಾ ಆತಂಕದಿಂದ ಕೇಳಿದ.

"ಏನೂ ಆಗಿಲ್ಲ....ನನ್ನದೊಂದು ಡೌಟ್ ಪರಿಹರಿಸಿಕೊಳ್ಳಬೇಕಾಗಿದೆ."

"ಡೌಟೆ ?....ಯಾವದದು ?"

"ಅದರ ಬಗ್ಗೆಯೇ ವಿಚಾರಿಸುತ್ತಿರುವದು....ಹಾಂ ಪ್ರಸಾದಬಾಬು ನಾನು ಒಂದು ವ್ಯಕ್ತಿಯ "ಚಹರೆ" ಬಗ್ಗೆ ಹೇಳುತ್ತೇನೆ. ಅದು ನೀವು ಕಂಡಂಥ ವ್ಯಕ್ತಿಯದೇ ಆಗಿದ್ದರೆ ಹೇಳಿ" ತಿಳಿಯತ್ತೇ ?

ಪ್ರಸಾದಬಾಬು ಮೆಲುವಾಗಿ ತಲೆಯಾಡಿಸಿದರು.

"ನೋಡಲು ಟಿಬೇಟಿಯುವನಂತೆ ಕಾಣುತ್ತಾನೆ."

"ಹೌದು"

"ಆದರೆ ಟಿಬೇಟಿಯನ್ ಅಲ್ಲ !"

"ಕರೆಕ್ಟ್....ಏಕೆಂದರೆ ಅವನ ಕಣ್ಣುಗಳು ಚಿಕ್ಕದಾಗಿಲ್ಲ. ದೊಡ್ಡದಾಗಿವೆ.

"ಎತ್ತರ ಐದು ಫೀಟಿಗೆ ಕಡಿಮೆ....ತೂಕ ಅಟ್‌ಮಾಸ್ ಆರವತ್ತು ಕೆ.ಜಿ."

"ಇರಬಹುದು"

"ಕಪ್ಪು ಕೂದಲು. ಹಂದಿಯ ಕೂದಲಂತೆ ಸೆಟೆದು ನಿಂತಿವೆ"

"ಸರಿ"

"ಹಾಗಾದರೆ ಆತ ನಮಗೆ ಬೇಕಾದ ಕಾಮ್ಸಿಂಗ....ಖಂಡಿತವಾಗಿ"

"ಕಾಮ್ಸಿಂಗ ? ಯಾರಾತ ?" ಡಿಸೋಜಾ ಪ್ರಶ್ನಿಸಿದ.

"ಅವರ ಬಗ್ಗೆ ಡಲ್ಲಾ ಸಾಹೇಬರಿಗೆ ಗೊತ್ತಿದೆ. ಆತನೊಬ್ಬ ಕುಖ್ಯಾತ ಅಂತರರಾಷ್ಟ್ರೀಯ ಖದೀಮ-ಮಾದಕವಸ್ತುಗಳ ವ್ಯಾಪಾರಿ....ಅವನ ಮೇಲೆ ಐದಾರು ಕೊಲೆ ನಾಲ್ಕಾರು ರೇಪ್, ಒಂದೆರಡು ದರೋಡೆ ಮಾಡಿದ ಆಪಾದನೆಗಳಿವೆ. ಭಾರತದೊಳಗೆ ಆತ ಹೇಗೆ ನುಸುಳಿ ಬಂದಿದ್ದನೆಂಬುದು ಇನ್ನು ತಿಳಿದುಬಂದಿಲ್ಲ ...

"ಓಹ್ ಹಾಗೋ....ಇಷ್ಟೆಲ್ಲ ಇತಿಹಾಸಹೊಂದಿದ ಕಾಮ್ಸಿಂಗನನ್ನು ಚಂದ್ರಕಾಂತ ಬೆಂಬತ್ತಿ ಬಂದಿರಬೇಕು....ಅದಕ್ಕಾಗಿ ಪಾಪ ಜೀವ ತೆತ್ತ"

"ಇಷ್ಟೇ ಕಾರಣ ಇರಲಿಕ್ಕಿಲ್ಲ....ಇದಕ್ಕಿಂತ ಗಹನವಾಗಿರಬೇಕು.

"ಅಂದರೆ ?"

"ಅಂದರೆ ಇಷ್ಟೇ... ಚಂದ್ರಕಾಂತಾ ಕೈಗೆ ಅಪಾಯಕಾರಿಯಾದ ರಹಸ್ಯ ಸಿಕ್ಕಿದೆ. ಅದನ್ನರಿತ ಕಾಮ್ಸಿಂಗ ಮತ್ತು ಇಮ್ರಾನ್ ಅವನ ಹಿಂದೆ ಬಿದ್ದಿದ್ದಾರೆ.... ಅವನನ್ನ ಮುಗಿಸಿ ರಹಸ್ಯ ಅಪಹರಿಸಲು ಅವರು ಯೋಚಿಸಿರಬೇಕು. ಪ್ರಸಾದಬಾಬು ಅವರ ಕಾರು ಬರುತ್ತಲೇ ಓಡಿ ಹೋಗಿದ್ದಾರೆ....!

"ನಿಮ್ಮ ಮಾತಿನ ಮೇಲಿಂದ ಚಂದ್ರಕಾಂತನ ಬಳಿಯಿದ್ದ ರಹಸ್ಯ ಅವರ ಕೈಗೆ ಸಿಕ್ಕಿಲ್ಲ ಎಂದಾಯಿತು"

"ಇಲ್ಲ....ಸಿಕ್ಕಿರಲಿಕ್ಕಿಲ್ಲ"

"ಹಾಗಾದರೆ ಹೋಯಿತೆಲ್ಲಿ....ಅವನ ತಪಾಸಣೆ ಚೆನ್ನಾಗಿ ಮಾಡಲಾಗಿದೆ. ಅಂಥ ಯಾವ ವಸ್ತುಗಳೂ ದೊರೆತಿಲ್ಲ"

ಅವಿನಾಶ ಮೌನ ತಾಳಿದ.

ಡಿಸೋಜಾರ ಮಾತಿಗೆ ಉತ್ತರ ಕೊಡುವಂತಿರಲಿಲ್ಲ....

ಒಂದೈದು ನಿಮಿಷ ಯೋಚನಾ ಮಗ್ನವಾಗಿ ತಟಕ್‌ನೆ ನುಡಿದ.

"ಆ ರಹಸ್ಯ ಈ ಐಡೆಂಟಿ ಕಾರ್ಡ್‌ನಲ್ಲಿರಬೇಕು"

"ಅಂ?".... ಡಿಸೋಜಾ ಜೊತೆ ಪ್ರಸಾದ್‌ಬಾಬು ಸಹ ಅವಕ್ಕಾಗಿ ಕೇಳಿದರು.

"ಹೌದು.... ತಾನು ಸಾಯುವ ಮುನ್ನ ಕಾರ್ಡನ್ನು ಅವರ ಜೇಬಿಗೆ ಸೇರಿಸಿದ್ದಾನೆಂದ ಮೇಲೆ ಇದರಲ್ಲೇ ರಹಸ್ಯವಡಗಿರಬೇಕು"

"ಆತ ತನ್ನ ಪರಿಚಯ ತಿಳಿಸಲೋಸುಗ ಏಕೆ ಆ ರೀತಿ ಮಾಡಿರಬಾರದು ?

"ಅದೂ ಸತ್ಯವೇ....ಅದರೊಂದಿಗೆ ನಾನು ಹೇಳಿದಂತೆ....

ಮಾತು ಅರ್ಧಕ್ಕೆ ನಿಲ್ಲಿಸಿ ಅವಿನಾಶ ಐಡೆಂಟಿಕಾರ್ಡನ್ನು ಸೂಕ್ಷ್ಮವಾಗಿ ಪರಿಶೀಲಿಸತೊಡಗಿದ. ಚಾಕಲೇಟು ಕಲರ್ ಪ್ಲಾಸ್ಟಿಕ್ ಕವರಿನಲ್ಲಿದ್ದ ಕಾರ್ಡು ಹೊರ ತೆಗೆದ. ಕವರಿನಲ್ಲಿ ಇಣುಕಿದ. ಏನೂ ಇರಲಿಲ್ಲ. ಕಾರ್ಡ್ ಹೊರಳಿಸಿದ. ಕಣ್ಣುಗಳು ಮಿನುಗಿದವು. ಚಿಕ್ಕದಾಗಿ ಬರೆದ ಕೈ ಬರೆಹ. ಹೋಟೆಲ್ ಪ್ಯಾರಾಚೂಟ್....ಅದರ ಮುಂದೆ 108.

ಅವಿನಾಶ ತಟಕ್‌ನೆ ಮೇಲೆದ್ದ.

"ಬನ್ನಿ.... ಚಂದ್ರಕಾಂತನ ವಿಳಾಸ ದೊರೆತಿದೆ. ಆತ ಹೋಟೆಲ್ ಪ್ಯಾರಾಚೂಟ್‌ನ ನೂರಾ ಎಂಟನೆ ರೂಮಿನಲ್ಲಿದ್ದ...."

ತಬ್ಬಿಬ್ಬಾದ ಡಿಸೋಜಾ ಚಟಕ್‌ನೆ ಎದ್ದು ನಿಂತ.

ಪ್ರಸಾದ ಬಾಬು ಮೆಚ್ಚುಗೆಯಿಂದ ಅವಿನಾಶನತ್ತ ನೋಡಿದರು.

"ಮಿಸ್ಟರ್ ಅವಿನಾಶ" ನಿಮ್ಮ ಬಗ್ಗೆ ನಂಗೆ ಹೆಮ್ಮೆ ಎನಿಸುತ್ತದೆ.

"ಥ್ಯಾಂಕ್ಸ್ ಪ್ರಸಾದಬಾಬು" ನಾವು ಮತ್ತೆ ಭೆಟ್ಟಿಯಾಗೋಣ.

ಸೂಕ್ಷ್ಮವಾಗಿ ಅವರಿಗೆ ಹೊರಡಲು ಸೂಚಿಸಿದ ಅವಿನಾಶ.

ಪ್ರಸಾದ್‌ಬಾಬು ಮಂದವಾಗಿ ಮುಗುಳ್ನಕ್ಕು ಹೊರನಡೆದರೆ, ಅವಿನಾಶ ಮತ್ತು ಡಿಸೋಜಾ ಪೊಲೀಸ್ ಜೀಪತ್ತ.... ಹೆಜ್ಜೆ ಹಾಕಿದರು.

ಹೋಟೆಲ್ ಪ್ಯಾರಾಚೂಟ್‌ಗೆ ಬಂದಾಗ ಸಮಸ್ಯೆಯೊಂದು ಎದುರಾಯಿತು. ರೂಮು ಬೀಗದ ಕೈ ಅವರ ಬಳಿ ಇರಲಿಲ್ಲ. ಶವದ ಜೇಬಿನಲ್ಲೂ ಇರಲಿಲ್ಲ ... ಅದಕ್ಕೆ ಅವಿನಾಶನೇ ಸಮಾಧಾನ ಸೂಚಿಸಿದ. ಪ್ರತಿಯೊಂದು ಹೋಟೆಲಿನಲ್ಲಿಯೂ ಮ್ಯಾನೇಜರ ಬಳಿ ಡುಪ್ಲಿಕೇಟ್ ಚಾವಿ ಇದ್ದೇ ಇರುತ್ತದೆ ಕಸಿದುಕೊಂಡರಾಯಿತು ಎಂದ....

ಪ್ಯಾರಾಚೂಟ್‌ಗೆ ಬಂದಾಗ ಮ್ಯಾನೇಜರ್ ಇರಲಿಲ್ಲ.... ಅವರು ಬರುವ ಸಮಯವಾಗಿದೆ ಎಂದು ಹೇಳಿದ ಸಹಾಯಕ ಮ್ಯಾನೇಜರ್ ಕೃಷ್ಣ.... ಅವನ ಬಳಿ ಡೂಪ್ಲಿಕೇಟ್ ಚಾವಿ ಇರಲಿಲ್ಲ....ಅವಿನಾಶನ ಸಲಹೆ ಮೇರೆಗೆ ಆತ ಎಲ್ಲೆಡೆ ಹುಡುಕಾಡಿದರೂ ಚಾವಿ ದೊರೆಯಲಿಲ್ಲ.... ಡಿಸೋಜಾ ಮುಖದ ಮೇಲೆ ನಿರಾಶೆ ಕವಿಯಿತು. ಕಣ್ಣಲ್ಲೇ ಅವರಿಗೆ ಸಮಾಧಾನ ಸೂಚಿಸಿ ಮಹಡಿ ಮೆಟ್ಟಲು ಹತ್ತಿ ಮೇಲೆ ಬಂದ ಅವಿನಾಶ. ಡಿಸೋಜಾ ಮೆತ್ತಗೆ ಅವನನ್ನು ಹಿಂಬಾಲಿಸಿದ. ನೂರಾ ಎಂಟನೆ ರೂಮಿಗೆ ಬೀಗ ನೇತಾಡುತ್ತಿತ್ತು. ಅವಿನಾಶ ಸುತ್ತಲೂ ನೋಡಿದ. ಉದ್ದಕ್ಕೂ ಕಾರಿಡಾರ್. ಎಡಬಲಕ್ಕೆ ಸುಂದರ ಕೊಠಡಿಗಳು....ಬೆಲೆಬಾಳುವ ಅಮೃತಶಿಲೆಯ ಕಲ್ಲು ಜೋಡಣೆ ಅದರ ಮೇಲೆ ಉದ್ದಕ್ಕೂ ರೆಡ್ ಕಾರ್ಪೆಟ್ ಹಾಸಿದ್ದರು.... ರೂಮಿನ ಎದುರಿನ ಭಾಗದ ಕಾರ್ಪೆಟ್ ಎತ್ತಿ ಕೆಳಗೆ ಕೈಯಾಡಿಸಿದ. ಏನೂ ತಗಲಲಿಲ್ಲ ತುಸು ಹೊತ್ತು ಯೋಚಿಸಿ ಎದುರು ರೂಮಿನ ಬಳಿ ಬಂದು ನಿಂತ. ಬಾಗಿಲ ಬಳಿ ಕುಳಿತು ಕಾರ್ಪೆಟ್ ಎತ್ತಿ ಕೈ ತೂರಿಸಿದ, ಒಂದೇ ನಿಮಿಷದಲ್ಲಿ ಅವನ ಮುಖ ಅರಳಿತು.... ಕೈಗೆ ಬೀಗ ಬಂದಿತ್ತು.... ಚಂದ್ರಕಾಂತ ತನ್ನ ರೂಮಿನ ಬೀಗದ ಕೈ ಅಲ್ಲಿ ಅಂದರೆ ಎದುರು ರೂಮಿನ ಕಾರ್ಪೆಟ್ ಕೆಳಗೆ ತೂರಿಸಿದ್ದ.... 'ಭಲೆ' ಎಂದುಕೊಂಡ ಮನದಲ್ಲಿ. ಡಿಸೋಜಾಗಂತೂ ತಲೆಸುತ್ತಿ ಬಂದಂತಾಯಿತು. ಚಾವಿಯ ಬಗ್ಗೆ ಆತ ಈ ಕಲ್ಪನೆ ಕನಸಲ್ಲೂ ಮಾಡಲು ಸಾಧ್ಯವಿರಲಿಲ್ಲ. ಮೆಚ್ಚುಗೆಯಿಂದ ಅವಿನಾಶನೆಡೆ ನೋಡಿದ. ಮುಗುಳ್ನಗುತ್ತ ಬಂದ ಅವಿನಾಶ ಚಂದ್ರಕಾಂತನ ರೂಮಿನ ಬೀಗಕ್ಕೆ ಚಾವಿ ತೂರಿಸಿದ. ಸುಲಭವಾಗಿ ಬಾಯಿ ತೆರೆಯಿತು. ಒಳ ಬಂದರು ಇಬ್ಬರೂ. ಅವಿನಾಶ ಮತ್ತೆ ಬಾಗಿಲು ಮುಚ್ಚಿ ದೀಪ ಅಂಟಿಸಿದ....

ಬಾಯಿಯಿಂದ ಚಿಕ್ಕ ಉದ್ಗಾರ ಹೊರಟಿತು.

ರೂಮಿನಲ್ಲಿ ಭೂಕಂಪವಾದಂತಾಗಿತ್ತು. ಕುರ್ಚಿ, ಟೀಪಾಯಿ ಬೋರಲಾಗಿ ಬಿದ್ದಿದ್ದರೆ ಸೋಫಾದ ಹೊಟ್ಟೆ ಹರಿದು ಒಳಗಿದ್ದ ಸ್ಪಂಜು ಹೊರಗೆಲ್ಲ ಹರಡಿತ್ತು ಅದೇ ಪರಿಸ್ಥಿತಿ ಮಂಚದ ಮೇಲಿದ್ದ ಬೆಡ್ ಹಾಗೂ ದಿಂಬಿಗೂ ಆಗಿತ್ತು. ಮನಬಂದಂತೆ ಹರಿದು ನಶಿಸಿದ್ದ ಅರಳೆ ಎಲ್ಲೆಡೆ ಹರಡಿತ್ತು.... ಅವಿನಾಶ್ ಮೆಲ್ಲನೆ ಉಸುರಿದ.

"ನಮಗಿಂತ ಮೊದಲೇ ಬಂದು ಯಾರೋ ರೂಮನ್ನು ಜಾಲಾಡಿಸಿದ್ದಾರೆ.

"ಏಕೆ ?"

"ನಮಗೆ ಬೇಕಾದ ವಸ್ತು ಅವರಿಗೂ ಬೇಕಾಗಿರಬೇಕು"

"ಹಾಗಾದರೆ ಅದು ದೊರೆತಿದೆಯೆ ?"

"ನನಗನಿಸುವ ಮಟ್ಟಿಗೆ ಇಲ್ಲ"

"ಹೇಗೆ ಹೇಳುವಿರಿ ?"

"ಎದುರಿಗಿದ್ದ ಕನ್ನಡಿ ನೋಡಿ ಒಡೆದು ಹೋಗಿದೆ. ಟಿ.ವಿ. ನೋಡಿ ಜಜ್ಜಿಹೋಗಿದೆ. ತಮಗೆ ಬೇಕಾದ ವಸ್ತು ದೊರಕದೇ ಇದ್ದಾಗ ತಾಳ್ಮೆ ಕಳೆದುಕೊಂಡ ಅವರು ಇವನ್ನೆಲ್ಲ ಒಡೆದು ಹಾಕಿದ್ದಾರೆ... ಬನ್ನಿ ಹೊರಡೋಣ"

ದೀಪವಾರಿಸಿ ಬಾಗಿಲು ತೆರೆದು ಹೊರಬಂದರು. ಬೀಗಹಾಕಿ ಚಾವಿಯನ್ನು ಮೊದಲಿದ್ದ ಜಾಗೆಗೆ ತೂರಿಸಿದರು.

ಸಹಾಯಕ ಮ್ಯಾನೇಜರ್ ಕೃಷ್ಣ ಹೊರಟು ಹೋಗಿದ್ದ' ಮ್ಯಾನೇಜರ್ ಜಯರಾಜ ಹಾಜರಾಗಿದ್ದ ಡಿಸೋಜಾನ ಪರಿಚಯ ಹಿಡಿದು ಅಭಿನಂದಿಸಿದ. ಡಿಸೋಜಾಗಿಂತ ಮೊದಲೇ ಅವಿನಾಶ ಮಾತನಾಡಿದ.

"ಹಲೋ ಜಯರಾಜ್....ನಾನು ಡಿಸೋಜಾ ಸ್ನೇಹಿತ. ನೂರಾಎಂಟನೇ ರೂಮಿನಲ್ಲಿರುವವ ನನ್ನ ಆಪ್ತ ಮಿತ್ರ. ಅವನ ಭೇಟಿಗೆ ಬಂದಿದ್ದೆ."

"ಯಾರು ? ರಮಾಕಾಂತನೇ ?"

"ಹಾಂ... ಹಾಂ....ರಮಾಕಾಂತ" ಅವಿನಾಶ್ ತಟಕ್‌ನೆ ಉತ್ತರಿಸಿದ.

"ನಾಲ್ಕೈದು ದಿನಗಳಿಂದ ಅವರು ಬಂದಿಲ್ಲ. ಇನ್ನೆರಡು ದಿವಸ ಅವರ ದಾರಿನೋಡಿ ನಾನೇ ಕಂಪ್ಲೇಂಟ್ ಮಾಡುವವನಿದ್ದೆ."

"ಆದರ ಅವಶ್ಯಕತೆಯಿಲ್ಲ. ಅವರು ನನ್ನಕಡೆ ಬಂದಿದ್ದರು, ನಾಳೆ

ಸಂಜೆ ಇಲ್ಲಿಗೆ ಬರುತ್ತಾರೆ. ನಾನವರಿಂದ ಬೀಗದಕ್ಕೆ ಇಸಿದುಕೊಳ್ಳಲು ಮರೆತೆ ದಯವಿಟ್ಟು ತಮ್ಮ ಬಳಿಯಿರುವ ಡುಪ್ಲಿಕೇಟ್ ಚಾವಿಕೊಟ್ಟರೆ...."

ಅವಿನಾಶ್ ತನ್ನ ಮಾತು ಅರ್ಧಕ್ಕೇ ನಿಲ್ಲಿಸಿದ. ಜಯರಾಜ ಹೊರಳಿ ಡಿಸೋಜಾನನ್ನು ದಿಟ್ಟಿಸಿದ . ಡಿಸೋಜಾ ಉತ್ತರಿಸಿದ.

"ಕೊಡಿ... ಪರವಾಗಿಲ್ಲ .. ನಾನಿದ್ದೇನೇ...

ಜಯರಾಜ ಬಲಭಾಗದ ಡ್ರಾ ಎಳೆದ. ಮೇಲೆಯೇ ಇದ್ದ ಬೀಗದಕ್ಕೆ ಗಳ ಗೊಂಚಲದಿಂದ ಒಂದು ಬೀಗದಕ್ಕೆ ಬೇರೆ ಮಾಡಿಕೊಟ್ಟ.

ಅವಿನಾಶನ ತುಟಿಗಳು ವಕ್ರವಾದವು.

ಹತ್ತು ನಿಮಿಷಗಳ ಹಿಂದೆ ಈ ಕೀಲಿಕ್ಕೆ ಗುಚ್ಛ ಇರಲಿಲ್ಲ.

ಅಂದರೆ ?....ಅದನ್ನು ಮ್ಯಾನೇಜರ್ ತನ್ನ ಜೊತೆ ಒಯ್ದಿದ್ದ ...

"ಪ್ಲೀಜ್ ತಾವೇ ಬಂದು ರೂಮ್ ಓಪನ್ ಮಾಡಿಕೊಡಿ...."

ಅವಿನಾಶ್ ಉತ್ತರಿಸಿದಾಗ ತುಸು ವಿಚಲಿತನಾದ ಜಯರಾಜ....

"ಪರವಾಗಿಲ್ಲ ಬನ್ನಿ....ನಾನಿದ್ದೇನೆ"

ಡಿಸೋಜಾ ಒತ್ತಾಯಿಸಿದಾಗ ನಿರ್ವಾಹವಿಲ್ಲದೆ ಜಯರಾಜ ಕೌಂಟರ್ ನಿಂದ ಹೊರಬಂದ....ಅವನ ಮುಖದ ಮೇಲೆ ಮೂಡಿದ ಬೆವರು ಅವಿನಾಶನಿಗೆ ನಿಚ್ಚಳವಾಗಿ ಕಂಡು ಬಂದಿತು.

ರೂಮಿನೊಳಕ್ಕೆ ಬಂದು ದೀಪ ಉರಿಸುತ್ತಲೂ ಜಯರಾಜ ಬೆಚ್ಚಿಬಿದ್ದು ಚೀತ್ಕರಿಸಿದ "ಅರೆ ಏನಿದು ?" ಬಾಗಿಲು ಮುಚ್ಚಿ ಅದಕ್ಕೆ ಬೆನ್ನು ಆನಿಸಿ ನಿಂತಿದ್ದ ಅವಿನಾಶ್ ಮರುತ್ತರ ನೀಡಿದ.

"ಇದೇನೆಂದು ನಿಮಗೆ ಚೆನ್ನಾಗಿ ಗೊತ್ತು ಜಯರಾಜ....ಏಕೆಂದರೆ ಈ ರೂಮಿನ ತಲಾಶೆ ನಿಮ್ಮೆದುರೇ ನಡೆದಿದೆ ..."

"ಸುಳ್ಳು. ಸುಳ್ಳು" ಜಯರಾಜ ಕೂಗುತ್ತಿದ್ದಂತೆ ಮುಂದೆ ಧಾವಿಸಿದ ಅವಿನಾಶ್ ಬೊಕ್.. ಬೊಕ್ ಎಂದು ಎರಡು ಮುಷ್ಟಿ ಪ್ರಹಾರ ಮಾಡಿದ ಅವನ ಮುಖದ ಮೇಲೆ....ಬಾಯಿಯಿಂದ ಎರಡು ಮೂರು ಹಲ್ಲುಗಳು ಬಳಬಳನೆ ಉದುರಿ ರಕ್ತ ನುಗ್ಗಿ ಬಂದಿತು. ಹಂದಿಯಂತೆ ಅರಚಿದ ಜಯರಾಜ್....

"ಜಯರಾಜ್....ಇದೀಗ ಇಪ್ಪತ್ತು ನಿಮಿಷಗಳ ಹಿಂದೆ ಕೃಷ್ಣ ಇದ್ದಾಗ

ನಾನು ಎಲ್ಲೆಡೆ ಜಾಲಾಡಿಸಿದೆ .. ಕೀಲಿಕೈಗಳ ಗುಚ್ಛ ಇರಲಿಲ್ಲ. ಈಗ ಇದೆ ಅಂದ ಮೇಲೆ ಅದು ನಿನ್ನ ಬಳಿ ಇತ್ತು ಎಂದರ್ಥವಾಯಿತು. ಈ ರೂಮಿನ ತಲಾಶೆ ನೀನೇ ಮಾಡಿರುವೆ... ಒಳ್ಳೆಮಾತಿನಿಂದ ಒಪ್ಪಿಕೊಂಡು ನಿನಗೆ ಈ ಕೆಲಸ ಯಾರು ಹೇಳಿದ್ದರು ? .. ಏನು ಹುಡುಕಲು ತಿಳಿಸಿದ್ದರು ? ಎಂಬುದನ್ನು ಬೇಗಾಹೇಳು"

ಮೊದಲಿನ ಎರಡು ಪ್ರಶ್ನೆಗಳು ಸಾಕಾಗಿದ್ದವು.

ಜಯರಾಜ ಬಾಯಿ ಬಿಟ್ಟ.

"ಕಾಮ್ತಿಂಗ ಹೇಳಿದ್ದ .. ಅವನಿಗೆ ಎರಡು ಮೈಕ್ರೋಫಿಲ್ಮ್ ನೆಗೆಟೀವ್ ಬೇಕಾಗಿದ್ದವು. ಅವು ಸಿಗಲಿಲ್ಲ"....

"ಕಾಮ್ತಿಂಗ ಎಲ್ಲಿದ್ದಾನೆ ?"

"ಇದೇ ಹೋಟೆಲಿನ ಮೂರು ನೂರಾ ಹದಿನೈದನೇ ರೂಮಿನಲ್ಲಿ"

"ಗುಡ್....ನೀನು ತೆಪ್ಪಗೆ ಒಂದು ಮೂಲೆಯಲ್ಲಿ ಕುಳಿತಿರು. ಪಿಟ್ ಅನ್ನದೇ ಜಯರಾಜ ಮೂಲೆ ಸೇರಿ ತಲೆಗೆ ಕೈ ಹೊತ್ತು ಕುಳಿತ.

ಅವಿನಾಶ್ ರೂಮಿನ ಮಧ್ಯೆ ಬಂದು ನಿಂತು ಸುತ್ತಲೂ ಒಂದು ಬಾರಿ ದೃಷ್ಟಿಸಿದ. ರೂಮಿನ ಅಂಗುಲ ಅಂಗುಲ ಅವನ ದೃಷ್ಟಿಯಲ್ಲಿ ಮಿಂದು ಹೋಯಿತು. ಡಿಸೋಜಾ ಅವನನ್ನೇ ದಿಟ್ಟಿಸುತ್ತಿದ್ದ. ಕಟಬಾಯಿಯಿಂದ ಮೆಲ್ಲನೆ ಇಳಿಯುತ್ತಿದ್ದ ರಕ್ತದ ಧಾರೆಯನ್ನು ವಸ್ತ್ರದಿಂದ ಒರಸಿಕೊಳ್ಳುತ್ತ ಜಯರಾಜ ಸಹ ಅವನತ್ತಲೇ ದಿಟ್ಟಿಸುತ್ತಿದ್ದ. ತನಗೆ ಸಿಗದ ವಸ್ತು ಅವನಿಗೆ ಹೇಗೆ ಸಿಗುತ್ತದೆ ಎಂದು ?....

ಹತ್ತು ಹದಿನೈದು ನಿಮಿಷಗಳು ಕಳೆದವು.

ಅವಿನಾಶನ ದೃಷ್ಟಿ ಒಡೆದ ಡ್ರೆಸಿಂಗ್‌ಟೇಬಲ್ ಕನ್ನಡಿ ಬಳಿಬಂದು ಅಲ್ಲೇ ತಟಸ್ಥವಾಯಿತು. ಮೆಲ್ಲನೆ ಅದರ ಹತ್ತಿರ ಬಂದು ನಿಂತು ಕೆಳಗೆ ಬಾಗಿ ಒಡೆದ ಗಾಜಿನ ಚೂರುಗಳನ್ನು ಆರಿಸಿ ಎತ್ತಿ ಇಡತೊಡಗಿದ....ನಂತರ ಎದ್ದು ನಿಂತು ಬಲಗೈ ಬೆರಳುಗಳಿಂದ ಕನ್ನಡಿಯ ಫ್ರೇಮ್ ಸವರ ತೊಡಗಿದ. ಕಪ್ಪು ಮರದಿಂದ ಮಾಡಿದ ಫ್ರೇಮ್....ಒಳಭಾಗದಲ್ಲಿ ಕಪ್ಪು ಸನ್‌ಮೇಣ ಅಂಟಿಸಿದ್ದರು....

ನಾಲ್ಕಾರು ನಿಮಿಷ ತಡಕಾಡಿದ.

ಬೆರಳುಗಳನ್ನು ಅತ್ತಿತ್ತ ಅರಳಿಸಿದ....

ಒಮ್ಮಿಂದೊಮ್ಮೆಲೆ ತುಟಿಗಳ ಮೇಲೆ ನಗೆ ಲಾಸ್ಯವಾಡಿತು. ಸಂತಸ ದಿಂದ ಸಿಳ್ಳು ಹಾಕುತ್ತ ಬಲಗೈ ಹಿಂದಕ್ಕೆಳೆದ ...

ಡಿಸೋಜಾ.... ಜಯರಾಜ ಅಚ್ಚರಿಯಿಂದ ಅವನತ್ತ ನೋಡಿ ಚೇಳು ಕುಟುಕಿದವರಂತೆ ಬೆಚ್ಚಿಬಿದ್ದರು. ಅವಿನಾಶನ....ಬಲಗೈ ಎರಡು ಬೆರಳುಗಳ ಮಧ್ಯೆ ಒಂದಲ್ಲ ಎರಡು ಮೈಕ್ರೊಫಿಲ್ಮ್ ನೆಗೆಟಿವ್ ಕಂಡುಬಂದವು..

# 23

ಮುಜಪ್ಫರಾಬಾದ್....

ಪಾಕಿಸ್ತಾನ ಆಕ್ರಮಿಸಿದ ಕಾಶ್ಮೀರ ಭಾಗದ ರಾಜಧಾನಿ....ಸೈನಿಕ ಕಾರ್ಯಾಚರಣೆ ನಾಯಕ ಮುಜಾಹಿದ ಉಲ್ ಹಕ್....ತನ್ನ ಮುಂದಿರುವ ಹತ್ತು ಹದಿನೈದು ಭಾರತೀಯ ಪತ್ರಿಕೆಗಳನ್ನು ಹರಡಿಕೊಂಡು ಕುಳಿತಿದ್ದ. ಆತ ಉದಿಗ್ನವಾದಂತೆ ಕಾಣುತ್ತಿದ್ದ. ಹಣೆಯ ಮೇಲೆ ಚಿಂತೆಯ ರೇಖೆಗಳು ಮೂಡಿದ್ದವು ...ಹೊರಗಡೆ ಜೀಪು ಬರುತ್ತಿರುವ ಸದ್ದು ಕೇಳಿ ಬಂದು ಟೆಂಟಿನ ಕಿಟಕಿಯ ಪರದೆ ಸರಿಸಿದ. ಸುತ್ತಲೂ ಹರಡಿದ ಶುಭ್ರವಾದ ಹಿಮ ...ಸೂರ್ಯಕಿರಣಗಳಿಂದಾಗಿ ಕಣ್ತೆರೆಯಲು ಆಗವಷ್ಟು ಪ್ರಕಾಶಮಾನ ಬೆಳಕು ಹರಡಿದ್ದು ಒಂದೆರಡು ಕ್ಷಣ ಆತ ಕಣ್ಣು ಮುಚ್ಚಿ ತೆರೆದ ...ಈಗ ಸ್ವಲ್ಪ ಸ್ವಲ್ಪವಾಗಿ ಹೊರಗಿನ ದೃಷ್ಟಿ ಕಾಣಿಸಿತು.

ಕೆಳಭಾಗದಲ್ಲಿ ಹಾವಿನ ಸುರಳಿಯಂತೆ ಕಾಣುವ ದಾರಿಯಲ್ಲಿ ಜೀಪೊಂದು ಭಯಂಕರ ಸಪ್ಪಳ ಮಾಡುತ್ತ ಬರತೊಡಗಿತ್ತು. ಜೀಪಿನ ಬಣ್ಣ ಅದರ ಮೇಲೆ ಇರುವ ಧ್ವಜ ಎಲ್ಲವನ್ನು ಗಮನಿಸಿ ಅದು ತಮ್ಮದೇ ಎಂದು ಮನದಟ್ಟಾದಾಗ ಮುಜಾಹಿದ ಪರದೆ ಕೈಬಿಟ್ಟ .. ತನ್ನೆದುರು ಇದ್ದ ಎಲ್ಲಾ ಪತ್ರಿಕೆಗಳ ಮೇಲೆ ಮತ್ತೊಮ್ಮೆ ದೃಷ್ಟಿ ಹಾಯಿಸಿದ....

ಅರ್ಧಗಂಟೆ ಕಳೆದಿರಬಹುದು ...ಇಂಜಿನ್ ಸಪ್ಪಳ ಅತ್ಯಂತ ಜೋರಾಗಿ ಕೇಳಿಸಿತು. ನಂತರ ಒಮ್ಮೆಲೆ ಶಾಂತವಾಯಿತು. ಹತ್ತಿಪತ್ತು ರೈಫಲ್‌ಗಳ

ಮೇಲೆ ಬಾರಿಸಿದ.... ಬೂಟು ಜೋಡಿಸಿದ ಶಬ್ದಗಳೊಂದಿಗೆ ಸೆಲ್ಯೂಟ್ ನೀಡಿದ್ದು ಕೇಳಿ ಬಂದಾಗ ಓಹ್ ಅವರೇ ಬಂದರು ಎಂದು ಉದ್ಗರಿಸಿದ....

ಎರಡು ಮೂರು ನಿಮಿಷಗಳಲ್ಲಿ ಟೆಂಟಿನ ಕರ್ಟನ್ ಸರಿಸಿ ಒಳಬಂದರು ಐದಾರು ಜನರು ಮುಜಾಹಿದ ಎದ್ದು ನಿಂತ. ಅವರೆಲ್ಲ ಅವನಿಗೆ ಮಿಲ್ಟ್ರಿ ಸೆಲ್ಯೂಟ್ ನೀಡಿದ ನಂತರ ಅವರೆಲ್ಲರ ಕೈಕುಲುಕಿ ಎಲ್ಲರಿಗೂ ಕುಳಿತುಕೊಳ್ಳಲು ಸೂಚಿಸಿದ. ಅವರೆಲ್ಲರೂ ಕುಳಿತುಕೊಳ್ಳುತ್ತಿದ್ದಂತೆ ಹೊರಗಡೆ ನಿಂತ ಅವನತ್ತ ಬೆರಳಿನಿಂದ ಸನ್ನೆ ಮಾಡಿ ಆಜ್ಞಾಪಿಸಿದ ಮುಜಾಹಿದ್, "ಇನ್ನು ನೀನು ಹೋಗು ನನ್ನ ಒಪ್ಪಿಗೆಯಿಲ್ಲದೇ ಯಾರೂ ಒಳಗೆ ಬರಕೂಡದು ನೀನೂ ಸಹ ಅರ್ಧಗಂಟೆ ನಿನ್ನ ಮುಖ ತೋರಿಸಬೇಡ"

ಆತ ವಂದಿಸಿ ಹೊರ ನಡೆದ.

ಮೊದಲಿನಂತೆ ಪರದೆ ಕೆಳಬಂದಿತು.

"ದೋಸ್ತೋ."

ಕರ್‌ಕರ್ ಎಂದು ಕೊರೆಯುವಂಥ ಕರ್ಕಶ ಧನಿಯಲ್ಲಿ ಮುಜಾಹಿರ ತನ್ನೆದುರಿದ್ದ ಮಿಲ್ಟ್ರಿ ಆಫೀಸರನ್ನು ಉದ್ದೇಶಿಸಿ ಮಾತನಾಡತೊಡಗಿದ.

"ತಮ್ಮ ಗ್ರೀನ್‌ಮೂನ್ ಆಪರೇಶನ್ ಕೊನೆಯ ಹಂತದಲ್ಲಿ ವಿಫಲ ವಾಗುವ ಲಕ್ಷಣಗಳು ಕಂಡು ಬಂದಿದ್ದರಿಂದ ಈ ಎಮರ್ಜನ್ಸಿ ಮೀಟಿಂಗ್ ಕರೆದಿದ್ದ.

ಅವರ ಸಂಗಾತಿಗಳ ಮುಖಗಳು ಕಳೆಗುಂದಿದವು.... ಅವರ ಭಾವನೆ ಗಳನ್ನು ಅರ್ಥ ಮಾಡಿಕೊಳ್ಳುತ್ತ ಮುಜಾಹಿದ್ ಮುಂದುವರೆಸಿದ....

"ನಮ್ಮ ಗ್ರೀನ್‌ಮೂನ್ ಆಪರೇಶನ್.... ಸರ್ವದೃಷ್ಟಿಯಿಂದಲು ಸುರಕ್ಷಿತವಾಗಿತ್ತು.... ಗೆಲುವು ಕಟ್ಟಿಟ್ಟ ಬುತ್ತಿಯಾಗಿತ್ತು. ಆದರೆ ಇನ್‌ಸ್ಪೆಕ್ಟರ್ ಅವಿನಾಶ್ ಎಂಬ ಒಬ್ಬ ಸಾಧಾರಣ ಅಧಿಕಾರಿಯಿಂದಾಗಿ ಅದೆಲ್ಲಾ ಬುಡ ಮೇಲಾಗಿದೆ.... ಇದರಲ್ಲಿ ನಮ್ಮ ಏಜೆಂಟರಾದ ಕಾಮ್ರಿಂಗ ಮತ್ತು ಇಮ್ರಾನ್ ಇವರ ತಪ್ಪು ಇಲ್ಲವೆಂದಲ್ಲ.... ಅವರು ಮಾಡಿದ ತಪ್ಪುಗಳು ಅತ್ಯಂತ ಸಾಧಾರಣವಾಗಿದ್ದರೂ ಅವುಗಳಿಂದ ಆಪರೇಷನ್ನಿಗೇ ಬಾಧೆ."

ಬಾಸ್....ನಾನು.... ನಡುವೆ ಧನಿ ಎತ್ತಿದ ಅಧಿಕಾರಿಗಳನ್ನು ತಡೆದ ಮುಜಾಹಿದ್,

"ಮಧ್ಯ ಮಾತನಾಡಬೇಡ...."

"ಸಾರಿ ಬಾಸ್"

"ಕಾಮ್ತಿಂಗ ಮತ್ತು ಇಮ್ರಾನ್ ಇಬ್ಬರೂ ನಮ್ಮ ಫೋರ್ಸಿಗೆ ಉತ್ತಮ ಸೇವೆ ಸಲ್ಲಿಸಿದ ಅತ್ಯಂತ ಮೇಧಾವಿ ಏಜಂಟರಾಗಿದ್ದಾರೆ. ಭಾರತದೇಶದ ರಿಜರ್ವ್ ಬ್ಯಾಂಕಿನಲ್ಲಿಯ ಮಹತ್ವದ ಕಾಗದ ಪತ್ರ....ಹಾಸನ ಅಣು ಕೇಂದ್ರದ ಗುಪ್ತವರದಿ....ಭಾರತ ಮಿಲ್ಟ್ರಿಯ ಸೇನೆ ನಕ್ಷೆಗಳು... ಎಲ್ಲವೂ ಅವರ ಬಳಿಯಿವೆ ಅದರೊಂದಿಗೆ ನಮ್ಮ ಮಹಾತ್ವಾಕಾಂಕ್ಷೆಯ ಆಪರೇಶನ್ ಗ್ರೀನ್‌ಮೂನ್‌ಗೆ ಸಂಬಂಧಿಸಿದ ಏಜಂಟರು ಅವರ ಆಫೀಸಿನ ವಿಳಾಸದೊಂದಿಗೆ, ಆಪರೇಶನ್ನಿನ ವಿವರ ಸಹ ಅವರಬಳಿ ಇವೆ....

ಒಂದು ಕ್ಷಣ ತಡೆದು ಮಾತು ಮುಂದುವರೆಸಿದ....ಅವರಿಬ್ಬರೂ ವಿಜಯದ ಮೆಟ್ಟಿಲು ಹತ್ತತೊಡಗಿದ್ದರು....ಈ ಮಧ್ಯೆ ಏನಾಯಿತೋ ಏನೋ ತೊಂದರೆಗಳು ಎದುರಾಗತೊಡಗಿದವು. ಇನ್‌ಸ್ಪೆಕ್ಟರ್ ಅವಿನಾಶ್ ಅವರ ಒಂದೆ ಬಿದ್ದು ಬಂಧಿಸಿದ.... ಇಮ್ರಾನ್ ಬಗ್ಗೆ ನಮಗೆ ತುಂಬಾ ಅಭಿಮಾನವಿದೆ. ತನ್ನ ಕಾರ್ಯ ಕ್ಷೇತ್ರದಲ್ಲಿ ಅಡ್ಡಿ ಉಂಟುಮಾಡಿದ, ತನ್ನ ತಂದೆಯನ್ನೇ ಕೊಂದ ಬಹಾದ್ದೂರ ಆತ ನಮ್ಮ ಯಶಸ್ಸಿನ ಕಿರೀಟವಾತ. ಕಾಮ್ತಿಂಗನಿಗೆ ಸರಿಯಾದ ಸಹಾಯ ನೀಡಿದ್ದ.... ನಮ್ಮ ಅಪ್ತಕೂಟಕ್ಕೆ ಉಳಿದ ದಿನಗಳು ಕೇವಲ ಮೂರು. ಹೀಗಿರುವಾಗ ಸಂಪೂರ್ಣವಾಗಿ ನಂಬಿದ್ದ ಅವರೇ....

ಮುಜಾಹಿದ್ ಒಮ್ಮೆಲೆ ಮೌನ ತಾಳಿದ....

ಅವನ ಗಂಟಲು ಉಬ್ಬಿ ಬಂದಿತ್ತು. ಮಾತು ಹೊರಡದಂತಾಗಿತ್ತು. ಮುಖವೆತ್ತಿ ಎಲ್ಲರೆಡೆ ನೋಡಿದ.... ಎಲ್ಲರೂ ಆತಂಕಿತರಾಗಿದ್ದರು.

"ನಮಗೇನಾದರೂ ಅಪಾಯ...."

"ಖಂಡಿತ ಇಲ್ಲ.... ನಾವು ಸುರಕ್ಷಿತವಾಗಿದ್ದೇವೆ...." ನಮ್ಮ ಬಳಿ ಎಲ್ಲಾ ಬಗೆಯ ಸಾಧನಗಳಿವೆ.

"ಮತ್ತೆ.... ಈಗ ಬಂದಿರುವ ತೊಂದರೆ ಏನು?"

"ಕಾಮ್ತಿಂಗ ಮತ್ತು ಇಮ್ರಾನ್‌ರ ಮೇಲೆ ಬಹಳ ಜವಾಬ್ದಾರಿಯಿತ್ತು"

"ಅವರು ಎಲ್ಲಿ ಈಗ?"

"ಗೊತ್ತಿಲ್ಲ"

"ಅಂದರೆ?"

"ಎರಡು ದಿನಗಳ ಹಿಂದೆ ಕೊಹಿಮಾದಲ್ಲಿದ್ದ ಕಾಮ್ತಿಂಗನ ಗುಪ್ತಸ್ಥಾನದ ರಹಸ್ಯ ತಿಳಿದ ಅವಿನಾಶ್ ಅವರ ಮೇಲೆ ಆಕ್ರಮಣ ಮಾಡಿದ. ನಮ್ಮ ಬಹಾದ್ದೂರ್ ಕಾಮ್ತಿಂಗ ಏಟು ತಿಂದೂ ಅಲ್ಲಿಂದ ತಪ್ಪಿಸಿಕೊಂಡು ಪರಾರಿಯಾದ ಈಗ ಎಲ್ಲಿ ಇದ್ದಾನೋ ತಿಳಿಯದು...."

"ಮತ್ತೆ ಇಮ್ರಾನ್"

"ಇಮ್ರಾನ್‌ಗೆ ಅವನ ತಂದೆ ಅಡ್ಡಿಯಾದರು. ಆತ ವಿಚಲಿತನಾಗಲಿಲ್ಲ. ಅವರನ್ನು ಗುಂಡಿನಿಂದ ಸುಟ್ಟು ಪರಾರಿಯಾದ....ಅವಿನಾಶ್ ಬೆನ್ನಟ್ಟಿದ. ಅವನ ಕೈಗೆ ಸಿಕ್ಕದೆ ಅವನಿಗೆ ಚಳ್ಳೆಹಣ್ಣು ತಿನ್ನಿಸಿದ ಇಮ್ರಾನ್ ಪರಾರಿಯಾದ. ಈಗೆಲ್ಲಿದ್ದಾನೋ ತಿಳಿಯದು. ಅವರ ಬಗ್ಗೆ ನಮಗೆ ಚಿಂತೆಯಾಗಿದೆ ಅವರಿಲ್ಲದೆ ನಮ್ಮ ಆಪರೇಶನ್ ಮುಂದುವರೆಯಲಾರದು...."

"ನಿಜವಾಗಿಯೂ ಇಮ್ರಾನ್ ಬಹದ್ದೂರ್.. ನಮ್ಮ ಮಹಾನ್ ಉದ್ದೇಶದ ಹಾದಿಯಲ್ಲಿ ಜನ್ಮಕೊಟ್ಟ ತಂದೆ ಬಂದರೂ ವಿಚಲಿತನಾಗದೇ ಅವರನ್ನು ಕೊಂದು ಪರಾರಿಯಾಗಬೇಕೆಂದರೆ ನಾವು ಅವನನ್ನು ಪ್ರಶಂಸೆ ಮಾಡಲೇಬೇಕು" ಎಂದ ಸಂಗಡಿಗ.

ಮುಜಾಹಿದ್ ತನ್ನ ಸಂಗಡಿಗನೆಡೆ ಮೆಚ್ಚುಗೆಯಿಂದ ನೋಡಿದ.

"ಹೌದು....ನಮಗೆ ಇಮ್ರಾನನಂಥ ಸೈನಿಕರು ಬೇಕು ಹೂಂ ಅವರಿಬ್ಬರ ಹೆಸರಿನಲ್ಲಿ ಚೀಯರ್ಸ್... ಅವರು ಬದುಕಿದ್ದರೆ ಆಯುಷ್ಯ ವೃದ್ಧಿಸಲಿ ತೀರಿ ಕೊಂಡಿದ್ದರೆ ಅವರ ಆತ್ಮಕ್ಕೆ ಶಾಂತಿ ಸಿಗಲಿ....ಚೀಯರ್ಸ್...."

ಎಲ್ಲರೂ ತಮ್ಮ ಎದುರು ಇದ್ದ ವಿಸ್ಕಿ ಗ್ಲಾಸ್ ಎತ್ತಿ ಪಕ್ಕದವರ ಕೈಲಿದ್ದ ಗ್ಲಾಸಿಗೆ ತಾಗಿಸಿ ತಮ್ಮ ತುಟಿಯವರೆಗೂ ತರುತ್ತಿದ್ದಂತೆ....ಟೆಲಿಫೋನ್ ಗಂಟೆ ಅವರನ್ನು ತಡೆಯಿತು.

ಮುಜಾಯಿದ್ ಬೆಚ್ಚಿ ಬಿದ್ದು ಎಲ್ಲರೆಡೆ ನೋಡಿ ನುಡಿದ "ಇದು ನನ್ನ ಸೀಕ್ರೆಟ್ ಫೋನು....ಇದರ ನಂಬರ್ ಕೇವಲ ಐದು ಜನರಿಗೆ ಮಾತ್ರ ಗೊತ್ತು? ಓನಗೆ ನನ್ನ ಪತ್ನಿಗೆ ಕಾಮ್ತಿಂಗಗೆ, ಇಮ್ರಾನ್‌ಗೆ ಹಾಗೂ ನನ್ನ ಆಪ್ತ ಕಾರ್ಯದರ್ಶಿಗೆ.

ಅಚ್ಚರಿಯಿಂದ ಎಲ್ಲರ ಕಣ್ಣುಗಳು ಅರಳಿದವು.

ಮುಜಾಹಿದ್ ಫೋನು ಇದ್ದಲ್ಲಿ ನಡೆದು ರಿಸೀವರ್ ಎತ್ತಿದ. ಆ ಕಡೆಯಿಂದ ಗಟ್ಟಿಯಾದ ಸ್ವರ ಕೇಳಿಸಿತು.

"ಗ್ರೀನ್‌ಮೂನ್ ಆಪರೇಶನ್ ಜಿಂದಾಬಾದ್"

ಮುಜಾಹಿದ್ ಮೈ ಜುಂ ಎಂದಿತು. ಅದು ಕಾಮ್ತಿಂಗನ ಧ್ವನಿ....

"ಓಹ್....ಕಾವ್ತಿಂಗ ನೀನು ?"

"ಎಸ್....ಬಾಸ್ ಸಾವಿನೊಡನೆ ಹೋರಾಡಿ ಅದಕ್ಕೆ ಗಸ್ತುಕೊಟ್ಟು ಓಡಿ ಬಂದಿದ್ದೇನೆ"

"ಈಗ ಎಲ್ಲಿಂದ ಮಾತನಾಡುತ್ತಿರುವೆ ?"

"ಜಮ್ಮುವಿನಿಂದ...."

"ಹಾಗಾದರೆ ಅರ್ಧಗಂಟೆ ತಪ್ಪಿದರೆ ಒಂದು ಗಂಟೆಗೆ ಬರುತ್ತೀಯಾ ?"

"ಇಲ್ಲ ಬಾಸ್....ಸಾಯಂಕಾಲ ಬರುತ್ತೇನೆ"

"ಏಕೆ ? ಏಕೆ....ವಿಳಂಬ"

"ಬಾಸ್... ನನ್ನಂತೆ ಇಮ್ರಾನ್ ಸಹ ಪಾರಾಗಿದ್ದಾನೆ. ಸಂಜೆ ನಾಲ್ಕು ಗಂಟೆಗೆ ಇಲ್ಲೇ ನಾವಿಬ್ಬರೂ ಸಂಧಿಸಲು ಮಾತಾಡಿಕೊಂಡಿದ್ದೇನೆ. ಆತ ಇಲ್ಲಿಗೆ ಬರುತ್ತಲೇ ಕೂಡಿಕೊಂಡೇ ಬರುತ್ತೇವೆ.

"ಗುಡ್....ಗುಡ್ ಅಂದ ಹಾಗೆ ನಿಮ್ಮ ಆಪರೇಷನ್ ಸಾಮಾನು ?" ಸಾಮಾಗ್ರಿ ?

"ಬಾಸ್ ಆಪರೇಶನ್ ಸಾಮಾನಲ್ಲ....ಭಾರತ ದೇಶದ ಸಮಾಧಿಗೆ ಸಂಬಂಧಿಸಿದಂತೆ ಎಲ್ಲಾ ಸಾಮಾಗ್ರಿ ನಮ್ಮ ಬಳಿ ಇವೆ...."

""ವೆರಿಗುಡ್....ನಾನು ನಿಮ್ಮ ದಾರಿ ಕಾಯುತ್ತೇನೆ.

"ಆಗಲಿ ಬಾಸ್"

"ಗ್ರೀನ್‌ಮೂನ್ ಆಪರೇಷನ್ ಜಿಂದಾಬಾದ್"

"ಗ್ರೀನ್‌ಮೂನ್ ಆಪರೇಷನ್ ಜಿಂದಾಬಾದ್"

ರಿಸೀವರ್ ಯಥಾಸ್ಥಾನದಲ್ಲಿರಿಸಿದ ಮೂಜಾಹಿದ್ ನಡೆದ ಎಲ್ಲಾ ಸಮಾಚಾರ ತನ್ನ ಸಂಗಡಿಗರಿಗೆ ತಿಳಿಸಿದ ಅವರೆಲ್ಲ ಸಂತಸದ ಕೇಕೆ ಹಾಕಿ ವಿಸ್ಕಿ ಒಂದೇ ಗುಟುಕಿಗೆ ಗಂಟಲಿಗೆ ಇಳಿಸಿದರು.

ಸಾಯಂಕಾಲ ಐದು ಗಂಟೆಯಾಗುತ್ತಿದ್ದಂತೆ ಮುಜಾಹಿದ ಒಂದೇ ಸಮನೆ ಚಡಪಡಿಸತೊಡಗಿದ. ಅವನ ಆಜ್ಞೆಯಂತೆ ವಿಶ್ವಾಸ್ತರಾದ ಮಹತ್ವದ ಸ್ಥಾನದಲ್ಲಿದ್ದು ಭಯಾನಕ ಕೆಲಸ ಕಾರ್ಯಗಳಲ್ಲಿ ಸದಾ ಸಹಕಾರಿಯಾಗಿದ್ದ ಎಂಟು ಜನ ಸಂಗಡಿಗರೂ ಅವನೊಂದಿಗಿದ್ದರು. ಬೆಳಿಗ್ಗೆ ಬಂದಿದ್ದ ಸೈನಿಕ ಕಾರ್ಯಾಚರಣೆಯ ಪದಾಧಿಕಾರಿಗಳೂ ಸಹ ಹೋಗಿರಲಿಲ್ಲ. ಒಟ್ಟಾರೆ ಇಪ್ಪತ್ತೈದು ಜನರು ಕಾಮ್ತಿಂಗ ಹಾಗೂ ಇಮ್ರಾನರ ದಾರಿ ಕಾಯುತ್ತಿದ್ದರು. ಸಮಯ ಕಳೆದಂತೆ ನೀರಿನಿಂದ ತೆಗೆದೆಸೆದ ಮೀನಿನಂತೆ ಚಡಪಡಿಸತೊಡಗಿದರು.

ಆರು ಗಂಟೆಯಾಗುತ್ತಿದ್ದಂತೆ ಉದ್ವಿಗ್ನನಾದ ಮುಜಾಹಿದ್ ತನ್ನ ತಪ್ಪಿಗೆ ತಾನೇ ಒಟಗುಡಲಾರಂಭಿಸಿದ....

"ಏಕೆ ಬರಲಿಲ್ಲ ? ನಾಲ್ಕು ಗಂಟೆಗೆ ಇಮ್ರಾನ್ ಬರುವವನಿದ್ದ... ಅಲ್ಲಿಂದ ಇಬ್ಬರೂ ಕೂಡಿ ನಾಲ್ಕುವರೆಗೆ ಜಮ್ಮು ಬಿಟ್ಟರೆ ಇಲ್ಲಿ ಐದು ಐದೂವರೆ ? ಬರಬೇಕು ಆರು ಗಂಟೆಯಾದರೂ ಬರಲಿಲ್ಲವೇಕೆ ? ಮತ್ತೇನಾದರೂ ಅನಿಷ್ಟ ನಡೆಯಿತೆ ?"

ಮನದ ಅಂತರಾಳದಲ್ಲಿ ಹತ್ತಾರು ಕೆಟ್ಟ ವಿಚಾರಗಳು ಸುಳಿದು ಆತ ಸಮಯ ಕಳೆದಂತೆ ಸಂಯಮ ಕಳೆದುಕೊಳ್ಳತೊಡಗಿದ. ಅವನ ಮುಖ ಉಗ್ರವಾಗಿತ್ತು. ಕಣ್ಣುಗಳು ಭಯಾನಕವಾಗಿದ್ದವು.... ಮೇಲಿಂದ ಮೇಲೆ ಒಂದೊಂದೇ ಗ್ಲಾಸು ವಿಸ್ಕಿ ಕುಡಿಯುತ್ತಿದ್ದುದರಿಂದಾಗಿ ಅವನ ಕಣ್ಣುಗಳು ಕೆಂಡದಂತೆ ಕೆಂಪಗಾಗಿದ್ದವು. ತುಟಿಗಳು ಕಂಪಿಸುತ್ತಿದ್ದವು. ಕ್ಷಣ ಕ್ಷಣಕ್ಕೂ ಸಿಟ್ಟಿನಿಂದ ಚೀರುತ್ತಿದ್ದ.

ಅವನ ಅವಸ್ಥೆ ಕಂಡ ಅವನ ಜೊತೆಗಿದ್ದವರು ಭಯದಿಂದ ಒಬ್ಬೊಬ್ಬರಾಗಿ ಜಾಗ ಖಾಲಿ ಮಾಡಿ ಹೊರಗೆ ಬಂದು ಕುಳಿತರು ಒಳಗೆ ಟೆಂಟನಲ್ಲಿ ಮುಂಜಾಹಿದ ಒಬ್ಬನೇ ಕಾಯ್ದು. ತವದ ಮೇಲೆ ಕುಳಿತವನಂತೆ ಚಡಪಡಿಸುತ್ತಿದ್ದ.

ಸಂಜೆ ಕಳೆದು ರಾತ್ರಿ ನಿಧಾನವಾಗಿ ಕಾಲಿಟ್ಟಿತು.

ಒಂಭತ್ತು ಗಂಟೆಯಾಗುತ್ತಿದ್ದಂತೆ ಕಾಯುತ್ತಿದ್ದರೆಲ್ಲ ತಮ್ಮ ತಮ್ಮ ಗೂಡಿನತ್ತ ಪ್ರಯಾಣ ಬೆಳೆಸಲು ಯೋಚಿಸತೊಡಗಿದರು. ಡೇರೆ ಒಳಗೆ

ಹೋಗಿ ಮುಜಾಹಿದ್ ಮುಂದೆ ತಮ್ಮ ನಿರ್ಧಾರ ತಿಳಿಸಲು ಯಾರಿಗೂ ಧೈರ್ಯವಿಲ್ಲ. ಸಿಟ್ಟಿಗೆದ್ದ ಆತ ರಿವಾಲ್ವರಿನಿಂದ ಸುಟ್ಟು ಬಿಟ್ಟರೆ? ನೆನೆಸಿಕೊಂಡು ಗಡಗಡ ನಡುಗಿದ ಅವರು ತೆಪ್ಪಗೆ ಕುಳಿತಿದ್ದರು.

ಟೆಲಿಫೋನು ಸದ್ದು ಮಾಡಿ ಮುಜಾಹಿದನನ್ನು ಎಚ್ಚರಿಸಿತು.

ರಿಸೀವರ್ ಎತ್ತಿ ದೊಡ್ಡದನಿಯಲ್ಲಿ ಮಾತನಾಡಿದಾಗ ಹೊರಗಿದ್ದವರಿಗೂ ಕೇಳಿಸುತ್ತಿತ್ತು.

"ಯಾರು ಇಮ್ರಾನ್ ಯಾ ಅಲ್ಲಾ ಅಂತೂ ಬಂದೆಯಲ್ಲ? ಹಾಂ.... ಕಾಮ್ತಿಂಗ? ಅವನೂ ಇದ್ದಾನೆಯೇ.... ಅಚ್ಛಾ.... ಅಚ್ಛಾ ಏಕಿಷ್ಟು ತಡ? ಓಹೋ.... ಹೀಗೋ ಅಚ್ಛಾ.... ಅಚ್ಛಾ .... ಬೇಗ ಬನ್ನಿ ನಾವೆಲ್ಲ ನಿಮ್ಮ ದಾರಿ ಕಾಯುತ್ತಿದ್ದೇವೆ.... ರಾತ್ರಿಯೆಲ್ಲಾ ಜಪ ಮಾಡೋಣ.... ಹಾಂ, ಗ್ರೀನ್ ಮೂನ್ ಜಿಂದಾಬಾದ್...."

ರಿಸೀವರ್ ಕೆಳಗಿಟ್ಟ ಮುಜಾಹಿದ ಕೇಕೆ ಹೊಡೆದ....ಎಲ್ಲವನ್ನು ಕೇಳಿಕೊಂಡಿದ್ದ ಹೊರಗಿನವರೂ ಆನಂದದಿಂದ ಕೇಕೆ ಹಾಕುತ್ತ. ಒಳಗೆ ಧಾವಿಸಿದರು. ಮತ್ತೊಂದು ರೌಂಡ್ ವಿಸ್ಕಿ ಸೇವನೆ ಗ್ಲಾಸಿಗೆ ಗ್ಲಾಸು ತಾಕಲಾಡಿದವು ಒಂದೇ ಉಸುರಿಗೆ ಗ್ಲಾಸು ಖಾಲಿ ಮಾಡಿ ಕೆಳಗಿಟ್ಟ ಮುಜಾಹಿದ ಹೇಳಿದ.

"ಇಮ್ರಾನ್‌ನ ಪ್ಲೇನು ಮೂರು ಗಂಟೆ ಲೇಟಾಯಿತಂತೆ....ಇದೀಗ ಬಂದೆ ಎಂದ ... ಇನ್ನೊಂದು ಗಂಟೆಯಲ್ಲಿ ಬರುತ್ತಾರೆ.... ಇಬ್ಬರೂ.

ಬೆಲ್ ಮಾಡಿದ ಮುಜಾಹಿದ ಸೆಕ್ಯೂರಿಟಿ ಆಫೀಸರನನ್ನು ಕರೆಸಿ ಇಮ್ರಾನ್ ಮತ್ತು ಕಾಮ್ತಿಂಗರು ಬರುವುದನ್ನು ತಿಳಿಸಿ ಅವರನ್ನು ಗೌರವದಿಂದ ಬರಮಾಡಿಕೊಳ್ಳುವನಂತೆ ಸೂಚನೆ ನೀಡಿದ.... ಪಾಕಗ್ರಹದ ಅಧಿಕಾರಿಯನ್ನು ಕರೆಸಿ ತಮಗೆಲ್ಲರಿಗೂ ಸ್ವಾದಿಷ್ಟವಾದ ಭೋಜನ ಸಿದ್ಧಪಡಿಸುವಂತೆ ಆದೇಶಿಸಿದ.... ಹತ್ತೂವರೆ ಹನ್ನೊಂದರ ಮಧ್ಯೆ ವಾಹನವೊಂದರ ಇಂಜಿನ್ ಸಪ್ಪಳ ಕೇಳಿಸಿತು. ಟೆಂಟಿನಿಂದ ಹೊರಬಂದು ಕೆಳಗಡೆ ಇಣುಕಿದ. ಸಾವಿರಾರು ಮೀಟರ್ ಆಳದಲ್ಲಿ ನಿರ್ಮಿಸಲ್ಪಟ್ಟ ಹಾವಿನ ಮುರಿಗೆಯಂಥ ದಾರಿಯಲ್ಲಿ ವಾಹನಬಲಗಡೆ ಹೆಡ್‌ಲೈಯಿಟ್ ಕಾಣಿಸಿದವು. ಟೆಂಟ್ ಒಳಗೆ ಹೋದ

ಮುಜಾಹಿದ ಆರು ಶೆಲ್ಲಿನ ದೊಡ್ಡ ಬ್ಯಾಟರಿ ತಂದು ಸಿಗ್ನಲ್ ನೀಡಲಾರಂಭಿಸಿದ... ಐದಾರು ನಿಮಿಷಗಳಲ್ಲಿ ವಾಹನದ ಮೇಲೆ ಹಸಿರು ಬಣ್ಣದ ಮೂರು ದೀಪಗಳು ಮಿನುಗಿ ನಂತರ ಹಸಿರು ಚಂದಿರ ಗೋಚರಿಸಿತು. ಅರ್ಧ ಚಂದ್ರ ಗ್ರೀನ್ ಮ್ಯಾನ್.

ಮುಜಾಹಿದ್‌ಗೆ ಸಮಾಧಾನವಾಯಿತು.

ಕೆಳಗೆ ಬರುತ್ತಿರುವ ವಾಹನ ತಮ್ಮದೇ ಎಂದು ಬಹುಶಃ ಕಾಮ್ಸಿಂಗ ಮತ್ತು ಇಮ್ರಾನ್ ಇದ್ದರೂ ಇರಬಹುದು ಎಂದುಕೊಂಡ. ಅವನ ಊಹೆ ಸರಿಯಾಗಿತ್ತು. ಅರ್ಧಗಂಟೆ ಕಳೆಯುವಷ್ಟರಲ್ಲಿ ಸೆಕ್ಯೂರಿಟಿ ಆಫೀಸರ ಜೊತೆ ಮುಂದು ಮುಂದಾಗಿ ಓಡಿಬಂದರು ಕಾಮ್ಸಿಂಗ್.... ಇಮ್ರಾನ್

ಮುಜಾಹಿದನನ್ನು ಸಮೀಪಿಸುತ್ತಿದ್ದಂತೆ ಭರ್ಜರಿ ಸೆಲ್ಯೂಟ್ ನೀಡಿ "ಗ್ರೀನ್‌ಮೂನ್ ಜಿಂದಾಬಾದ್" ಎಂದು. ಎರಡು ಹೆಜ್ಜೆ ಮುಂದೆ ಧಾವಿಸಿದ ಮುಜಾಹಿದ ಅಚ್ಚರಿಯಿಂದ ಬೆಚ್ಚಿಬಿದ್ದ.

ಸೆಕ್ಯೂರಿಟಿ ಆಫೀಸರ ಜೊತೆ ಇದ್ದ ಇಬ್ಬರು ಸುಂದರ ತರುಣಿಯರು.... ರೂಪದಲ್ಲಿ ಅಪ್ಸರೆಯರನ್ನು ಮೀರಿಸುವ ಸುಂದರಾಂಗಿಯರು.... ಮುಜಾಹಿದನ ದೃಷ್ಟಿ ತಮ್ಮ ಕಡೆ ಬೀಳುತ್ತಿದ್ದಂತೆ ಮೋಹಕವಾಗಿ ನಕ್ಕ ಅವರು ಬಳುಕುತ್ತ ಮುಂದೆ ಬಂದು ಅವನಿಗೆ "ಸಲಾಂ" ಜಹಾಪನಾಹ ಗ್ರೀನ್ ಮೂನ್ ಮುಬಾರಕ್ ಹೊ ಎಂದರು.

ಮುಜಾಹಿದನ ಮೈ ಝುಂ ಎಂದಿತು.

ತಮ್ಮ ಸೀಕ್ರೆಟ್ ವರ್ಡ್ ಇವರಿಗೆ ಹೇಗೆ ತಿಳಿಯಿತು? ಅದನ್ನು ಗ್ರಹಿಸಿದ ಕಾಮ್ಸಿಂಗ ನಗುತ್ತ ಮುಂದೆ ಬಂದು ನುಡಿದ.

"ಸಾಹೆಬ್ ಇವರು ನಮ್ಮ ಬೇಗಂ. ನಾವು ನಿಕಾಹ ಮಾಡಿಕೊಂಡಿದ್ದೇವೆ ನಮಗಾಗಿ ತಮ್ಮ ಪ್ರಾಣ ಅಲ್ಲದೆ, ಭಾರತದ ಅಣು-ವಿಜ್ಞಾನ ಸಂಸ್ಥೆ "ಇಸ್ರೊ"ದಲ್ಲಿ ನುಗ್ಗಿ ಅಲ್ಲಿಯ ಉಪಗ್ರಹದ ರಹಸ್ಯ ತಂದುಕೊಟ್ಟವರು ಇವರೇ.

ಅದನ್ನೆಲ್ಲ ಕೇಳುತ್ತಿದ್ದಂತೆ ಮುಜಾಹಿದನ ಮುಖ ಕರಿದ ಹಪ್ಪಳದಂತೆ ಅರಳಿತು. ಒಂದು ಬಾರಿ ಆ ಇಬ್ಬರು ಸುಂದರಾಂಗಿಯರ ಕಡೆ ನೋಡಿ ಪ್ರಶಂಸೆಯ ದೃಷ್ಟಿ ಬೀರಿದ.... ಇಮ್ರಾನ್ ಅವರೆಡೆ ನೋಡಿ

"ಬಿಜಲೀ ಬಾ.... ನಿನ್ನ ಕಾಣಿಕೆ ನೀಡು ನಮ್ಮ ಬಾಸ್‌ಗೆ ಹಾಂ.... ಚಮೇಲೀ ನೀನೂ ಸಹ."

ಅವನ ಮಾತು ಮುಗಿಯುತ್ತಿದ್ದಂತೆ ಬಿಜಲಿ ಚಮೇಲಿ ನೀರ ಮೇಲೆ ನಡೆಯುವಂತೆ ನಡೆದು ಬಂದು ಮುಜಾಹಿದನನ್ನು ಸಮೀಪಿಸಿ ಅವನೆರಡೂ ಕೆನ್ನೆ ಮೇಲೆ ಮುತ್ತಿಕ್ಕಿದಾಗ ಅವನಿಗೆ ಮಂಪರು ಬರುವಂತಾಯಿತು....

## 24

ಮುಜಾಹಿದ ಉಲ್‌ಹಕ್ ಅತ್ಯಂತ ಆನಂದಿತನಾಗಿದ್ದ.

ಕಾಮ್ಲಿಂಗ ಮತ್ತು ಇಮ್ರಾನ್ ತಮ್ಮೊಡನೆ ತಂದಿದ್ದ "ಡಾಕ್ಯೂಮೆಂಟ್ಸ್" ಕಂಡೇ ಆತ ಒಂದು ಬಗೆಯಿಂದ ಹುಚ್ಚನಂತಾಗಿದ್ದ. ಒಂದು ರೀತಿಯಲ್ಲಿ ಭಾರತದ ಹೃದಯವನ್ನೇ ಅವರು ಕಿತ್ತು ತಂದಿದ್ದರು. ಅವೆಲ್ಲವನ್ನು ಧ್ವಂಸ ಪಡಿಸಲು ಹಿಂದಿನ ದಿನವೇ ಏಜೆಂಟರನ್ನು ಕಳಿಸಿಕೊಟ್ಟಿದ್ದ. ಬೇರೆ ಬೇರೆ ಕಡೆ ವಿಧ್ವಂಸಕ ಸಾಮಾನು, ಮಾದಕ ಪದಾರ್ಥಗಳ ಭಂಡಾರ ರವಾನೆ ಮಾಡಿದ್ದ. ಎರಡು ಮೂರು ದಿನಗಳ ಕಾಲ ಕಾಮ್ಲಿಂಗ, ಇಮ್ರಾನ್, ಬಿಜಲಿ ಮತ್ತು ಚಮೇಲಿ ಇವರನ್ನು ಕರೆದುಕೊಂಡು ಎಲ್ಲೆಡೆ ಸುತ್ತಾಡಿ ತನ್ನೆಲ್ಲ ಗುಪ್ತ ಅಡ್ಡೆ.... ಅಡಾಗು ತಾಣ... ಯುದ್ಧೋಪಕರಣ ಶಸ್ತ್ರಾಸ್ತ್ರಗಳ ಸಂಗ್ರಹ ಗೋಡೌನ್ ಎಲ್ಲಾ ತೋರಿಸಿದ್ದ. ಅವರೊಂದಿಗೆ ಮೂರು ದಿನಗಳ ನಂತರ ನಡೆಸಲಿರುವ ಭಯಾನಕ ಆಪರೇಶನ್ "ಗ್ರೀನ್‌ಮೂನ್" ಬಗ್ಗೆ ಚರ್ಚಿಸಿದ್ದ.

ಒಮ್ಮೊಮ್ಮೆ ಕಾಮ್ಲಿಂಗ ಮಂಕಾಗುತ್ತಿದ್ದ....ಏನೋ ಯೋಚಿಸುತ್ತ ಭಯದಿಂದ ನಡುಗುತ್ತಿದ್ದ.... ಇಮ್ರಾನ್ ಮತ್ತು ಇಬ್ಬರೂ ಅಪ್ಸರೆಯರು ಅವನನ್ನು ಸಮಾಧಾನ ಪಡಿಸುತ್ತಿದ್ದರು. "ಗ್ರೀನ್‌ಮೂನ್" ಆಪರೇಷನ್ ಖಂಡಿತವಾಗಿ ಜಯಪ್ರದವಾಗುತ್ತದೆ ಅಶಂಕೆ ಬೇಡ" ಎಂದು ಧೈರ್ಯ ಹೇಳುತ್ತಿದ್ದರು.

ಒಂದು ಬಗೆಯಿಂದ ಸಂತೋಷ ಸಾಗರದಲ್ಲಿ ತೇಲಾಡುತ್ತಿದ್ದ ಮುಜಾಹಿದ ಹುಚ್ಚನಂತಾಗಿದ್ದ ತನ್ನ ಆಪರೇಷನ್ ಬಗ್ಗೆ ಆಶಾಭಾವನೆ.... ಅದರೊಂದಿಗೆ ಇಬ್ಬರು ಸುಂದರಿಯರು ಅವನ ಮೇಲೆ ಕರೆಯುತ್ತಿದ್ದ ಪ್ರೇಮ ವರ್ಷ. ಮೇಲಿಂದ ಮೇಲೆ ತಿನ್ನಿಸುತ್ತಿದ್ದ ಭಾರತದ ಸ್ವಾದಿಷ್ಟ ತಿಂಡಿ "ಪೇಡ" ಪೇಡ ಸವಿಗೆ ಮುಜಾಹಿದ ಅಷ್ಟೇ ಅಲ್ಲ ಅವನ ಆಪ್ತವರ್ಗದ ಇಪ್ಪತ್ತು

ಇಪ್ಪತ್ತೈದು ಜನರೂ ಹುಚ್ಚರಾಗಿದ್ದರು.... ತಿಂದು ತಿಂದು ಸಾಕಾಗಿತ್ತು ಅವರಿಗೆ.

ಆಗಸ್ಟ್ 14 ಸಾಯಂಕಾಲ ಏಳು ಗಂಟೆ ಸಮಯ.

ಮುಜಾಹಿದ ಗುಪ್ತ ಸಮಾಲೋಚನೆ ನಡೆಸಿದ್ದ ಅಧಿಕಾರ ವಾಣಿಯಿಂದ. ಆತ ತನ್ನ ಸಂಗಡಿಗರನ್ನು ಉದ್ದೇಶಿಸಿ ಮಾತನಾಡುತ್ತಿದ್ದ.

"ನಮ್ಮ ಕನಸು ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ಸಾಕಾರವಾಗುತ್ತಿದೆ. ನಮಗೆ ಬಂದ ಗುಪ್ತ ಸಮಚಾರದಂತೆ ಭಾರತದ ಪ್ರಧಾನಿ ಮುಂಜಾನೆ ಎಂಟು ಗಂಟೆಗೆ ದಿಲ್ಲಿ ಲಾಲಕಿಲ್ಲಾದ ಮೇಲೆ ಧ್ವಜ ಹಾರಿಸಿದ ನಂತರ ಸರಿಯಾಗಿ ಒಂಭತ್ತು ನಲವತ್ತೈದಕ್ಕೆ ಜಮ್ಮುವಿಗೆ ಬರಲಿದ್ದಾರೆ. ಅಲ್ಲಿ ರಾಜ್ಯಪಾಲ ರೊಂದಿಗೆ ನ್ಯಾಷನಲ್ ಪಾರ್ಕ್‌ನಲ್ಲಿ ಭಾರತದ ಧ್ವಜ ಹಾರಿಸಿ ಅಲ್ಲಿಯ ಸ್ಥಳೀಯ ಜನರಿಗೆ ಧೈರ್ಯ ಹೇಳುವವರಿದ್ದಾರೆ. ಇದು ತುಂಬಾ ರಹಸ್ಯದ ಸಮಾಚಾರ. ಒಂದು ವೇಳೆ ಹಾಗೇನಾದರೂ ಆದರೆ, ಕಾಶ್ಮೀರ ಕೊನೆಯ ವರೆಗೂ ನಮ್ಮ ಕೈಯ್ಯಿಂದ ಹೋದಂತೆ. ಹಾಗಾಗಬಾರದೆಂದೇ "ಗ್ರೀನ್ ಮೂನ್" ಆಪರೇಷನ್ ಕೈಗೆ ತೆಗೆದುಕೊಂಡಿದ್ದು. ಧ್ವಜ ಏರಿಸಲು ಬಂದ ಪ್ರಧಾನಿ ಜೀವಸಹಿತ ಮರುಳಲಾರರು.... ಅದರಂತೆ ಒಂದೇ ನಿಮಿಷದಲ್ಲಿ ಒಂದೇ ಸಮಯ, ಭಾರತದ ನೂರಾರು ಕಡೆ ಒಂದೇ ಬಾರಿ, ಭಯಾನಕ ಕೃತ್ಯಗಳು ನಡೆಯಲಿವೆ. ನೈತಿಕನೆಲೆ, ಶಸ್ತ್ರಾಗಾರ, ಅಣುಕೇಂದ್ರ, ವಿಮಾನ ನಿಲ್ದಾಣ, ಆಕಾಶವಾಣಿ, ದೂರದರ್ಶನ ಕೇಂದ್ರ ಎಲ್ಲಾ ನಾಶವಾಗಲಿ.... ಎಲ್ಲೆಡೆ ಹಾಹಾಕಾರವೆದ್ದಾಗ ನಮ್ಮವರು ದಿಲ್ಲಿಯಲ್ಲಿ ತಮ್ಮ ಕೈಗೆ ತೆಗೆದುಕೊಳ್ಳು ವವರಿದ್ದಾರೆ. ನಮ್ಮ ಧ್ವಜ ಕೆಂಪು ಕೋಟೆ ಮೇಲೆ ಹಾರಿಸಲಿದ್ದಾರೆ.

"ಇದು ನಿನ್ನ ದುಸ್ವಪ್ನ ಮುಜಾಹಿದ.... ಇದೆಂದೂ ಸಾಕಾರಗೊಳ್ಳ ಲಾರದು" ಸಿಡಿಲಿನಂತೆ ಬಂದ ಧ್ವನಿಗೆ ಬೆಚ್ಚಿಬಿದ್ದ. ಎಲ್ಲರೂ ಧ್ವನಿ ಬಂದೆಡೆ ನೋಡಿದರು. ಕೈಯಲ್ಲಿ ಮಿಶನ್ ಗನ್ ಹಿಡಿದ ಪಿ. ಓ. ಕೆ. ಯ ಸೈನಿಕನೊಬ್ಬ ನಿಂತಿದ್ದ.

"ಏಯ್ ನೀನು.... ನಿನ್ನ ತಲೆಕೆಟ್ಟಿದೆಯೇ"

ಚೀರಿಕೊಂಡ ಮುಜಾಹಿದ.... ನಕ್ಕ ಸೈನಿಕ.

"ತಲೆಕೆಟ್ಟಿದ್ದು ನನಗಲ್ಲ. ಮುಜಾಹಿದ ನಿನಗೆ....ನೀನೊಂದು ಹುಚ್ಚು

ನಾಯಿ ನಾಯಿಗೆ ಹುಚ್ಚು ಹಿಡಿದರೆ ಗುಂಡು ಹಾಕಿ ಕೊಲ್ಲುತ್ತಾರೆ.; ಅಥವಾ ವಿಷ ಕೊಟ್ಟು ಕೊಂದು ಹಾಕುತ್ತಾರೆ"

"ಬಾಯಿ ಮುಚ್ಚು.... ನನ್ನ ಸೇವಕನಾದ ನಿನಗೆ ಈ ರೀತಿ ಮಾತನಾಡಲು ಎಷ್ಟು ಧೈರ್ಯ? ನನ್ನ ಅನ್ನ ಉಂಡು....

"ಶಟಪ್, ಮುಜಾಹಿದ್.... ನಾನು ನಿನ್ನ ಅನ್ನ ಉಂಡಿಲ್ಲ.... ನಾನು ಉಂಡ ಅನ್ನ ಮಹಾನ್ ದೇಶ ಭಾರತದ್ದು"....

"ಆಂ? ಏನೆಂದೆ?.... ಮಹಾನ್ ದೇಶ ಭಾರತ?"

"ಹೌದು.... ಆ ಮಹಾನ್ ದೇಶದಲ್ಲಿ ಹುಟ್ಟಿ ಬೆಳೆದು ಅಲ್ಲಿಯ ಅನ್ನ ಉಂಡು, ಗಾಳಿ ಸೇವಿಸಿ ನೀರು ಕುಡಿದು ಬದುಕಿದವ ನಾನು....

"ಅಂದರೆ"

"ಅಂದರೆ.... ನೀನು ತಿಳಿದಂತೆ ನಿನ್ನ ಸೇವಕನಲ್ಲ ನಾನು?"

"ಮತ್ತಾರು ನೀನು?"

"ನಾನು ಪವಿತ್ರ ಭಾರತದ ಸೇವಕ.... ಇನ್ಸ್‌ಪೆಕ್ಟರ್ ಅವಿನಾಶ್.

"ಏನು? ಇನ್ಸ್‌ಪೆಕ್ಟರ್ ಅವಿನಾಶ?"

"ಏಕೆ ? ನಿನಗೇನು ಕಿವುಡೆ ? ಕಿವಿ ಕೇಳಿಸುವುದಿಲ್ಲವೆ ?"

ಮುಜಾಹಿದ ಕಕ್ಕಾಬಿಕ್ಕಿಯಾಗಿ ಕಾಮ್ಸಿಂಗ ಮತ್ತು ಇಮ್ರಾನ ಕಡೆ ನೋಡಿದ.

"ಅವರ ಕಡೆ ಏನು ನೋಡುತ್ತಿ ? ಅವರೂ ಸಹ ನನ್ನ ಕೈಗೊಂಬೆಗಳು" ಈಗಂತೂ ಮುಜಾಹಿದ ಧರೆಗಿಳಿದು ಹೋದ. ಕಾಮ್ಸಿಂಗ....ಇಮ್ರಾನ್ ಮಿಸುಕಾಡದೇ ಕುಳಿತಿದ್ದರು. ಚಮೇಲಿ, ಬಿಜಲಿ ಅವರು ಮಾತ್ರ ಮಂದವಾಗಿ ನಗುತ್ತಿದ್ದರು. ತಬ್ಬಿಬ್ಬಾದ ಮುಜಾಹಿದನ ಸಂಗಾತಿಗಳು ಮೇಲೇಳಲು ಯತ್ನಿಸುತ್ತಿದ್ದಂತೆ ಅವಿನಾಶ ಮಿಶಿನ್‌ಗನ್ ಅವರ ಕಡೆ ಮುಖ ಮಾಡಿ ಶಾಂತವಾಗಿ ನುಡಿದ.

"ನೀವು ಮಿಸುಕಾಡದೇ ಅಲ್ಲೇ ಕುಳಿತಿರಿ ಒಂದು ದೃಷ್ಟಿಯಿಂದ ಈಗಾಗಲೇ ನೀವು ಸತ್ತಿದ್ದೀರಿ. ನಿಮ್ಮದಾದ ಒಂದೂ ಉಸಿರು ನಿಮ್ಮ ಬಳಿ ಉಳಿದಿಲ್ಲ... ಎಲ್ಲಾ ನಾನು ನಿನಗೆ ಕೊಟ್ಟ ಸಾಲದ ಉಸಿರು ತಿಳಿಯಿತೇ ?"

ಬಿಜಲಿ....ಚಮೇಲಿ....ಇಮ್ರಾನ್ ಮೂರು ಜನ ತಮ್ಮ ಜಾಗೆಯಿಂದ

ಮೇಲೆದ್ದರು. ಬೊಂಬೆಯಂತೆ ಕುಳಿತಿದ್ದ ಎಲ್ಲರ ಬಳಿಯಿದ್ದ ರಿವಾಲ್ವರ್ ಎತ್ತಿ ತಂದು ಅವಿನಾಶನ ಮುಂದೆ ಸುರಿದರು. ಮುಜಾಹಿದ ಸಹ ಈಗ ಹಲ್ಲುಕಿತ್ತ ಹಾವಿನಂತಾದ .. ಅಪಾಯದ ಗಂಟೆ ಬಾರಿಸುವ ಗುಂಡಿ ಅದುಮಿದ. ಎಲ್ಲೆಡೆ ಗಂಟೆ ಬಾರಿಸತೊಡಗಿತು. ಆದರೆ .. ಆದರೆ ಆಶ್ಚರ್ಯ ಅಪಾಯದ ಗಂಟೆ ನಂತರ ಗಲಾಟೆ....ಕೋಲಾಹಲ ಯಾವುದೂ ಉಂಟಾಗದೇ ಎಲ್ಲಾ ಶಾಂತವಾಗಿತ್ತು. ಅವಿನಾಶ ಮುಗುಳ್ನಕ್ಕ

ಎಲ್ಲಾ ವ್ಯರ್ಥ ಮುಜಾಹಿದ್....ನಿನ್ನೆಲ್ಲ ಸೈನಿಕರು ನಮ್ಮ ಬಂದಿಗಳಾಗಿ ದ್ದಾರೆ. ನಿನ್ನೆಲ್ಲ ಸೈನಿಕ ಠಾಣೆ, ಶಸ್ತ್ರಾಸ್ತ್ರ ಭಂಡಾರ ಅಷ್ಟೂ ನಮ್ಮ ಭಾರತ ಸರಕಾರದ ವಶವಾಗಿದೆ....

"ನೀವು....ನೀವು ನಮ್ಮ ನಿರ್ಬಂಧಿತ ಪ್ರದೇಶದಒಳಗೆ ನುಗ್ಗಿಬಂದಿರಾ ?"

"ಏಕೆ ಬರಬಾರದು ? ನೀವು ನಮ್ಮ ದೇಶದ ಯಾವುದೇ ಮೂಲೆಗೂ ಬಂದು ಬೇಕಾದಂಥ ವಿಧ್ವಸಂಕ ಕೃತ್ಯವೆಸಗಬಹುದು. ನಾವು ಬರಬಾರದೆ ? ಕೇಳಿಲ್ಲಿ ನಿನ್ನೆ ಕಳಿಸಿದ ನಿನ್ನ ಸ್ಪೆಷಲ್ ಫೋರ್ಸ್ ಸಹ ಭಾರತೀಯ ಸೈನಿಕರ ಗುಂಡಿಗೆ ಆಹುತಿಯಾಗಿದೆ. ನಿನ್ನ ಬಳಿ ಬಂದ ನಕಲಿ ನಕ್ಷೆಗಳ ಮೇಲೆ ನೀನು ಕೈಕೊಂಡ ಎಲ್ಲಾ ಸೈನಿಕ ಕಾರ್ಯಾಚರಣೆ ವಿಫಲ.... ಸಧ್ಯ ನೀನೂ ಸಹ ನನ್ನ ಬಂದಿ...."

"ನಂಬಲಿಕ್ಕಾಗದು....ಕಾಮ್ತಿಂಗ ಇಮ್ರಾನ್....ಮೋಸ ಮಾಡಲಾರರು"

"ಇಮ್ರಾನ್ ಅಂದೇ ಸತ್ತು ಹೋಗಿದ್ದಾನೆ....ಸ್ವತಃ ಅವನ ತಾಯಿಯೇ ಅವನನ್ನು ಗುಂಡಿನಿಂದ ಸುಟ್ಟು ಹಾಕಿದರು. ಅವನ ಬಳಿಯಿದ್ದ ನಿಮ್ಮೆಲ್ಲ ರಹಸ್ಯ ಕಾಗದ ಪತ್ರಗಳು ಏಜೆಂಟರು ನಮ್ಮ ಕೈಗೆ ಸೆರೆ ಸಿಕ್ಕರು. ಇಮ್ರಾನನ ವೇಷದಲ್ಲಿ ನಮ್ಮ ಪಿ.ಎಸ್.ಐ. ಡಿಸೋಜಾ ಬಂದಿದ್ದಾನೆ....ಕಾಮ್ತಿಂಗ ಸೆರೆ ಸಿಕ್ಕ ಮೇಲೆ ಆತ ತಪ್ಪಿಸಿಕೊಂಡು ಓಡಿ ಹೋದ ಎಂದು ಸುಳ್ಳು ವದಂತಿ ಹಬ್ಬಿಸಿದ್ದೆವು. ಕಾಮ್ತಿಂಗನಿಗೆ ನಮ್ಮ ದೇಶದ ವಿಜ್ಞಾನಿ ತಯಾರಿಸಿದ ವಿಶೇಷ ಕ್ಯಾಪ್ಸುಲ್ ನುಂಗಿಸಿದೆವು. ಇದರಿಂದಾಗಿ ಆತನಿದ್ದ ನೂರು ಮೀಟರ್ ಜಾಗದ ಎಲ್ಲಾ ಮಾತುಕತೆ ನಮ್ಮಲ್ಲಿ ರೆಕಾರ್ಡ್ ಆಗುತ್ತಿದೆ....ಆತ ಮೋಸ ಮಾಡಲು ಯತ್ನಿಸಿದರೆ ನಮ್ಮ ಬಳಿಯಿರುವ ವಿಶೇಷ ಯಂತ್ರದ ಗುಂಡಿ ಅದುಮಿದರೆ ಸಾಕು....ಆತನ ಹೊಟ್ಟೆಯಲ್ಲಿದ್ದ "ಕ್ಯಾಪ್ಸುಲ್" ಸ್ಫೋಟಗೊಂಡು ಆತ ಐದೇ ಸೆಕೆಂಡುಗಳಲ್ಲಿ ಸತ್ತು ಹೋಗುತ್ತಾನೆ....ನಿನ್ನೆಲ್ಲ ಸಂಗಡಿಗರಿಗೂ ಸಹ ಬಿಜಲಿ

ಮತ್ತು ಚಮೇಲಿ ಪೇಡೆಯಲ್ಲಿಟ್ಟು ಆ ಕ್ಯಾಪ್ಸುಲ್ ತಿನ್ನಿಸಿದ್ದಾರೆ. ಅವರೂ ಸಹ ಅಷ್ಟೇ....ನೀನೇ ನೋಡು....ನಿನ್ನ ಕಣ್ಣಾರೆ"

ಅವಿನಾಶ ತನ್ನ ಜೇಬಿನಲ್ಲಿದ್ದ ವಿಶೇಷ ಯಂತ್ರ ತೆಗೆದು ಗುಂಡಿ ಅದುಮಿದ ಮರುಕ್ಷಣ ಕಾಮ್ತಿಂಗನ ಜೊತೆ ಎಲ್ಲರೂ ಒಂದೇ ಬಾರಿ ವಿಕಾರ ಕಂಠದಲ್ಲಿ ಚೀರಿಕೊಂಡರು. ಐದಾರು ಸೆಕೆಂಡುಗಳಲ್ಲಿ ಅವರ ಹೊಟ್ಟೆ ಕುಂಬಳಕಾಯಿ ಒಡೆಯುವಂತೆ ಒಡೆದು ಹೋಗಿ ಸಾವನ್ನಪ್ಪಿದರು....ಆ ಭಯಾನಕ ಸಾವು ನೋಡಿ ಮುಜಾಹಿದ ಹುಚ್ಚನಂತಾದ.

"ಮುಜಾಹಿದ ನೀವು ಶಾಂತಿಪ್ರಿಯರಾದ ನಮ್ಮ ಮೇಲೆ ಕಾಲು ಕೆದರಿ ನ್ಯಾಯ ತೆಗೆಯುತ್ತ ನೀವು ಬಂದಿದ್ದೀರಿ.. ಪ್ರೇಮ ಅಹಿಂಸೆಯ ಮಾರ್ಗದಲ್ಲಿದ್ದ ನಮ್ಮನ್ನು ತುಳಿಯುತ್ತ ಬಂದಿದ್ದೀರಿ. ನಮ್ಮ ದೇಶದ ಯುವ ಪೀಳಿಗೆಗೆ ಮಾದಕ ದ್ರವ್ಯದ ಚಟ ಹಚ್ಚಿ ನಿರ್ವೀರ್ಯರನ್ನಾಗಿಸಿದ್ದೀರಿ ಹೆಣ್ಣು ಮಕ್ಕಳನ್ನು ಕೆಡಿಸಿ ವಿಡಿಯೊ ಮಾಡಿ ಬ್ಲಾಕ್ ಮೆಲ್ ಮಾಡುತ್ತ ನಿಮ್ಮ ತಾಳಕ್ಕೆ ಕುಣಿಸುತ್ತ ಬಂದಿದ್ದೀರಿ. ಅದೂ ಸಾಲದು ಎಂಬಂತೆ ರಾಜಕೀಯದಲ್ಲೂ ಕೈ ಹಾಕಿ ರಾಜಕೀಯ ಧುರೀಣರನ್ನು ಕೊಲೆ ಮಾಡುತ್ತಿದ್ದೀರಿ.. ನಾಳೆ ಆಗಸ್ಟ್ ಹದಿನೈದು ಭಾರತೀಯರ ಸ್ವಾತಂತ್ರ್ಯ ದಿವಸ....ಅಂದಿನ ಸಂತಸ ಸಂಭ್ರಮದ ದಿನವನ್ನು ನೀವು ಕರಾಳ ದಿವಸ ಮಾಡಲು....ಪವಿತ್ರ ದೇಶದ ಮೇಲೆ ನಿಮ್ಮ ಅಪವಿತ್ರ ಹೆಜ್ಜೆಯಿಡಲು ಯೋಚಿಸಿ "ಗ್ರೀನ್ ಮೂನ್" ಆಪರೇಷನ್ ರೂಪಿಸಿದಿರಿ. ಕಾಮ್ತಿಂಗ ಮತ್ತು ಇಮ್ರಾನ್‌ರಂಥ ನೂರಾರು ಯುವಕರನ್ನು ಈ ಕಾರ್ಯದಲ್ಲಿ ತೊಡಗಿಸಿದಿರಿ ಆದರೆ....ನಿಮ್ಮ ದುರ್ದೈವ ನನ್ನಿಂದಾಗಿ ನಿಮ್ಮೆಲ್ಲ ಭಯಾನಕ ಯೋಜನೆ ವಿಫಲವಾದವು....

ಇಮ್ರಾನ್ ವೇಷದಲ್ಲಿದ್ದ ಡಿಸೋಜಾ ಹೆಮ್ಮೆಯಿಂದ ಬೀಗುತ್ತ ಅವಿನಾಶನ ಬಳಿ ಬಂದು ಅಭಿನಂದಿಸಿದ.

"ಇನ್ಸ್‌ಪೆಕ್ಟರ್ ಅವಿನಾಶ, ನಿಮ್ಮ ವಿಜಯಕ್ಕೆ ನನ್ನ ಅಭಿನಂದನೆಗಳು"

"ಡಿಸೋಜಾ ಇದು ನನ್ನ ವಿಜಯವಲ್ಲ....ಸಕಲ ಭಾರತೀಯರ ವಿಜಯ ಪ್ರೀತಿ, ಪ್ರೇಮ, ಅಹಿಂಸೆ, ಸತ್ಯದ ಮಾರ್ಗದಲ್ಲಿ ಚಲಿಸುತ್ತಿರುವ ನಮ್ಮ ಸರಕಾರದ ವಿಜಯ... ನನ್ನೊಂದಿಗೆ ನೀನು....ಸಿಕ್ರೆಟ್ ಸರ್ವೀಸಸ್ ಬಿಜಲಿ, ಚಮೇಲಿ ಸಹಕಾರ ನೀಡಿದ್ದೀರಿ ಇದು ನಿಮ್ಮ ವಿಜಯ"

"ಮುಂದೇನು"

"ಮುಂದೇನು ?.... ಈತ ಈ ಹೆಣಗಳ ಮಧ್ಯೆ ರಾತ್ರಿಯೆಲ್ಲಾ ಕಳೆಯಲಿ ಮುಂಜಾನೆ ಟಿ.ವಿ.ಯಲ್ಲಿ ನಮ್ಮ ಪ್ರಧಾನಿ ಜಮ್ಮುವಿನಲ್ಲೂ ಶ್ರೀನಗರದಲ್ಲಿ ಭಾರತದ ಧ್ವಜ ಹಾರಿಸುವ ದೃಶ್ಯ ನೋಡಿ ಸಂಕಟಪಡಲಿ....ನಂತರ.... ನಂತರ...."

ಅವಿನಾಶ ಭಯಾನಕವಾಗಿ ನಕ್ಕಾಗ ಮುಜಾಹಿದ ಚೀರಿಕೊಂಡ "ನಂತರ ಏನು ?"

"ಮಾದಕ ಪದಾರ್ಥಗಳ ಹುಚ್ಚು ಹಿಡಿಸಿ ನೀನು ಭಾರತ ದೇಶದ ಯುವ ಪೀಳಿಗೆಯನ್ನು ಶೀತಲಕೋಳಿ ಮಾಡುವ ಕನಸು ಕಂಡಿದ್ದೆ. ಆ ಕನಸು ಭಗ್ನವಾಗಿದೆ. ಆ ಕನಸು ಕಂಡ ನಿನ್ನನ್ನೇ ಶೀತಲಕೋಳಿಯಾಗಿ ನಾ ಮಾಡುವೆ....ನಿನ್ನನ್ನು ಬೆತ್ತಲೆ ಮಾಡಿ ಕೈ ಕಾಲು ಕಟ್ಟಿ ಈ ಹಿಮದಲ್ಲಿ ಚೆಲ್ಲಿ ಹೋಗುವೆ....ಒಂದೆರಡು ಗಂಟೆಗಳಲ್ಲಿ ನೀನು ಶೀತಲಕೋಳಿಯಾಗುವೆ....ನಿನ್ನ ದೇಹ ಸೆಟೆದು ಹೋಗಿ ಉಸಿರು ಕಟ್ಟಿ ಒದ್ದಾಡಿ ಒದ್ದಾಡಿ ಸಾಯುವೆ....ಇದೇ ನಿನಗೆ ಸರಿಯಾದ ಶಿಕ್ಷೆ....ತಿಳಯಿತೆ ?....

ಕೋಪದಿಂದ ಕರಕರನೆ ಹಲ್ಲು ಕಡಿಯುತ್ತ ಅವಿನಾಶನೆಡೆ ನುಗ್ಗಿದ ಮುಜಾಹಿದನ ಮಿಶಿನ್‌ಗನ್‌ನ ಹಿಂಭಾಗದ ಒಂದೇ ಒಂದು ಏಟು ಅವನ ತಲೆಯ ಮೇಲೆ ಬಿತ್ತು. ಚೀರಿಕೊಂಡು ನೆಲ ಕಚ್ಚಿದ್ದ ಆತ. ಅವನೆಡೆ ನೋಡಿ ಕ್ರೂರ ನಗೆ ನಕ್ಕ ಅವಿನಾಶ....ರಿಸಿವರ್ ತೆಗೆದುಕೊಂಡು ನಂಬರ್ ಜೋಡಿಸಿ ನುಡಿದ.

"ಜೈಹಿಂದ್ ಸರ್....ನಾನು ಇನ್ಸ್‌ಪೆಕ್ಟರ್ ಅವಿನಾಶ್. ದಾರಿಯಲ್ಲಿದ್ದ ಎಲ್ಲ ಅಡೆ ತಡೆ ನಾಶವಾಗಿವೆ ಸರ್....ಮಾನ್ಯ ಪ್ರಧಾನ ಮಂತ್ರಿಗಳು ಸಂತೋಷದಿಂದ ನಾಳೆ ಜಮ್ಮು ಹಾಗೂ ಶ್ರೀನಗರಗಳಲ್ಲಿ ಧ್ವಜಾರೋಹಣ ನೆರವೇರಿಸಬಹುದು....ಸರ್.... ಅಲ್ಲ ಸರ್....ಇದು ನನ್ನ ವಿಜಯವಲ್ಲ ಸರ್. ಭಾರತದ ವಿಜಯ ಸರ್. ಸಮಸ್ತ ಭಾರತೀಯರ ಜಯ ಸರ್....ಥ್ಯಾಂಕ್ಯೂ ಸರ್....ಸರ್....ಜೈಹಿಂದ್ ಸರ್...."

ಅವಿನಾಶ ರಿಸೀವರ್ ಯಥಾಸ್ಥಾನದಲ್ಲಿರಿಸಿದಾಗ ಅವನೆರಡೂ ಕಣ್ಣುಗಳಲ್ಲಿ ಭಾರತದ ತ್ರಿವರ್ಣ ಧ್ವಜ ಕಂಗೊಳಿಸುತ್ತಿತ್ತು.

# ನಮ್ಮಲ್ಲಿ ದೊರೆಯುವ
# ಶ್ರೀ ಸುದರ್ಶನ ದೇಸಾಯಿರವರ
# ಕೆಲವು ಕಾದಂಬರಿಗಳು

ಸಿಡಿಮದ್ದು

ಮಹಾಮಾನವ

ಪೊಲೀಸ್ ಡಾಗ್

ವಿಷಮಂಥನ

ಕಿಲ್ಲಿ

ಸೂರ್ಯಚಂದ್ರ ಸಾಕ್ಷಿ

ಪ್ರೇಮಲೋಕದ ಮಕರಾಕ್ಷ

ಶೀತಲಕೋಳಿ